


ಗ್ರಂಥ ಸ್ವಾಮ್ಯ ವಿಭಾಗ
894.814 3
ರಾಜ್ಯ ಕೇಂದ್ರ ಗ್ರಂಥಾಲಯ
SAT ಬೆಂಗಳೂರು P

# ಸಾಗರ ತರಂಗಿಣಿ

(ಸಾಮಾಜಿಕ ಕಾದಂಬರಿ)

ಸಾಯಿಸುತೆ

ಪ್ರಕಾಶಕರು :

**ಕರ್ನಾಟಕ ಸಾಹಿತ್ಯ ಪ್ರಕಾಶನ**

ಸಾಯಿಸದನ, ವಿದ್ಯಾನಗರ,

ತುಮಕೂರು - 572 103.

META ENTERED

**SAGARA TARANGINI** - a social novel by Smt. Saisuthe; I edn. April 2000; Published by Karnataka Sahithya Prakashana, Sai Sadan,# 65/2, 7th Main, Vidyanagar, Tumkur - 3; All rights reserved by the Authoress;
Pages : 207 ; Price: Rs. 70=00

ಪ್ರಥಮ ಮುದ್ರಣ: ಏಪ್ರಿಲ್ 2000
ಹಕ್ಕುಗಳು : ಲೇಖಕಿಯದು

ಅಧಿಕೃತ ಮಾರಾಟಗಾರರು :
**ಗೀತಾ ಏಜನ್ಸೀಸ್**
*(ಸಗಟು ಪುಸ್ತಕ ವ್ಯಾಪಾರಿಗಳು)*
ಬಳೇಪೇಟೆ ಚೌಕ, ಬೆಂಗಳೂರು - 53
(ದೂರವಾಣಿ : 2874226)

ಬೆಲೆ : ರೂ. 70=00

ಸುಂದರ ಲಿಪಿ ಜೋಡಣೆ :
*ಎಸ್. ಎಸ್. ಕಂಪ್ಯೂಟೆಕ್ ಇಂಡಿಯಾ,*
ವಿದ್ಯಾನಗರ, ತುಮಕೂರು-3 : ದೂರವಾಣಿ : 280785

ಮುದ್ರಣ:
*ಜಗನ್ನಾಥ್ ಆಫ್‌ಸೆಟ್ ಪ್ರಿಂಟರ್ಸ್*
ಡಿ.ಎಸ್.ಲೇನ್, ಸೌರಾಷ್ಟ್ರಪೇಟೆ, ಬೆಂಗಳೂರು - 53.

# ಎರಡು ಮಾತು

ಆತ್ಮೀಯ ಓದುಗರಲ್ಲಿ,

೧೯೯೮ರಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡ ಈ ಕಾದಂಬರಿ ಪುಸ್ತಕ ರೂಪದಲ್ಲಿ ಹೊರ ಬರಲು ತಡವಾಯಿತು. ಕೆಲವು ಓದುಗರು ಒಟ್ಟಾಗಿ ಓದುವ ಅಭಿಲಾಷೆ ವ್ಯಕ್ತಪಡಿಸಿ ಪತ್ರ ಬರೆದಿದ್ದಾರೆ. ಈಗ ಪುಸ್ತಕ ರೂಪದಲ್ಲಿ ಹೊರ ಬರುತ್ತಿದೆ.

ಮಂಗಳ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಿಸಿ ಅಪಾರ ಓದುಗರಿಗೆ ತಲುಪಿಸಿದ ಪತ್ರಿಕೆ ಸಂಪಾದಕರಾದ ಶ್ರೀ ಬಾಬು ಕೃಷ್ಣಮೂರ್ತಿ ಅವರಿಗೂ ಮತ್ತು ಸಂಪಾದಕ ವರ್ಗದವರಿಗೂ ನನ್ನ ಕೃತಜ್ಞತೆಗಳು.

ನನ್ನ ಕಾದಂಬರಿಗಳನ್ನು ಪ್ರಕಟಣೆಯಲ್ಲಿ, ಮಾರಾಟದಲ್ಲಿ ಅಪಾರ ಆಸ್ಥೆ ವಹಿಸಿರುವ ಗೀತಾ ಏಜನ್ಸೀಸ್‌ನ ಶ್ರೀ ಕೆ. ರಾಮಚಂದ್ರಯ್ಯನವರಿಗೂ, ಪುಸ್ತಕ ರೂಪದಲ್ಲಿ ಹೊರತರುತ್ತಿರುವ ಕರ್ನಾಟಕ ಸಾಹಿತ್ಯ ಪ್ರಕಾಶನದವರಿಗೂ, ಮುಖಚಿತ್ರ ಕಲಾವಿದರಾದ ಶ್ರೀ ಮೋನಪ್ಪನವರಿಗೂ ಮತ್ತು ಅಚ್ಚುಕಟ್ಟಾಗಿ ಮುದ್ರಿಸಿದ ಶ್ರೀ ಜಗನ್ನಾಥ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೂ ನನ್ನ ವಂದನೆಗಳು.

ಅಕ್ಕರೆಯಿಂದ ನನ್ನ ಕಾದಂಬರಿಗಳನ್ನು ಕೈಗೆತ್ತಿಕೊಳ್ಳುವ ನಿಮಗೆ ಗೌರವದ ಕೃತಜ್ಞತೆಗಳು.

16-4-2000 *ಸಾಯಿಸುತೆ*

ಸಾಯಿಸದನ, ವಿದ್ಯಾನಗರ,
ತುಮಕೂರು-೩.

# ಸಾಯಿಸುತೆಯವರ ಜನಪ್ರಿಯ ಕಾದಂಬರಿಗಳು

ಕಲ್ಯಾಣಮಸ್ತು
ಕಡಲ ಮುತ್ತು
ರಜತ ನಂದನ
ದೀಪಾಂಕುರ
ಹಂಸ ಪಲ್ಲಕಿ
ಮಾಗಿಯ ಮಂಜು
ನನ್ನೆದೆಯ ಹಾಡು
ಜನನೀ ಜನ್ಮಭೂಮಿ
ಪ್ರಿಯಸಖೀ
ನನ್ನ ಭಾವ ನಿನ್ನ ರಾಗ
ಶ್ಯಾನುಭೋಗರ ಮಗಳು
ಸಪ್ತರಂಜನಿ
ಕೋಗಿಲೆ ಹಾಡಿತು
ಕರಗಿದ ಕಾರ್ಮೋಡ
ಹೇಮಂತದ ಸೊಗಸು
ರಾಧ ಮೋಹನಾ
ಬಣ್ಣದ ಚುಂಬಕ
ರಜತಾದ್ರಿಯ ಕನಸು
ಶ್ರಾವಣ ಪೂರ್ಣಿಮ
ಸುಮಧುರ ಸಂಗಮ
ರಾಗ ಬೃಂದಾವನ
ಬೆಳದಿಂಗಳ ಚೆಲುವೆ
ವಸಂತದ ಚಿಗುರು
ನೂರು ನೆನಪು
ಬಾಂದಳದ ನಕ್ಷತ್ರ
ಶ್ರೀರಸ್ತು ಶುಭಮಸ್ತು
ಸ್ನೇಹ ಮಾಧುರಿ
ಮಂಗಳ ದೀಪ
ಸಾಗರ ತರಂಗಿಣಿ
ನೀಲಾಂಜನ
ಅಭಿನಂದನೆ
ಆಡಿಸಿದಳು ಜಗದೋದ್ಧಾರನಾ
ಹೇಮ ವಿಹಾರಿ
ಪಾಂಚಜನ್ಯ
ಇಂದ್ರ ಧನಸ್ಸು
ಅರುಣ ಕಿರಣ
ಧವಳ ನಕ್ಷತ್ರ
ಚಿರಬಾಂಧವ್ಯ
ಶುಭಮಿಲನ
ಮಧುರಗಾನ
ಕಾರ್ತೀಕದ ಸಂಜೆ
ನಾಟ್ಯಸುಧಾ
ಮೂಡಿ ಬಂದ ಶಶಿ
ಗಂಧರ್ವಗಿರಿ
ಬಿಳಿ ಮೋಡಗಳು
ಮಾನಸ ವೀಣಾ
ಮುಗಿಲ ತಾರೆ
ಸ್ವಪ್ನ ಸಂಭ್ರಮ
ಶ್ವೇತ ಗುಲಾಬಿ
ಮಧುರ ಆರಾಧನ
ಪಸರಿಸಿದ ಶ್ರೀಗಂಧ
ಮೇಘವರ್ಷಿಣಿ
ಮೌನ ಆಲಾಪನ
ಭಾವ ಸರೋವರ
ಆರಾಧಿತೆ
ನಿಶಾಂತ್

ಇಬ್ಬನಿ ಕರಗಿತು
ಪೂರ್ಣೋದಯ
ಪುಷ್ಕರಿಣಿ
ಹೃದಯ ರಾಗ
ಜೀವನ ಸಂಧ್ಯ
ನಲಿದ ಸಿಂಧೂರ
ನಮೃತಾ
ಮಿಡಿದ ಶೃತಿ
ಸ್ವರ್ಣ ಮಂದಿರ
ಸುಮಧುರ ಭಾರತಿ
ಮಂದಾರ ಕುಸುಮ
ಸೊಬಗಿನ ಪ್ರಿಯದರ್ಶಿನಿ
ಪ್ರೇಮ ಸಾಫಲ್ಯ
ಮಮತೆಯ ಸಂಕೋಲೆ
ಮುಂಜಾನೆಯ ಮುಂಬೆಳಕು
ಹೊಂಬೆಳಕು
ಸುಪ್ರಭಾತದ ಹೊಂಗನಸು
ಚೈತ್ರದ ಕೋಗಿಲೆ
ಪ್ರೀತಿಯ ಹೂಬನ
ಬಾನು ಮಿನುಗಿತು
ಮಂಜಿನಲ್ಲಿ ಮಿಂದ ಪುಷ್ಪ
ಶರದೃತುವಿನ ಚಂದ್ರ
ಪಾಂಚಜನ್ಯ
ಪಂಚವಟಿ
ಬರಿದ ನೈದಿಲೆ
ವಸುಂಧರ
ಕಲ್ಯಾಣ ರೇಖೆ
ಅನುಬಂಧದ ಕಾರಂಜಿ
ಸಂಧ್ಯಾ ಗಗನ
ಮತ್ತೊಂದು ಬಾಡದ ಹೂ
ನಿಶೆಯಿಂದ ಉಷೆಗೆ
ಬಾಡದ ಹೂ
ವಿಧಿವಂಚಿತೆ
ಗಿರಿಧರ
ಮಿಂಚು
ಸಪ್ತಪದಿ
ನವಚೈತ್ರ
ಅಭಿಲಾಷ
ಡಾ|| ವಸುಧಾ
ಹಿಮಗಿರಿ ನವಿಲು
ವಿವಾಹ ಬಂಧನ
ಬೆಳ್ಳಿ ದೋಣಿ
ಅಮೃತ ಸಿಂಧು
ಸಮ್ಮಿಲನ
ವರ್ಷ ಬಿಂದು
ಸುಭಾಷಿಣಿ

*ಮುಂದಿನ ಕಾದಂಬರಿಗಳು*

*'ಮಂತ್ರಾಕ್ಷತೆ'*

'ಮಧುರಿಮ'

ಕೈಯಲ್ಲಿದ್ದ ಪುಸ್ತಕವನ್ನು ಆರಾಮಾಗಿ ಹೊರಗೆಸೆದು ಗಿರೀಶ್ ಬಸ್‌ನ ವಿಂಡ್‌ನ ಪಕ್ಕಕ್ಕೆ ಸರಿಸಿ ಹೊರಗೆ ನೋಟ ಚೆಲ್ಲಿದವನು "ಸ್ಟಾಪ್....ಸ್ಟಾಪ್" ಕೂಗಿದ. ಒಂದೇ ಉಸುರಿನಲ್ಲಿ.

ಎದ್ದು ನಿಂತ ಕಂಡಕ್ಟರ್ "ಇಲ್ಲಿ ಸ್ಟಾಪ್ ಇಲ್ಲ, ಕೂತ್ಕೊಳ್ಳಿ ಸುಮ್ನೆ" ಎಂದವ ಅವನ ಒರಟಾದ ಮುಖ, ನಿಲುವು ನೋಡಿ ಸ್ವಲ್ಪ ತಣ್ಣಗಾದ. "ಕೂತ್ಕೊಳ್ಳಿ, ಸರ್...." ಎಂದ ನಯವಾಗಿ.

ತನ್ನ ಬ್ಯಾಗ್‌ನ ಹೆಗಲಿಗೆ ಹಾಕಿಕೊಂಡ ಗಿರೀಶ ಮುಂದಕ್ಕೆ ಹೋದವನೇ ಬಗ್ಗಿ ಡ್ರೈವರ್ ಹೆಗಲ ಮೇಲೆ ಕೈ ಇಟ್ಟ ಕೂಡಲೇ, ಬ್ರೇಕ್ ಬಿದ್ದು ಅಷ್ಟು ದೂರದಲ್ಲಿ ನಿಂತಿತು ಬಸ್ಸು. ಒಂದು ಮಾತು ಕೂಡ ಆಡದೇ ತನ್ನ ಬ್ಯಾಗು ತೆಗೆದು ಬಸ್ಸಿನಿಂದ ಹೊರಗೆಸೆದು ಇಳಿದು ಹೋದ. ಬಸ್ಸಿನಲ್ಲಿದ್ದ ಜನವೆಲ್ಲ ತಲಾ ಒಂದು ಮಾತಾಡುತ್ತಿದ್ದರು. ಅವನು ಕೇಳಿಸದಷ್ಟು ದೂರ ಹೋಗಿದ್ದ ರಸ್ತೆ ದಾಟಿ.

ನಿಂತು ಸುತ್ತಲೂ ನಿರುಕಿಸಿದವನು ಮರದ ಕೆಳಗೆ ಬ್ಯಾಗು ಎಸೆದು ಹರಿಯುತ್ತಿದ್ದ ಹೊಳೆಯಲ್ಲಿ ಈಜಾಡಿ ಬಂದು ಬಟ್ಟೆ ಧರಿಸಿ ಹತ್ತಿರವಿದ್ದ ಮರದ ಕೆಳಗೆ ಕೂತ. ಜೋಂಪು ಬಂದಂಗೆ ಕಣ್ಮುಚ್ಚಿ ಪೂರ್ತಿ ಕತ್ತಲಾಗುವವರೆಗೂ ನಿದ್ರಿಸಿದ. ಬಹುಶಃ ಇಂಥ ಹಾಯಾದ ನಿದ್ದೆ ಬಂದು ಬಹಳ ದಿನಗಳೇ ಆಗಿಹೋಗಿತ್ತು.

"ಯಾರು?" ಶಾಲು ಹೊದ್ದ ಒಬ್ಬ ವ್ಯಕ್ತಿ ಹತ್ತಿರಕ್ಕೆ ಬಂದರು.

"ಮನುಷ್ಯ ಅಂದ್ಕೊಂಡಿದ್ದೀನಿ. ಪ್ರಾಣಿಯಂತು ಅಲ್ಲ" ದನಿಯಲ್ಲಿ ವಿನಯವೇನು ಇರಲಿಲ್ಲ. ಸೇದುತ್ತಿದ್ದ ಸಿಗರೇಟನ್ನ ಕಾಲಿನಡಿಯಲ್ಲಿ ಹಾಕಿ ತುಳಿದ. ಉಡ್‌ಲ್ಯಾಂಡ್ ಷೂನಡಿಯಲ್ಲಿ ನಲುಗಿತು.

"ಒಳ್ಳೇದು, ಮನುಷ್ಯನಾಗಿರೋದ್ರಿಂದಲೇ ತೊಂದರೆ. ರಾತ್ರಿ ಹೊತ್ತು ಒಂಟಿಯಾಗಿರೋದ್ಬೇಡ. ಇಲ್ಲಿಂದ ಕುಂದಣ ಬರೀ ಆರು ಮೈಲಿ. ಕಡೆ ಬಸ್ಸೊಂದಿದೆ. ಹೋಗೋದಾದರೇ...ಹೋಗಿ. ಅಲ್ಲಿ ಖಾನಾವಳಿಗಳಲ್ಲಿ ಉಳಿಕೋಳ್ಳೋಕೆ ಕೂಡ ಜಾಗ ಇದೆ" ಹೇಳಿದರು ಒಳ್ಳೆ ಮನಸ್ಸಿನಿಂದ.

ಸಾಗರ್ ಬೇರೆಡೆ ಮುಖ ತಿರುಗಿಸಿಕೊಂಡ. ತಾನು ಹೇಳಿದ್ದು ಪಥ್ಯ ವಾಗಲಿಲ್ಲವೆಂದು ಅರಿವಾದಾಗ, ಸುಮ್ಮನೆ ನಡೆದವರು ನಾಲ್ಕಾರು ಸಲವಾದರೂ ಹಿಂದಿರುಗಿ ನೋಡಿದರು. ಅವರ ಮನ ವಿಲವಿಲ ಒದ್ದಾ ಡಿತು. 'ಅಯ್ಯೋ' ಎಂದುಕೊಂಡರಷ್ಟೆ.

ಮನೆಗೆ ಬಂದ ಮೇಲೆ ಬಿಳಿಗಿರಿ ಶಾಲನ್ನ ತೆಗೆದು ಗೂಟಕ್ಕೆ ನೇತು ಹಾಕಿ "ಯಾವ್ದೋ ಒಂದು ಹುಡ್ಗ ಹೊಳೆ ದಡದ ಮೇಲೆ ಬಂಡೆಗಳ ಮಧ್ಯೆ ಕೂತಿದ್ದಾನೆ, ಈ ಕಡೆಯವನಂಗೆ ಕಾಣ್ಲಿಲ್ಲ" ಹೆಂಡತಿಗೆ ಹೇಳಿದರು.

"ಫೋಟೋ ತೆಗೆಯೋರು ಇರ್ಬೇಕು. ಹೊಂಚಿ, ಕಾದು, ಫೋಟೋ ತೆಕ್ಕೊಂಡ್ ಪೇಪರ್‌ನಲ್ಲಿ ಹಾಕ್ತಾರಂತೆ. ಹೋದ ವರ್ಷ ಇಬ್ರೂ ಬಂದು ವಾರ ಮೊಕ್ಕಾಂ ಹೂಡಿ ಎಂಥೆಂಥ ಫೋಟೋಗಳ್ನ ತೆಗೆದಿದ್ರು" ಗಂಡನಿಗೆ ನೆನಪಿಸಿದರು. ಅದು ಅವರಿಗೆ ಸರಿಯೆನಿಸಿತು. ಆದರೆ ಒಂಟಿಯಾಗಿದ್ದುದ್ದು ಮಾತ್ರ ಭಯವೆನಿಸಿತು.

"ಈಗಿನ ಹುಡುಗ್ರು ಯಾರ ಮಾತು ಕೇಳೋಲ್ಲ" ಅಂದುಕೊಂಡರು. ಅದಕ್ಕೆ ಅವರ ಸ್ವಂತ ಅನುಭವವೇ ಕಾರಣ. ಅಷ್ಟಿಷ್ಟು ಬುದ್ಧಿವಂತನಾಗಿ ಓದಿಕೊಂಡಿದ್ದ ಮಗ ಶೀನಿ ಒಮ್ಮೆ ಪೆಟ್ಟಿಗೆಯಲ್ಲಿದ್ದ ಒಡವೆಗಳನ್ನು ಎತ್ತಿಕೊಂಡು 'ನಂಗೆ ತುಂಬ ಓದಬೇಕಿದೆ ಅದಕ್ಕೆ ಅಮ್ಮನ ಒಡವೆಗಳನ್ನು ತಗೊಂಡ್ ಹೋಗ್ತಾ ಇದ್ದೀನಿ' ಅನ್ನೋ ಒಂದು ಚೀಟಿ ಬಿಟ್ಟು ಹೋಗಿ ಹತ್ತು ವರ್ಷದ ಮೇಲಾಯಿತು. ಇಂದಿಗೂ ಅವನ ಪತ್ತೆ ಇಲ್ಲ. ಸಾಕಷ್ಟು ಹುಡುಕಿಸಿ ಸುಮ್ಮನಾಗಿದ್ದರೂ ಅವನು ಬರಬಹುದೆಂಬ ನಂಬಿಕೆ ಮಾತ್ರ ಸತ್ತಿರಲಿಲ್ಲ.

ಗಂಡ, ಹೆಂಡತಿ ಹೊರಗೆ ಬಂದು ಕೂತರು. ಅದೊಂದು ಪುಟ್ಟ ಊರು. ಇದ್ದಿದ್ದು ಎಲ್ಲಾ ಲೆಕ್ಕ ಹಾಕಿದರೇ ನೂರು ಮನೆ ಕೂಡ ಆಗದು. ಅದು ಊರಾಚೆ ತೋಟಗಳಲ್ಲಿ ಕೆಲವರು ಮನೆ ಮಾಡಿಕೊಂಡಿದ್ದರು. ಇನ್ನು ಕೆಲವು ಮನೆಗಳು ದೂರ ದೂರ ಇದ್ದವು. ಎಲ್ಲಾ ಸೇರಿಸಿ ಲೆಕ್ಕ ಹಾಕಿ ಆ ಸಂಖ್ಯೆಯ ಮಿತಿಗೆ ಬಂದು ನಿಲ್ಲಬಹುದೇನೋ! ಆದರೆ ಒಂದೇ ಮುಖ್ಯ ಬೀದಿ. ಒಂದು ಬದಿಯಲ್ಲಿ ವಿಶಾಲವಾದ ಅರಳಿಕಟ್ಟೆಯಾದರೇ, ಇನ್ನೊಂದು ಬದಿಯಲ್ಲಿ ಕೋಟೆ

ಆಂಜನೇಯಸ್ವಾಮಿ ದೇವಸ್ಥಾನ. ಎಲ್ಲಕ್ಕಿಂತ ಮುಖ್ಯ ಸದಾ ಹರಿಯುವ ಹೊಳೆ. ಸುತ್ತಮುತ್ತಲು ಮರ, ಗಿಡಗಳಿಂದ ತುಂಬಿಕೊಂಡಿರುತ್ತಿದ್ದರಿಂದ ಪ್ರೇಕ್ಷಣೀಯವಾದ ಸ್ಥಳ.

ಬಿಳಿಗಿರಿಯುವರು ಬೇರೆ ಬೇರೆ ಊರುಗಳಲ್ಲಿ ಮಾಸ್ತರಿಕೆ ಮಾಡಿದರೂ ನಿವೃತ್ತಿಯಾದ ಮೇಲೆ ಪೂರ್ವಿಕರು ಬಿಟ್ಟು ಹೋದ ಮನೆಯಲ್ಲಿ ಬಂದು ನೆಲೆಸಿದ್ದರು. ಒಂದಿಷ್ಟು ತೋಟ ಇತ್ತು. ಅದರಿಂದ ಬರುವ ಆದಾಯ ಮತ್ತು ಪೆನ್‌ಷನ್ ಹಣ ಅವರ ಜೀವನದ ನಿರ್ವಹಣೆಗೆ ಸಾಕಿತ್ತು. ಅಂಥ ಖರ್ಚೇನು ಇರಲಿಲ್ಲ. ಆಸೆಗಳನ್ನ ಮೆಟ್ಟಿ ನಿಂತು ಪಕ್ವಗೊಂಡ ಮನಸ್ಸು, ಈಗ ಮಗನ ದಾರಿಯನ್ನ ಮಾತ್ರ ಕಾಯುತ್ತಿತ್ತು.

"ಶೀನಿ..... ಬರ್ತಾನ?" ಎಂದರು ಬಾಯಿ ತಪ್ಪಿ ಬಿಳಿಗಿರಿ.

"ಬರ್ದೇ, ಎಲ್ಹೋಗ್ತಾನೆ? ದೊಡ್ಡ ಓದು ಓದ್ಕೊಂಡ್ಬಂದು ನಮ್ಮನ್ನ ಕರ್ಕೊಂಡ್ಹೋಗ್ತಾನೆ" ತಿರುಮಲಾಂಬ ದನಿಯಲ್ಲಿ ಆಸೆಯ ಅಲೆಗಳು ಇದ್ದವು. ಯಾಕೋ, ಏನೋ ಅದರ ಭೋರ್ಗರೆತಕ್ಕೆ ಸ್ಪಂಧಿಸುವ ಸ್ಥಿತಿಯಲ್ಲಿರಲಿಲ್ಲ ಅವರು. "ನಿನ್ನ ಆಸೆ ನೆರವೇರ್‍ಲಿ. ಬೇಗ ಶೀನಿ ಬರ್‍ಲಿ ಎಂದರೂ ಅವರ ಮನ ಅತ್ತಿತ್ತು. ಹತ್ತು ವರ್ಷದಷ್ಟು ದೀರ್ಘ ಕಾಲ ತಮ್ಮನ್ನ ಒಮ್ಮೆ ಕೂಡ ನೆನಸಿಕೊಳ್ಳಲಿಲ್ಲವಾ ಮಗ ?" ಈ ಪ್ರಶ್ನೆಯು ಹಿಂದೆ ಭಯ ನುಗ್ಗಿ ಬರುತ್ತಿತ್ತು. 'ಅವನಿಗೆ ಏನು ಆಗಿಲ್ಲ, ತಾನೇ' ಅಪಸ್ವರ ಹಾಡುತ್ತಿತ್ತು. ನೋಯುತ್ತಿದ್ದರು.

ಮುಸುಕಿದ ಕತ್ತಲಲ್ಲಿ ಹೆತ್ತ ಮನಗಳು ನೆರಳನ್ನು ಹುಡುಕುತ್ತಿದ್ದವು. ಅರ್ಧ ರಾತ್ರಿಯವರೆಗೂ, ಇದು ಒಂದು ದಿನದಲ್ಲಿ ಕೆಲವೊಮ್ಮೆ ಇಡೀ ರಾತ್ರಿ ಹೀಗೆಯೇ ಕೂತಿರುತ್ತಿದ್ದರು. ಅಲ್ಲಲ್ಲಿ....ದೂರದಲ್ಲಿ ಹಾಡುವ, ಮಾತಾಡುವ ಅಥವಾ ನಾಯಿಗಳ ಬೊಗಳುವಿಕೆಯು ಅವರನ್ನ ವಿಚಲಿತರನ್ನಾಗಿ ಮಾಡುತ್ತಿರಲಿಲ್ಲ.

ಬೆಳಿಗ್ಗೆ ಬಿಳಿಗಿರಿ ಸ್ನಾನ, ಪೂಜೆ ಮುಗಿಸಿಕೊಂಡು ಹೊಳೆಯ ಕಡೆ ಹೊರಟಾಗ ಆ ಯುವಕನ ನೆನಪಾಗಿ ಅಲ್ಲಿಗೆ ಬಂದರು. ಆ ಜಾಗ ಖಾಲಿಯಾಗಿತ್ತು. ಎಲ್ಲೋ ಹೊರಟು ಹೋಗಿರಬಹುದೆಂದುಕೊಂಡು ಕಲ್ಲುಗಳ ನಡುವೆಯಿಂದ ಹೊಳೆಯ ಮಗ್ಗುಲಿನತ್ತ ಹೊರಳಿದವರು ಗಕ್ಕನೆ ನಿಂತರು. ದೊಡ್ಡ ಚರ್ಮದ ಚೀಲ ಹಿಂದಿನ ದಿನ ಆ ಯುವಕನ ಕಾಲಿನ ಬುಡದ ಬಳಿ ನೋಡಿದ ಅದೇ ಬ್ಯಾಗು ಒಂದು ಕಡೆ ಅನಾಥವಾಗಿ ಬಿದ್ದಿತ್ತು. ಅವರೆದೆ ಸ್ಥಬ್ಧವಾಯಿತು 'ಆತ್ಮಹತ್ಯೆ....' ಅಂಥ ಯೋಚನೆ ಬಂದ ಕೂಡಲೇ ಅವರ ಸ್ವರ ಉಡುಗಿ, ಎದೆ ಭಾರವಾಯಿತು.... 'ಶೀನಿಯದೇ ವಯಸ್ಸಿರ ಬೇಕು.'

ನೀರಿನ ಜುಳುಜುಳು ಸದ್ದು ಕೇಳಿಸಿತು. ಈಜುತ್ತಿದ್ದವನು ಈ ಕಡೆಗೆ ಬಂದವನು ಬ್ಯಾಗ್‌ನತ್ತ ನೋಟ ಕೂಡ ಹರಿಸದೇ ಬಂಡೆಯೇರಿ ಬಿಸಿಲಿಗೆ ಮೈಯೊಡ್ಡಿ ಕೂತ. ಅವನ ಮೈಮೇಲೆ ಇದ್ದಿದ್ದು ಬರೀ ಕಾಚ ಮಾತ್ರ. ಒದ್ದೆ ಕೂದಲು, ಮೈಯನ್ನೊರೆಸುವ ಕಷ್ಟ ತೆಗೆದುಕೊಳ್ಳಲಿಲ್ಲ. ವಿಚಿತ್ರವಾಗಿ ಕಂಡಿತು ಅವರಿಗೆ.

ಬಿಳಿಗಿರಿಯವರು ಮಾತಾಡಿಸಲು ಹೋಗಲಿಲ್ಲ. ಮನೆಯತ್ತ ಹೆಜ್ಜೆ ಹಾಕಿದರು. ಆದರೂ ಮನಸ್ಸಿನಲ್ಲಿ ಏನೋ ಕೊರತೆ, ತುಡಿತ. ಅರ್ಥವಾಗದ ಆಂದೋಲನ. ಬಹುಶಃ ತಮ್ಮ ಮಗನ ವಯಸ್ಸಿನ ಯುವಕನನ್ನು ಕಂಡು ವಿಚಲಿತರಾಗಿದ್ದಾರೇನೋ. ಅಂತು ಅವರ ಮನಸ್ಸು ಸಮ ಸ್ಥಿತಿಯಲ್ಲಿರಲಿಲ್ಲ.

ಜೀನ್ಸ್ ಏರಿಸಿಕೊಂಡು ಮೇಲೊಂದು ಜಾಕೆಟ್ ತೊಟ್ಟವನು ಕೂತು ಸಿಗರೇಟ್ ಹಚ್ಚಿದ. ಎರಡು ದಂ ಎಳೆದವನು ಎಸೆದ ಅಸಹನೆಯಿಂದ. ಹೊಟ್ಟೆಯಲ್ಲಿ ಒಂದು ರೀತಿಯ ತಳಮಳ, ಸಂಕಟ. ಆಗಲೇ ಅವನಿಗೆ ಅರ್ಥವಾಗಿದ್ದು. ಸುತ್ತಲೂ ನೋಟವರಿಸಿದ. ಹೊಳೆಯ ಆ ಭಾಗದಲ್ಲಿ ಜನಗಳು ಇದ್ದರೂ ಈ ಕಡೆ ನಿರ್ಜನವಾಗಿತ್ತು. ಕೋಲಿಡಿದು ಇವನತ್ತಲೇ ದಿಟ್ಟಿಸುತ್ತಿದ್ದ ಹುಡುಗನನ್ನು ಬರುವಂತೆ ಸನ್ನೆ ಮಾಡಿದ.

ಸ್ವಲ್ಪ ಹಿಂಜರಿಕೆಯಿಂದ ಅಲ್ಲೇ ನಿಂತ ಹುಡುಗ ಮತ್ತೆ ಮತ್ತೆ ಸನ್ನೆ ಮಾಡಿ ಕರೆದಾಗ ಬಂದು ಗೊಂಬೆಯಂತೆ ನಿಂತ. ಪಿಳಿ ಪಿಳಿಯೆಂದಿತು ಅವನ ಕಣ್ಣುಗಳು.

"ಏನು ನಿನ್ನ ಹೆಸರು ?" ಕೇಳಿದ ಸಾಗರ್.

"ನನ್ನ ಪ್ರಶ್ನೆಗೆ ಉತ್ತರ ಹೇಳಿದರೆ ಮಾತ್ರ ಹೆಸರು ಹೇಳೋದು" ಸವಾಲ್ ಎಸೆದಂತೆ ಹೇಳಿದವನನ್ನು ದಿಟ್ಟಿಸಿ ನೋಡಿದ. ಹಿಂಜರಿಯುತ್ತ ಬಂದವನ ಧಿಮಾಕ್‌ಗೆ ನಗು ಬಂತು. "ಬೇಡ, ನಿನ್ಹೆಸರಿನಿಂದ ನಂಗೆ ಆಗಬೇಕಾದ್ದೇನಿಲ್ಲ. ಇಲ್ಲಿ ಏನಾದ್ರೂ ತಿನ್ನೋಕೆ....ಸಿಗುತ್ತಾ?" ಕೇಳಿದ ವಾರದ ಗಡ್ಡದ ಮೇಲೆ ಬೆರಳಾಡಿಸುತ್ತ.

"ನನ್ನ ಪ್ರಶ್ನೆಗೆ ಉತ್ತರ ಹೇಳಿ" ಮತ್ತೆ ಅದೇ ರಾಗ.

ಸಾಗರ್ ಕಾಲ ಬುಡದಲ್ಲಿದ್ದ ಕಲ್ಲನ್ನೆತ್ತಿ ದೂರಕ್ಕೆ ಎಸೆದ "ಶುದ್ಧ ತಲೆಹರಟೆ, ನಿನ್ನ ಪಾಡಿಗೆ ನೀನ್ಹೋಗು" ರೇಗಿದಂತೆ ನುಡಿದ. ಅವನೇನು ಕದಲಲಿಲ್ಲ. "ಹೋಗ್ಲಿ, ಆಮೇಲಾದ್ರೂ....ನನ್ನ ಪ್ರಶ್ನೆಗೆ ಉತ್ತರ ಹೇಳಿ. ತುಂಬ ಹಸಿದಿದ್ದೀರಾ? ತಿನ್ನೋಕೆ...ಏನು ಬೇಕು ?"

"ಏನಾದ್ರೂ.... ಪರ್ವಾಗಿಲ್ಲ !" ಎಂದ ಹೊಳೆಯತ್ತಲೇ ನೋಡುತ್ತ.

"ಕಲ್ಲು, ಮಣ್ಣು....ಅಂಥದಾದ್ರೂ ಪರ್ವಾಗಿಲ್ವಾ !" ನಗೆಯಾಡಿದ.

ಸಾಗರ್ ಬಗ್ಗಿ ಕಲ್ಲೆತ್ತಿಕೊಂಡು "ಹೋಗದಿದ್ರೆ, ನಾನೇ ತಲೆಯೊಡೆದು ಆಸ್ಪತ್ರೆಗೆ ತಗೊಂಡ್ಹೋಗಿ ಹಾಕ್ತೀನಿ." ರೋಪ್ ಹಾಕಿದ. ಅಷ್ಟು ದೂರ ಹೋದ ಕಲ್ಲೇಶ್ ಹಿಂದಕ್ಕೆ ಬಂದ. "ಹೋಗ್ಲಿ ಬಿಡಿ, ಸುಮ್ನೆ ಯಾಕೆ ಜಗಳ ? ನಿಮ್ಗೇನು ಬೇಕು, ಹೇಳಿ ಸಿಗೋದು ತಂದುಕೊಡ್ತೀನಿ" ಹಿರಿಯವನಂತೆ ರಾಜಿಗೆ ಬಂದಾಗ ಜೇಬಿನಿಂದ ಐವತ್ತರ ನೋಟೊಂದನ್ನು ತೆಗೆದು ಅವನತ್ತ ಎಸೆದ.

"ತಿನ್ನೋಂಥದ್ದು ಏನಾದ್ರೂ....ತಗೊಂಡ್ಬಾ" ಉಸುರಿದ.

ಕೆಳಗೆ ಬಿದ್ದ ನೋಟನ್ನ ಹೆಕ್ಕಿಕೊಂಡ ಕಲ್ಲೇಶ್ "ದುಡ್ಡು ದೇವರಿದ್ದಂಗೆ. ಭಕ್ತಿಯಿಂದ ನೋಡ್ಬೇಕು" ಕಣ್ಣೊತ್ತಿಕೊಂಡು ಹೋದ ಹುಡುಗನತ್ತ ನೋಡಿದ. ಮಾಸಿದ ನಿಕ್ಕರ್, ಷರಟು. ದಟ್ಟವಾಗಿ ಹರಳೆಣ್ಣೆ ಹಚ್ಚಿ ಬಾಚಿದರೂ ಧೂಳು ಕೂತು ಕೆಂಬಣ್ಣಕ್ಕೆ ತಿರುಗಿತ್ತು ಕೂದಲು.

ಹೊಟ್ಟೆಯಲ್ಲಿ ವಿಪರೀತವಾದ ಸಂಕಟ. ಮನೆ ಬಿಟ್ಟಾಗ ಇಂಥ ಕಡೆ ಹೋಗಬೇಕು ಅನ್ನೋ ಇರಾಧೆಯೇನು ಇರಲಿಲ್ಲ. ಇದು ಮೊದಲ ಸಲವಲ್ಲ ಹೊರಟಿದ್ದು, ಹಿಂದೆ ಆರು ತಿಂಗಳು ಅದೃಶ್ಯನಾದವನು ಹಿಮಾಲಯದ ಬಳಿಯಲ್ಲಿ ವಾಸಿಸುವ ಸಾಧು, ಸಂತರೊಂದಿಗೆ ಕಳೆದಿದ್ದ. ಅವೆಲ್ಲ ನೆನಪುಗಳು.

ಕೂತ ಕಡೆ ಬಿಸಿಲು ಆವರಿಸಿದಾಗ ಎದ್ದು ಹೋಗಿ ಸ್ವಲ್ಪ ದೂರದಲ್ಲಿನ ಮರದ ಬುಡದಲ್ಲಿ ಕೂತ. ಬ್ಯಾಗ್ ಮಾತ್ರ ಅಲ್ಲೇ ಬಾಯಿ ತೆರೆದುಕೊಂಡು ಬಿದ್ದಿತ್ತು. ಅತ್ತ ಅವನ ಲಕ್ಷ್ಯವಿಲ್ಲ.

"ಅಣ್ಣ, ತಗೊಂಡ್ ಬಂದಿದ್ದೀನಿ" ಹತ್ತಿರದಲ್ಲಿ ದನಿ ಕೇಳಿ ಅತ್ತ ತಿರುಗಿದ. ದೊಡ್ಡ ಚೌಕದಲ್ಲಿ ಏನೆಲ್ಲ ಕಟ್ಟಿ ತಂದಿದ್ದನೋ "ತಕ್ಕಳ್ಳಿ...." ಅವನ ಮುಂದೆ ಇಡೀ ಚೌಕ ಬಿಚ್ಚಿಟ್ಟ.

ಎರಡು ರೀತಿಯ ಉಂಡೆಗಳು, ಚೌಕಾಕಾರದ ಮಿಠಾಯಿ, ಖಾರದ ಅವಲಕ್ಕಿ ಜೊತೆ ಒಂದೆರಡು ಬಾಳೆ ಹಣ್ಣು ಕೂಡ ಇತ್ತು.

"ಸಧ್ಯಕ್ಕೆ ಅಯ್ನೋರು ಅಂಗಡಿಯಲ್ಲಿ ಇದ್ದಿದ್ದು ಇಷ್ಟೆ." ಎಷ್ಟು ದೂರದಲ್ಲಿ ಹೋಗಿ ನಿಂತವನು ಚಡ್ಡಿ ಜೇಬಿನಲ್ಲಿದ್ದ ಚಿಲ್ಲರೆಯನ್ನ ಅವನ ಮುಂದಿಟ್ಟ "ಸರ್‍ಯಾಗಿ ಲೆಕ್ಕ ನೋಡಿ, ತಂದಿದ್ದೀನಿ."

ಎರಡು ಉಂಡೆ ತಿಂದ ನಂತರ ಇನ್ನೊಂದು ಉಂಡೆಯನ್ನ ಅವನಿಗೆ ಕೊಟ್ಟ "ಅದ್ಯಾಕೆ, ಅಷ್ಟು ದೂರದಲ್ಲಿ ನಿಂತಿದ್ದೀಯಾ ! ನೀನೊಂದು ಕೈ ಹಾಕು" ಆಹ್ವಾನಿಸಿದ. ತೀರಾ ಒರಟಾಗಿ ಕಾಣುವ ವ್ಯಕ್ತಿ 'ಒಳ್ಳೆಯವ' ನೆಂದುಕೊಂಡ ಕಲ್ಲೇಶಿ "ಬೇಡ, ಬೆಳಿಗ್ಗೆ ಸುಟ್ಟ ಹಲಸಿನ ಹಪ್ಪಳ ತಿಂದು, ಕಾಫಿ ಕುಡಿದಿದ್ದೀನಿ.

ನೀವು ತಕ್ಕಳ್ಳಿ" ಹೊರಟವನ ತಲೆಯ ಮೇಲೊಂದು ಹಾಕಿ ರೆಟ್ಟೆ ಹಿಡಿದು ಎಳೆದು ತಂದ ಸಾಗರ್ "ಕೂತ್ಕೊಂಡ್ ತಿನ್ನು. ನಾನು ಹೇಳೋವರ್ಗೂ ಮೇಲಕ್ಕೆ ಏಳ್ಬಾರ್ದು" ಗದರಿಸಿದ.

ಕಲ್ಲೇಶ್ ಬಿಟ್ಟ ಕಣ್ಣುಗಳಿಂದ ಅವನನ್ನ ನೋಡಿದ.

"ನನ್ಕಂಡ್ರೆ...ಭಯ ಆಗುತ್ತಾ ?" ರೆಟ್ಟೆ ಹಿಡಿದ.

"ಇಲ್ಲ ಅಣ್ಣಾ, ಖಂಡಿತ... ಇಲ್ಲ" ಕೂತ.

ಅದರಲ್ಲಿ ಒಂದು ಉಂಡೆ ಬರ್ಫಿ ಜೊತೆ ಬಾಳೆ ಹಣ್ಣು ಕೂಡ ಸಿಕ್ಕಿದ್ದು ಅವನಿಗೆ ಖುಷಿ. 'ಇಷ್ಟೊಂದು ಧಾರಾಳ ಯಾರಿಗೂ ಇಲ್ಲ' ಅಂದುಕೊಂಡ.

"ಅಣ್ಣಾ, ನೀರು...ಬೇಡ್ವಾ ?" ಕೇಳಿದ.

"ಆ ಬ್ಯಾಗು ತಗೊಂಡ್ಬಾ" ಎಂದ ಸಾಗರ್ ಹರಿಯುತ್ತಿದ್ದ ಹೊಳೆಯತ್ತಲೇ ನೋಡಿದ. ಅತ್ಯಂತ ಪ್ರಶಾಂತವಾಗಿ ಹರಿಯುತ್ತಿತ್ತು. ಬದುಕು ಇಷ್ಟು ಸರಳವಾಗಿದ್ದರೇ ಚೆಂದವೇನೋ ಎಂದುಕೊಂಡ. ಅವನ ಮುಖ ಬಿಗಿದು ಕೊಂಡು ಅಲ್ಲಿ ಮಿನುಗಿದ್ದು ಕಠೋರತೆ. ಹಲ್ಕುಡಿ ಕಚ್ಚಿಡಿದು ಸಿಕ್ಕ ಸಿಕ್ಕ ಕಲ್ಲುಗಳನ್ನೆಲ್ಲ ರೋಷದಿಂದ ಎಸೆದ, ಅದರ ಪ್ರಶಾಂತತೆಯನ್ನು ಕದಡುವಂತೆ.

ಬ್ಯಾಗು ಹೊತ್ತು ತಂದು ಇಟ್ಟವನು ಎಸೆದಾಟವನ್ನು ನೋಡಿದ. ಪುಟ್ಟ ಹುಡುಗನ ಎಸೆದಾಟದಂತೆ ಕಂಡಿತು.

"ಅಣ್ಣಾ, ಬ್ಯಾಗು...." ಎಂದು ಕತ್ತು ತೂರಿಸಿಕೊಳ್ಳುತ್ತ.

ಎಸೆದಾಟ ನಿಲ್ಲಿಸಿ ಒಳಗೆ ಇದ್ದ ವಿಸ್ಕಿ ಬಾಟಲು ತಗೊಂಡ್ ಗಂಟಲಿಗೆ ಸುರಿದುಕೊಂಡ. ಬಿಟ್ಟ ಕಣ್ಣುಗಳಿಂದ ನೋಡಿದ ಕಲ್ಲೇಶಿ ಊರಿನ ಆಚೆ ಗುಡಿಸಲು ಪಕ್ಕ ಇದ್ದ ಸಾರಾಯಿ ಅಂಗಡಿಯ ಮುಂದೆ ಜನ ಹೀಗೆ ಬಾಟಲೆತ್ತಿ ಸುರಿದುಕೊಳ್ಳುತ್ತಿದ್ದರು. ಆಮೇಲಿನ ಮಾತು, ಜಗಳ, ಬಡಿದಾಟ, ಜ್ಞಾನ ತಪ್ಪಿ ಬೀಳುವುದು ಇದನ್ನೆಲ್ಲ ಕಂಡೆ ಇದ್ದ. ಅಲ್ಲಿ ಸೇರುತ್ತಿದ್ದ ಜನ ದಟ್ಟ ದರಿದ್ರರು. ಊಟಕ್ಕೂ, ಬಟ್ಟೆಗೂ ಕೊರತೆ ಇದ್ದ ಜನ 'ಆ ಕಡೆ ಹೋಗ್ಬೇಡ' ಅವನಕ್ಕ ಹೇಳಿದ್ದಳು. ಯಾಕೆ ? ಈ ಪ್ರಶ್ನೆಗೆ ಉತ್ತರ ಗೊತ್ತಿತ್ತು. ಅವನಪ್ಪ ದುಡಿದಿದ್ದನ್ನ ಅಲ್ಲಿಗೆ ಒಯ್ದು ಕುಡಿದು ಸತ್ತಿದ್ದು.

ಜೋರಾಗಿ ಓಡಿದವನು ಏದುಸಿರು ಬಿಡುತ್ತ ಬಂದು ಕಂಚಿನ ತಂಬಿಗೆಯ ತುಂಬ ನೀರು ತಗೊಂಡು ಬಂದ "ನೀರು ಕುಡೀರಿ. ಅದು ಮೈಗೆ ಒಳ್ಳೇದಲ್ಲ. ನಮ್ಮಪ್ಪ ಕುಡ್ದು...ಕುಡ್ದು ಸತ್ತುಹೋದ" ಎಂದ ಅಳುವಿನ ಸ್ವರದಲ್ಲಿ. ಜೋರಾಗಿ ನಕ್ಕುಬಿಟ್ಟ ಸಾಗರ್ "ನಿಮ್ಮಪ್ಪ ಕುಡಿದೇ ಇದ್ದಿದ್ರೆ.....ಬದುಕ್ತಾ ಇದ್ನಾ ?

ಬದುಕೋಕೆ...ಕುಡೀತಾರೆ. ಸಾಯೋಕೆ ಯಾರು.... ಕುಡ್ಯೋಲ್ಲ" ತನ್ನದೇ ರೀತಿಯಲ್ಲಿ ತರ್ಕ ಮಾಡಿದ.

ಬಾರ್‌ಗಳು ಸದಾ ತುಂಬಿರುತ್ತಿದ್ದವು. ಲಿಕ್ಕರ್ ತಯಾರಕರೇ ಇಂದು ಕೋಟ್ಯಾಧೀಶರು.

ಇಡೀ ತಂಬಿಗೆಯ ನೀರು ಕುಡಿದ ಮೇಲ ಸಾಗರ್‌ಗೆ ಒಂದಿಷ್ಟು ಸಮಾಧಾನ. ಹೊಟ್ಟೆಯಲ್ಲಿನ ಸದ್ದು ಅಡಗಿತ್ತು. ಸಧ್ಯಕ್ಕೆ ನಿರ್ಯೋಚನೆ. ಸ್ವಲ್ಪ ಉತ್ಸಾಹಿತನಾದ ಕೂಡ.

"ಏನು, ನಿನ್ನ ಪ್ರಶ್ನೆ ?" ಮೊಣಕಾಲುಗಳ ಮೇಲೆ ಕೈಗಳನ್ನೂರಿ ಪ್ರಶ್ನಿಸಿದ ಸಾಗರ್. ಅವನು ಪಿಳಿಪಿಳಿ ಕಣ್ಣುಗಳನ್ನ ಬಿಟ್ಟ "ರಾವಣಾಸುರನಿಗೆ ಹತ್ತು ತಲೆ ಇರೋದು ನಿಜಾನಾ ?"

ಸಾಗರ್ ತಲೆ ಕೆರೆದುಕೊಂಡ. ಇಂಥ ಪ್ರಶ್ನೆ ಹಾಕಿದ ಅವನಿಗೆ ಎರಡು ಬಿಡಬೇಕೆನಿಸಿತು. ಅವನು ಕೂಡ ಓದಿದ್ದ. ರಾವಣನಿಗೆ ಹತ್ತು ತಲೆ ಇತ್ತು ಎನ್ನುವ ಪ್ರತೀತಿ ಇತ್ತು.

"ಏಯ್, ರಾವಣಾಸುರನಿಗೆ ಹತ್ತು ತಲೆ ಇರೋದ್ರಿಂದ ನಿಂಗೇನು ತೊಂದರೆ? ನೀನು ಅಲಾಲ್‌ಟೋಪಿಯಂಗೆ ಕಾಣ್ತೀಯಾ. ಆ ಚಿಲ್ಲರೆ ತಗೊಂಡ್ ರೈಟ್ ಹೇಳು" ಜೋರು ಮಾಡಿದ. ಅವನಿಗೆ ಈಗ ಏಕಾಂತ ಅನುಭವಿಸಬೇಕೆನಿಸಿತು.

ಅವನೇ ಇಟ್ಟ ಚಿಲ್ಲರೆಯನ್ನ ಕಲ್ಲೇಶ್ ನಿಕ್ಕರ್ ಜೇಬಿನೊಳ್ಳಕ್ಕೆ ಇಳೇ ಬಿಟ್ಟು "ಅಣ್ಣ, ಈ ಕಡೆ ತುಂಬ...ತುಂಬ ಕೆಟ್ಟ ಜನ ಓಡಾಡ್ತಾರೆ. ಅದ್ಕೇ ಈ ಕಡೆ ಯಾರು ಬರೋಲ್ಲ. ಆ ಕಡೆ ದೂರದಲ್ಲಿ ಒಂದು ದೋಣಿನ ಕಟ್ಟಿ ಹಾಕಿದ್ದಾರಲ್ಲ, ಅಲ್ಲಿಗೆ ಹೋಗ್ಬಿಡಿ. ಇಲ್ಲ, ಇಲ್ಲಿ ಬಸ್ಸು ಹತ್ತಿದ ಹತ್ತು ನಿಮಿಷಕ್ಕೆ ಕುಂದಣದಲ್ಲಿ ಇರ್ತೀರಾ" ಅಮೂಲ್ಯವಾದ ಸಲಹೆ ಕೊಟ್ಟ.

ತಲೆ ಕೊಡವಿದ ಸಾಗರ್ ಭಯಕ್ಕೆ ಎಂದೋ ಸಲಾಂ ಹೇಳಿದ್ದ. ಒಂಟಿಯಾಗಿ ರಾತ್ರಿಗಳಲ್ಲಿ ನಿರ್ಜನ ಪ್ರದೇಶದಲ್ಲಿ ಅಲೆದಾಡಿದ್ದ. ಅಮಾವಾಸೆಯ ಕತ್ತಲು ಕೂಡ ಅವನನ್ನು ಹೆದರಿಸಿರಲಿಲ್ಲ. ಬದುಕಿನ ಬಗ್ಗೆ ಅವನಲ್ಲಿ ಗೋಜಲು ಗೋಜಲು. ಯಾವುದು ಸ್ಪಷ್ಟವಾಗದು.

ಮತ್ತೆ ಮಧ್ಯಾಹ್ನ ಸ್ನಾನ ಮಾಡಿದ. ಜಾಗ ಬದಲಿಸಿದನೇಃ ವಿನಃ ಆ ಪ್ರದೇಶ ಬಿಟ್ಟು ಹೋಗಬೇಕೆನಿಸಲಿಲ್ಲ. ಸಂಜೆ ಮುಂದು ಇದ್ದಕ್ಕಿದ್ದಂತೆ ಮೈ ಬಿಸಿಯಾಗಿ ಚಳಿಯೆನಿಸಿದರೂ ಲೆಕ್ಕಕ್ಕಿಡಲಿಲ್ಲ.

"ನಿಮ್ಮತ್ರ ಮಾತಾಡೋಕೆ...ಯಾರೋ ಬಂದಾರೆ" ಅಲ್ಲೇ ಕಲ್ಲೇಶಿಯ ದನಿ. ಬಿಡಲಾರದೆ ಕಣ್ಣುಗಳನ್ನ ಬಿಟ್ಟ. ಒಂದು ಕಾಲಿನ ಮೇಲಿದ್ದ ಇನ್ನೊಂದು ಕಾಲು ಅರಿವಾಗದಂತೆ ಇಳಿಯಿತು. ತಲೆಯ ಕೆಳಗಿಟ್ಟುಕೊಂಡ ಕೈಗಳನ್ನು ತೆಗೆದು ಸರಿಯಾಗಿ ಕೂತ.

ಎದುರಿಗೆ ನಿಂತಿದ್ದ ಮುತ್ತೈದೆ ಕಳೆಕಳೆಯಾಗಿದ್ದರು. ದೈವಿಕತೆ ಹಣೆಯಲ್ಲಿದ್ದ ಅಗಲವಾದ ಕುಂಕುಮದಲ್ಲಿ. ತುಟಿಯಂಚಿನಲ್ಲಿ ನಸುನಗು. ನೋಟ ಕದಲಿಸಲಾಗಲಿಲ್ಲ ಅವನಿಂದ.

"ನೆನ್ನೆಯಿಂದ ಇಲ್ಲಿದ್ದೀಯಂತೆ. ಅದೂ ಇದೂ ತಿಂದರೆ ಹೊಟ್ಟೆ ಕೆಡುತ್ತೆ, ಬಿಸಿಯಾಗಿ ಅಡಿಗೆ ಮಾಡಿದ್ದೀನಿ. ಒಂದು ತುತ್ತು ಊಟ ಮಾಡ್ಬಾ" ಕರೆದರು. ದೈವವಾಣಿಯಂತೆ ಕೇಳಿಸಿತು ಅವನಿಗೆ. ಪುಳಕಿತಗೊಂಡ. ಇಂಥ ಮಧುರ ಮಾಂತ್ರಿಕತೆಯುಳ್ಳ ಮಾತನ್ನು ಮೊದಲ ಸಲ ಕೇಳುತ್ತಿದ್ದೇನೆಂದುಕೊಂಡ. ನಿರಾಕರಣೆ, ಪ್ರತಿಭಟನೆ ಅವನಲ್ಲಿ ಮೂಡಲೇ ಇಲ್ಲ.

ಮೇಲಕ್ಕೆದ್ದವನು ಬಂಡೆಗಳನ್ನ ಇಳಿದು ಕೆಳಕ್ಕೆ ಬಂದ.

"ಕಲ್ಲೇಶಿ, ಬ್ಯಾಗು ತಗೊಂಡ್ಬಾ" ಅಣತಿ ಇತ್ತರು ಆಕೆ.

ಒಂದು ಕಿಲೋಮೀಟರ್ ಕ್ರಮಿಸಿದ ನಂತರ ಒಂದು ಮನೆ ಸಿಕ್ಕಿತು. ಅದರ ವೈಭವ ಸಂಪ್ರದಾಯದಲ್ಲಿ ನಳನಳಿಸುತ್ತಿತ್ತು. ಮನೆಯ ಮುಂದೆ, ಜಗುಲಿಗಳಲ್ಲಿ ದೊಡ್ಡ ರಂಗೋಲೆ. ಹೊಸಲಿಗೆ ಪೂರ್ತಿ ಕೆಮ್ಮಣ್ಣು ತೊಡೆದು ರಂಗೋಲಿ ಹಾಕಿದ್ದರು. ತೀರಾ ಸಾಧಾರಣವಾದ ಹಳೆಯ ಮನೆ. ಆದರೂ ಆಕರ್ಷಣೀಯವಾಗಿತ್ತು. ಹಿತವೆನಿಸಿತು ಮನಸ್ಸಿಗೆ.

ಚಿಲಕ ಹಾಕಿದ್ದ ಬಾಗಿಲನ್ನು ಆಕೆಯೇ ತೆರೆದರು. ದೊಡ್ಡ ಕಿಟಕಿಗಳಿಂದ ಮನೆ ಆವರಿಸಿಕೊಳ್ಳದಿದ್ದರೂ, ಒಳಗೆ ಶುಭ್ರವಾದ ಮಂದವಾದ ಬೆಳಕಿತ್ತು. ಆಸನ ವ್ಯವಸ್ಥೆಯೇನು ಇರಲಿಲ್ಲ.

ಷೂಗಳನ್ನ ಹೊರಗಡೆಯೇ ಬಿಚ್ಚಿದ.

"ಹಾಗೇ ಒಳ್ಗಡೆ ಹೋಗೋದ್ಬೇಡ. ಒಂದಿಷ್ಟು ನೀರು ತಂದ್ಕೊಡ್ತೀನಿ ನಿಂತ್ಕೋ" ಜೋರು ದನಿಯಲ್ಲಿ ಹೇಳಿದ್ದ ಕಲ್ಲೇಶಿ, ನೀರಿದ್ದ ಒಂದು ತಾಮ್ರದ ಬಿಂದಿಗೆಯನ್ನು ಹೊತ್ತು ತಂದ. "ಕೈ ಕಾಲು ತೊಳ್ಕೊಳ್ಳಿ" ಅವನೇ ಬಗ್ಗಿಸಿದ.

ತಣ್ಣನೆಯ ನೀರು ಬಿದ್ದಾಗ ಹಾಯೆನಿಸಿತು ಸಾಗರ್‌ಗೆ.

ಒಳಗೆ ಅಡಿಯಿಟ್ಟಾಗ ಅದರ ಸೌಂದರ್ಯಕ್ಕೆ ದಂಗಾದ. ಗೋಡೆಯಂಚಿಗೆ

ರಂಗೋಲಿಯ ಶೃಂಗಾರವಾದರೇ, ನಡು ಮನೆಯ ಮಧ್ಯಕ್ಕೆ ದೊಡ್ಡದಾದ ಹಸೆ. ಮೊದಲ ಸಲ ನೋಡುವಂತೆ ಕಣ್ಣರಳಿಸಿದ.

"ತಗೋಪ್ಪ...ಚೌಕ" ಅವನ ಮುಂದೆ ಒಗೆದ ವಸ್ತ್ರವನ್ನು ತಂದಿಡಿದಾಗ "ನನ್ನ ಬ್ಯಾಗಿನಲ್ಲಿದೆ" ಅತ್ತ ಹೋದ. ತುರುಕಿದ್ದ ಬಟ್ಟೆಗಳನ್ನು ಹೊರಗೆಳೆದು ಹಾಕಿ, ಟವಲೆಳೆದುಕೊಂಡು ಮುಖವನ್ನೊರೆಸಿಕೊಂಡ. ಮನೆಯ ಮಾಡು ಅಷ್ಟೇನು ಎತ್ತರವಿರಲಿಲ್ಲ. ಇಂಥ ಮನೆಯನ್ನು ಮೊದಲ ಸಲ ಪ್ರವೇಶಿಸಿದ್ದ.

"ಕೂತ್ಕೋಪ್ಪ..." ಊಟದ ಚಾಪೆಯನ್ನ ಹರವಿ ಫಳಫಳ ಹೊಳೆಯುವ ತಾಮ್ರದ ತಂಬಿಗೆ ಹಿಡಿದು ಬಂದವರು ಇಟ್ಟು ಹೋಗಿ ಬಾಳೆಯೆಲೆ ತಂದು ಹಾಕಿದರು.

ಆಕೆಗೆ ಅವನ ಬಗ್ಗೆ ವಿಚಾರಿಸುವ ಆಸ್ಥೆ ಮೂಡಲಿಲ್ಲ. ತೀರಾ ಸೋತಂತೆ ಕಾಣುವ ಅವನ ಹೊಟ್ಟೆಗೆ ಆಹಾರ ನೀಡುವುದು ಮಾತ್ರ ಕರ್ತವ್ಯವೆಂದು ತಿಳಿದಿದ್ದರು. ಪಟ್ಟಣದ ಥಳುಕು ಬೆಳಕು ತಿಳಿಯದ ಒಳ್ಳೆಯ ಮನಸ್ಸಿನ ಹೆಣ್ಣು. ಪಾತ್ರೆಗಳನ್ನ ತಂದಿಟ್ಟುಕೊಂಡು ಬಡಿಸಲು ಕೂತರು ತಿರುಮಲಾಂಬ. ಅನ್ನ, ಒಂದು ಹುಳಿ, ಉಪ್ಪಿನಕಾಯಿ, ಮಜ್ಜಿಗೆ ಮಾತ್ರ. ಬೇರೆಯ ಸಮಯದಲ್ಲಿ ಹೇಗೆ ಸ್ವೀಕರಿಸುತ್ತಿದ್ದನೋ ಗಬಗಬ ತಿಂದ. ನೆತ್ತಿ ಹತ್ತಿದಾಗ ತಲೆಯ ಮೇಲೆ ತಟ್ಟಿ ನೀರು ಕೊಟ್ಟ ಆಕೆಯ ಮಮತೆಗೆ ಅವಾಕ್ಕಾದ.

ಪೂರ್ತಿ ತಿಂದವನು ಎಲೆಯನ್ನೆಸೆದು ಕೂತ ತೊಳೆದು ಬಂದು ಹಾಸಿದ್ದ ಚಾಪೆಯ ಮೇಲೆ ಮಲಗಿದ. ಮರುಕ್ಷಣವೇ ನಿದ್ರಾ ಲೋಕದಲ್ಲಿ ತೇಲಿ ಹೋದ. ಇಂಥ ತಣ್ಣನೆಯ ನೆರಳಿನಲ್ಲಿ ಮಲಗಿ ಕೆಲವು ದಿನಗಳೇ ಆಗಿತ್ತು. ಮನೆ ಬಿಟ್ಟು ಎಷ್ಟು ದಿನವಾಯಿತೆಂದು ಲೆಕ್ಕವಿಟ್ಟಿರಲಿಲ್ಲ. ಇದೇನು ಮೊದಲ ಸಲವಲ್ಲ ಅವನು ಮನೆ ಬಿಟ್ಟು ಬಂದಿರುವುದು. ಒಮ್ಮೆಯಂತು ಹೋದವನು ಆರು ತಿಂಗಳನಂತರವೇ ಹಿಂದಿರುಗಿ ಬಂದಿದ್ದು. ಕೆಲವು ವಿಲಕ್ಷಣ ಅನುಭವಗಳು ಅವನದಾಗಿತ್ತು.

ಸಂಕೋಚವಿಲ್ಲದೆ ಉಂಡು ಮಲಗಿದ್ದ ಅವನನ್ನು ನೋಡಿ ತಿರುಮಲಾಂಬ ಹೃದಯ ತೇವವಾಯಿತು. ತಮ್ಮ ಮಗ ಎಲ್ಲಿದ್ದಾನೋ? ಆ ಪ್ರಶ್ನೆ ಕಂಬನಿಯನ್ನ ಹೊರಗೆ ತಂದಿತು.

ಕೈಕಟ್ಟಿ ನೋಡುತ್ತಿದ್ದ ಕಲ್ಲೇಶಿಯತ್ತ ನೋಟ ಹರಿಸಿದರು. "ಅಯ್ಯೋ ಮರ್ತೇ ಬಿಟ್ಟೆ ! ಊಟ ಹಾಕ್ತೀನಿ, ಎಲೆ ಹಾಕ್ಕೋ. ಈಚೆಗೆ ನೆನಪಿನ ಶಕ್ತಿ ತೀರಾ ಕಮ್ಮಿ ಆಗಿದೆ" ಕೈಯೂರಿಕೊಂಡು ಮೇಲಕ್ಕೆದ್ದಾಗ "ಬೇಡಮ್ಮ ಬೇಡ... ಅಕ್ಕಿ ರೊಟ್ಟಿ

ಕಟ್ಟಿ ಕೊಟ್ಟಿದ್ದಾಳೆ. ಆರಾಮಾಗಿ ಬಂಡೆಗಳ ನಡ್ವೆ ಕೂತು ತಿಂದ್ಕೋತೀನಿ. ನೆನ್ನೆಯೆಲ್ಲ ಸಿಂಹದ ಹಾಗೇ ಗುಟುರು ಹಾಕ್ತ ಇದ್ದ. ಈಗ ಎಷ್ಟು ತಣ್ಣಗಾಗಿ ಹೋಗಿದ್ದಾನೆ" ಕುಹಕವಾಡಿದ ಅವನು ಕೆಲವೊಮ್ಮೆ ವಯಸ್ಸಿಗೆ ಮೀರಿದ ಮಾತುಗಳನ್ನಾಡುತ್ತಿದ್ದ. ಅದಕ್ಕೆ ಅವನ ಅನುಭವಗಳೇ ಕಾರಣವಿರಬಹುದು.

"ಅದ್ನ ರಾತ್ರಿಗೆ...ತಿಂದ್ಕೋ ! ಈಗ ಊಟ ಮಾಡು."

ತಿರುಮಲಾಂಬ ಹೋದತ್ತಲೇ ನೋಡಿದ. ತನಗೆ ತಾಯಿ ಇಲ್ಲ. ತಾಯಿ ಇರೋ ಮಗನಿಗೆ ಆಕೆ ಬೇಡ. ಸದಾ ಮಗನ ಬಗ್ಗೆ ಮಾತಾಡುವ ದಂಪತಿಗಳನ್ನ ಕಂಡರೇ ಮರುಕ. ಎಷ್ಟೋ ಸಲ 'ನನ್ನ ನಿಮ್ಮಗ ಅಂದ್ಕೊಂಡ್ ಅವನನ್ನ ಮರ್ತು ಬಿಡಿ' ಎಂದು ಹೇಳಿಬಿಡಬೇಕೆನಿಸುತ್ತಿತ್ತು. ಆದರೆ ಹೇಳಲಾರ. ಅಷ್ಟು ಧೈರ್ಯ ಅವನಿಗಿಲ್ಲ.

ಬಡಿಸಿದ್ದನ್ನ ಲಕ್ಷಣವಾಗಿ ತಿಂದು ಎಲೆ ಎಸೆದು ಕೈ ತೊಳೆದು ಬಂದ. ಸಾಗರ್‌ನ ಬ್ಯಾಗ್ ಹೊತ್ತು ಬರುವಾಗ ಒಂದು ನೋಟಿನ ಕಂತೆ ಬಟ್ಟೆಗಳ ನಡುವೆ ಇಣಕಿದಾಗ ಕಣ್ಣು ಕೋರೈಸಿತ್ತು. ಆಸೆ ಅಲೆ ಅಲೆಯಾಗಿ ವಿಜೃಂಭಿಸಿದಾಗ, ಸಣ್ಣ ತಡೆಯೊಡ್ಡಿದ. ಹೊಳೆ, ಕಲ್ಲು ಬಂಡೆಗಳ ನಡುವೆ ಸದಾ ಓಡಾಡುವುದಕ್ಕೆ ಒಂದು ಕಾರಣವಿತ್ತು.

ಮೆಟ್ಟಲುಗಳ ಮೇಲೆ ಕೂತು ಹೊಳೆಯ ಕಡೆ ನೋಡುತ್ತಿದ್ದವನು ತಟ್ಟನೆದ್ದು ಮನೆಯೊಳಕ್ಕೆ ಹೋದ. ಸಾಗರ್ ಅದೇ ಸ್ಥಿತಿಯಲ್ಲಿ ಮಲಗಿದ್ದ. ಗೋಡೆಯಂಚಿಗೆ ಕೂತು ಕಣ್ಣು ಮುಚ್ಚಿದ್ದ ತಿರುಮಲಾಂಬ ಸಮೀಪಕ್ಕೆ ಹೋಗಿ "ಅಮ್ಮ ನಿಮ್ಗೆ ಭಯ ಅನ್ನಿಸೋಲ್ವಾ ! ಮೊದ್ಲೇ ಒರಟು ಒರಟಾಗಿ ಕಾಣ್ತೋ, ಈ ಮನುಷ್ಯ ಕಳ್ಳನೋ, ಕೊಲೆಗಡುಕನೋ ನೀವೊಬ್ರೆ..... ಮನೆಯಲ್ಲಿ" ಪಿಸುಗುಟ್ಟಿದ.

ಆಕೆಯ ಕಣ್ಣುಗಳಲ್ಲಿ ವೇದನೆ ಮಡುವುಗಟ್ಟಿತು. ಎದೆ ಭಾರವೆನಿಸಿತು. ಈಚೆಗೆ ಬದುಕು ತೀರಾ ಭಾರವೆನಿಸಿತ್ತು. ಎಷ್ಟು ದಿನ ಹೀಗೆ ಬದುಕುವುದು? ಕಾದು ಕಾದು ಹೀಗೆಯೇ ಕಣ್ಣು ಮುಚ್ಚುವುದೇನೋ. "ಹುಚ್ಚು ಹುಡ್ಗ, ಇರಲಿಕ್ಕಿಲ್ಲ ಬಿಡು. ಕಳ್ಳನಾದರೆ, ಇಲ್ಲಿ ಹೊತ್ತುಕೊಂಡು ಹೋಗೋಕೇನಿದೆ? ಇನ್ನ ಈ ವಯಸ್ಸಾದ ಮುದ್ಕರನ್ನ ಕೊಲೆ ಮಾಡೋದ್ರಿಂದ.... ಅವ್ನಿಗೇನು ಸಿಕ್ಕೀತು ?" ಸಹಜ ದನಿಯಲ್ಲಿ ಪಿಸುಗುಟ್ಟಿದರು. ಬಾಯಿ ಮೇಲೆ ಕೈ ಇಟ್ಟುಕೊಂಡು ಹೊರ ಹೋದ ಕಲ್ಲೇಶಿ ಹರಿಯುತ್ತಿದ್ದ ಹೊಳೆಯತ್ತ ನೋಡಿದ.

ಹೊಳೆ, ಕಲ್ಲು ಬಂಡೆಗಳ ನಡುವೆ ಬೆಳೆದ ಅವನಿಗೆ ಆ ಪ್ರದೇಶವೆಂದರೆ ಇಷ್ಟ. ಎಂದೂ ಭಯವಾಗಿದ್ದು ಇಲ್ಲ. ಇಲ್ಲಿ ಒಂದೊಂದು ಕಲ್ಲು ಒಂದೊಂದು ಕತೆ ಹೇಳುತ್ತೆ, ಎಂದು ಹಲವರು ಆಡಿಕೊಂಡಿದ್ದನ್ನ ಕೇಳಿದ್ದ. ಕೆಲವು ಕತೆಗಳು

ಅತ್ಯಂತ ಸ್ವಾರಸ್ಯಪೂರ್ಣವೇ. ತರ್ಕಿಸುವ ವಯಸ್ಸಲ್ಲ. ಅವನಪ್ಪ ಸತ್ತಾಗ ಬಹುಶಃ ಅವನದು ಎಂಟು ವರ್ಷವಿರಬಹುದೇನೋ ? ಎರಡು ವರ್ಷ ಶಾಲೆಗೆ ಹೋಗಿದ್ದ. ನಂತರ ಅವನೇ ಮನೆಗೆ ಯಜಮಾನನಾಗಿದ್ದು ಸೋಜಿಗದ ವಿಷಯವೇನು ಅಲ್ಲ.

ಮೆಟ್ಟಲು ಇಳಿದು ಬಂಡೆಗಳ ನಡುವೆ ಹುಡುಕತೊಡಗಿದ್ದು ಬಿಳಿಗಿರಿಯ ಕಣ್ಣಿಗೆ ಬಿದ್ದಾಗ ತಲೆಯ ಮೇಲೆ ಮೊಟಕಿದರು. ಇದು ಮೊದಲ ಸಲವಲ್ಲ "ಹುಡ್ಗಾಟ ನಿಲ್ಸಿ, ಏನಾದ್ರೂ ಕೆಲ್ಸ ನೋಡ್ಕೋ. ಎರ್ಡು ಹೊತ್ತಿನ ಗಂಜಿಗಾದ್ರೂ ದಾರಿಯಾಗುತ್ತೆ. ಇಲ್ಲಿ ಕೂತಿದ್ದನಲ್ಲ ಅವ್ನು ಏನಾದ?" ವಿಚಾರಿಸಿದರು. ಕೆದರಿದ ತಲೆ, ಅಚ್ಚುಕಟ್ಟಿಲ್ಲದ ಗಡ್ಡ, ನಿರುತ್ಸಾಹ ಮುಖದ ಯುವಕನ ಬಗ್ಗೆ ಅವರಿಗೆ ಆತಂಕ.

"ಹಾಯಾಗಿ ನಿಮ್ಮನೆಯಲ್ಲಿ ಉಂಡು ಗೊರಕೆಯೊಡೆಯುತ್ತಿದ್ದಾನೆ. ದುರಹಂಕಾರನ ಹಸಿದ ಹೊಟ್ಟೆ ಕೇಳುತ್ತಾ ? ನೆನ್ನೆ ಏನೆಲ್ಲ ತಂದು ಕೊಟ್ಟೆ, ಆರಾಮಾಗಿ ಗಬ ಗಬ ತಿಂದ" ಘೊಳ್ಳನೆ ನಕ್ಕ. ಬೆಲ್ಲದ ಬರ್ಫಿ, ಎಳ್ಳಿನ ಉಂಡೆಯನ್ನ ತಿಂದ ರೀತಿಯನ್ನು ಕಲ್ಪಿಸಿಕೊಂಡ.

"ಯಾಕೆ ಬಂದಿರಬಹುದು ?" ಗಡ್ಡವನ್ನುಜ್ಜಿದರು.

"ನಂಗೇನು ಗೊತ್ತು ? ಜೋರಾಗಿ ಕೇಳಿ, ಬಾಯಿ ಬಿಡ್ತಾನೆ ತೆಪ್ಪಗೆ" ಕಲ್ಲೇಶಿ ತನ್ನ ಪಾಡಿಗೆ ತಾನು ಹೋದ.

ಅಪ್ಪ ಸತ್ತಾಗ ಶಾಲೆ ನಿಲ್ಲಿಸಿ ಕೆಲಸಕ್ಕೆ ಕೈ ಹಚ್ಚಿದ ಕಲ್ಲೇಶಿಗೆ ಇಂಥದ್ದೇ ಕೆಲಸವೆನ್ನುವುದೇನಿಲ್ಲ. ಯಾವ ಕೆಲಸ ಹೇಳಿದರೂ ಸೈ ಆದರೆ ಒಂದು ಮನೆಯಲ್ಲಿ ಮಾತ್ರ ಜೀತಕ್ಕೆ ನಿಲ್ಲಲಾರ.

ಊರಿನ ಹಿರಿಯರಾದ ಪರಮಶಿವಯ್ಯನವರು "ಆಕ್ಕ, ತಮ್ಮ ನಮ್ಮ ಮನೆಯಲ್ಲಿ ಕೆಲ್ಸ ಮಾಡ್ಕೊಂಡ್ ಇರಿ. ಊಟ, ತಿಂಡಿ ಜೊತೆಗೆ ವರ್ಷಕ್ಕೆ ಇಷ್ಟೂಂತ ಕೊಡ್ತೀನಿ" ಎಷ್ಟೋ ಸಲ ಕರೆದು ಹೇಳಿದ್ದರು. ಅದಕ್ಕೆ ಅವನದು ಒಂದೇ ಉತ್ತರ "ಅದು ಆಗೋದೇ ಇಲ್ಲ. ನನ್ನಕ್ಕ ಬೇರೆಯವ್ರ ಮನೆಯಲ್ಲಿ ಕೆಲ್ಸ ಮಾಡೋದೂಂದ್ರೇನು ? ನಾನು ಮಡಿದು ಸಾಕ್ತೀನಿ. ಜೀತ ಅಂಥದ್ದು ನನ್ನ ಮೈಗೆ ಬಗ್ಗೋಲ್ಲ. ಏನಾದ್ರೂ ಕೆಲ್ಸ ಇದ್ದ ದಿನ ಹೇಳಿ ಬರ್ತೀನಿ" ಎನ್ನುತ್ತಿದ್ದ ಧೈರ್ಯದಿಂದ. ಆ ವಯಸ್ಸಿಗೇನೇ ಅಂಜಿಕೆ ಅವನನ್ನು ಬಿಟ್ಟು ಬಹಳ ದೂರಕ್ಕೆ ಹೋಗಿತ್ತು.

ಎಲ್ಲ ಊರುಗಳಂತೆ ಇದು ಒಂದು ಊರೇ. ಪ್ರತಿಯೊಂದು ಮಾಮೂಲು

ಅಂದುಕೊಂಡರು ಶ್ರೀವಳ್ಳಿಪುರಕ್ಕೆ ಸದಾ ಹರಿಯುವ ಹೊಳೆ, ಅದರ ಎರಡು ಮಗ್ಗುಲುಗಳಲ್ಲಿಯು ಬಿದ್ದಿರುವ ರಾಶಿ ರಾಶಿ ವಿವಿಧ ಗಾತ್ರದ ಕಲ್ಲುಗಳು. ಅದರ ಆಚೀಚೆ ದೊಡ್ಡ ಗಾತ್ರದ ಮರಗಳು, ನಂತರವೇ ತೋಟ, ಗದ್ದೆ ಅಂಥದ್ದೆಲ್ಲ. ಕೆಲವು ಜನ ಬಂದು ಬೇರೂರಲು ಇದೊಂದು ಕಾರಣವಾದರೂ, ಆರಾಮಾಗಿದ್ದ ಊರಿಗೆ ಇಲ್ಲಿನ ಜನರಿಗೆ ಆಪತ್ತಾಗಿ ಪರಿಣಮಿಸಿದ್ದು ಉಂಟು. ಕೆಲವು ಘಟನೆಗಳು ಬರುವ ಜನರನ್ನು ನಿಯಂತ್ರಣಗೊಳಿಸಿತ್ತು.

ಕಲ್ಲೇಶಿ ಒಂದಿಷ್ಟು ಸೊಪ್ಪು, ತಲೆಯ ಮೇಲೊಂದು ಸೌದೆಯ ಹೊರೆಯೊಂದಿಗೆ ಪುಟ್ಟ ಗುಡಿಸಿಲಿನಂಥ ಮನೆಗೆ ಬಂದಾಗ ಅವನಕ್ಕ ಎದುರು ನೋಡುತ್ತ ಬಾಗಿಲಲ್ಲಿಯೇ ನಿಂತಿದ್ದಳು ಗೊಂಬೆಯಂತೆ.

"ಅಕ್ಕ, ಇವತ್ತು ನಿನ್ನ ರೊಟ್ಟಿ ಖರ್ಚಾಗಲಿಲ್ಲ ! ಅವ್ವಾವರ ಮನೆಯಲ್ಲಿ ಊಟ ಆಯ್ತು." ಒಯ್ದಿದ್ದ ಬುತ್ತಿಯ ಗಂಟನ್ನ ಗೌರಿಯ ಕೈಯಲ್ಲಿಟ್ಟ. ಅವಳು ಮೇಲಕ್ಕೂ ಕೆಳಕ್ಕೂ ನೋಡಿ ಒಳಕ್ಕೆ ಒಯ್ದಳು.

ಗೌರಿಯ ಕೈ ಹಿಡಿದು ಕೂಡಿಸಿದವನು ತಾನು ಆಯ್ದು ತಂದಿದ್ದ ಕಲ್ಲುಗಳನ್ನೆಲ್ಲ ತೆಗೆದು ರಾಶಿ ಹಾಕಿದ. ಹಣೆ ಗಟ್ಟಿಸಿಕೊಂಡು ಇದೆಲ್ಲ ತಮಗೆ ಬೇಡವೆಂದು ಸನ್ನೆ ಮಾಡಿದಾಗ, ಅದನೇನು ಲೆಕ್ಕಕ್ಕೆ ತೆಗೆದುಕೊಳ್ಳದಂತೆ ಪ್ರತಿಯೊಂದು ಪುಟ್ಟ ಕಲ್ಲನ್ನ ಪರೀಕ್ಷಿಸತೊಡಗಿದ. ಇವುಗಳಲ್ಲಿ ಕೆಲವಾದರೂ ಬೆಲೆ ಬಾಳುವ ಕೆಂಪು ಕಲ್ಲುಗಳಾಗಿದ್ದರೇ, ಪುಟ್ಟ ರಾಜಭವನದ ಕನಸು ಕಾಣುತ್ತಿದ್ದ. ಅಂಥ ಒಂದು ಕನಸ್ಸಿತ್ತು ಅವನ ಮನದಲಿ. ಆದರೆ ನನಸಾಗಲು ಸಾಧ್ಯವೇ? ಗುಂಪಾಗಿ ಕೂತ ಪಕ್ಷಿ ಸಮೂಹ ರೆಕ್ಕೆಗಳನ್ನ ಬಡಿಯುತ್ತ ಆಕಾಶಕ್ಕೆ ಹಾರಿ ಅದೃಶ್ಯವಾದಂತಾಯಿತು.

ಕಲ್ಲೇಶಿ ಮಂಕಾಗಿ ಕೂತುಬಿಟ್ಟ. ಗೌರಿ ಆ ಕಲ್ಲುಗಳನ್ನೆಲ್ಲ ಮಾಮೂಲಿನಂತೆ ಮಣ್ಣಿನ ದೊಡ್ಡ ಗಡಿಗೆಯಲ್ಲಿ ಹಾಕಿ ಭುಜದ ಮೇಲೆ ಕೈಯಿಟ್ಟಳು. ಅವಳಪ್ಪ ಕೂಡ ಇಂಥ ಒಂದು ಆಸೆಯಿಂದಲೇ ದಿನವು ಹೊಳೆಯ ದಂಡೆಗೆ ಹೋಗಿ ಕಲ್ಲುಗಳ ನಡುವೆ ಓಡಾಡಿ ಹುಡುಕಾಡಿ ದೊಡ್ಡ ಕಲ್ಲುಗಳನ್ನು ತಂದು ಕೂಡಿ ಹಾಕಿಕೊಂಡು ಅದನ್ನ ಆಗಾಗ ಸಿಟಿಗೆ ಒಯ್ದು ಪರೀಕ್ಷಿಸಿ ನಿರಾಸೆಯಿಂದ ಹಿಂದಿರುಗಿದ ದಿನ ಕುಡಿದು ಬಂದು ಏನೇನೋ ಒದರುತ್ತಿದ್ದ ದೃಶ್ಯವನ್ನ ಅವಳು ಮರೆತಿರಲಿಲ್ಲ. ಅದು ತಮ್ಮನ ಪಾಲಿಗೆ ಬೇಕಿರಲಿಲ್ಲ. ದೊಡ್ಡ ಗಾತ್ರ ಕಣಜಗಳಂಥ ಮಣ್ಣಿನ ಪಾತ್ರೆಗಳಲ್ಲಿ ಇದ್ದಿದ್ದು ಕಲ್ಲಿನ ಚೂರುಗಳೇ. ಗೌರಿಗೆ ಇದು ಒಂದು ಚೂರು ಇಷ್ಟವಾಗದು. ಸ್ವಲ್ಪ ಬಿಕ್ಕಲು ಇದ್ದುದ್ದರಿಂದ ಸನ್ನೆ ಮಾಡುತ್ತಿದ್ದಳೇ ವಿನಃ ಮಾತಾಡಲು ಹೆಚ್ಚು ಪ್ರಯಾಸಪಡಳು. ಮಾತಿಗಿಂತ ಕೈ ಬಾಯಿಯ ಸನ್ನೆಯೇ ಅವಳಿಗೆ ಇಷ್ಟವಾದದ್ದು ಮಾತ್ರವಲ್ಲ, ಅಭ್ಯಾಸವಾಗಿ ಹೋಗಿತ್ತು.

ನೀರಿನ ತಂಬಿಗೆ ಕೊಟ್ಟು ಕೈ ತೊಳೆದು ಬರುವಂತೆ ಕಳುಹಿಸಿದಳು. ಎರಡು ತಟ್ಟೆಗಳನ್ನು ಹಾಕಿ ಸೊಪ್ಪಿನ ಸಾರು, ಹಿಟ್ಟಿನ ಮುದ್ದೆಗಳನ್ನ ತಂದಿಟ್ಟುಕೊಂಡು ಕೂತಳು. ಬೆಳಿಗ್ಗೆ ಕಲ್ಲೇಶಿ ಮನೆ ಬಿಟ್ಟರೇ ಸಂಜೆ ಅಂದರೇ ದೀಪ ಹಚ್ಚುವ ಮುನ್ನ ಮನೆ ಸೇರುತ್ತಿದ್ದುದ್ದು. ಇರೋ ಕೆಲಸ ಮುಗಿಸಿ ಅವನಿಗಾಗಿ ದಾರಿ ಕಾಯುವುದೇ ದೊಡ್ಡ ಕೆಲಸ ಅವಳಿಗೆ.

ಅಂಗಿಗೆ ಕೈಯೊರೆಸುತ್ತ ಬಂದು ಕೂತವನ ಕಣ್ಣಲ್ಲಿ ಹೊಳಪು ಇಣಕಿತು. "ಅಕ್ಕ, ನೆನ್ನೆ ಸಿಂಗೊಂದು ವಿಷ್ಯ ಹೇಳಿದ್ನಲ್ಲ" ನೆನಪು ಮಾಡಿಕೊಂಡ "ಕೆಂಪಗೆ, ಉದ್ದಕ್ಕೆ ಇದ್ದನಲ್ಲ, ಅವ್ನಿಗೆ ಅಮ್ಮಾವ್ರು ಊಟ ಹಾಕಿದ್ರು. ನನ್ನ ಊಟನು ಅಲ್ಲೇ ಆಯ್ತು."

ತಲೆಯ ಮೇಲೊಂದು ಪೊಟಕಿ ಹಣೆ ಗಟ್ಟಿಸಿಕೊಂಡಳು. ತಂದೆಯ ದಾರಿ ತಮ್ಮ ಹಿಡಿಯುವುದು ಬೇಕಾಗಿತ್ತು ಗೌರಿಗೆ. ಅವನೇ ಆಸರೆ, ಬೆಳಕು ಎಲ್ಲಾ. ಬೇಡವೆನ್ನುವಂತೆ ಅವನ ಕೈಹಿಡಿದುಕೊಂಡಿದ್ದ ಅವಳ ಕಣ್ಣಲ್ಲಿ ನೀರು ತುಂತುರು ತುಂತುರಾಗಿ ಇಣಕಿದಾಗ ಕಲ್ಲೇಶಿ ಕರಗಿ ಹೋದ ಪೂರ್ತಿಯಾಗಿ.

"ಸುಮ್ನೆ ಇರು. ಅಪ್ಪ, ಕುಡಿತ ಸುರು ಹಚ್ಕೊಂಡ್ ಕೆಟ್ಟ. ಈ ಕಲ್ಲೇಶಿ ಆ ಕಡೀಕೂ ತಲೆ ಹಾಕಿ ಮಲಗೋಲ್ಲ. ಎಷ್ಟು ದಿನ ಈ ಗುಡ್ಲು, ಅರೆ ಹೊಟ್ಟೆ ಉಂಡು ಬದ್ಕೋಣ. ನಾವು ಸಾವ್ಕಾರಾಗೋದ್ಬೇಡ್ವಾ?" ಎಂದ. ಗೌರಿ ಬಿಕ್ಕಿ ಬಿಕ್ಕಿ ಅಳಲು ಷುರು ಮಾಡಿದಳು. ಇಂಥ ಆಸೆಗಳನ್ನು ಹಚ್ಚಿಕೊಂಡು ಈ ಊರಲ್ಲಿ ಹಾಳಾದವರು ಎಷ್ಟು ಮಂದಿಯೋ ! ಅವರೆಲ್ಲ ಗತಕ್ಕೆ ಸೇರಿ ಈಗ ಬರೀ ನೆನಪಾಗಿ ಉಳಿದಿದ್ದರು. ಆ ದಾರಿ ಇವನಿಗೆ ಬೇಡ.

ಪಟ ಪಟ ಎರಡು ಬಡಿದು ಎದ್ದು ಹೋದಳು. ತಟ್ಟೆಯನ್ನು ಅಷ್ಟು ದೂರಕ್ಕೆ ತಳ್ಳಿ ಎದ್ದು ಹೋದ ಕಲ್ಲೇಶಿ ಹೊರಗೆ ಹೋಗಿ ಕೂತ. ಹೊಳೆಯ ಕಡೆಯಿಂದ ಬೀಸಿ ಬರುತ್ತಿದ್ದ ತಂಪಾದ ಗಾಳಿ. ಈಗ ಆ ಯುವಕ ಎಲ್ಲಿರಬಹುದು? ಅವ್ವಾರ ಮನೆಯಲ್ಲಿಯೇ ಮಲಗಿರಬಹುದೇ? ಒಮ್ಮೆ ಯಾಕೆ ಅಡ್ಡಾಡಿ ಬರಬಾರದೆಂದುಕೊಂಡರೂ, ರಾತ್ರಿಯ ವೇಳೆ ಅಕ್ಕನನ್ನು ಒಂಟಿಯಾಗಿ ಬಿಟ್ಟು ಹೊರಗಡೆ ಹೋಗಲಾರ. ಹೊಟ್ಟೆ ಭಗಭಗ ಎನ್ನುತ್ತಿದ್ದರೂ ಅಲ್ಲಿಂದ ಕದಲಲಿಲ್ಲ.

ನಡುರಾತ್ರಿಯ ನಂತರ ಹೊರಗೆದ್ದು ಬಂದ ಗೌರಿ ತಮ್ಮನನ್ನ ಎಬ್ಬಿಸಿಕೊಂಡು ಹೋಗಿ ತಟ್ಟೆಯ ಮುಂದೆ ಕೂಡಿಸಿದಳು. ಲಾಟೀನು ಮಬ್ಬು ಬೆಳಕು. ಅವನ ಕೈ ಹಿಡಿದು ತನ್ನ ತಲೆಯ ಮೇಲೆ ಇಟ್ಟುಕೊಂಡಳು.

"ಎಲ್ಲಿ...ಎಲ್ಲಿ....ಹೋಗ್ಬೇಡಾ ! ನಂಗೆ...ನಂಗೆ....ಯಾರಿದ್ದಾರೆ. ನಮ್ಗೇ....ನಮ್ಗ...ಗುಡ್ಲು...ಗುಡ್ಲು...ಸಾಕು" ಬಿಕ್ಕುವಿಕೆಯಲ್ಲಿ ಹೇಳಿದಾಗ ಕೈ ಹಿಡಿದುಕೊಂಡು "ಹೋಗೋಲ್ಲ, ಹೋಗೋಲ್ಲ...ಹೋಗೋ ಹಾಗಿದ್ರೆ ಇಬ್ರೂ ಜೊತೆಯಾಗಿಯೇ ಹೋಗೋಣ" ಉದ್ವೇಗದಿಂದ ಹೇಳಿದ.

ಒಬ್ಬರಿಗೊಬ್ಬರು ಅತ್ತು ಸಮಾಧಾನ ಮಾಡಿಕೊಂಡರು.

ತಾನು ತಮ್ಮನಿಗೆ ತುತ್ತು ಹಾಕುತ್ತಲೇ ನಾಲ್ಕು ತುತ್ತು ತಿಂದು ಎದ್ದ ಗೌರಿ, ಮಲಗಿದ ತಮ್ಮನಿಗೆ ಹೊದ್ದಿಸಿ ತಾನು ಇನ್ನೊಂದು ಚಾಪೆಯ ಮೇಲೆ ಉರುಳಿಕೊಂಡಳು.

"ಆ ಕಣ್ಣುಗಳ ನಡ್ವೇ...ವಜ್ರಗಳು ಸಿಕ್ಕಿವೆ. ಬೋಗಯ್ಯನೋರು ಅವರಿಂದ್ಲೇ ಸಾಹುಕಾರರಾಗಿ ಊರು ಬಿಟ್ಹೋದ್ರು. ಒಂದಲ್ಲ ಒಂದು ದಿನ ನಮ್ಮ ಅದೃಷ್ಟದ ಬಾಗ್ಲು ತೆಗೆಯುತ್ತೆ" ಅವಳಪ್ಪ ಕುಡಿದಾಗ ಮಾತ್ರವಲ್ಲ, ಮಾಮೂಲಾಗಿದ್ದಾಗಲೂ ಇಂಥ ಮಾತುಗಳನ್ನಾಡುತ್ತಿದ್ದರು. ಏನೇನೋ ಕತೆಗಳನ್ನ ಹೇಳುತ್ತಿದ್ದರು. ಬಿಟ್ಟ ಕಣ್ಣುಗಳು ಅಗಲಿಸಿ ತದೇಕಚಿತ್ತಳಾಗಿ ಆಲಿಸಿದ್ದಳೇ ವಿನಃ ಅವಳಿಗೇನು ಗೊತ್ತಿಲ್ಲ.

ಈ ಹೊಳೆಯ ಈ ಬದಿಯಲ್ಲಿದ್ದ ಬಂಡೆಗಳ ನಡುವೆ ಒಂದೆರಡು ಅಪರಿಚಿತರ ಹೆಣಗಳು ಸಿಕ್ಕ ನಂತರ ಅಲ್ಲಿ ಜನಗಳು ಬರುವುದು ಕಡಿಮೆಯಾಯಿತು. ಊರವರ ಮನಸ್ಸಿನಲ್ಲು ಭಯ ನಿಂತು ಹೋಗಿದ್ದರಿಂದ ಅತ್ತ ಯಾರೂ ಹೋಗುತ್ತಿರಲಿಲ್ಲ. ಆದರೂ ಅಪರೂಪಕ್ಕೆ ಕೆಲವು ವ್ಯಕ್ತಿಗಳು ಕಾಣಿಸಿಕೊಂಡು ಅದೃಶ್ಯರಾಗುತ್ತಿದ್ದರು.

ತಕ್ಷಣ ಏನೋ ನೆನಪಿಸಿಕೊಂಡಂತೆ ಎದ್ದು ತಮ್ಮನನ್ನ ತಟ್ಟಿ ಎಬ್ಬಿಸಿ "ಆ....ಆ...ಆ... ಮನುಷ್ಯ...ಈಗ....ಎಲ್ಲಿದ್ದಾನೆ ?" ಕೇಳಿದಳು. ಕಣ್ಣುಜ್ಜುತ್ತ ಕಲ್ಲೇಶಿ "ಬಿಡಕ್ಕ ಎಲ್ಲಾದ್ರೂ ಇದ್ಕೊಳ್ಳಿ. ಮಧ್ಯಾಹ್ನ ಅವ್ವಾವರ ಮನೆಯಲ್ಲಿ ಮಲಗಿದ್ದ. ಈಗ ಎಲ್ಲಿಗೆ ಹೋದ್ನೋ?" ಎಂದವನೇ ಬಿದ್ದುಕೊಂಡ. ಅವನಿಗೆ ಮತ್ತೇನು ಗೊತ್ತಿಲ್ಲ. ಎಷ್ಟೋ ಕತೆಗಳನ್ನ ಕೇಳಿದ್ದ. ನೇರವಾಗಿ ಕಲ್ಲುಗಳ ನಡುವೆ ಕಂಡಿದ್ದು ಹೆಣಗಳನ್ನು.

ನೋಡಿರದ ವ್ಯಕ್ತಿಯ ಬಗ್ಗೆ ಆತಂಕಗೊಳ್ಳಲು ಕಾರಣವಿತ್ತು. ಅಪರಿಚಿತ ವ್ಯಕ್ತಿಗಳ ಹೆಣಗಳೆ ಕಲ್ಲುಗಳ ನಡುವೆ ಸಿಕ್ಕಿದ್ದು. ಊರಿನ ಜನವೆಲ್ಲ ಗುಂಪು ಗೂಡಿ ನೋಡಲು ಹೋಗಿದ್ದರೂ ಅವಳು ಮಾತ್ರ ಅತ್ತ ತಲೆ ಹಾಕಿರಲಿಲ್ಲ.

ಗೌರಿ ಬಹಳ ಹೊತ್ತು ಎಚ್ಚರವಾಗಿಯೇ ಇದ್ದಳು. ಅವಳು ಸಾಧಾರಣ ಹೆಣ್ಣು. ಕನಸುಗಳು ಇರಬೇಕು. ಕನಸುಗಳಲ್ಲಿ ಕೂಡ ಅದೃಶ್ಯವಾಗುವಂಥ ದೃಶ್ಯಗಳೆ ಇಣಕುತ್ತಿದ್ದುದು.

* * *

ಸಂಜೆಯುವರೆಗೂ ನಿದ್ದೆ ಮಾಡಿದ ಸಾಗರ್ ಎದ್ದವನೇ ಹೇಳುವ ಸೌಜನ್ಯ ಕೂಡ ತೋರದೇ ಹೊರಗೆದ್ದು ಬಂದ, ಬ್ಯಾಗನ್ನ ಕೂಡ ಮರೆತವನಂತೆ. ಗಮ್ಯವಿಲ್ಲದ ಓಡಾಟ ಅವನದು. ಮರಗಳನ್ನ ಹಾಯ್ದು ದೊಡ್ಡ ಬಂಡೆಗಲ್ಲಿನ ಮೇಲೆ ಕೂತ. ನೆನಪುಗಳು ಬಾಧಿಸಿದಾಗ ಕೂದಲಲ್ಲಿ ಕೈ ಹಾಕಿ ಕಿತ್ತ.

ಅವನಪ್ಪ, ಅಮ್ಮ ದೂರದಲ್ಲಿ ಎಲ್ಲೋ ನಿಂತು ಹುಡುಕಾಡಿದ ಅನುಭವವಾಯಿತು. 'ನಿಂಗೇನು ಕಮ್ಮಿ ಆಗಿದೆ?' ಇಬ್ಬರೂ ಇದೇ ಪ್ರಶ್ನೆ ಹಾಕಿದಾಗ, ಚಪ್ಪಾಳೆ ತಟ್ಟಿಕೊಂಡು ಜೋರಾಗಿ ನಕ್ಕಿದ್ದ. ಆ ನಗು ನಿಂತಿದ್ದು ಯಾವಾಗಲೋ, ಅವಳಿಗೆ ಗೊತ್ತಿಲ್ಲ. ಎಚ್ಚರವಾದಾಗ ನರ್ಸಿಂಗ್ ಹೋಂನ ಬೆಡ್ ಮೇಲಿದ್ದ. ಅಲ್ಲಿ ಉಪಚರಿಸಲು ಇದ್ದಿದ್ದು ಡಾಕ್ಟರ್, ನರ್ಸ್‌ಗಳು ಮಾತ್ರ.

ಬಂಡೆಯ ಮೇಲಿಂದ ಧುಮುಕಿದ ಸಾಗರ್ ಷೂ ಬಿಚ್ಚಿ ಕಾಲುಗಳನ್ನ ಹರಿಯುತ್ತಿರುವ ನೀರಿನಲ್ಲಿ ಇಟ್ಟು ಮನಸ್ಸಿಗೆ ತೋಚಿದ ಹಾಡುಗಳನ್ನ ಗುಣಗಿದ. ಯಾಕೋ ಅದು ಇಷ್ಟವೆನಿಸಲಿಲ್ಲ. ಬಹಳ ಕೆಟ್ಟದಾಗಿ ಕೇಳಿಸಿತು ಅವನ ಕಿವಿಗಳಿಗೆ. ಮೌನವಹಿಸಿದ. ಈಗ ಜುಳುಜುಳು ಹರಿಯುವ ನೀರು ಹಾಡು ಹೇಳುತ್ತಿತ್ತು. ಅದರಲ್ಲಿ ಮಧುರತೆ ಇತ್ತು. ಅದರ ಜೊತೆ ಮನುಷ್ಯರ ಕಂಠ ಬೆರೆಯ ಬಾರದೆನಿಸಿತು. ಕೂತೇ ಇದ್ದ. ಸೂರ್ಯ ಮುಳುಗಿ ಕತ್ತಲು ಆವರಿಸಿದಾಗ ಕಂಬಳಿ ಹೊದ್ದ ತೀರಾ ವಯಸ್ಸಾದ ವ್ಯಕ್ತಿ ಬಂದ. ತಲೆಗೆ ಮಾಸಲು ಬಣ್ಣದ ಮುಂಡು ಸುತ್ತಿದ್ದ. ಮುಖದಲ್ಲಿ ಆಳವಾದ ಸುಕ್ಕಿನ ಗೆರೆಗಳು.

"ಯಾರು ಬುದ್ಧಿ, ಇಷ್ಟೊತ್ತುನಾಗ ? ಈ ಜಾಗ ಒಳ್ಳೇದಲ್ಲ. ಕುಂದಣಕ್ಕೆ ಒಂದು ಬಸ್ಸಿದೆ, ಹೋಗ್ಬಿಡಿ. ರಾತ್ರಿ ಹೊತ್ತು ಇಲ್ಲೇನು ಹುಡುಕಾಡುತ್ತೀರಾ?" ಎಂದ ಸನ್ನಿಹಕ್ಕೆ ಬಂದು.

ಅಲಕ್ಷದಿಂದ ಅವನತ್ತ ನೋಟ ಹರಿಸಿದ ಸಾಗರ್ ಅವನ ಮಾತಿಗೆ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ತನ್ನ ಪಾಡಿಗೆ ತಾನು ಕೂತವನು ನೀರಿನಲ್ಲಿ ಕಾಲಾಡಿಸತೊಡಗಿದ. ಆ ವ್ಯಕ್ತಿ ಅಲ್ಲಿಂದ ಕದಲಲಿಲ್ಲ.

"ನಿಮ್ಗೆ ಬದ್ಕಿನ ಮ್ಯಾಗೆ ಆಸೆ ಇಲ್ವಾ?"

ಪ್ರಶ್ನೆಗೆ ಕತ್ತು ತಿರುಗಿಸಿ ಸಣ್ಣಗೆ ನಕ್ಕ "ಬದ್ಕು ಅಂದ್ರೇನು?" ಸಾಗರ್ ಮಾತಿಗೆ ಬೆಪ್ಪಾದ. ಲಾಜಿಕ್ಕಾಗಿ ಮಾತನಾಡಬಲ್ಲಂಥ ಬುದ್ಧಿವಂತನೇನಲ್ಲ "ಹೇಗ್ಹೇಳಿ, ನಿಮ್ಗೆ ಅರ್ಥವಾಗೋಂಗೇ? ನಾನು ಕಲೀತವನಲ್ಲ. ಒಂದೆರಡ್ವರ್ಷ ಶಾಲೆಗೆ ಹೋದ ನೆನಪು ! ಅಕ್ಷರ ತಿದ್ದಿಸಿ ತಿದ್ದಿಸಿ ಸಾಕಾಗಿ ಬಡಿಯೋರು ಮೇಷ್ಟ್ರು. ಕಡೆಗೆ...ಬಿಟ್ಟೆ" ತಲೆ ಕೆರದುಕೊಂಡ.

ಮೇಲೆದ್ದು ನಿಂತ ಸಾಗರ್ ಜೋರಾಗಿ ನಕ್ಕ. ಹರಿಯುವ ನೀರು ಕಿಲ ಕಿಲ ಎಂದಿತು. ಮುಳುಗಿದ ಸೂರ್ಯ ಕ್ಷಣ ಇಣಕಿ ಪೂರ್ತಿ ಮರೆಯಾದ. ಗಾಳಿ ಕೂಡ ಕ್ಷಣ ಸ್ಥಭ್ದವಾಗಿ ವಿಸ್ಮಯ ವ್ಯಕ್ತಪಡಿಸಿತು. ಈ ಪ್ರದೇಶದಲ್ಲಿ ಇಂಥ ಮುಕ್ತವಾದ ಶುಭ್ರವಾದ ನಗೆಯನ್ನ ಕಂಡಿಲ್ಲವೆನ್ನುವಂತೆ ಮರ ಗಿಡಗಳು ಹರ್ಷಿಸಿದವು.

"ಬೋ, ಚೆನ್ನಾಗಿ ನಗ್ತೀರಾ ಬಿಡಿ ! ಇಲ್ಲಿ ಕಲ್ಲುಗಳ ನಡ್ವೇ ಹುಡುಕಾಡಿ ಸತ್ತವ್ರೆ, ನೀವು ಆ ಗುಂಪಿನೊಳ್ಗೆ ಸೇರೋದ್ಬೇಡ. ಪುಣ್ಯಾತ್ಮರ ಮಕ್ಳು ಹಂಗೆ ಕಾಣ್ತೀರಾ. ಭಗವಂತ ಕೊಟ್ಟಷ್ಟರಲ್ಲೇ ತೃಪ್ತಿ ಪಟ್ಕೊಳ್ಳಿ" ವಿವೇಕ ಭೋದಿಸಿದ ಆ ವ್ಯಕ್ತಿ ವಿರೂಪಾಕ್ಷಿ, ವಿರೂಪಾಕ್ಷಯ್ಯ.

ಷರಟಿನ ಜೇಬಿನಿಂದ ಸಿಗರೇಟು ಪ್ಯಾಕ್ ತೆಗೆದು ತಾನೊಂದು ತುಟಿಗಳ ನಡುವೆ ಇಟ್ಟು ಅವನತ್ತ ಪ್ಯಾಕ್ ಚಾಚಿದ. ವಿರೂಪಾಕ್ಷಿಯ ಮುಖದ ಮೇಲೆ ಗಾಬರಿ ಬೆರೆತ ಸಂಕೋಚ.

"ಒಲ್ಲೆ...ಒಲ್ಲೆ...ನಂಗ್ಬೇಡ ! ತುಂಡು ಬೀಡಿಗೆ ಪರದಾಡೋ ಮುಕ್ಕನಿಗೆ ಸಿಗರೇಟು ಯಾಕೆ ?" ಕೈಗಳನ್ನ ಹಿಂದಕ್ಕೆ ಕಟ್ಟಿಕೊಂಡು, ಎಲ್ಲಿ ಕೈ ತನ್ನ ಮನಸ್ಸಿನ ಅಧೀನ ತಪ್ಪಿ ಸಿಗರೇಟುಗಾಗಿ ಕೈ ಚಾಚುತ್ತದೆಯೋ ಎನ್ನುವ ಭಯದ ನರಳಿಕೆ ಅವನಿಗೆ.

ಸ್ವಲ್ಪ ಒರಟಾಗಿಯೇ ಅವನ ಕೈ ಹಿಡಿದು ಸಿಗರೇಟು ಕೇಸ್‌ನಿಂದ ಒಂದು ಸಿಗರೇಟು ತೆಗೆದು ಅವನ ಕೈಯಲ್ಲಿಟ್ಟ. "ಸೇದು...ಸೇದು...ಸೇದಿದೋರೆಲ್ಲ ಸತ್ತಿಲ್ಲ !" ಬಲವಂತ ಮಾಡಿದ. ತಾನೇ ಅವನ ತುಟಿಗಳ ನಡುವೆ ಸಿಗರೇಟು ಇಟ್ಟು, ಲೈಟರ್ ಸೋಕಿಸಿದ. ಬರೀ ಎರಡು 'ದಂ' ಎಳೆದ ಸಾಗರ್ ಸಿಗರೇಟನ್ನ ಆರಿಸಿ ಅಲಕ್ಷದಿಂದೊಗೆದ.

ವಿರೂಪಾಕ್ಷಿ ಆರಿಸಿ ತನ್ನ ಕೋಟಿನ ಜೇಬಿನಲ್ಲಿ ಭದ್ರವಾಗಿಟ್ಟುಕೊಂಡ. "ಇಲ್ಲಿಗೆ ಯಾಕಾಗಿ ಬಂದಿದ್ದೀರಿ ? ಇಲ್ಲಿ ಹುಡ್ಕಿ...ಹುಡ್ಕಿ ಬರೀ ಕೈಯಲ್ಲಿ ಹಿಂದಿರುಗಿದೋರೇ, ಯಾರ್ಗೂ ಏನು ಸಿಕ್ಕಿದಂಗೇ ಕಾಣ್ಲಿಲ್ಲ. ಕೆಲವರು ಪ್ರಾಣ ತೆತ್ತರು. ದಯವಿಟ್ಟು ಈ ಜಾಗ ಬಿಟ್ಟು ಹೋಗ್ಬಿಡಿ" ಎಂದ ವಿಶ್ವಾಸ ಬೆರೆತ ಆತಂಕದಿಂದ. ಜೀವಮಾನದಲ್ಲಿ ಮೊದಲ ಸಲ ಸಿಗರೇಟು ತುಟಿಗಳ ನಡುವೆ ಇಟ್ಟು ಲೈಟರ್ ಸೋಕಿಸಿದ ಮೊದಲ ಮತ್ತು ಕೊನೆಯ ವ್ಯಕ್ತಿ ಇವನೇನೋ !

ಸಿಗರೇಟುನ ಇಡೀ ಪ್ಯಾಕ್‌ನ ವಿರೂಪಾಕ್ಷಿಯ ಕೈಯಲ್ಲಿಟ್ಟು "ಬೇಗ ಜಾಗ ಖಾಲಿ ಮಾಡು. ಇಲ್ಲದಿದ್ದರೇ ಎತ್ತಿ ಹೊಳೆಗೆ ಎಸ್ದುಬಿಡ್ತೀನಿ" ಜೋರು ಮಾಡಿದ ಸಾಗರ್.

ವಿರೂಪಾಕ್ಷಿ ಅಷ್ಟು ದೂರ ಹೋದ ಮೇಲೆ ನಾಲ್ಕಾರು ಸಲ ಹಿಂದಕ್ಕೆ ತಿರುಗಿ ನೋಡಿದ. ಒಂದು ವಿಚಿತ್ರ ಅವನ ಮುಂದೆ ನಿಂತಿತು. ಈ ಸಿಗರೇಟು ಪ್ಯಾಕ್ ಎಲ್ಲಿನದೆಂದು ನಾಳೆ ಬೆಳಿಗ್ಗೆ ಪೊಲೀಸರು ಬಂದು ತನ್ನನ್ನು ಪ್ರಶ್ನಿಸಬಾರದಲ್ಲ, ಕೈನಲ್ಲಿದ್ದುದ್ದನ್ನ ಹೊಳೆಗೆ ಎಸೆದು ಹೋದ.

ಹೊಳೆಯ ದಡದಿಂದ ಮೇಲಕ್ಕೆ ಬಂದ ಸಾಗರ್, ಸುತ್ತಲು ನಿಟ್ಟಿಸಿದ. ಒಂದು ಬಂಡೆ ಹತ್ತಿ ಸುತ್ತಲು ದೃಷ್ಟಿ ಹರಿಸಿದ. ಅಲ್ಲಲ್ಲಿರುವ ಮನೆಗಳಲ್ಲಿ ಬೆಳಕು ಕಾಣಿಸುತ್ತಿತ್ತು. ಹಚ್ಚನೆಯ ಈ ಪರಿಸರದಲ್ಲಿ ವ್ಯವಸಾಯ ಮುಖ್ಯ ಕಸುಬಾಗಿರಬೇಕೆಂದುಕೊಂಡ. ಆ ಕ್ಷಣ ಅದೆಲ್ಲ ಇಷ್ಟವೆನಿಸಿತು. ಅಲ್ಲೇ ಕೂತ. ಕತ್ತಲಿನ ನಡುವೆ ಉದಯಿಸಿದ ಚಂದ್ರ ತನ್ನ ಶೀತಲ ಕಿರಣಗಳಿಂದ ಇಡೀ ಪರಿಸರಕ್ಕೆ ಶೋಭೆ ತಂದ.

ಅಲ್ಲೆಲ್ಲ ಮನಸೋ ಇಚ್ಛೆ ಅಡ್ಡಾಡಿದ ನಂತರವೇ ಬ್ಯಾಗ್‌ನ ನೆನಪಾಗಿದ್ದು. ಸೀಸೆಗಳನ್ನ ಅತ್ಯಂತ ಜೋಪಾನದಿಂದ ತಂದಿದ್ದ. ಬರುವಾಗ ಒಂದೆರಡು ಬಾಟಲುಗಳು, ಬೀರು ತೆಗೆದು ನೋಟಿನ ಕಂತೆಗಳನ್ನ ಬ್ಯಾಗ್‌ಗೆ ತುರುಕಿಕೊಂಡಿದ್ದ. ಈಗ ಆ ಬ್ಯಾಗ್ ಎಲ್ಲಿದೆ ? ಕತ್ತಲು ಸಂದಿಗಳಲ್ಲೆಲ್ಲ ಹುಡುಕಾಡಿ ಬೇಸರದಿಂದ ಒಂದು ಕಡೆ ಕೂತ. ಕುಡಿಯಲು ಇಲ್ಲವಲ್ಲ ಎನ್ನುವ ವ್ಯಥೆಯೇ ವಿನಃ ಆ ಬ್ಯಾಗ್ ಬಗ್ಗೆ ಅವನಿಗೆ ಚಿಂತೆ ಇಲ್ಲ. ಅಂಥ ವ್ಯಾಮೋಹಗಳು ಅವನನ್ನ ಬಿಟ್ಟು ಎಂದೋ ಓಡಿ ಹೋಗಿತ್ತು.

ಮೇಲೇರುತ್ತಿದ್ದ ಚಂದ್ರನನ್ನೇ ನೋಡಿದ. ಸೆಕೆಯೆನಿಸಿ ಬೆಳಗಿನವರೆಗೂ ನೀರಿನಲ್ಲಿಯೇ ಈಜಾಡಿ ಬಂದವನು, ಸೋತು ದಡದಲ್ಲಿಯೇ ನಿದ್ರಿಸಿದ. ಅವನನ್ನು ಎಚ್ಚರಿಸಿದ್ದು ಕಲ್ಲೇಶಿಯೇ.

"ಅಮ್ಮ! ರಾತ್ರಿಯೆಲ್ಲ ಇಲ್ಲೇ ಮಲ್ಗಿಕೊಂಡಿದ್ರಾ ? ಹಂಗಾದ್ರೆ ಏನು ಅಪಾಯವಿಲ್ಲಾಂತ ಆಯ್ತು." ಬಾಯಿ ಮೇಲೆ ಕೈಯಿಟ್ಟುಕೊಂಡ ಕಲ್ಲೇಶಿ ತಲೆಯ ಮೇಲೊಂದು ಮೊಟಕಿಯೇ ಎದ್ದಿದ್ದು "ಯಾಕೆ ಎಬ್ಬಿಸ್ದೆ !? ಏಳೋದೂಂದ್ರೇನೇ...ಬೇಜಾರು" ತಲೆ ಕೆರೆದುಕೊಂಡ. ಹುಲುಸಾಗಿ ಬೆಳೆದ ತಲೆಗೂದಲು.

"ನಿನ್ನ ಬ್ಯಾಗು ಅಯ್ಯನೋರು ಮನೆಯಲ್ಲೇ ಬಿಟ್ಟು ಬಂದಿದ್ದಿಯಂತೇ! ಇಡೀ ರಾತ್ರಿ ಗುಬ್ಬಚ್ಚಿಗಳಂತೆ ನಿಂಗೋಸ್ಕರ ಕಾದುಕೊಂಡು ಕೂತಿದ್ರು. ನಾನೆಲ್ಲೋ....ಹೋದೆ.....ಅಂದ್ಕೊಂಡೇ" ಎಂದ ನಿರ್ಭೀತಿಯಿಂದ.

ಮತ್ತೆರಡು ಏಟುಗಳು ಬಿದ್ದವು ಕಲ್ಲೇಶಿಗೆ.

"ಸಿಗರೇಟು ಸಿಕ್ಕುತ್ತಾ ?" ಮೇಲೇರುತ್ತಿದ್ದ ಸೂರ್ಯರಶ್ಮಿಗೆ ಕಣ್ಣು ಬಿಡಲಾರದೆ ಕೇಳಿದ ಸಾಗರ್ "ಯಾಕೆ ಸಿಕ್ಕೋಲ್ಲ ! ಎಲ್ಲಾ...ಸಿಕ್ಕುತ್ತೆ. ಕಮೀಷನ್ ಮಾತ್ರ ಜಾಸ್ತಿ" ಕಣ್ಣೊಡೆದ. 'ಭಲೇ ಹುಡ್ಗ' ಎಂದುಕೊಂಡ. ಅಲ್ಲಿ ಬಿದ್ದಿದ್ದ ಜೀನ್ಸ್ ಪ್ಯಾಂಟು, ಮೇಲಿನ ಜಾಕೆಟ್ ತರುವಂತೆ ಸನ್ನೆಯಿಂದಲೇ ಹೇಳಿದ.

ಕಲ್ಲೇಶಿ ಮುಖವನ್ನ ಬೇರೆಡೆ ತಿರುಗಿಸಿಕೊಂಡ. ಬಂದ ಕೂಡಲೇ ಇವನು ನಿದ್ದೆಯಲ್ಲಿ ಬಿದ್ದಿದ್ದ ಸ್ಥಿತಿಯನ್ನು ನೋಡಿ ತಲಾಷ್ ಮಾಡಿ ಇದ್ದ ನೋಟುಗಳನ್ನ ಒಯ್ದು ಅಡಗಿಟ್ಟು ಬಂದಿದ್ದ. ಈ ಸಲ ಹಬ್ಬದ ಹೊತ್ತಿಗೆ ಅಕ್ಕನಿಗೆ ಒಂದು ಸೀರೆ ತರಬೇಕೆಂದು ಪ್ಲಾನ್ ಮಾಡಿಕೊಂಡಿದ್ದ. ಅವನಿಗೆ ಇರೋ ಚಿಲ್ಲರೆ ಸಂಪಾದನೆಯಲ್ಲಿ ಅದಷ್ಟು ಸುಲಭವಾಗಿರಲಿಲ್ಲ. ಅನಾಯಾಸವಾಗಿ ಸಿಕ್ಕ ಹಣವನ್ನು ಕಳೆದುಕೊಳ್ಳಬೇಕೆನಿಸಲಿಲ್ಲ.

"ಹೋಗೋ ತಗೊಂಡ್ಬಾ" ಭುಜದ ಮೇಲೆ ಕೈ ಹಾಕಿದ.

ಅಷ್ಟು ದೂರಕ್ಕೆ ಹೋಗಿ ನಿಂತ ಕಲ್ಲೇಶಿ "ತುಂಬ ಜೋರು ಮಾಡ್ತೀರಲ್ಲ! ಈ ಊರುನಲ್ಲಿ ಆಳುಗಳು ಸಿಕ್ಕೋದು ಬೋ ಕಷ್ಟ." ಮುಖ ಉಮ್ಮಿಸಿಯೋ ತಂದುಕೊಟ್ಟ.

ಸಾಗರ್ ಜೇಬುಗಳಲ್ಲಿ ತಡಕಾಡಿದ. ಸಿಕ್ಕಿದ್ದು ಇಪ್ಪತ್ತೈದು ಪೈಸೆಗಳ ಎರಡು ನಾಣ್ಯ, ಐವತ್ತು ಪೈಸೆಯ ಮೂರು ನಾಣ್ಯ. ಅದೆರಡನ್ನ ತೆಗೆದು ಅವನ ಮುಂದೆ ಹಾಕಿದ. ತಾನು ಅದರಲ್ಲಿ ನೋಟುಗಳನ್ನ ಇಟ್ಟ ನೆನಪಾಗಲೀ ಅವನಿಗೆ ಇರಲಿಲ್ಲ. ಬಹುಶಃ ಇಟ್ಟು ಯಾರಾದರೂ ತೆಗೆದಿದ್ದರೂ ಚಿಂತಿಸಲಾರ.

"ಇಷ್ಟೇ ಇರೋದು ಸಿಗರೇಟು ಸಿಗದಿದ್ರೂ...ಬೀಡಿನಾದರೂ ತಗೊಂಡ್ಬಾ. ಕ್ವಿಕ್, ಅಂದರೆ ಬೇಗ ಅಂತ" ಚಿಲ್ಲರೆಯನ್ನ ಅವನ ಕೈಯಲ್ಲಿಟ್ಟು ದಬ್ಬಿದವನು ಪ್ಯಾಂಟನ್ನೇರಿಸಿ, ಜಾಕೇಟ್‌ನ ತಲೆಯ ಕೆಳಗಿಟ್ಟುಕೊಂಡು ಮಲಗಿದ.

ಚುರುಗುಟ್ಟುವ ಬಿಸಿಲು. ಸೂರ್ಯನನ್ನ ನೇರವಾಗಿ ನೋಡಲು ಪ್ರಯಾಸ ಪಡಬೇಕಿತ್ತು. ಎದ್ದು ಕೂತವನು ಬೆಳಗಿನ ಬಿಸಿಲಿನ ತಾಪಕ್ಕೆ ಮೈ ಮುಖ ಚುರುಗುಟ್ಟಿ ಸಹಿಸಲು ಸಾಧ್ಯವಾಗದಾಗ ಮೇಲೆದ್ದು ಮರದ ನೆರಳಿಗೆ ಹೋದ.

ದೂರದಲ್ಲಿ ಹಸುಗಳು ಅಂಬಾ ಎಂದು ಕೂಗುವುದು ಕೇಳಿಸುತ್ತಿತ್ತು. ಹೊಳೆಯ ಆ ಕಡೆಯ ದಂಡೆಯಲ್ಲಿ ಪೂರ್ತಿ ಓಡಾಟವಿದ್ದರೂ ಈ ಕಡೆ ನಿರ್ಜನವಾಗಿದ್ದುದ್ದು ಅನುಕೂಲವೆನಿಸಿತು. ಹೊಟ್ಟೆಯಲ್ಲಿ ಚುರು ಚುರು ಕಾಣಿಸಿದಾಗ ಹರಿಯುತ್ತಿದ್ದ ನೀರು ಕಡೆ ಹೊರಟ.

"ಹೊರ್ಗಿನ ತಿಂಡಿ, ನೀರು ಪೂರ್ತಿ ನಿಷಿದ್ಧ ! ಆ ಕೊಳಕೆಲ್ಲ ತಿಂದು ಕುಡ್ಕೋ

ಕರ್ಮ ಇವ್ನಿಗೇನು?" ಅವನ ಅಮ್ಮನ ಮಾತು ನೆನಪಾದಾಗ ಮುಖ ಮೇಲೆತ್ತಿ ನಕ್ಕ. "ನಿಷಿದ್ದನಂತೆ...ನಿಷಿದ್ದ... ಈಗ ಎಂಥ ನೀರು ಕುಡೀತೀನಿ, ನೋಡು" ಎಂದು ಕೂಗಿ ಹೇಳಿಯೇ ಮೂರು ಬೊಗಸೆ ನೀರು ಕುಡಿದ.

ಹೊಟ್ಟೆಯಲ್ಲಿ ಬರೀ ನೀರೆ ಓಡಾಡಿತು. ನೆನ್ನೆ ಮಧ್ಯಾಹ್ನ ಊಟ ಹಾಕಿದ ಹೆಂಗಸಿನ ನೆನಪಾಯಿತು. ಅಕ್ಕರೆಯಿಂದ ಕೂತು ಬಡಿಸಿದ್ದಳು. ಒಂದು ಕೃತಜ್ಞತೆಯ ಮಾತಾದರೂ ಹೇಳಬೇಕಿತ್ತು. 'ಯಾಕೆ ಹೇಳಬೇಕು?' ಅವನಲ್ಲಿಯೇ ಪ್ರಶ್ನೆ, ಉದ್ಭವವಾಯಿತು. ಎಲ್ಲಾ ಸ್ವಾರ್ಥಿಗಳೇ ! ಊಟ ಹಾಕೋಕು ಏನಾದರೂ ಕಾರಣವಿರುತ್ತೆ, ಅವನದೇ ಧಾಟಿಯಲ್ಲಿ ಯೋಚಿಸಿದ.

"ತಕ್ಕಳ್ಳಿ....." ಬೀಡಿ, ಬೆಂಕಿ ಪೊಟ್ಟಣದ ಜೊತೆ ತಾನು ತಂದಿದ್ದ ಬುತ್ತಿಯನ್ನ ಬಿಚಿಟ್ಟ "ಬರೀ ಬೀಡಿ ಸೇದಿದ್ರೆ ಹೊಟ್ಟೆ ತುಂಬುತ್ತ ? ಒಂದಿಷ್ಟು ತಿಂದು ನೀರು ಕುಡೀರಿ" ಹಿರಿಯನಂತೆ ಹೇಳಿದ ಕಲ್ಲೇಶಿಯನ್ನೇ ನೋಡಿದ. ತೊಟ್ಟ ಷರಟಿನ ತೋಳಿಗೆ ತೇಪೆ ಹಾಕಿತ್ತು. ಉದ್ದನೆಯ ಪಟ್ಟೆ ಪಟ್ಟೆ ನಿಕ್ಕರ್‌ನ ಅರ್ಧಕ್ಕಿಂತ ಹೆಚ್ಚು ಮುಚ್ಚುವಷ್ಟು ದೊಡ್ಡಾದಗಿತ್ತು. ಸಾಧಾರಣ ರೂಪು, ಸಾಧಾರಣ ಬಣ್ಣ. ಸಣ್ಣಗೆ ಕತ್ತರಿಸಿದ ತಲೆಗೂದಲು. ಆದರೆ ಕಣ್ಣುಗಳಲ್ಲಿ ಮಾತ್ರ ಆತ್ಮವಿಶ್ವಾಸದ ಹೊಳಪು.

"ಏನೋ, ನಿನ್ಹೆಸರು?" ತಾನಾಗಿ ಅವನ ಹೆಸರನ್ನ ಕೇಳಿದ ಸಾಗರ್. ಹಲ್ಲು ಬಿಟ್ಟ ಕಲ್ಲೇಶಿ "ಕಲ್ಲೇಶಿ ಅಂತ, ಕಲ್ಲೂರಮ್ಮನಿಗೆ ನನ್ನವ್ವ ಹರಕೆ ಹೊತ್ಕೊಂಡಿದ್ದಳಂತೆ. ಏನು ಹರಕೆನೋ, ನನ್ನ ಹಡ್ದು ಗೊಟಕ್ ಅಂದ್ಲು. ಆ ಸಂಪತ್ತಿಗೆ ಹರ್ಕೆ ಬೇಕಿತ್ತಾ?" ವಯಸ್ಸಿಗೆ ಮೀರಿದ ಮಾತುಗಳನ್ನಾಡಿದ. ಅನುಭವ ಅವನನ್ನ ವಯಸ್ಸಿಗೆ ಮೀರಿ ಬೆಳೆಸಿತ್ತು.

ಇನ್ನ ಚಾಕಲೇಟು ತಿನ್ನುತ್ತ ಗೆಳೆಯರ ಜೊತೆ ಪುಸ್ತಕಗಳ ಬ್ಯಾಗ್ ಹಿಡಿದು ಮನೆಯವರಿಗೆ 'ಟಾಟಾ' ಹೇಳಿ ಸ್ಕೂಲಿನ ಬಸ್ಸು ಹತ್ತುವ ವಯಸ್ಸೇ ಇರಬೇಕು.

"ತಕ್ಕಳ್ಳಿ, ರೊಟ್ಟಿ ಇನ್ನ ಬಿಸಿಯಾಗಿಯೇ ಇದೆ. ನನ್ನಕ್ಕ ಮಾಡೋ ರೊಟ್ಟಿ ಬಿಸಿ ಇದ್ರು...ಚಂದವೇ. ಆರಿದ್ಮೇಲೆ ಅದ್ಕೇ ಮತ್ತಷ್ಟು ರುಚಿ. ಇಂದು ತಿಂದ್ನೋಡಿ...ಅಮ್ಯಾಕೆ ನಾನು ಇರೋ ಕಡೀಕೆ ಹುಡ್ಕಿಕೊಂಡ್ಬರ್ತೀರಿ" ಜಂಬದಿಂದ ಹೇಳಿದ.

ಈ ನಿರ್ಜನ ಪ್ರದೇಶದಲ್ಲಿ ಜೊತೆಯಾದ ಕಲ್ಲೇಶಿಯ ಬಗ್ಗೆ ಮುಜುಗರ ವೆನಿಸದಿದ್ದರೂ, ಯಾಕೋ ಮಾತುಗಳು ಬೇಡವೆನಿಸಿತು ಸಾಗರ್‌ಗೆ.

"ಕಲ್ಲೇಶಿ, ಈ ರೊಟ್ಟಿ ತಗೊಂಡ್ ಜಾಗ ಖಾಲಿ ಮಾಡು." ಬೀಡಿ ಬೆಂಕಿ

ಪೊಟ್ಟಣ ಕೈಗೆತ್ತಿಕೊಂಡು ಆರಾಮಾಗಿ ಮರ ಹತ್ತಿ ಮೇಲೆ ಹೋದಾಗ ಕಲ್ಲೇಶಿಗೆ ತನ್ನ ಯೋಚನೆ ಸರಿಯೆನಿಸಿತು. ಈ ಮನುಷ್ಯನಿಗೆ ಕಲ್ಲುಗಳ ಬಗ್ಗೆ ಗೊತ್ತೆ ಇರಬೇಕು. ಅದು ಮನಸ್ಸಿಗೆ ಬಂದ ಕೂಡಲೇ ಚುರುಕಾದ "ನಾನು ಮೇಲಕ್ಕೆ ಹತ್ತಿ ಬರ್ಲಾ? ಒಂದಿಷ್ಟು ಮಾತಾಡೋದಿದೆ." ಆಸೆಯ ಕಂಗಳನ್ನ ಮೇಲಕ್ಕೆ ಹರಿಸಿದ.

"ಈಗ ತೆಪ್ಪಗೆ ಹೋಗ್ಬಿಡು. ಇಲ್ಲದಿದ್ದರೆ ಕೊಂಬೆ ಮುರ್ದುಕೊಂಡ್ಬಂದು ಬಾಸುಂಡೆ ಬರೋ ಹಂಗೆ ಬಾರಿಸ್ತೀನಿ" ಕೂಗಿ ಹೇಳಿ ಬೀಡಿ ಹಚ್ಚಿದಾಗ, ಬಿಚ್ಚಿಟ್ಟ ರೊಟ್ಟಿಯ ಬುತ್ತಿಯನ್ನ ಮತ್ತೆ ಕಟ್ಟಿಕೊಂಡು ಕಲ್ಲುಗಳನ್ನ ದಾಟಿಕೊಂಡು ಊರಿನತ್ತ ನಡೆದ.

"ಇವತ್ತು ಒಂದಿಷ್ಟು ಕೆಲ್ಸ ಇದೆ, ಬಾರೋ. ಸಂಜೆ ಹೊತ್ಗೇ ಮುಗಿದ್ರೆ....ಒಂದಿಷ್ಟು ಅಕ್ಕಿ ಕೊಡ್ತೀನಿ" ದೊಡ್ಡಮನೆಯ ನರಸಣ್ಣ ಬೆಳಿಗ್ಗೆ ಮುಖ ಕಂಡ ಕೂಡಲೇ ಹೇಳಿದ್ದ. ನೇರವಾಗಿ ಅಲ್ಲಿಗೆ ಹೋಗಿದ್ದರೆ ಒಂದಿಷ್ಟು ಅಕ್ಕಿನಾದರೂ ಸಿಗುತ್ತಿತ್ತು, ಗೊಣಗಿಕೊಂಡೇ ನರಸಣ್ಣನ ತೋಟದ ಕಡೆ ಹೆಜ್ಜೆ ಹಾಕಿದನು, ಅವನ ಮನಸ್ಸು ಇಲ್ಲೇ ಇತ್ತು. ಸ್ವಲ್ಪ ಕೆಂಪಗೆ ಕಂಡ ಕಲ್ಲುಗಳನ್ನೆಲ್ಲ ಸಂಗ್ರಹಿಸಿಟ್ಟುಕೊಂಡಿದ್ದ. ಅದರಲ್ಲಿ ಕೆಲವಾದರೂ ಬೆಲೆ ಬಾಳುವ ಕೆಂಪಿನ ಹರಳುಗಳಾದರೇ, ಅವನ ಬಾಳಿನ ಭಾಗ್ಯ ತೆರೆದಂತೆಯೇ. ಆ ನಂಬಿಕೆ ಗೌರಿಗೆ ಮಾತ್ರ ಇರಲಿಲ್ಲ.

'ಅವೆಲ್ಲ ಸುಳ್ಳು, ಯಾರೋ ಹುಟ್ಟಿಸಿರೋ ಸುದ್ದಿ. ನಮಗೇ ಅವೆಲ್ಲ ಬೇಡ' ಎನ್ನುವ ಅರ್ಥದಲ್ಲಿ ಎಷ್ಟೋ ಸಲ ಹೇಳಿದ್ದಳು. ಆದರೆ ಅವನ ಆಸೆ ಮುಗಿಲಂಚನ್ನ ಮುತ್ತಿಕ್ಕುವ ಹಂತದಲ್ಲಿತ್ತು.

ಎದುರು ಸಿಕ್ಕ ಬಿಳಿಗಿರಿಯವರು ಅವನನ್ನ ಅಪಾದಮಸ್ತಕ ನೋಡಿ "ಆ ಹುಡ್ಗ ಇದ್ದಾನ? ದಿಕ್ಕಿಲ್ಲದಂತೆ ಬಿದ್ದಿದೆ ಬ್ಯಾಗು, ನಮ್ಮ ಮನೆಯಲ್ಲಿ. ಒಂದಿಷ್ಟು ನೋಡ್ಬೋರ್ದ" ಬೇಸರದಿಂದ ನುಡಿದರು.

ಆ ಬ್ಯಾಗುನಿಂದ ಇಣಕಿ ಅವನನ್ನ ವಿಚಲಿತನನ್ನಾಗಿ ಮಾಡಿದ ನೋಟಿನ ಕಂತೆ ಕೈ ಬೀಸಿ ಕರೆದಂತಾಯಿತು. ಆದರೂ ಭಯ ಅವನನ್ನ ಆವರಿಸಿತು. ಅಕಸ್ಮಾತ್ ಅಯ್ಯನೋರು ಅದನ್ನೆಲ್ಲ ನೋಡಿ ಲೆಕ್ಕ ಇಟ್ಟಿದ್ದರೇ, ಅವರೇ ಕೋಲು ತೆಗೆದುಕೊಂಡು ಕೈಕಾಲು ಮುರಿದಾರು.

"ಅಲ್ಲೇ ಇದ್ದಾನೆ. ನಾನು ಬ್ಯಾಗು ತಕ್ಕೊಂಡ್ಹೋಗಿ ಕೊಟ್ಟು ಬರ್ಲಾ?" ಆಸೆಯಿಂದ ಕೇಳಿದ. ಬಿಳಿಗಿರಿ ಮಾತಾಡಲಿಲ್ಲ. ಹೊರಟಾಗ ತಿರುಮಲಾಂಬ

"ಆ ಹುಡ್ಗನ್ನ ಕರ್ಕಂಡ್ ಬನ್ನಿ. ನಾಲ್ಕು ಬುದ್ಧಿ ಹೇಳಿ ಹಿಂದಕ್ಕೆ ಕಳಿಸೋಣ. ಕಲ್ಲುಗಳ ಹುಡುಕಾಟ ನಡೆಸಲು ಬಂದಿರೋ ಹಂಗೆ ಕಾಣೋಲ್ಲ" ಗಂಡನಿಗೆ ಹೇಳಿದ್ದರು. ಅದು ಅವರಿಗೂ ಸರಿಯೆನಿಸಿತು. ಆ ಕೆಲಸದ ಮೇಲೇನೇ ಮನೆ ಬಿಟ್ಟಿದ್ದು.

"ಬೇಡ, ನಾನೇ ಹೋಗ್ತಾ ಇದ್ದೀನಿ. ಒಂದೆಜ್ಜೆ ಕರ್ಕಂಡ್ ಬನ್ನಿ. ಬ್ಯಾಗು ಒಪ್ಸಿ ನಾಲ್ಕು ಮಾತು ಹೇಳಿ ಕಳಿಸೋಣ. ರಾತ್ರಿ, ಹಗ್ಲು ಇರೋಂಥ ಜಾಗವಲ್ಲ. ನಾಳೆ ಹೆಚ್ಚು ಕಮ್ಮಿಯಾದ್ರೆ ಯಾರು ನೋಡ್ತಾರೆ" ಎಂದಾಗ ಅವರ ಸ್ವರ ಒದ್ದೆಯಾಯಿತು. ಮಗ ಈಗ ಎಲ್ಲಿದ್ದಾನೋ? ಯಾವ ಸ್ಥಿತಿಯಲ್ಲಿದ್ದಾನೋ! ದಿನ ಕಳೆದಂತೆ ಅವನನ್ನ ನೋಡಬಹುದು ಎನ್ನುವ ಆಸೆಯೇ ಅವರಲ್ಲಿ ಮಾಸಿ ಹೋಗಿತ್ತು. ಆದರೆ ತಿರುಮಲಾಂಬ ಅವರಲ್ಲಿ ಆಸೆ ಸತ್ತಿರಲಿಲ್ಲ. ಪ್ರತಿ ದಿನ ಮಗನ ಬಗ್ಗೆ ಎಷ್ಟೋ ಅಕ್ಕರೆಯ ಮಾತುಗಳನ್ನಾಡುತ್ತಿದ್ದರು. ಅವನಿಗೆ ಇಷ್ಟವಾದ ಒಂದಲ್ಲ ಒಂದು ಪದಾರ್ಥ ದಿನ ಅವನಿಗಾಗಿ ಕಾಯುತ್ತಿತ್ತು.

ಕಲ್ಲೇಶಿ ಮುಖ ತಿರುಗಿಸಿಕೊಂಡು ತನ್ನ ಪಾಡಿಗೆ ತಾನು ಹೋದ. ಈ ಹಣ ಅವನಿಂದ ದೂರ ನಿಂತರೂ ಜೀನ್ಸ್ ಪ್ಯಾಂಟ್‌ನಿಂದ ಎಗರಿಸಿದ ಹಣವನ್ನ ಹಳೆಯ ಬಟ್ಟೆಯ ತುಂಡುನಲ್ಲಿ ಕಟ್ಟಿ ಎಳೆಯ ಸೀಬೆಯ ಗಿಡದ ಬುಡದಲ್ಲಿ ಹುದುಗಿಸಿಟ್ಟಿದ್ದ. ನೋಟುಗಳು ಎಷ್ಟಿದೆಯೆನ್ನುವ ಪರಿವೆ ಇಲ್ಲ. ಐದು, ಹತ್ತು, ಐವತ್ತರ ನೋಟು ಬಿಟ್ಟು ನೂರರ ನೋಟನ್ನ ನೋಡಿದವನೇ ಅಲ್ಲ.

ನರಸಣ್ಣ ತೋಟದ ಕಡೆ ಹೋಗುವ ಇರಾದೆಯೇನು ಅವನಿಗಿರಲಿಲ್ಲ. ಶೀಲಕ್ಕನ ಮೇಕೆಗಳನ್ನೊಡೆದುಕೊಂಡು ಅಲ್ಲಲ್ಲಿ ಸುತ್ತಾಡತೊಡಗಿದ. ಬಿಳಿಗಿರಿಯ ಜೊತೆಯಲ್ಲಿ ಸಾಗರ್ ಬಂದರೇ ತಾನು ಹೋಗಿ ನೋಟುಗಳನ್ನ ತಂದುಕೊಳ್ಳುವ ಮನಸ್ಥಿತಿಯಲ್ಲಿದ್ದ. ಅರ್ಧ ಗಂಟೆ...ಒಂದು ಗಂಟೆಯ ನಂತರವೇ ಅಂದರೇ ಸೂರ್ಯ ನೆತ್ತಿಯ ಮೇಲಕ್ಕೆ ಬಂದು ಹನ್ನೆರಡು ಗಂಟೆಯೆನ್ನುವ ಸೂಚನೆ ಕೊಡುವ ಸಿದ್ಧತೆಯಲ್ಲಿದ್ದಾಗ, ಅಯ್ಯನೋರ ಜೊತೆಯಲ್ಲಿ ಸಾಗರ್ ಬರುತ್ತಿರುವುದು ಕಾಣಿಸಿತು. ತೊಡಬೇಕಾದ ಜಾಕೇಟ್‌ನ ಹೆಗಲ ಮೇಲೆ ಹಾಕಿಕೊಂಡು ಬರುತ್ತಿದ್ದ. ಅವನು ಅರೆ ಹುಚ್ಚನಂತೆಯೇ ಕಂಡ. ತಕ್ಷಣ ಅಂದು ಹೊಳೆಯ ಸಮೀಪ ಕಲ್ಲು ಬಂಡೆಗಳ ನಡುವೆ ಸತ್ತು ಬಿದ್ದಿದ್ದ ಅಪರಿಚಿತ ವ್ಯಕ್ತಿ ಕೂಡ ಇಂಥ ಉಡುಪನ್ನ ತೊಟ್ಟಿದ್ದು ನೆನಪಾದಾಗ ಬೆಚ್ಚಿಬಿದ್ದ. ಅವರ ನಡುವೆಯು ಒಂದು ಆಶಾಕಿರಣ. ಬೆಲೆ ಬಾಳುವ ಕಲ್ಲುಗಳಿಗಾಗಿಯೇ ಬಂದಿದ್ದರೇ. ಅವನಿಗೆ ಕಲ್ಲುಗಳ ಬಗ್ಗೆ ಗೊತ್ತಿರುತ್ತೆ. ತಾನು ತುಂಬಿಟ್ಟುಕೊಂಡ ಕಲ್ಲುಗಳಲ್ಲಿ ಕೆಲವಾದರೂ ಆ ವರ್ಗಕ್ಕೆ

ಸೇರದಿರುತ್ತದೆಯಾ? ಇಂಥದ್ದೇ ಯೋಚನೆಗಳನ್ನ ತಲೆಯಲ್ಲಿ ತುಂಬಿಕೊಂಡು ಮಣ್ಣಿನ ಗೋಡೆಯ ಪಕ್ಕಕ್ಕೆ ಸರಿದು ಅವರುಗಳ ಕಣ್ಣಿಗೆ ಬೀಳದಂತೆ ಕಣ್ಮರೆಯಾದ.

ಆದರೆ ಪಕ್ಕನೆ ಗಮನಿಸಿದ ಸಾಗರ್ ತುಟಿಗಳ ಮೇಲೆ ಬಹಳ ದಿನಗಳ ನಂತರ ತೆಳುವಾದ ನಗುವಿನ ಮಿಂಚೊಂದು ತೇಲಿ ಕಣ್ಮರೆಯಾಯಿತು. ಅದನ್ನ ಪ್ರಕೃತಿ ಮಾತ್ರ ಗಮನಿಸಿರಬೇಕು.

ಮನೆಯನ್ನು ತಲುಪಿದಾಗ ಬಿಳಿಗಿರಿಯವರು ಒಳಗೆ ಹೋಗಿ ಒಂದು ತಾಮ್ರದ ಬಿಂದಿಗೆಯನ್ನ ತಂದಿತ್ತು "ಕೈ ಕಾಲು ತೊಳೆದುಕೊಂಡು ಬಾ" ಹೇಳಿ ಒಳಗೆ ಹೋದರು. ಅವರು ಹೋದತ್ತಲೇ ನೋಡಿದ ಸಾಗರ್. ಅವನನ್ನ ಕರೆತರಲು ತಮ್ಮ ಬುದ್ಧಿಯನ್ನೆಲ್ಲ ಖರ್ಚು ಮಾಡಿದ್ದರು. ಮೇಷ್ಟರಾಗಿದ್ದವರು. ಹುಡುಗರನ್ನು ಪಳಗಿಸಿ ಹೆಚ್ಚು ಮಾತಾಡಿ ಅಭ್ಯಾಸವೇ. ಆದರೆ ಆ ಮಾತುಗಳಿಗೂ, ಇಂದು ಖರ್ಚು ಮಾಡಿದ ಮಾತುಗಳಿಗೂ ಬಹಳ ವ್ಯತ್ಯಾಸವಿತ್ತು. ಅವರುಗಳಲ್ಲಿ ಅಲ್ಪ ಸ್ವಲ್ಪವಾದರೂ ವಿಧೇಯತೆ, ಭಯವಿತ್ತು. ಸಾಗರ್ ಅವೆರಡರಿಂದ ಮುಕ್ತವಾದಂತೆ ವರ್ತಿಸಿದ್ದ. ಒರಟು ನುಡಿಗಳಿಗೆ ನೊಂದಿದ್ದರು. ಆದರೂ ಅವನು ಯಾವುದೇ ಅಪಾಯಕ್ಕೆ ಸಿಲುಕಬಾರದೆಂದು ಉಪಾಯದಿಂದ ಕರೆತಂದಿದ್ದರು.

ಬಿಂದಿಗೆ ನೀರನ್ನ ಕೈಗೆ ಹಾಕಿಕೊಂಡು ಮುಖಕ್ಕೆ ಎರಚಿಕೊಂಡವನು, ಮಿಕ್ಕ ನೀರನ್ನ ಕಾಲುಗಳ ಮೇಲೆ ಸುರಿದುಕೊಂಡು, ಬಿಂದಿಗೆಯನ್ನ ಮೇಲಕ್ಕೆಸೆದು ಕ್ಯಾಚ್ ಹಿಡಿಯಲು ಹೋದಾಗ ಕೆಳಕ್ಕೆ ಬಿದ್ದು ಸದ್ದಾಯಿತು. ದಂಪತಿಗಳು ಬಾಗಿಲಿಗೆ ಬಂದರು. ಆದರೆ ಒಂದು ಮಾತು ಕೂಡ ಆಡಲಿಲ್ಲ.

ಅವನಿಗೆ ಒಂದು ತರಹ ಅನಿಸಿತು. ಬಿಂದಿಗೆಯನ್ನೆತ್ತಿ ಜಗುಲಿಯ ಮೇಲಿಟ್ಟು 'ನಿಮಗ್ಯಾಕೆ ಬೇಕಿತ್ತು, ನನ್ನ ಉಸಾಬರಿ' ಎನ್ನುವಂತೆ ಬಿಳಿಗಿರಿಯವರ ಕಡೆ ನೋಡಿದ.

"ಬಾಪ್ಪ...ಒಳ್ಗೇ..." ಒಂದು ವಸ್ತ್ರವನ್ನ ಅವನ ಕೈಗಿತ್ತು ತಿರುಮಲಾಂಬ ಒಳ ಹೋದರು. ಆ ತಾಮ್ರದ ಬಿಂದಿಗೆಯ ಮೇಲೆ ಅವರ ಮಮಕಾರ ಹೆಚ್ಚು. ಇಪ್ಪತ್ತು ವರ್ಷಗಳ ಹಿಂದೆ ಇದೇ ಸಂದರ್ಭ ಎದುರಾಗಿದ್ದರೇ, ಸೌದೆ ಪಾಳ ತಗೊಂಡು ಅವನಿಗೆ ಬಾರಿಸಿ ತಮ್ಮ ಕೋಪ ತೀರಿಸಿಕೊಳ್ಳುವುದರ ಜೊತೆಗೆ ಮೂರು ದಿನ ಉಪವಾಸವಿದ್ದು ಅಳುತ್ತಿದ್ದರು. ಈಗ ಅನುಭವ, ಸರಿದ ದಿನಗಳು ಆಕೆಯನ್ನ ಬದಲಾಯಿಸಿತ್ತು.

ಮುಖವನ್ನಷ್ಟೆ ಒರೆಸಿಕೊಂಡ ಸಾಗರ್ ಹಾಸಿದ್ದ ಚಾಪೆಯ ಮೇಲೆ ಕಾಲು

ನೀಡಿಕೊಂಡು ಕೂತ. ಆಯಾಸ, ಬಳಲಿಕೆಯ ಜೊತೆ ಬೇಸರ, ನಿರುತ್ಸಾಹ. ಹೇಗೆ ದಿನಗಳನ್ನು ದೂಡುವುದು? ಅಂಥ ಅಗತ್ಯ ತಾನೇ ಏನಿದೆ ? ಬದುಕು ಅಂದರೇ ಇಷ್ಟೇನಾ ? ಇಷ್ಟಕ್ಕಾಗಿ ಏಕೆ ಬದುಕಬೇಕು? ಇದರ ಸತ್ಯವನ್ನ ಅರಿಯಲು ಸಾಧುಸಂತರೊಂದಿಗೆ ದಿನಗಳನ್ನು ದೂಡಿದ್ದ. ಆದರೆ ಏನೇನು ಅರ್ಥವಾಗಿರಲಿಲ್ಲ. ಕಾಶೀ ವಿಶ್ವೇಶ್ವರನ ಸನ್ನಿಧಿಯಲ್ಲಿ ತಿಂಗಳಿದ್ದ. ಎಲ್ಲು ಅವನಿಗೆ ಶಾಂತಿ, ಸಮಾಧಾನ ಸಿಕ್ಕಿರಲಿಲ್ಲ. ಎಲ್ಲಾ ವಿಚಿತ್ರವಾಗಿ ಕಂಡಿತ್ತು. ಎಲ್ಲಾ ಕಡ ಸ್ವಾರ್ಥ, ಘರ್ಷಣೆ, ಸಾವು, ನೋವು ಕೂಡಿಯೇ ಇತ್ತು.

ತಟ್ಟೆಯಲ್ಲಿ ನಾಲ್ಕು ದೋಸೆ, ಒಂದಿಷ್ಟು ಚಟ್ನಿ ಜೊತೆ ಕಂಚಿನ ಮಿಳ್ಳೆಯಲ್ಲಿ ನೀರು ತಂದಾಗ ಅರಿವಾಗದಂತೆ ಕಾಲುಗಳು ಹಿಂದಕ್ಕೆ ಸರಿದವು.

"ಒಂದಿಷ್ಟು ತಿಂದು ಮಲಕ್ಕೋ, ಕಲ್ಲೇಶಿ ನಿನ್ಜೂಡ ಬರ್ಲಿಲ್ಲವೇನು, ಅವನಕ್ಕ ಎರ್ಡು ಸಲ ಹುಡುಕೊಂಡ್ ಬಂದಿದ್ಲು. ಕಾಲುಗಳಿಗೆ ಚಕ್ರಗಳ್ನ ಕಟ್ಟಿಕೊಂಡಂಗೆ ತಿರುಗಾಡ್ತಾನ" ಎನ್ನುತ್ತ ಆಕೆ ಗೋಡೆಗೊರಗಿ ಕೂತರು.

ಒಮ್ಮೆ ತಲೆಯೆತ್ತಿ ಆಕೆಯ ಮುಖ ದಿಟ್ಟಿಸಿದ. ಮುಪ್ಪು ಮುಖದಲ್ಲಿ ಮುಗ್ಗರಿಸಿದ್ದರೂ, ಏನೋ ಒಂದು ಚೆಲುವು ಮೆತ್ತಿಕೊಂಡಂತಿತ್ತು. ಕಣ್ಣುಗಳಲ್ಲಿ ಮೆದುತನದ ಜೊತೆಯಲ್ಲಿ ವ್ಯಥೆ 'ಛೆ...' ಎನಿಸಿತು. ತಲೆ ತಗ್ಗಿಸಿದ. ಅರ್ಥ ಮಾಡಿಕೊಂಡವರಂತೆ ತಿರುಮಲಾಂಬ ಎದ್ದು ಅಡಿಗೆಯ ಮನೆಗೆ ಹೋದರು.

ಗಬ ಗಬ ತಿಂದು ಮುಗಿಸಿ ಮಿಳ್ಳೆ ನೀರು ಕುಡಿದು ತಟ್ಟೆ ತೆಗೆದಿಡುವ ವೇಳೆಗೆ ತಿರುಮಲಾಂಬ ಕನಿಷ್ಟ ಕಾಲು ಲೀಟರ್ ಹಿಡಿಸುವಷ್ಟು ದೊಡ್ಡ ಲೋಟದ ತುಂಬ ಕಾಫಿ ತಂದಿಟ್ಟರು. ಫಿಲ್ಟರ್, ನೆಸ್‌ಕೆಫೆ ಕಾಫಿ ಪುಡಿಯಿಂದ ತಯಾರಿಸಿದ್ದಲ್ಲ, ಕುದಿಯುವ ನೀರನ್ನ ಕಾಫಿ ಪುಡಿಯ ಪಾತ್ರೆಗೆ ಬಗ್ಗಿಸಿ ಬಟ್ಟೆಯಿಂದ ಶೋಧಿಸಿ ಹಾಲು ಸಕ್ಕರೆ ಬೆರೆಸಿಕೊಂಡು ಬಂದ ಕಾಫಿ.

ಲಕ್ಷಣವಾಗಿ ಕೂತು ಆರಾಮಾಗಿ ಕುಡಿದ.

ಬಂದ ಆಕೆ ಅವನ ಎದುರಿನಲ್ಲಿ ಕೂತು "ಬ್ಯಾಗು ಇಲ್ಲೇ ಬಿಟ್ಟು ಹೋಗಿದ್ದೆ. ಅದ್ರಲ್ಲಿ ಹಣ ಇದೇಂದ್ರು...ಅಪ್ಪ. ಬೇಜವಾಬ್ದಾರಿಯಿಂದ ಎಲ್ಲೆಲ್ಲೋ ಎಸೆದರೇ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತಿ" ವಿವೇಕದ ಮಾತಾಡಿದರು.

ಅದಕ್ಕೆ ಅವನ ಪ್ರತಿಕ್ರಿಯೆ ಹೇಗಿರುತಿತ್ತೋ, ಅಷ್ಟರಲ್ಲಿ ಬಾಗಿಲಲ್ಲಿ ಒಂದು ನೆರಳಾಡಿತು. ಲಂಗದ ಮೇಲೆ ಧಾವಣಿ ಹೊದ್ದ ಹುಡುಗಿಯೊಬ್ಬಳು ಇಣಕಿ ಸಂಕೋಚದಿಂದ ಅಲ್ಲೇ ನಿಂತಳು.

"ಬಾರೇ ಗೌರಿ...ಬಾ ! ಮತ್ತೊಮ್ಮೆ ಕಲ್ಲೇಶಿನ ಹುಡ್ಕಿಕೊಂಡ್ಬಂದ್ಯಾ ?

ಅವ್ನಿಗೆ ಕಾಲುಗಳು ಎಲ್ಲಿ ನಿಲ್ಲುತ್ತೆ. ಸುಮ್ನೆ ಯಾಕೆ ಓಡಾಡಿ ದಣೀತೀ. ಒಳ್ಗಡೆ...ಬಂದು ಕೂತ್ಕೋ" ಬಗ್ಗಿ ಹೇಳಿದರು.

ಅಲ್ಲಿಂದಲೇ ಸನ್ನೆ ಮಾಡಿ ಏನೋ ತಿಳಿಸಿದವಳು ಮಾಯವಾದಳು.

"ಕಲ್ಲೇಶಿ ಅಕ್ಕ" ತಿಳಿಸಿದರು ಆಕೆ.

ಅವಳು ಮಾಡುತ್ತಿದ್ದ ಸನ್ನೆಯನ್ನ ಅರಿತೇ ಬಹುಶಃ ಮೂಗಿ ಇರಬೇಕೆಂದುಕೊಂಡ. "ಮಾತು ಬರೋಲ್ವಾ ?" ಕೇಳಿದ. ಅವನಿಗೆ ಆಡಲು ಒಂದು ಮಾತು ಬೇಕಿತ್ತಷ್ಟೆ.

ಇಷ್ಟು ಹೊತ್ತಿನ ನಂತರವಾದರೂ ಸಾಗರ್‌ನ ನಾಲಿಗೆಗೆ ಜೀವ ಬಂದಿದ್ದು ಆಕೆಗೆ ಸಮಾಧಾನವೆನಿಸಿತು.

"ಬರುತ್ತೆ, ಸ್ವಲ್ಪ ಬಿಕ್ಕಲು. ಅದ್ನ ಜನ ಆಡಿಕೊಳ್ಳೋದ್ನ ನೋಡಿ ಮಾತು ಆಡೋದ್ನ ನಿಲ್ಸಿ....ಆರಾಮಾಗಿ ಸನ್ನೆ ಮಾಡೋದ್ನ ಅಭ್ಯಾಸ ಮಾಡ್ಕೊಂಡಿದ್ದಾಳೆ. ಪಾಪದ ಹುಡ್ಗಿ...ಹುಟ್ಟಿದಾಗ್ನಿಂದ ಕಷ್ಟವೇ ಆಯಿತಂತೆ. ನಾವು ಇಲ್ಲಿಗ್ಬಂದ್ಮೇಲೆ ಅವ್ರ ಅಪ್ಪ ತೀರಿಕೊಂಡಿದ್ದು. ಕಲ್ಲೇಶಿ ಅಲ್ಲಿ...ಇಲ್ಲಿ ಕೆಲ್ಸ ಮಾಡಿ ಅಕ್ಕನ್ನ ಸಾಕ್ತಾ ಇದ್ದಾನೆ. ಸದಾ ಹೊಳೆಯ ಪಕ್ಕದ ಬಂಡೆಗಳ ನಡ್ವೆ ಅಡ್ಡಾಡೋ ತಮ್ಮನ ಬಗ್ಗೆ ಅವ್ಳಿಗೆ ಭಯ. ಆ ಹುಡ್ಗ ಮುಂಡೇದು ಕೇಳ್ಬೇಕಲ್ಲ" ಒಂದಿಷ್ಟು ತಿಳಿಸಿದರು.

ಕಾಫಿಯನ್ನ ಕುಡಿಯತೊಡಗಿದ. ಕಾಫಿ ಗಟ್ಟಿಯಾಗಿತ್ತು, ರುಚಿಯಾಗಿತ್ತು ನಿಧಾನವಾಗಿ ಸಂಕೋಚವಿಲ್ಲದೆ ಕುಡಿದಿಟ್ಟ.

"ನಿನ್ನ ಒಂದ್ಮಾತು ಕೇಳ್ತೀನಿ, ನಿಜ ಹೇಳು? ಇಲ್ಲಿ ನೀನು ಬಂದಿರೋದು ಕಲ್ಲುಗಳ್ನ ಹುಡುಕೋಕಾ? ಸತ್ಯ ಹೇಳೋದ್ರಿಂದ... ನಿಂಗೆ ಒಳ್ಳೇದೇ ಆಗುತ್ತೆ" ಸ್ವಾರ್ಥವಿಲ್ಲದ ಅಕ್ಕರೆಯ ದನಿಯಲ್ಲಿ ಆಕೆ ಕೇಳಿದಾಗ ಅವನಿಗೆ ನಗು ಬಂತು. "ಯಾವ ಕಲ್ಲು? ಹುಡುಕೋದು ನನ್ನಂಥ ಸೋಮಾರಿಗಳಿಗೆ ಹೇಳಿ ಮಾಡ್ಸಿದ ಕೆಲ್ಸವಲ್ಲ" ಚಾಪೆಯ ಮೇಲೆ ಬಿದ್ದಿದ್ದ ಒರಟು ಜಾಕೇಟ್‌ನ ಮಡಚಿ, ಚಾಪೆಯ ಮೇಲ್ಭಾಗದಲ್ಲಿ ಇಟ್ಟು ಅದರ ಮೇಲೆ ತಲೆ ಇಟ್ಟು ಕಾಲುಗಳನ್ನ ನೀಳವಾಗಿ ಚಾಚಿ ಮಲಗಿದ.

"ಒಳ್ಳೇದೇ ಆಯ್ತು ! ನನ್ನ ಮನಸ್ಸಿಗೆ ಎಷ್ಟೋ ನೆಮ್ದಿ! ಮತ್ತೆ ಇಲ್ಲಿಗೆ ಯಾಕ್ಬಂದೆ? ಹತ್ತಿರದಲ್ಲಿ ಯಾರಾದರೂ ನೆಂಟರು ಇದ್ದಾರ?" ಅನುನಯದ ದನಿಯಲ್ಲಿ ಕೇಳಿದರು ತಿರುಮಲಾಂಬ. ಆಕೆಯ ಮನಸ್ಸಿನ ಅಂದಾಜು ಸರಿಯಾಗಿತ್ತು. ತಾಯ್ತಂದೆಯರೊಂದಿಗೆ ಮುನಿಸಿಕೊಂಡು ಬಂದಿರಬೇಕೆಂದು ಗಂಡನೊಂದಿಗೆ ಆಕೆ ವಾದ ಮಾಡಿದ್ದರು. ಪೂರ್ತಿ ನಿಜವಲ್ಲದಿದ್ದರೂ ಐವತ್ತು ಭಾಗವಾದರೂ ಸತ್ಯವಿತ್ತು.

ಮುಖದ ಮೇಲೆ ಕೈ ಅಡ್ಡವಾಗಿಟ್ಟುಕೊಂಡ ಸಾಗರ್. ನೆಂಟರು ಅಂದರೆ ಯಾರು? ಆ ಪ್ರಶ್ನೆಯೇ ಬೇಸರವೆನಿಸಿತು. ಇನ್ನ ಮೊದಲ ಪ್ರಶ್ನೆಗೆ ಉತ್ತರ ಗೊತ್ತಿಲ್ಲ.

"ಬಸ್ಸುನಲ್ಲಿ ಹೋಗ್ತಾ ಇದ್ದೆ. ಇಳಿಬೇಕೂಂತ ಅನ್ನಿಸ್ತು, ಇಳಕೊಂಡೆ" ಅಷ್ಟೇ ಹೇಳಿದ್ದು. ಆಕೆ ಮತ್ತೇನು ಕೇಳಲು ಹೋಗಲಿಲ್ಲ. ಅವನ ಪಾಡಿಗೆ ಅವನನ್ನ ಮಲಗಲು ಬಿಟ್ಟು ಹೊರಗೆ ಬಂದು ನಿಂತರು. ಮಗ ಕೂಡ ಇದೇ ರೀತಿ ಹೋಗಿದ್ದ. ಇಂಥ ಸ್ಥಳಕ್ಕೇಂತ ಹೇಳಿ ಹೋಗಿರಲಿಲ್ಲ. ಅವನು ಕೂಡ ಇಂಥ ಕಡೆ ಹೋಗಬೇಕೆಂದು ಹೋಗುವ ಮುನ್ನ ನಿರ್ಧಾರ ಮಾಡಿರಲಿಕ್ಕಿಲ್ಲ.

ತಿರುಮಲಾಂಬ ಭಾರವಾದ ನಿಟ್ಟುಸಿರು ದಬ್ಬಿದರು. ತಾಯ ಕರುಳಿನ ವೇದನೆಗೆ ಕಣ್ಣೀರು ಸುರಿಸಿದಂತೆ ನಾಲ್ಕು ಹನಿ ಮಳೆ ಎರಚಿದಂತೆ ನೆಲಕ್ಕೆ ಉರುಳಿತು.

ದೂರದಲ್ಲಿ ಹೋಗುತ್ತಿದ್ದ ಗೌರಿಯನ್ನ ಚಪ್ಪಾಳೆ ತಟ್ಟಿ ಹತ್ತಿರಕ್ಕೆ ಕರೆದರು. "ಸುಮ್ನೆ, ನೀನ್ಯಾಕೆ ಆ ಕಡೆ ಹೋಗ್ತೀಯಾ? ಅವ್ನು ಹೊಳೆ ಕಡೆ ಹೋದಂಗಿಲ್ಲ." ಬಲವಂತವಾಗಿ ಒಳಗೆ ಕರೆತಂದು ಉಳಿದಿದ್ದ ದೋಸೆ ಹಿಟ್ಟನ್ನ ಕಾವಲಿ ಮೇಲೆ ಸುರಿದು ಮೊಗಚಿ ಹಾಕಿ ಚಟ್ನಿಯೊಂದಿಗೆ ತಂದು ಅವಳ ಮುಂದಿಟ್ಟರು. "ತಿನ್ನು"

'ಪಾಕಡಾ' ಕಲ್ಲೇಶಿಯ ಅಕ್ಕನನ್ನ ಒಮ್ಮೆ ನೋಡುವ ಸಲುವಾಗಿ ಮುಖದ ಮೇಲಿದ್ದ ಕೈಯನ್ನು ಸರಿಸಿದ ಸಾಗರ್. ಅವನದೇ ಪಡಿಯಚ್ಚು. ಹೆಚ್ಚು ಆರೈಕೆ ಇಲ್ಲದೆ ಸೊರಗಿದ ಮುಖ. ಬೇಡವೆಂದು ಸನ್ನೆ ಮಾಡುತ್ತಿದ್ದವಳನ್ನ ಬಲವಂತ ಮಾಡುತ್ತಿದ್ದರು ತಿರುಮಲಾಂಬ. ಭಯ ಸಂಕೋಚದ ನೋಟ ಹರಿಸುತ್ತಲೇ ತಿಂದು ಕೈ ತೊಳೆದು ಬಂದವಳು ಪಾತ್ರೆಗಳನ್ನೊಯ್ದು ತೊಳೆದಿಟ್ಟು ಹೊರಟು ನಿಂತವಳು ಅವನತ್ತ ಭಯದ ನೋಟ ಹರಿಸಿ ಆಕೆಯನ್ನು ಪ್ರಶ್ನಿಸುತ್ತಿದ್ದ ಗೌರಿ ಗೂಢವಾಗಿ ಗೋಚರಿಸಿದಳು. ತನ್ನ ಬಗ್ಗೇ ಕೇಳಲು ಏನಿದೆ? ಜೀನ್ಸ್ ಪ್ಯಾಂಟ್ ಜೇಬಿನಿಂದ ನೋಟುಗಳನ್ನು ಎಗರಿಸಿದ್ದು ನೋಡಿದ್ದ.

ಆಮೇಲೆ ಅವನಿಗೆ ಯಾವಾಗ ನಿದ್ದೆ ಬಂತೋ, ಎಚ್ಚರವಾದಾಗ ಬಿಳಿಗಿರಿಯವರು ಕೂಡ ಇನ್ನೊಂದು ಮಗ್ಗುಲಿನ ಗೋಡೆಗೆ ಅಂಟಿದಂತೆ ಚಾಪೆ ಬಿಡಿಸಿಕೊಂಡು ಮಲಗಿದ್ದರೆ ತಿರುಮಲಾಂಬ, ಅತ್ಯಂತ ಶ್ರದ್ಧೆಯಿಂದ ಒಂದು ನೋಟ್ ಬುಕ್ ಹಿಡಿದು ಜಪಿಸುತ್ತ ಬರೆಯುತ್ತಿದ್ದರು. ಮೊದಲ ಸಲ ಕುತೂಹಲ ಮೂಡಿತು. ಮನೆಯ ಲೆಕ್ಕದ ಬಾಬ್ತು ಇರಬಹುದು. ಅವನಮ್ಮ ಕೂಡ ಇಷ್ಟೇ ಖರ್ಚಿನ ವಿಷಯದಲ್ಲಿ ಶಿಸ್ತು. ಪ್ರತಿಯೊಂದನ್ನ ಲೆಕ್ಕವಾಗಿಸುವುದು ರೂಢಿ.

ಮೈ ಮುರಿದು ಆಕಳಿಸಿ ಮೇಲೆದ್ದ.

ನಿಮಿಷಗಳು ಗಂಟೆಗಳು ದಿನಗಳು ಅವನಂತೆ ಪ್ರಯೋಜನವಿಲ್ಲದೆ ಉರುಳಿ ಹೋಗುತ್ತಿದೆಯೆನಿಸಿತು. ಜಾಕೆಟ್‌ನ ಹೆಗಲ ಮೇಲೆ ಹಾಕಿಕೊಂಡು ಬಾಗಿಲಿನ ಬಳಿ ಹೋಗುವ ವೇಳೆಗೆ ತಿರುಮಲಾಂಬ ದನಿ ಹಿಡಿದು ನಿಲ್ಲಿಸಿತು.

"ಕಲ್ಲೇಶಿ ಅಕ್ಕ, ನಿನ್ಹತ್ರ ಮಾತಾಡ್ಬೇಕಂತೆ. ನಾನು ಹೇಳಿದ್ರೂ ಅವ್ಳಿಗೆ ನಂಬ್ಕೇ...ಬರ್‍ಲಿಲ್ಲ."

ಅವನ ಹೆಜ್ಜೆಗಳು ಅಲ್ಲಾಡಲಿಲ್ಲ. ಮುಖ ಗಂಟಾಯಿತು. ಆ ಅಪರಿಚಿತ ಹುಡುಗಿ ತನ್ನೊಂದಿಗೆ ಮಾತಾಡುವುದಕ್ಕೆ ಏನಿದೆ? ಅಲಕ್ಷದಿಂದ ನಾಲ್ಕು ಹೆಜ್ಜೆ ಮುಂದಕ್ಕೆ ಹೋಗುವ ವೇಳೆಗೆ ಗೌರಿಯೇ ಎದುರಾದಳು. ಹೇಳಲು ಸಂಕೋಚಿಸುವ ಅವಳ ಮುಖ ಬಿಸಿಲಿಗೆ ಮುದುರಿದ ಮೊಗ್ಗಂತಾಯಿತು. ಗೌರಿಯ ಮೂಕ ಸನ್ನೆಗಳು ಅರ್ಥವಾಗಲಿಲ್ಲ. ಅದನ್ನ ಅರ್ಥ ಮಾಡಿಕೊಳ್ಳಬೇಕೆಂಬ ಮನಸ್ಸು ಕೂಡ ಅವನಿಗೆ ಇರಲಿಲ್ಲ. ಉತ್ಪ್ರೇಕ್ಷೆಯಿಂದ ತನ್ನ ಪಾಡಿಗೆ ತಾನು ಹೋದ. ಮತ್ತದೇ ಬಂಡೆಗಳನ್ನ ಏರಿ ಇಳಿದ, ಹೊಳೆಗೆ ಬಿದ್ದು ಇಷ್ಟ ಬಂದಷ್ಟು ಹೊತ್ತು ಈಜಾಡಿದ. ಹೊಟ್ಟೆಯ ಯೋಚನೆ ಇರಲಿಲ್ಲ. ಆರಾಮಾಗಿ ನಿದ್ದೆ ಮಾಡಿದ.

ಒದ್ದೆ ಮೈಯನ್ನ ಬಿಸಿಲಿಗೊಡ್ಡಿ ನಿಂತು ಆರಿಸಿಕೊಂಡ. ಒಂದು ದೊಡ್ಡ ಬಂಡೆಯ ವಾಲಿದ ಕಿರಿದಾದ ಬುಡದಲ್ಲಿ ಸಣ್ಣ ಪುಟ್ಟ ಕಲ್ಲುಗಳನ್ನ ಆಯ್ದು ಸಂಗ್ರಿಹಿಸಿದ್ದು ಅವನ ಗಮನಕ್ಕೆ ಬಂತು. ಕಲ್ಲೇಶಿ, ವಿರೂಪಾಕ್ಷಿ, ಬಿಳಿಗಿರಿ, ತಿರುಮಲಾಂಬ ಹೇಳಿದ್ದು ಒಗಟಾಗಿ ಕಂಡಿತ್ತೇ ವಿನಃ ಸೀರಿಯಸ್ಸಾಗಿ ತಗೊಂಡಿರಲಿಲ್ಲ. ಬಗ್ಗಿ ಅದರಲ್ಲಿ ಕೆಲವನ್ನ ಹೆಕ್ಕಿಕೊಂಡ. ಅಂಥ ಮಹತ್ವದ್ದೇನು ಕಾಣಿಸದಿದ್ದಕ್ಕೆ ಅಲ್ಲೇ ಎಸೆದ.

"ಎಸೆದುಬಿಟ್ರಾ ?" ಕಲ್ಲೇಶಿಯ ಅಳುವಿನ ಸ್ವರ.

ಅವನ ಕಿವಿ ಹಿಡಿದು ಹತ್ತಿರಕ್ಕೆಳೆದುಕೊಂಡ "ಏಯ್ ಇಷ್ಟೋತ್ತು ಎಲ್ಲೋಗಿದ್ದೆ? ನಿಮ್ಮಕ್ಕ ಬಂದು ಫಿರ್ಯಾದು ಸಲ್ಲಿಸ್ತಾ ಇದ್ದರಲ್ಲೋ" ಕಣ್ಣು ಕೆಂಪಗೆ ಮಾಡಿದ. ಕಲ್ಲೇಶಿ ಅಳುಮುಖ ಮಾಡಿದ ಕಣ್ಣಿಂದ ಕಂಬನಿ ಹರಿಯುವುದೊಂದು ಬಾಕಿ ಇತ್ತು.

ತಕ್ಷಣ ಅರಿವಾಗದಂತೆ ಮೃದುವಾದ ಸಾಗರ್.

"ಏನೋ ಅದು? ಕಿವಿ ನೋವಾಯಿತೇನೋ" ಕಿವಿ ಬಿಟ್ಟ.

ಅವನು ಜೋರಾಗಿ ಅಳೋಕೆ ಷುರು ಮಾಡಿದಾಗ ಸಾಗರ್‌ಗೆ ವಿಸ್ಮಯ

"ಏಯ್ ನಿಲ್ಸೋ....ನಂಗೆ ಅಳೋರ್ನ ಕಂಡರೇ ಇಷ್ಟವಾಗೋಲ್ಲ" ಗದರಿಸಿದ. ಅತ್ತಿದ್ದಕ್ಕೆ ಕಾರಣ ಸ್ಪಷ್ಟವಿತ್ತು. ಅವನು ಸೀಬೆ ಗಿಡದ ಬುಡದಲ್ಲಿ ಹುದುಗಿಸಿಟ್ಟ ನೋಟುಗಳನ್ನ ಕಟ್ಟಿದ್ದ ಪುಟ್ಟ ಗಂಟು ಸಿಕ್ಕಿರಲಿಲ್ಲ. ಅದು ಅವನ ಅಳುವಿಗೆ ಮುಖ್ಯ ಕಾರಣವೆಂದುಕೊಂಡವನು ರೆಟ್ಟೆ ಹಿಡಿದು ಎಳೆದೊಯ್ದು ಮತ್ತೆ ಇನ್ನೊಂದು ಬಂಡೆಯ ಕೊರಕಲಿನಲ್ಲಿದ್ದ ನೋಟಿನ ಗಂಟನ್ನು ತಂದು ಅವನ ಕೈಯಲ್ಲಿಟ್ಟು "ಈಡಿಯಟ್, ತೆಗ್ದ ಹಣನ ಗಿಡದ ಕೆಳಗಾ ಹೂತಿಡೋದು. ಭೂಮಿ ಸುತ್ತುತ್ತೇಂತ ಕೇಳಿಲ್ವಾ, ನಿನ್ನ ಹಣ ಮೇಲಕ್ಕೆ ಹೋಗ್ಬಿಟ್ರೆ...ನನ್ಮುಂದೆ ತೆಗೆದರೂ ಕೇಳ್ತಾ ಇರ್ಲಿಲ್ಲ. ಹೋಗು...ಇಟ್ಕೋ. ನಿನ್ನಕ್ಕ ಹುಡುಕಾಡ್ತ ಇದ್ದಾಳೆ, ಹೋಗಿ ಮುಖ ತೋರ್ಸು. ನನ್ನ ಹಿಂದೆ ಬೀಳೋದು ನಂಗೆ ಇಷ್ಟವಾಗೋಲ್ಲ. ನಂಗೆ ನಿಮ್ಮಕ್ಕನ ಮೂಗ ಸನ್ನೆಗಳು ಅರ್ಥವಾಗೋಲ್ಲ. ಇನ್ನೊಂದು ನಿಮಿಷ ಇಲ್ಲಿ ನಿಲ್ದೇ ಓಡ್ಬಿಡು" ಛೀಮಾರಿ ಹಾಕಿದ.

ಇವನ ಕೋಪಕ್ಕೆ ಕಲ್ಲೇಶಿಯ ಅಳುವೇನು, ಕಂಬನಿ ಕೂಡ ಇಂಗಿಹೋಯಿತು. ಚಲಿಸದೆ ನಿಂತ. ಅವನ ಕಣ್ಣಿಗೆ ಅದ್ಭುತ ವ್ಯಕ್ತಿಯಾಗಿ ಕಂಡ. ಕೆಲಸ ಮಾಡಿಸಿಕೊಂಡು ಕೆಲವರು ನಾಮ ಹಾಕಿದರೇ, ಇನ್ನ ಹಲವರು ಅಷ್ಟೋ ಇಷ್ಟೋ ಕೊಟ್ಟು ಜೋರು ಮಾಡುತ್ತಿದ್ದರು. ಇವನು ಮಾತ್ರ ದಯಾಳು ವ್ಯಕ್ತಿಯಾಗಿ ಕಂಡ.

"ಅಣ್ಣ..." ಎಂದು ಎರಡು ಕಾಲುಗಳನ್ನ ಹಿಡಿದುಕೊಂಡ.

"ಏಯ್ ಬಿಡೋ, ಈ ಸಂಭೋದನೆ, ಸಂಬಂಧಗಳು ನಂಗೆ ಸ್ವಲ್ಪ ಕೂಡ ಇಷ್ಟವಾಗೋಲ್ಲ. ಮೊದ್ಲು ಜಾಗ ಖಾಲಿ ಮಾಡು. ನಂಗೆ ಒಂಟಿಯಾಗಿ ಇರಬೇಕೆನಿಸಿದೆ" ಅವನ ಷರಟಿನ ತೋಳಿಡಿದು ಎಬ್ಬಿಸಿದ.

"ನಂಗ್ಬೇಡ ತಗೊಳ್ಳಿ" ಆ ಗಂಟನ್ನ ಅವನ ಮುಂದಿಡಿದ.

"ಬೇಡದಿದ್ದರೇ ಹೊಳೆಗೆ ಎಸ್ದುಬಿಡ್ತೀನಿ" ಕನಲಿದ.

ಅದನ್ನ ಜೇಬಿಗೆ ಸೇರಿಸಿದ ಕಲ್ಲೇಶಿ ತಾನು ಕಲೆ ಹಾಕಿದ್ದ ಕಲ್ಲುಗಳನ್ನೆಲ್ಲ ಜೇಬುಗಳಿಗೆ ತುಂಬಿಕೊಂಡ. ಒಂದಿಷ್ಟು ಅನುಮಾನವೇ ಸಾಗರ್ ಬಗ್ಗೆ. ಕಲ್ಲುಗಳ ಬಗ್ಗೆ ಆಸಕ್ತಿ ಇಲ್ಲದಿದ್ದರೇ ಇಲ್ಲಿಗೆ ಬಂದಿದ್ದು ಏಕೆ? ಈ ಪ್ರಶ್ನೆಗೆ ಸಮರ್ಥವಾಗಿ ಉತ್ತರಿಸದು ಅವನ ಮಿದುಳು.

ಸಪ್ಪೆ ಮುಖ ಮಾಡಿ ಹೊರಟ ಅವನನ್ನ ಚಪ್ಪಾಳೆ ತಟ್ಟಿ ಕರೆದ "ಈ ಕಲ್ಲುಗಳ್ನ ಏನ್ಮಾಡ್ತೀಯಾ?" ಇವನ ಕೇಳಿಕೆಗೆ ನಿಶ್ಯಬ್ದವಹಿಸಿದ. ಎರಡು ವರ್ಷದ ಹಿಂದೆ ಒಬ್ಬ ಅಪರಿಚಿತ ವ್ಯಕ್ತಿ ಅವನ ಷರಟು ಹಿಡಿದು ಜಗ್ಗಿ ಹೀಗೆಯೇ

ಪ್ರಶ್ನಿಸಿದ್ದ, ಜೊತೆಗೆ ನಾಲ್ಕು ಒದ್ದು ಮರಕ್ಕೆ ಇಡೀ ದಿನ ಕಟ್ಟಿ ಹಾಕಿದ್ದ. ಇವನು ತಪ್ಪಿಸಿಕೊಂಡು ಹೋಗಿದ್ದು ಒಂದು ಸಾಹಸದ ಕತೆಯೇ. ನಾಲ್ಕು ದಿನ ಪ್ರಜ್ಞೆ ಇಲ್ಲದೆ ಮಲಗಿದ್ದ. ಇಂದಿಗೂ ಯಾರೊಂದಿಗೂ ಬಾಯಿ ಬಿಡ. ಇಂದು ಅವನ ಎದೆಯಲ್ಲಿ ನಡುಕ ಷುರುವಾಯಿತು. ಒಂದೇ ಸಮ ಓಟ ಕಿತ್ತವನು, ತಮ್ಮ ಪುಟ್ಟ ಮನೆಯ ಮುಂದೆಯೇ ನಿಂತು ಸುಧಾರಿಸಿಕೊಂಡಿದ್ದು. ಏದುಸಿರು ಬಿಡುತ್ತ ಒಂದೊಂದೇ ಹೆಜ್ಜೆ ಎತ್ತಿ ಹಾಕಿ ಒಳ ಸೇರಿದಾಗ, ಮೊರದಲ್ಲಿ ಕಾಳು ಹಾಕಿಕೊಂಡು ಕೇರುತ್ತಿದ್ದ ಗೌರಿ ಗಾಬರಿಯಿಂದ ಎದ್ದಳು.

"ಯಾಕೋ...ಯಾ....ಕೋ" ಇಂದು ಸನ್ನೆ ಮಾಡದೇ ಬಾಯಿ ಬಿಟ್ಟು ವಿಚಾರಿಸಿದಳು ಆತಂಕದಿಂದ. "ಏನಿಲ್ಲ, ಬಿಡು.... ಪೋಲಿ ದನ ಅಟ್ಟಿಸಿ ಕೊಂಡ್ಬಂತು" ಅವಳಿಗೇನು ಅರ್ಥವಾಗಲಿಲ್ಲ. ಸಧ್ಯಕ್ಕೆ ಕಲ್ಲೇಶಿಗೆ ಅಕ್ಕನಿಗೆ ಅರ್ಥವಾಗುವುದು ಬೇಡವಾಗಿತ್ತು.

ಎಳೆದೆಳೆದು ಉಸಿರು ದಬ್ಬಿ ಸುಧಾರಿಸಿಕೊಂಡ. 'ಎಲ್ಲಿ ಹೋಗಿದ್ದೆ?' ವಿಚಾರಿಸಿದಳು ಸನ್ನೆಯಿಂದ. "ನರಸಣ್ಣನ ತೋಟಕ್ಕೆ ಹೋಗಿದ್ದೆ" ಅಪ್ಪಟ ಸುಳ್ಳು ಹೇಳಿದ. 'ಇಲ್ಲ' ವೆಂದು ತಲೆಯಾಡಿಸಿದವಳು ಬೆನ್ನಿಗೊಂದ್ದು ಗುದ್ದು ಹಾಕಿ 'ಸುಳ್ಳು ಹೇಳ್ತೀಯಾ?' ಕಣ್ಣಲ್ಲಿಯೇ ಕೇಳಿದಳು. ಉದಾಸೀನ ತೋರಿಸಿದ. "ಅವ್ನು ಸರಿ ಇಲ್ಲ ಬಿಡು, ಅಕ್ಕಿ ಕೊಡ್ತೀನಿ....ಕೊಡ್ತೀನೀಂತ ಆಗಾಗ ಕೆಲ್ಸ ಮಾಡಿಸ್ಕೋತಾನೆ. ಕೊಟ್ಟಿದಂತು...ಇಲ್ಲ" ಮುಖ ಊದಿಸಿದ.

ಗೌರಿ ಪೂರ್ತಿ ಸಪ್ಪಗಾದಳು. ತಮ್ಮನ ಕೆನ್ನೆ ಸವರಿದಳು. ತಾನು ದೊಡ್ಡವಳಿದ್ದು ಕೂಡ ಆ ಎಳೆಯ ದುಡಿದು ತನ್ನನ್ನು ಸಾಕುವಂತಾಯಿತಲ್ಲ ಎನ್ನುವ ವ್ಯಥೆ ಇದ್ದರೂ ಅವಳೇನು ಮಾಡಲಾರಳು.

"ನಾನು ಎಲ್ಲಾದ್ರೂ ಕೆಲ್ಸಕ್ಕೆ ಹೋಗ್ತೀನಿ" ಅಂದ ದಿನ ಎಚ್ಚರಿಕೆ ನೀಡಿದ್ದ "ಹೊಳೆಗೆ ಹಾರ್ಕೊಂಡ್ ಬಿಡ್ತೀನಿ, ಆಮ್ಯಾಲೆ ನಿಂಗೆ ಸಿಗೋದು ನನ್ನ ಹೆಣ ಮಾತ್ರ" ಅದಕ್ಕಾಗಿ ತೆಪ್ಪಗಿದ್ದಳು.

ಅವಳು ಅಡಿಗೆ ಮಾಡಲು ಹೋದಾಗ ಜೇಬುಗಳಲ್ಲಿ ತುಂಬಿಕೊಂಡು ಬಂದಿದ್ದ ಕಲ್ಲುಗಳನ್ನೆಲ್ಲ ಮಣ್ಣಿನ ಕೊಪ್ಪರಿಗೆಯಲ್ಲಿ ಹಾಕಿದ.

"ಕಲ್ಲುಗಳ ಮಧ್ಯೆ ಕೆಂಪು, ಪಚ್ಚೆ ಬೋ ಬೆಲೆ ಬಾಳೋ ಹರಳು ಸಿಕ್ಕತ್ವೆತೆ. ಎಷ್ಟು ಮಂದಿ ಕೋಟ್ಯಾಧೀಸರಾಗಿದ್ದಾರೋ ನನ್ನ ಜಮಾನದಲ್ಲಿ." ವಿರೂಪಾಕ್ಷಿ ಇಂಥ ಮಾತುಗಳನ್ನು ಆಗಾಗ ಉದುರಿಸುತ್ತಿದ್ದ. ಇವನ ಜಮಾನ ಯಾವಾಗೆಂದು ನಿರ್ದಿಷ್ಟವಾಗಿ ಯಾರಿಗೂ ಗೊತ್ತಿರಲಿಲ್ಲ. ಯುವಕರು ಸಾಹಸಕ್ಕೆ ಕೈ ಹಾಕಿ

ಹೋತು ಸುಮ್ಮನಾಗಿದ್ದರೆ, ತೀರಾ ವಯಸ್ಸಾದ ಹಿರಿಯರು ತಲೆದೂಗುತ್ತಿದ್ದರು. ಕೆಲವು ಕತೆಗಳಿಗಂತೂ ರೆಕ್ಕೆ ಪುಕ್ಕ ಹುಟ್ಟಿಕೊಂಡು ಅದ್ಭುತವಾಗಿದ್ದವು. ಕೇಳಲು ಅತ್ಯಂತ ರೋಚಕ.

ಬಾಗಿಲ ಬಳಿ ಶಬ್ಧ ಕೇಳಿ ಇಬ್ಬರು ಒಮ್ಮೆಲೇ ತಿರುಗಿದರು. ಉದ್ದಕ್ಕೂ ನಿಂತಿದ್ದ ಸಾಗರ್ ಅವನನ್ನ ಬರುವಂತೆ ಸನ್ನೆ ಮಾಡಿದ. ಚಿರತೆ ಬಂದು ಬಾಗಿಲಲ್ಲಿ ನಿಂತಂತೆ ಮುರುಟಿ ನಿಂತ ಕಲ್ಲೇಶಿ. ಇದರಿಂದ ಹೇಗೆ ತಪ್ಪಿಸಿ ಕೊಳ್ಳುವುದು ಎಂದು ಒಂದು ಕ್ಷಣ ಯೋಚಿಸುವ ಮುನ್ನವೇ ಪಂಜಾಗಳನ್ನ ಬೀಸಿದಂತಾಯಿತು. ತಪ್ಪಿಸಿಕೊಂಡು ಬೇರೆಡೆ ಉರುಳಿದಂತಾಯಿತು.

"ಬಾರೋ...ಇಲ್ಲಿ" ಕೂಗಿದ.

ಅವನು ನಿಂತ ಜಾಗ ಬಿಟ್ಟು ಅಲ್ಲಾಡದಿದ್ದರೂ ಬೇಗ ಚೇತರಿಸಿಕೊಂಡ. "ಅಕ್ಕ, ಇವ್ರು ಅಯ್ಯನೋರ ಮನೆಗ್ಳಂದ ನೆಂಟರು. ಅಮ್ಮಾವ್ರು ಹೇಳಿ ಕಳಿಸಿರಬೇಕು, ನೋಡ್ಕೊಂಡ್ಬರ್ಲ" ಗೌರಿಯತ್ತ ನೋಟ ಹರಿಸಿದ. ಚಿರತೆ ತನ್ನ ತಮ್ಮನ ಮೇಲೆ ಹಾರಿಯೇ ಬಿಡುತ್ತೆ ಎನ್ನುವ ಸ್ಥಿತಿಯಲ್ಲಿದ್ದವಳಿಗೆ ಕಲ್ಲೇಶಿಯ ಮಾತುಗಳು ಅವಳ ಕಿವಿಗೆ ಬೀಳಲಿಲ್ಲ.

ತಲೆ ತಗ್ಗಿಸಿಕೊಂಡು ಒಳಕ್ಕೆ ಬಂದ ಸಾಗರ್ "ನಿನ್ನ ತಮ್ಮನ್ನ ಸ್ವಲ್ಪ ಹೊತ್ತು ಕರ್ಕೊಂಡ್ಹೋಗಿ, ಕರ್ಕೊಂಡ್ಬಂದು ಬಿಡ್ತೀನಿ. ಹೆದರಬೇಡ" ಹೇಳಿದ. ಅವಳ ಕಣ್ಣಲ್ಲೇನು ಭರವಸೆ ಮೂಡಲಿಲ್ಲ. ಎರಡು ಕೈ ಜೋಡಿಸಿದಳು.

"ಅವ್ನಿಗೆ ಕಲ್ಲುಗಳ ಬಗ್ಗೆ ಏನು ಗೊತ್ತಿಲ್ಲ" ಬಿಕ್ಕಲಿನೊಂದಿಗೆ ಹೇಳಿದರೂ ಪದಗಳು ಸ್ಪಷ್ಟವಾಗಿತ್ತು "ನಂಗೂ....ಗೊತ್ತಿಲ್ಲ ! ಇವನನ್ನೇನು ಮಾಡೋಲ್ಲ. ನಿನ್ನ ಅಡ್ಗೆ ಮುಗ್ಯೋ ವೇಳೆಗೆ ಖಂಡಿತ ಕಳಿಸ್ತೀನಿ" ಎಂದು ಅವನ ರೆಟ್ಟೆ ಹಿಡಿದು ಕರೆದೊಯ್ಯುತ್ತಿರುವ ದೃಶ್ಯವನ್ನು ನೋಡುತ್ತ ನಿಂತಳು.

ಹೊಳೆಯ ಸನ್ನಿಹಕ್ಕೆ ಬಂದಾಗಲೇ ಕಲ್ಲೇಶಿಯ ರೆಟ್ಟೆ ಬಿಟ್ಟಿದ್ದು "ಯಾಕೋ ಓಡಿದ್ದು? ನಾನೇನಾದ್ರೂ ಭೂತವಾಗಿ ಕಂಡ್ನಾ?" ಅಲ್ಲೇ ಉಸುಕಿನ ಮೇಲೆ ಕೂಡಿಸಿಕೊಂಡು ಕೂತ.

ಕಲ್ಲೇಶಿ ಬಳ ಬಳ ಅತ್ತ. ಅಷ್ಟೇ ಬೇಗ ಸಮಾಧಾನ ಮಾಡಿಕೊಂಡ. "ನೀನೇ ಹೇಳಣ್ಣ, ಎಷ್ಟು ದಿನ ನಾವು ಹೀಗೇ ಬದ್ಕೋದು?" ಅವನ ಪ್ರಶ್ನೆಗೆ 'ವಾಹ್' ಎಂದುಕೊಂಡ. ಕೋಟ್ಯಾಧೀಶರಿಂದ ಹಿಡಿದು ಎರಡು ಹೊತ್ತು ಗಂಜಿಗೆ ಇಲ್ಲದ ಜನ ಕೂಡ ಒಂದಲ್ಲ ಒಂದು ಸಲ ಈ ಪ್ರಶ್ನೆಯನ್ನು ತಮ್ಮ ಮನಸ್ಸು ಸಮಾಧಾನಕ್ಕೋ, ಬೇರೆಯವರ ಸಲುವಾಗಿಯೋ ಹಾಕಿ ಕೊಳ್ಳುತ್ತಾರೆ. ಕಾರಣಗಳು ಡಿಫರೆಂಟಾಗಿರುತ್ತೆ ಅಷ್ಟೆ.

ಕೈ ಹಿಡಿದು ಹತ್ತಿರ ಕೂಡಿಸಿಕೊಂಡು ಕೆನ್ನೆ ಸವರಿದ, ತಲೆಕೆದರಿದ "ನಿನ್ನ ವಯಸ್ಸಿನಲ್ಲಿ ನಂಗೂ ಹೀಗೇ ಅನ್ನಿಸಿದ್ದುಂಟು" ಕೈಯೆತ್ತಿ ಗಾಳಿಯಲ್ಲಿ ಆಡಿಸಿದ "ಯಾರ್‍ಗೂ ಅರ್ಥವಾಗದ್ದು ಕೆಲವಿದೆ. ವಿಜ್ಞಾನಿಗಳು ತಮ್ಮ ಮಿದುಳಿಗೆ ತಾವೇ ಶಭಾಷ್‌ಗಿರಿ ಕೊಟ್ಕೋಬಹ್ದು. ದೊಡ್ಡ ದೊಡ್ಡ ಅವಾರ್ಡ್‌ಗಳ್ನ ತಗೋಬಹ್ದು. ಆದರೆ ಮನುಷ್ಯನಲ್ಲಿ ಉದ್ಭವಿಸುವ ನಿರಂತರವಾಗಿ ಕಾಡುವ ಎಷ್ಟೋ ಪ್ರಶ್ನೆಗಳಿಗೆ ಅವರಲ್ಲಿ ಕೂಡ ಉತ್ತರ ಇಲ್ಲ." ಬಹಳ ಒಗಟಾಗಿ ಗಂಭೀರವಾಗಿ ಮಾತಾಡಿದ ಆ ಹುಡುಗನ ಮುಂದೆ. ಅದನ್ನ ಮಾತಾಡಿದ್ದು ತಾನೇನಾ ಅನ್ನುವ ಅನುಮಾನ ಕೂಡ.

ಕಲ್ಲೇಶಿ ಮೌನವಾಗಿ ಕೂತಿದ್ದವನು ಮಾತಾಡಿದ.

"ಅಣ್ಣ, ನೀನು ಕೆಂಪು ಕಲ್ಲು ಪಚ್ಚೆ ಹರಳುಗಳ್ನ ಹುಡ್ಕಿಕೊಂಡು ಬಂದಿದ್ದೀಯಾ?" ನಕ್ಕುಬಿಟ್ಟ ಸಾಗರ್ ಹೊಳೆಯ ಕಡೆ ನೋಟ ಹರಿಸಿದ. ತನ್ನನ್ನು ತಡೆದು ನಿಲ್ಲಿಸಿದ್ದು, ಬಸ್ಸಿನಿಂದ ಇಳಿಸಿದ್ದು ಯಾವುದು? ಹರಿಯುತ್ತಿದ್ದ ಹೊಳೆಯಾ, ಅಥವಾ ಈ ಬಂಡೆಗಳ ಸಮೂಹವಾ? ತಲೆ ಕೊಡವಿ ಮೇಲೆದ್ದ. ನಾಲ್ಕು ಸುತ್ತು ಓಡಾಡಿದವನು "ಹಾಗಂದ್ರೇನು? ಅವುಗಳಿಂದ ಏನು ಉಪಯೋಗ" ಅವನನ್ನ ಕೇಳಿದ.

ಕಲ್ಲೇಶಿ ಕಣ್ಣು ಮಿಟುಕಿಸದೇ ನೋಡಿದ. ಅದರಲ್ಲಿ ಸತ್ಯವಿದೆಯೋ, ಎಂದು ಅರಿಯುವ ಕುತೂಹಲ. ಆ ಕುತೂಹಲಕ್ಕೆ ಯಾವುದೇ ಇಂಬು ಸಿಗಲಿಲ್ಲ.

"ನಂಗೆ ಅನುಮಾನ ! ಈ ಬಂಡೆಗಳ ನಡ್ವೇ ತುಂಬ ಬೆಲೆ ಬಾಳೋ ಕೆಂಪು, ಪಚ್ಚೆ ಹರಳುಗಳು ಸಿಕ್ಕುತ್ತಂತೆ. ಎಷ್ಟೋ ಜನ ಅದ್ರಿಂದ ಕೋಟ್ಯಾಧೀಶ ರಾಗಿ ಊರು ಬಿಟ್ಹೋದ್ರಂತೆ. ನಮ್ಮಪ್ಪ ಹುಡ್ಕಿ....ಹುಡ್ಕಿ...ಏನೂ ಸಿಗ್ದೇ ಸತ್ತ. ಆಗಾಗ ಪ್ಯಾಟೆಗೆ ಹೋಗ್ಬರೋನು. ಯಾರಾದ್ರೂ ಮೋಸ ಮಾಡಿದ್ರೇನೋ, ಕುಡಿದಾಗ ಏನೇನೋ ವದರಾಡೋನು. ನಂಗೇನು ಅರ್ಥವಾಗ್ತ ಇರ್‍ಲಿಲ್ಲ." ಮನ ಬಿಚ್ಚಿ ತೋಡಿಕೊಂಡ ನಂಬಿಕೆಯಿಂದ ಕಲ್ಲೇಶಿ.

ಸಾಗರ್ ಎಷ್ಟು ಕೇಳಿದನೋ, ಎಷ್ಟು ಬಿಟ್ಟನೋ, ಮೌನವಾಗಿಯಂತು ಇದ್ದ.

ಪಟಪಟ ಎಂದು ಎರಚಿದಂತೆ ನಾಲ್ಕು ಹನಿ ಉದುರಿದಾಗ ಕಲ್ಲೇಶಿ ತಲೆಯೆತ್ತಿ ಆಕಾಶದ ಕಡೆ ನೋಡಿದ. ಸೂರ್ಯ ಮೋಡಗಳ ಮರೆಯಲ್ಲಿ ಆಟವಾಡುತ್ತಿದ್ದರು, ಮುಗಿಲು ಮಳೆ ಸುರಿಸಲು ಸಂಭ್ರಮಗೊಂಡಂತಿತ್ತು.

"ಅಣ್ಣಾ, ಮಳೆ ಗಟ್ಟಿಯಾಗಿಯೇ ಬರುತ್ತೆ" ಹನಿಗಳಿಗೆ ಕೈಯಾಡಿಸಿ ಹೇಳಿದ

ಕಲ್ಲೇಶಿ "ಮಳೆ ಬರೋಕು, ಬಿಸ್ಲು ಕಾಯೋಕು ನಿನ್ನ ಪರ್ಮಿಷನ್ ಬೇಕಿಲ್ಲ" ಉದಾಸೀನವಾಗಿ ನುಡಿದ.

ಹನಿಗಳು ರಪರನೆ ಎರಚಿದಂತೆ ಬೀಳತೊಡಗಿದಾಗ, ವಾಲಿದ ಬಂಡೆಯ ಕೆಳಗೆ ಹೋಗಿ ಕೂತ ಕಲ್ಲೇಶಿ "ಸುಮ್ನೆ ಮಳೆಯಲ್ಲಿ ಯಾಕೆ ನೆನೀತೀಯಾ? ನಿನ್ಹತ್ರ ಹಾಕಿಕೊಳ್ಳೋಕೆ ಇನ್ನೊಂದ್ಜೊತೆ ಬಟ್ಟೆಗಳಿಲ್ಲ" ಕೂಗಿ ಹೇಳಿದ.

ನೆನಪುಗಳ ಭಾರ ಹೊತ್ತ ಸಾಗರ್ ಅಲ್ಲಿಂದ ಸರಿಯಲಿಲ್ಲ. ಅವುಡುಗಳು ಬಿಗಿಯಾದವು. ಮತ್ತೆ ನಿಧಾನವಾಗಿ ಸಡಿಲವಾಗುವ ವೇಳೆಗೆ ಪೂರ್ತಿಯಾಗಿ ನೆಂದಿದ್ದ.

ಕಲ್ಲೇಶಿಗೆ ತೀರಾ ಆಶ್ಚರ್ಯವಾಗಿ ಕಂಡಿತು. ಇನ್ನಷ್ಟು ಮುದುರಿ ಕೂತ. ಈ ಅನುಭವಗಳೆಲ್ಲ ಅವನಿಗೆ ಹೊಸದಲ್ಲ. ಭಯವೆನಿಸಿದ್ದು ಕೂಡ ಇಲ್ಲ. ರಾತ್ರಿ ಹೊತ್ತಿನಲ್ಲು ಕೂಡ ಭೀತಿಯನ್ನ ಮರೆತು ಅಡ್ಡಾಡಬಲ್ಲ.

"ಕ...ಲ್ಲೇಶಿ" ಗೌರಿಯ ಸ್ವರ ಕೇಳಿಸಿದ ಕಡೆ ತಿರುಗಿದ ಸಾಗರ್‌ಗೆ ಮೊದಲ ಸಲ ಒಂದಿಷ್ಟು ಕರುಣೆಯುಕ್ಕಿತು. ಕಲ್ಲೇಶಿಯ ರೆಟ್ಟೆ ಹಿಡಿದು ಎಳೆದೊಯ್ದು ಅವಳ ಮುಂದೆ ತಳ್ಳಿದ. "ಯಾಕ...ಭಯ? ನಾನು ಕರ್ಕೊಂಡ್ಬರ್ತೀನೀಂತ ಹೇಳಿದ್ನಲ್ಲ. ಹೋಗೋ...ಹೋಗೋ" ರೇಗಿದ. ಅವನ ಕೈ ಹಿಡಿದು ಎಳೆದೊಯ್ಯುತ್ತಿದ್ದ ಗೌರಿ ಎರಡು ಮೂರು ಸಲ ಹಿಂದಿರುಗಿ ನೋಡಿದಳು. ಅವಳ ಕಣ್ಣುಗಳಲ್ಲಿ ಅಸ್ಪಷ್ಟವಾದ ಅರ್ಥೈಯಿಸಿಕೊಳ್ಳಲಾರದಂಥ ಕಠಿಣ ಭಾವವಿತ್ತು. ಅದು ತಿರಸ್ಕಾರವಾ ಎನಿಸಿತು ಒಂದು ಕ್ಷಣ.

ಸಾಕಷ್ಟು ನೆಂದ. ಹೊಳೆಯ ರಭಸ ಜಾಸ್ತಿ ಆಯಿತು. ಹುಚ್ಚನಂತೆ ಅಲೆ ದಾಡಿದ. ತೀರಾ ಬಟ್ಟೆಗಳು ಅಂಟಿಕೊಂಡು ಸಾಧ್ಯವೇ ಇಲ್ಲವೆನಿಸಿದಾಗ ಬ್ಯಾಗು ಜ್ಞಾಪಿಸಿಕೊಂಡು ಬಿಳಿಗಿರಿಯವರ ಮನೆಯ ಕಡೆ ನಡೆದ. ತನ್ನ ಬಗ್ಗೆ ಅವರಿಗೆಂಥ ಭಾವವಿದೆಯೆನ್ನುವುದನ್ನ ಖಂಡಿತ ಯೋಚಿಸಲಾರ.

ಒಳ ಬಾಗಿಲಿನಲ್ಲಿ ನಿಂತ ತಿರುಮಲಾಂಬ ನಿಟ್ಟುಸಿರು ದಬ್ಬಿ ಬಂದವನಿಗೆ ಒಂದು ಟವಲು ಕೊಟ್ಟು "ಹೋಗಿ ಬದಲಾಯಿಸ್ಕೋ" ಎಂದರು. ಪಟಪೋಶಿಯಾಗಿ ತಿರುಗುವ ಅವನ ಬಗ್ಗೆ ಅನುಕಂಪ. ಸಾಕಷ್ಟು ಜೀವನ ಮುಂದಿಟ್ಟುಕೊಂಡು ಅಪಾಯಕ್ಕೆ ಒಳಗಾಗುವುದು ಸೃಷ್ಟಿಯ ದೊಡ್ಡ ದುರಂತ ಎನ್ನುವುದು ಆಕೆಯ ಅಭಿಪ್ರಾಯ.

ಬಟ್ಟೆ ಬದಲಾಯಿಸಿಕೊಂಡ ಬಂದ ನಂತರವು ಕೂದಲಿನಿಂದ ಇಳಿಯುತ್ತಿದ್ದ ನೀರನ್ನ ನೋಡಿ ಇನ್ನೊಂದು ಟವಲು ತಂದು ತಾವೇ ಒರೆಸಿದ ತಿರುಮಲಾಂಬ

"ಬೇರೆ ಕಡೆ ಬಂದ್ಮೇಲೆ ಇನ್ನಷ್ಟೂ ಎಚ್ಚರವಾಗಿ ಇರ್ಬೇಕು" ಎಚ್ಚರದ ಮಾತನ್ನ ಹೇಳಿದರು. ಮಾತು, ಒರೆಸುವಿಕೆ ಎರಡು ಹಿತವಾಗಿತ್ತು ಅವನಿಗೆ. ಇದೊಂದು ಅಪರೂಪದ ಅನುಭವವೇ.

ಮಾಡಿಟ್ಟ ಕಾಫಿಯನ್ನು ಬಿಸಿ ಮಾಡಿಕೊಂಡು ಬಂದು ಅವನ ಮುಂದಿಟ್ಟರು. ಎಷ್ಟೇ ಕುತೂಹಲವಿದ್ದರೂ ಅವನ ಒರಟು ಮುಖ, ಭಾವರಹಿತವಾದ ಕಣ್ಣುಗಳನ್ನ ನೋಡಿ ಏನು ಕೇಳಲು ಇಚ್ಛಿಸಿರಲಿಲ್ಲ. ಅವನು ಕಾಫಿ ಕುಡಿಯುವವರೆಗೂ ಕಾದರು.

"ನಿನ್ನ ಹೆಸರೇನು ?" ಕೇಳಿದರು.

ಒಂದೇ ಸಮ ಸುರಿದ ವರ್ಷ ಅವನನ್ನ ತೋಯಿಸಿ ಮೃದು ಮಾಡಿತ್ತೋ, ಪರಿಸ್ಥಿತಿ ಮೆತ್ತಗಾಗಿಸಿತ್ತೋ ಅಂತು ಬಾಯಿ ಬಿಟ್ಟ "ಸಾಗರ್...."

ತಿರುಮಲಾಂಬ ಅವನನ್ನೇ ನೋಡಿದರು. ಮುಖದಲ್ಲಿನ ಒರಟುತನ, ಕಣ್ಣುಗಳಲ್ಲಿನ ಕ್ಷೋಭೆಯ ಹಿಂದೆ ಒಂದು ಕತೆ ಇದೆಯೆನಿಸಿತು. ಅವನೊಬ್ಬನದು ಮಾತ್ರವಲ್ಲ, ಎಲ್ಲರ ಬದುಕು ಒಂದು ಕತೆಯೇ. ಹೆಚ್ಚು ವ್ಯಕ್ತಿಗಳ ಪ್ರವೇಶದಿಂದ ಕತೆಯ ವ್ಯಾಪ್ತಿ ಹಿಗ್ಗಿ ಕಾದಂಬರಿಯಾಗಬಹುದಷ್ಟೆ. ಕೆಲವೊಮ್ಮೆ ಮೂರು ಪಾತ್ರಗಳೇ ದೊಡ್ಡ ಕಾದಂಬರಿಯಾಗದರೂ, ಸೊರಗುವುದು ಸಹಜ.

"ಹೆಸರು ತುಂಬ ಚೆನ್ನಾಗಿದೆ. ನನ್ಮಗನ ಹೆಸರು ಶ್ರೀನಿವಾಸ. ದೊಡ್ಡ ದೊಡ್ಡ ಹರಕೆಗಳ್ನ ಹೊತ್ತ ನಂತರ ಹುಟ್ಟಿದ ಏಕೈಕ ಸಂತಾನ. ಮೊದ್ಲು ಚೆನ್ನಾಗೇ ಇದ್ದ. ನಮ್ಗೂ ನೂರು ಕನಸ್ಸಿತ್ತು. ಒಂದು ನನಸು ಆಗ್ಲಿಲ್ಲ. ಎಲ್ಲಿ...ಹೋದ್ನೋ! ಇಂದೋ, ನಾಳೆಯೋ ಬರಬಹುದೂಂತ ಕಾಯ್ತಾ ಇದ್ದೀವಿ. ಕಾಯೋದರಲ್ಲು ಹಿತವಿದೆ. ಅದ್ಬಿಟ್ರೆ ನಮ್ಗೇನಿದೆ?" ಆಕೆ ಕಣ್ಣೀರು ಒರೆಸಿಕೊಂಡರು. ಅವರಿಗೆ ಮಗನ ವಿಷಯ ಬಿಟ್ಟು ಬೇರೆ ಮಾತುಗಳೇ ಇಲ್ಲವೆನಿಸುತ್ತಿತ್ತು.

ನಿಶ್ಶಬ್ದವಾಗಿ ಆಲಿಸಿದ. ಏನು ಹೇಳಬೇಕೆನಿಸಲಿಲ್ಲ. ಅಕಸ್ಮಾತ್ ಏನಾದರೂ ಹೇಳಿದರೂ ಒರಟಾಗುತ್ತಿತ್ತು. ಆಗ ನೋಯುತ್ತಿದ್ದರು. ಈಗ ತುಟಿಗಳು ಭದ್ರವಾಗಿ ಕೂತಿದ್ದರಿಂದ ಒಂದು ಅಪಾಯವೇ ತಪ್ಪಿತು.

"ಬೇಜಾರು ಮಾಡ್ಕೋಬೇಡ. ಜೀವವಿದ್ದರೇ ಒಂದಲ್ಲ...ಒಂದು ಕಾಲಕ್ಕಾದ್ರೂ ನ್ಯಾಯವಾಗಿ ಹಣ ಸಂಪಾದಿಸ್ಕೋಬಹ್ದು. ಜೀವ ಒತ್ತೆ ಇಟ್ಟು ಹಣ ಸಂಪಾದಿಸೋದ್ಬೇಡ. ನಿಂಗೆ ಪಚ್ಚೆ, ಕೆಂಪುಗಳ ವ್ಯಾಮೋಹ ಬೇಡ. ಎಲ್ಲಾ ಬರೀ ಕತೆಗಳೇ. ಯಾರ್ಗೂ ಕೆಂಪು, ಪಚ್ಚೆಗಳು ಸಿಕ್ಕಿದ್ದು ಗೊತ್ತಿಲ್ಲ?" ವಿಸ್ತಾರವಾದ ಪೀಠಿಕೆ ಹಾಕಿದರು.

ಅರ್ಥವಾಗದವನಂತೆ ಮುಖ ಮಾಡಿ ತಲೆ ಕೊಡವಿದ ವಿಷಯ ಗೊತ್ತಿಲ್ಲ ವೆನ್ನುವಂತೆ. ಈಗ ಕಲ್ಲೇಶಿಗೆ ಕಲ್ಲುಗಳ ಮೇಲಿದ್ದ ವ್ಯಾಮೋಹ ಯಾಕೆಂದು ಬಹುಶಃ ದೊಡ್ಡ ದೊಡ್ಡ ಕಲ್ಲು ಬಂಡೆಗಳು ಕೂಡ ಬೆಲೆ ಬಾಳುವ ಕೆಂಪು ಪಚ್ಚೆಗಳಾದರೂ ಅವನಿಗೇನು ಅನ್ನಿಸದು.

"ಹಾಗಾದ್ರೆ, ನೀನು ಕಲ್ಲುಗಳ ನಡ್ವೇ ಹುಡುಕಾಟ ನಡ್ಸೋಕೆ...ಬಂದಿಲ್ವಾ? ನಾವು ಇಲ್ಲಿಗ್ಬಂದು ನೆಲೆ ನಿಂತ್ಮೇಲೆ ಎರ್ಡು ಹೆಣಗಳು ಬಿದ್ವು. ಊರಿನ ಜನ ಕೂಡ ಆ ಕಡೆ ಹೋಗೋದು ಕಮ್ಮಿ. ಆದರೆ ಈ ಕಲ್ಲೇಶಿ ಯಾರ್ಮಾತಾದ್ರೂ ಕೇಳಿದ್ರೆ....ತಾನೇ, ಮೂರ್ಹೊತ್ತು ಅಲ್ಲೇ ತಿರುಗಾಡ್ತಾನೆ. ಭಯದಿಂದ ಗೌರಿ ಜೀವ ಬಿಗಿ ಹಿಡ್ಕೊಂಡಿದ್ದಾಳೆ" ವಿವರವಾಗಿ ಅವನ ಮುಂದೆ ಬಿಡಿಸಿಟ್ಟರು.

"ಇದು ಯಾವ್ದೂ ನಂಗೆ ಗೊತ್ತಿಲ್ಲ!" ಎಂದ ಸ್ಪಷ್ಟವಾಗಿ.

ತಿರುಮಲಾಂಬ ಹರಡಿರುವ ಎಷ್ಟೋ ಕತೆಗಳನ್ನ ಹೇಳಿದರು. "ನೀನು ಒಂಟೊಂಟಿಯಾಗಿ ಅಲ್ಲೆಲ್ಲ ತಿರುಗಾಡ್ಬೇಡ. ಹತ್ತಿರದಲ್ಲಿ ನಿಂಗೆ, ಯಾರಾದ್ರೂ ಬಂಧುಗಳು ಇದ್ದಾರ ? ಹಿಂದೆ ಎಂದಾದ್ರೂ ಇಲ್ಲಿಗೆ ಬಂದಿದ್ಯಾ ?"

"ಎರ್ಡೂ...ಇಲ್ಲ" ಎಂದ ನೇರವಾಗಿ.

ಮತ್ತೆ ಏಕೆ ಇಲ್ಲಿಗೆ ಬಂದಿದ್ದಾನೆ, ಇದ್ದಾನೆ? ಬಹುಶಃ ಸುಳ್ಳು ಹೇಳುತ್ತಿರ ಬಹುದಾ? ಯಾಕೋ, ಏನೋ ಸಾಗರ್‌ನ ಮುಖ ನೋಡಿ ಹಾಗೆನಿಸಲಿಲ್ಲ.

"ಎಷ್ಟು ದಿನ ಇರ್ತೀಯಾ ?" ಕೇಳಿದರು.

"ಗೊತ್ತಿಲ್ಲ..." ಕೈಯಾಡಿಸಿಬಿಟ್ಟ.

ಇದು ತೀರಾ ವಿಚಿತ್ರವಾಗಿ ಕಂಡಿತು. ಆಕೆ ಭಯಗೊಂಡರು. "ಬೇಡಪ್ಪ ಸಾಗರ್, ನೀನು ಈಗಿಂದಿಗ್ಲೇ ಹೊರಟುಬಿಡು. ನೀನು ಓಡಾಡೋ ಜಾಗ ಕ್ಷೇಮವಲ್ಲ. ನೆಂಟರಿಷ್ಟರು ಇಲ್ದ ಕಡೇ ಯಾಕೆ ಇರ್ತೀಯಾ?" ಬುದ್ಧಿ ಹೇಳಿದರು.

"ಈಗ ಹೋಗೋಲ್ಲ. ಯಾವಾಗ ಹೋಗ್ತೀನೋ ಗೊತ್ತಿಲ್ಲ" ಎಂದು ಮೇಲೆದ್ದು ಹೋಗಿ ಬಾಗಿಲಲ್ಲಿ ನಿಂತ. ಒಂದೇ ಸಮನೇ ಮಳೆ ಸುರಿಯುತ್ತಿತ್ತು. ಮಳೆ, ಹೊಳೆ ಬಂಡೆಗಳ ಅನನ್ಯ ಸಂಬಂಧಕ್ಕೆ ಹರ್ಷಿತನಾಗಿದ್ದ. ಬರುವ ವರ್ಷಕ್ಕೆ ಬಾಯಿ ತೆರೆಯುವ ಹೊಳೆಯ ಸಂಭ್ರಮ ಸಡಗರ, ಆನಂದೋತ್ಸಾಹ ಪ್ರಕೃತಿಯ ಒಂದು ಅದ್ಭುತ ಕೊಡುಗೆಯೆನಿಸಿತು. ಭೂಮಿಯತ್ತ ಧಾವಿಸುವ ಮಳೆ, ಅದಕ್ಕಾಗಿ ತವಕಿಸುವ ಭೂಮಿ, ಇವೆರಡಕ್ಕೆ ರಾಯಭಾರ ವಹಿಸುವ ಪ್ರಕೃತಿ. ಜಗತ್ತಿನಲ್ಲಿ ಮನುಷ್ಯ ಅರಿಯಬೇಕಾದ ಗೂಢವಾದ ವಿಚಾರಗಳು ಬೇಕಾದಷ್ಟಿದೆಯೆನಿಸಿತು ಮೊದಲ ಸಲ. ಒಂದು ರೀತಿಯ ಜ್ಞಾನೋದಯ.

ನಿಮಿಷಗಳು ಗಂಟೆಗಳಾಯಿತು. ಸುರಿಯುತ್ತಿರುವ ಮಳೆಯೇನು ನಿಲ್ಲಲಿಲ್ಲ. ತಿರುಮಲಾಂಬ ಮನಸ್ಸಿನಲ್ಲಿ ಭಯ ಆವರಿಸತೊಡಗಿತು. ದೂರ... ದೂರ...ಮನೆಗಳು...ತಾನು ಇರುವುದು ಒಂಟಿಯಾಗಿ. ಅಷ್ಟಿಷ್ಟು ಒಡವೆ ಆಸೆಗಾಗಿ ತನ್ನನ್ನು ಕೊಂದು ದೋಚಿಕೊಂಡು ಹೋದರೇ, ಇಂಥ ಭಯ ಬಂದದ್ದುಂಟು. ಹಿಂದೆಯೇ ತಳ್ಳಿ ಹಾಕುತ್ತಿತ್ತು ಹೃದಯ.

"ಸಾಗರ್, ನಿನ್ನ ಮನಸ್ಸಿನಲ್ಲಿ ಏನಾದ್ರೂ ದುರುದ್ದೇಶ ಇಟ್ಕೊಂಡ್ ಇದ್ದರೇ, ಬಿಟ್ಟುಬಿಡು. ಒಡ್ವೆ ಅಂಥದೇನಾದ್ರೂ ತಗೊಂಡ್ಹೋಗು. ಜೀವ ಮಾತ್ರ ತೆಗೀಬೇಡ" ಇವು ಇಷ್ಟು ಹೇಳಬೇಕೆಂದುಕೊಂಡ ಮಾತುಗಳು ಕೂಡ ಹೊರ ಬರಲಿಲ್ಲ. ಆದರ ಬದಲು "ಕುಂದಣಕ್ಕೆ ಹೋದವ್ರು ಇನ್ನ ಬರ್ಲಿಲ್ವಲ್ಲ, ಎಲ್ಲಿ ಮಳೆಗೆ ಸಿಕ್ಕಿ ಹಾಕ್ಕೊಂಡ್ರೋ?" ಎಂದರು ಜೋರಾಗಿ.

ಒಮ್ಮೆ ಹಿಂದಿರುಗಿ ನೋಡಿದ ತಿರುಮಲಾಂಬನ ಅಕ್ಕರೆಯಿಂದ ಕೂಡಿಸಿ ಊಟ ಹಾಕಿದ್ದರು, ತನ್ನಂಥ ಅಪರಿಚಿತನಿಗೆ. ಅಧಿಕಾರದಿಂದ ಬುದ್ಧಿ ಹೇಳಿದ್ದರು. ಯಾಕೆ?

ಬೆರಗು ಗಣ್ಣುಗಳಿಂದ ದಿಟ್ಟಿಸಿದರು ಆಕೆ.

ಮೂಲೆಯಲ್ಲಿ ಮಳೆಯೊಡೆದು ತಗುಲಿ ಹಾಕಿದ್ದ ಕೊಡೆಯನ್ನೆತ್ತಿ ಕೊಂಡವನೇ, ತೊಟ್ಟಿಕ್ಕುತ್ತಿದ್ದ ತನ್ನ ಜಾಕೆಟ್‌ನ ಮೇಲೆ ಹಾಕಿಕೊಂಡು ಹೊರಟೇಬಿಟ್ಟ.

ಊರನ್ನ ಹೊಕ್ಕವನೇ ಅಲ್ಲ. ಈಗ ನಿಂತು ಎತ್ತ ಹೋಗಬೇಕೆಂದು ಯೋಚಿಸಿದ. ಅವನು ಬಸ್ಸಿನಿಂದ ಇಳಿದು ಬಂದಿದ್ದು ಅಡ್ಡ ದಾರಿ. ಗಿಡಗಂಟೆ ಕಲ್ಲು ಮುಳ್ಳುಗಳ ನಡುವೆ ಹಾದು ಬಂದು ಹೊಳೆಯ ಬದಿಯನ್ನ ತಲುಪಿದ್ದ. ಆದರೆ ಬಸ್ಸು ನಿಲ್ಲುವುದಕ್ಕೆ ಒಂದು ನಿರ್ದಿಷ್ಟವಾದ ದಾರಿ ಇದೆಯೆನಿಸಿತು.

ರೋಡುನ ಉದ್ದಕ್ಕೂ ನಡೆಯತೊಡಗಿದ.

"ನಿಂತ್ಕೋಪ್ಪ...." ದನಿ ಬಂತು.

ತೊಯ್ದು ತೊಪ್ಪೆಯಾದ ಬಿಳಿಗಿರಿಯವರು ಒಂದು ಬ್ಯಾಗ್ ಹಿಡಿದು ಬರುತ್ತಿದ್ದರು. ಅವರ ಕೈಯಲ್ಲಿನ ಬ್ಯಾಗ್ ಕಿತ್ತುಕೊಂಡು, ಭುಜದ ಮೇಲೆ ಹಾಕಿಕೊಂಡ ಜಾಕೆಟ್‌ನ ಅವರಿಗೆ ಹೊದ್ದಿಸಿ, ತಲೆಯ ಮೇಲೆ ಕೊಡೆ ಹಿಡಿದ. ಒಂದು ರೀತಿಯಲ್ಲಿ ಸುರಿಯುವ ಭಯಂಕರವಾದ ಮಳೆಯಲ್ಲಿ ಅವರನ್ನು ನಡೆಸಿಕೊಂಡು ಬಂದ. ಪೂರ್ತಿ ಕೊಡೆ ಅವರ ತಲೆಯ ಮೇಲೆ ಹಿಡಿದಿದ್ದರಿಂದ ಸುರಿಯುವ ಮಳೆಗೆ ಇವನನ್ನು ತೋಯಿಸಲು ಯಾವ ಅಡ್ಡಿ, ಆತಂಕವು ಇರಲಿಲ್ಲ. ಇಂಥ ಅನುಭವಗಳು ತೀರಾ ವಿಶಿಷ್ಟ ಸಾಗರ್‌ಗೆ. ಕೆಲವೊಮ್ಮೆ ತಾನೇ ಹೋಗಿ ಸುರಿಯುವ ಮಳೆಯಲ್ಲಿ ನಿಂತಿದ್ದುಂಟು.

ಇಬ್ಬರನ್ನ ಬಾಗಿಲಲ್ಲಿ ಒಟ್ಟಿಗೆ ನೋಡಿದ ತಿರುಮಲಾಂಬಗೆ ಮಗನ ನೆನಪಾಯಿತು. ಈಗ ಅವನು ತಮ್ಮ ಆಸರೆಗೆ ಇದ್ದಿದ್ದರೇ, ಕಣ್ತುಂಬಿತು.

"ಮುಂಜಾನೆಯಿಂದ್ಲೇ ಮೋಡಗಳು ಇತ್ತು. ಸ್ವಲ್ಪ ಬೇಗ ಬಂದಿದ್ರಾಗಿತ್ತು" ಗೊಣಗುಟ್ಟುತ್ತಲೇ ಟವಲಿಡಿದು ಬಂದು "ಬೇಗ ಬಟ್ಟೆ ಬದಲಾಯ್ಸಿಕೊಳ್ಳಿ. ಈ ಹುಡ್ಗನಂತು ನೆಂದು ತೊಪ್ಪೆಯಾಗ್ತ ಇರೋದು ಎರಡನೆ ಸಲ." ಪೇಚಾಡಿ ಕೊಂಡರು. "ನೀನು ಬಟ್ಟೆ ಬದಲಾಯಿಸ್ಕೋಪ್ಪ, ಸಾಗರ್." ದಢ ಬಢ ಓಡಿಯಾಡಿದರು ಇದ್ದ ಪುಟ್ಟ ಮನೆಯಲ್ಲಿಯೇ.

"ಈಗ ಆಕೆ ಕೊಟ್ಟ ಬಿಳಿಗಿರಿಯವರ ಒಂದು ಪಂಚೆ, ಷರಟು ಧರಿಸಿ ತನ್ನ ಬಟ್ಟೆಗಳನ್ನ ಹಿಂದಿನ ಸೂರಿಗೆ ಅಂಟಿದ್ದ ಮೊಳೆಗೆ ತಗುಲಿ ಹಾಕಿದ. ಹೊಸ ವೇಷ ಅವನಿಗೇನು ಅನ್ನಿಸಲಿಲ್ಲ. ಕಾಶಿಯಲ್ಲಿದ್ದಾಗ ಒಬ್ಬ ಕಾವೀ ಧಾರಿ ಕೊಟ್ಟ ತುಂಡು ಪಂಚೆಗಳಲ್ಲಿ ವಾರಗಳನ್ನು ಕಳೆದಿದ್ದ."

ಒಂದು ಪಾತ್ರೆಯಲ್ಲಿ ಹೊಗೆಯಾಡುವ ಕಾಫಿ ತಂದಿಟ್ಟು, ಎರಡು ಲೋಟಗಳನ್ನ ತಂದಿಟ್ಟವರು, ತಾವೇ ಬಗ್ಗಿಸಿ ಗಂಡನ ಮುಂದೆ ಒಂದು ಇಟ್ಟು, ಹಿಂದಿನ ಕಿಂಡಿಯಂಥ ಕಿಟಕಿಯ ಬಳಿ ನಿಂತು ಹೊರಗೆ ಸುರಿಯುತ್ತಿದ್ದ ಮಳೆಯನ್ನು ನೋಡುತ್ತಿದ್ದ ಸಾಗರ್ ಕರೆದರು.

"ಕಾಫಿ ತಗೋ...ಬಾ."

ಒಂದು ಕೂಗಿಗೆ ಬಂದವನೇ ಪಾತ್ರೆಯ ಮುಂದೆ ಕೂತು ಲೋಟ ಎತ್ತಿಕೊಂಡು ಕುಡಿಯತೊಡಗಿದ. ಕೆಲವೊಮ್ಮೆ ಅವನ ಮಿದುಳು ಯೋಚಿಸದಷ್ಟು ನಿಷ್ಕ್ರೀಯವಾಗುತ್ತಿತ್ತು.

"ಎಂಥ ಮಳೆ ಸುರೀತಾ ಇದೆ, ನೋಡಿ. ಈಚೆಗೆ ಇಂಥ ಮಳೆ ಕಂಡೆ ಇರ್ಲಿಲ್ಲ, ಅಂದ್ಕೊಳ್ಳಿ. ಅಪ್ಪಯ್ಯ ಶಾಸ್ತ್ರಿಗಳು ಸಿಕ್ಕಿದ್ರಾ? ಕುಂದಣಕ್ಕೆ ಹೋದ ಕೆಲ್ಸ ಏನಾಯ್ತು?" ವಿಚಾರಿಸಿದರು ತಿರುಮಲಾಂಬ.

ಬಿಳಿಗಿರಿಯವರು ಸರಿಯಾಗಿ ಕೂತು ಭಾರವಾದ ನಿಟ್ಟುಸಿರು ದಬ್ಬಿದರು. "ಆಕೆ ಬಡಪೆಟ್ಟಿಗೆ ಒಪ್ಪಲ್ಲ. ಅಡ್ವಾನ್ಸ್ ಇಲ್ದೇ ಯಾರ್ರೂ ಮನೆ ಕೊಡೋಲ್ವಂತೆ. ಇಲ್ಲಿ ಅದ್ನೆಲ್ಲ ಯಾರು ಕೊಟ್ಟಾರು! ಬಡ ಮೇಷ್ಟು ಈಗಾಗ್ಲೇ ಮೂರು ಹೆಣ್ಣು ಮಕ್ಳ ಕನ್ಯಾಸೆರೆ ಬಿಡ್ಸಿದ್ದಾನೆ. ಇಂಥದ್ದರಲ್ಲಿ ಮುಂಗಡವಾಗಿ ನಾಲ್ಕು ತಿಂಗ್ಳ ಬಾಡ್ಗೇ ಹಣ ಎಲ್ಲಿಂದ ಕೊಟ್ಟಾನು?" ತಲೆಯಾಡಿಸಿ ಕಾಫಿ ಲೋಟ ನೆಲಕ್ಕಿಟ್ಟರು.

ಹೊಸದಾಗಿ ಬಂದ ಪ್ರೈಮರಿ ಸ್ಕೂಲ್ ಮಾಸ್ಟರ್‌ಗಾಗಿ ಅಪ್ಪಯ್ಯ ಶಾಸ್ತ್ರಿಗಳ ಮನೆಯನ್ನ ಬಾಡಿಗೆಗೆ ಕೇಳಲು ಕುಂದಣಕ್ಕೆ ಹೋಗಿದ್ದರು. ತೀರಾ ಬಾಗಿಲಿಗೆ

ಬೀಗ ಬಿದ್ದು ಬಿಕೋ ಎನ್ನುವ ಮನೆಗೆ ಜನ ಬಂದರೇ ಚೆಂದವೆನಿಸಿತ್ತು. ಆದರೆ ಸರೋಜಮ್ಮ ಕೇಳಬೇಕಲ್ಲ. 'ಅಡ್ವಾನ್ಸ್ ಕೊಡಲಿಕ್ಕೆ ಹಣವಿಲ್ಲದೋರು, ಇನ್ನ ಬಾಡ್ಗೆಯೇನು ಕೊಟ್ಟಾರು? ಹಾಗೇ...ಇಟ್ಕೊಳ್ಳಿ ಬಿಡಿ' ಬಡಿಗೆಯಿಂದ ಹೊಡೆದಂತೆ ಹೇಳಿದಾಗ, ಅಪ್ಪಯ್ಯ ಶಾಸ್ತ್ರಿಗಳು ಮಿಸುಕಾಡಲಿಲ್ಲ. ಆ ಸ್ಥಿತಿಗೆ ಬಂದು ಅವರು ಬಹಳ ವರ್ಷಗಳಾಗಿತ್ತು.

ತಿರುಮಲಾಂಬ ತುಟಿ ತೆರೆಯಲಿಲ್ಲ. ಇಲ್ಲಿಗೆ ಬಂದಾಗಿನಿಂದ ಆಕೆಯನ್ನ ಕಂಡವರೇ. ಬಾಯಿ ಜೋರು. ಆ ಜೋರಿಗೆ ಬಾಯಿ ತೆರೆಯುವಷ್ಟು ಅಪ್ಪಯ್ಯ ಶಾಸ್ತ್ರಿಗಳು ಸಫಲರಾದ ವ್ಯಕ್ತಿಯಲ್ಲ. ಮೆದು ಮನುಷ್ಯ, ಮೃದು ಮಾತು, ಸೌಜನ್ಯಯುತವಾದ ವ್ಯಕ್ತಿತ್ವ. ಇದೆಲ್ಲ ದುರ್ಬಲ ಲಕ್ಷಣಗಳಾಗಿ ಕಂಡಿರಬೇಕು, ಎರಡನೇ ಸಲ ಕೈ ಹಿಡಿದು ಹೊಸಲು ಮೆಟ್ಟಿ ಬಂದು ಯಜಮಾನಿಕೆ ವಹಿಸಿಕೊಂಡ ಹೆಣ್ಣಿಗೆ.

ರಾತ್ರಿಯವರೆಗೂ ಮಳೆ ಬಿಡಲೇ ಇಲ್ಲ. ತಿರುಮಲಾಂಬ ಸಾಗರ್‌ಗಾಗಿ ಒಂದು ಹಾಸಿಗೆ ಬಿಡಿಸಿಕೊಟ್ಟರು. ಅವನಿಗೆ ಹೊರಗೆ ಹೋಗಲು ಕಾತುರ, ಚಡಪಡಿಕೆ. ಸುರಿಯುವ ಮಳೆಯಲ್ಲಿ ಹೊರಗೆ ಹೆಜ್ಜೆ ಇಡುವುದು ಕಷ್ಟವಾಗಿತ್ತು.

ಕಡೆಗೂ ಬ್ಯಾಗು ಎತ್ತಿಕೊಂಡು ಹೊರಟಾಗ ಆಕೆ ತಡೆದರು "ಇಲ್ಲಿ, ಎಲ್ಲಿಗೆ..ಹೋಗ್ತೀಯಾ ? ಬೆಳಿಗ್ಗೆ ಬೇಕಿದ್ದರೆ ಹೋಗು. ಈಗ ಆರಾಮಾಗಿ ಮಲಕ್ಕೋ, ನಮ್ಗೇನು ತೊಂದರೆ ಇಲ್ಲ" ತಾನೇ ಹೋಗಿ ಬಾಗಿಲು ಹಾಕಿದರು.

ಬಡಿಸಿದನ್ನ ತಿಂದು ಆರಾಮಾಗಿ ಹಾಸಿಗೆಯ ಮೇಲೆ ಮಲಗಿದ.

ಒಂದು ಹೊತ್ತಿನಲ್ಲಿ ದಬದಬ ಬಾಗಿಲು ಬಡಿತದ ಶಬ್ದ. ತಿರುಮಲಾಂಬ "ಯಾರೋ ಬಾಗಿಲು ತಟ್ತಾ ಇದ್ದಾರೆ, ನೋಡಿ" ಗಂಡನನ್ನ ಎಬ್ಬಿಸ ತೊಡಗಿದರು. ಗಬಕ್ಕನೆ ಎದ್ದು ಕೂತ ಸಾಗರ್ "ಯಾರೋ ಬಾಗ್ಲು ಬಡೀತಾ ಇದ್ದಾರೆ" ಮತ್ತೊಮ್ಮೆ ಹೇಳಿದರು. ಎದ್ದು ಬಾಗಿಲ ಬಳಿಗೆ ಹೋದವನ ಕೈ ಹಿಡಿದುಕೊಂಡ ಬಿಳಿಗಿರಿ "ಮಳೆಯಲ್ಲಿ ಯಾರು ಇರ್ತಾರೆ. ಅಪರಿಚಿತರಾದರೇ...ಕಷ್ಟ" ಅವರ ಸ್ವರದಲ್ಲಿ ಭಯದ ನೆರಳಾಡಿತು.

ಮತ್ತೆ ಬಾಗಿಲು ಬಡಿದ ಸದ್ದು. ಅವರ ಮಾತನ್ನ ಲೆಕ್ಕಿಸದೆ ಬಾಗಿಲು ತೆಗೆದಾಗ ಗಢ ಗಢ ನಡುಗುತ್ತ ನಿಂತಿದ್ದ ಗೌರಿ ಸನ್ನೆ ಮಾಡಿದಳು. "ಕಲ್ಲೇಶಿ... ಅವಳನ್ನ ಪಕ್ಕಕ್ಕೆ ತಳ್ಳಿಕೊಂಡು ಬೀದಿಗಿಳಿದಾಗ ಕಾಲುಗಳ ಬಳಿ ರಭಸದಿಂದ ಹರಿಯುತ್ತಿದ್ದ ನೀರು ಅವನನ್ನು ಹಿಂದಕ್ಕೆ ತಳ್ಳುತ್ತಿತ್ತು."

ಈ ಶತಮಾನದಲ್ಲಿಯೇ ಇಂಥ ಮಳೆ ಬಂದಿಲ್ಲವೆನ್ನುವಂತೆ ಸುರಿಯುತ್ತಿದ್ದ

ಮಳೆ ಪ್ರಳಯದೋಪಾದಿಯಾಗಿ ನಡುಗಿಸುತ್ತಿತ್ತು. ಬಿಳಿಗಿರಿ, ಅವನು ಹೋಗಿ ಗೋಡೆಯ ಮಗ್ಗುಲಲ್ಲಿ ಪೆಟ್ಟು ತಿಂದು ಮುದುರಿ ಬಿದ್ದ ಅವನನ್ನು ಎತ್ತಿಕೊಂಡು ಬಂದರು. ಪುಟ್ಟ ಊರಿನ ವಿರಳ ಮನೆಗಳ ಸ್ಥಿತಿ ಅವನ ಕಲ್ಪನೆಗೆ ಸಿಕ್ಕಿದಂತಾಯಿತು.

ಸಾಗರ್ ಕಲ್ಲೇಶಿಯ ಬಟ್ಟೆ ಬದಲಾಯಿಸಿ ತಲೆಯೊರೆಸಿ ತನಗೇ ಹಾಸಿ ಕೊಟ್ಟ ಹಾಸಿಗೆಯ ಮೇಲೆ ಮಲಗಿಸಿದ. ತಿರುಮಲಾಂಬ ಕೊಟ್ಟ ಸೀರೆಯುಟ್ಟು ಗುಬ್ಬಚ್ಚಿಯಂತೆ ಒಂದು ಮೂಲೆಯಲ್ಲಿ ಅಡಗಿ ಕೂತಿದ್ದಳು ಗೌರಿ. ನಾಲ್ಕು ಕಲ್ಲುಗಳ ಮೇಲೆ ಹೊದ್ದಿಸಿದ್ದ ಛಾವಣಿ ಮಾತ್ರ ಇದ್ದ ಮನೆಯಲ್ಲಿ ಬಟ್ಟೆ, ಪಾತ್ರೆಗಳು ದೋಣಿಗಳಾಗಿ ತೇಲುತ್ತಿದ್ದವು. ಮನೆ ತೀರಾ ಶಿಥಿಲಗೊಂಡಿದ್ದರ ಅರಿವಾಗಿತ್ತು ಅವನಿಗೆ.

"ಕುಡ್ದು...ಕುಡ್ದು...ಮಕ್ಳುನ ಪರದೇಶಿಗಳನ್ನಾಗಿ ಮಾಡಿ ಹೋಗ್ಬಿಟ್ಟ ಅವ್ರ ಅಪ್ಪ. ಈಗ ನೋಡು ಮಾನವಂತರಾಗಿ ಬದ್ಕಿದ ಜೀವಗಳು ಬಿಕ್ಷೆ ಬೇಡಲಾರ್ದೇ ದುಡಿದು ಜೀವಿಸಲಾರ್ದೇ... ಈ ಪಡಿಪಾಟಲುಪಡ್ತಾ ಇದ್ದಾರೆ" ತಿರುಮಲಾಂಬ ನೊಂದುಕೊಂಡರು.

ಸಾಗರ್ ತಲೆ ತಗ್ಗಿಸಿ ಕೂತ. ಅವನು ಸ್ಥಿತಿವಂತರ ಮಗ. ಅವನಮ್ಮ ಮಾಸ್ಟರ್ ಡಿಗ್ರಿಯಲ್ಲಿ ಡಿಸ್ಟಿಕ್ಷನ್ ಸ್ಟೂಡೆಂಟಾಗಿ ತೇರ್ಗಡೆ ಹೊಂದಿ ಈಗ ಬ್ಯಾಂಕ್‌ನಲ್ಲಿ ದೊಡ್ಡ ಅಧಿಕಾರಿ. ಅವನಪ್ಪ ಕೂಡ ಒಬ್ಬ ಇಂಡಸ್ಟ್ರಿಯಲಿಸ್ಟ್. ಎರಡು ಮೂರು ಬಂಗ್ಲೆ ಬ್ಯಾಂಕ್ ಬ್ಯಾಲೆನ್ಸ್, ಕಾರು, ಗುಡ್ ಟರ್ನೋವರ್ ಇದ್ದು ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನದಲ್ಲಿದ್ದ ವ್ಯಕ್ತಿ. ಅಂತು ಹಸಿವು, ಬಡತನ ಅವನನ್ನು ಸೋಕದು. ಐವತ್ತು ಸಾವಿರದಷ್ಟು ದೊಡ್ಡ ಮೊತ್ತವನ್ನ ಕೊಟ್ಟು ಸಾಗರ್‌ನ ಶಾಲೆಗೆ ಸೇರಿಸಿದ್ದರು. ಬಹುಶಃ ಅವನು ಓದಿದ್ದು ಅಲ್ಲಿ ಒಂದೇ ವರ್ಷ. ಅಲ್ಲಿಂದ ಅವನನ್ನು ರೆಸಿಡೆನ್ಷಿಯಲ್ ಸ್ಕೂಲಿಗೆ ಸೇರಿಸಿದ್ದರು.

"ಈಗ ಸ್ವಲ್ಪ ಮಳೆ ಕಡ್ಮೆ ಆಯ್ತು" ಬಿಳಿಗಿರಿ ಅಂದಾಗ ಅವನು ವಾಸ್ತವಕ್ಕೆ ಮರಳಿದ. ಹಿಂದಿನ ಕಿಂಡಿಯಂಥ ಕಿಟಕಿಯ ಬಳಿ ನಿಂತು ಹೊರಗೆ ನೋಡಿದ. "ಪೂರ್ತಿನೇ ನಿಂತಿದೆ" ಉಸುರಿದ. ಬಹುಶಃ ನಸುಕು ಹರಿಯುವ ಸಮಯ ಇರಬೇಕು. ಪುಟ್ಟ ಊರಲ್ಲೆ ಹೊಳೆಯ ರೂಪದಲ್ಲಿ ನಿಂತಿತ್ತು.

ತನ್ನ ಬ್ಯಾಗು ಹೆಗಲಿಗೇರಿಸಿಕೊಂಡು ಹೊರ ನಡೆದಾಗ ತಿರುಮಲಾಂಬ ಗಾಬರಿಯಾದರು. "ಊರಿಗೆ ಹೋಗ್ತೀಯಾ?" ಎರಡು ನಿಮಿಷದ ಮೌನದ ನಂತರ "ಗೊತ್ತಿಲ್ಲ..." ಅಂದ.

ತಿರುಮಲಾಂಬ ಹೆದರಿದರು.

ಪ್ರಾಯದ ಯುವಕ ಹೊಳೆಯ ಪಾಲಾಗುವುದೋ ಅಥವಾ ಬೇರೊಂದು ದುರಂತ ಅವನನ್ನ ಅಪ್ಪುವುದೋ ಬೇಡವಾಗಿತ್ತು. ಅದು ಹೆತ್ತ ಒಡಲು ಅಲ್ಲ ಇದ್ದಿದ್ದು ಮಾತೃತ್ವದ ಸೆಲೆ.

"ಬೇಡಪ್ಪ ಸಾಗರ್ ! ಸಾಹಸ ಮಾಡೋ ವಯಸ್ಸೇ ಇರ್ಬಹುದ್ದು. ಜೀವ ಮುಖ್ಯ, ಅಪಾಯಕ್ಕೆ ತಳ್ಳಬಾರ್ದು. ತುಂಬ ಶ್ರೀಮಂತರ ಮನೆಯ ಹುಡ್ಗನಂತೆ ಕಾಣ್ತೀಯಾ. ನಿನ್ನ ಊರಿಗ್ ಹೋಗು. ನಿನ್ನಪ್ಪ, ಅಮ್ಮ ಎಷ್ಟು ಆತಂಕದಿಂದ ಕಾಯ್ತಾ ಇದ್ದಾರೋ, ಆ ಸಂಕಟ ಎಂಥದ್ದೂಂತ ನಂಗೆ ಗೊತ್ತು." ಬುದ್ಧಿ ಹೇಳಿದರು ಆಕೆ.

ಹೆಜ್ಜೆ ಮುಂದಿಡುವ ಮುನ್ನ ಹಿಂದಕ್ಕೆ ತಿರುಗಿ ನೋಡಿದ ಆಕೆಯತ್ತ. ದಿಕ್ಕರಿಸುವ ಮನಸ್ಸಾಗಲಿಲ್ಲ. ಅವನು ಇಲ್ಲಿ ಇರಲಾರ. ಏಕಾಂಗಿತನ ಬೇಕು. ಪೂರ್ತಿ ಸ್ವತಂತ್ರವಾಗಿರಬೇಕು.

ಬಹುಶಃ ಅವನ ಮನಸ್ಸು ತಿರುಮಲಾಂಬಗೆ ಅರ್ಥವಾಯಿತೇನೋ "ನಮ್ಮಲ್ಲಿ ಬೇಡ. ಇಲ್ಲೇ ಹತ್ತಿರದಲ್ಲಿ ಅಪ್ಪಯ್ಯ ಶಾಸ್ತ್ರಿಗಳ ಮನೆ ಖಾಲಿ ಬಿದ್ದಿದೆ. ಮುಂಗಡ, ಬಾಡ್ಗೇ ಕೊಟ್ಟರೆ ನಿಂಗೆ ಇಷ್ಟ ಬಂದಷ್ಟು ದಿನ ಅಲ್ಲಿರಬಹುದ್ದು" ಒಂದು ಸಲಹೆ ಕೊಟ್ಟರು.

"ಹೌದು, ಹಾಗೇ...ಮಾಡು" ಬಿಳಿಗಿರಿ ಕೂಡ ಪುರಸ್ಕರಿಸಿದರು.

ತಲೆದೂಗಿದ, ಆದರೆ ಬ್ಯಾಗು ಮಾತ್ರ ಅಲ್ಲಿಡಲಿಲ್ಲ. ಬಿಳಿಗಿರಿ ತಾವೇ ಹೊರಟರು ಹರಿಯುತ್ತಿರುವ ನೀರಿನಲ್ಲಿ ಅವನ ಜೊತೆ. ಬೀಗದ ಕೈ ಅವರ ವಶದಲ್ಲಿಯೇ ಇತ್ತು.

ಮೆಟ್ಟಲುಗಳವರೆಗೂ ನೀರಿತ್ತೆ ವಿನಃ ಜಗುಲಿ ಪ್ರವೇಶವಿರಲಿಲ್ಲ. ದೊಡ್ಡ ಕಬ್ಬಿಣದ ಚಿಲಕಕ್ಕೆ ಹಿತ್ತಾಳೆಯ ಬೀಗ. ತಾವೇ ತೆರೆದು ನೂಕಿದರು ಬಿಳಿಗಿರಿಯವರು. ತೀರಾ ಹಳೆಯದಾದ ಕರೀ ಮರದಿಂದ ತಯಾರಿಸಿದ ಬಾಗಿಲು ಎಷ್ಟು ಭದ್ರವಾಗಿತ್ತೆಂದರೇ, ಇನ್ನೊಂದು ಶತಮಾನಕ್ಕಾದರೂ ನಾನು ಸೈ ಎಂದು ಸವಾಲ್ ಎಸೆಯುವಂತಿತ್ತು.

ಮೊದಲು ಒಳಗಡಿ ಇಟ್ಟವರು ಕಿಟಕಿಗಳನ್ನ ತೆರೆದರು. ಹೊರಗಿನ ವಾತಾವರಣ ರಾತ್ರಿಯೆಲ್ಲ ಸುರಿದ ಮಳೆಯಿಂದ ಮಬ್ಬಾಗಿದ್ದುದ್ದರಿಂದ, ಒಳಗೆ ಕೂಡ ಮಂಕಾಗಿಯೇ ಇತ್ತು. ಇವರ ಮನೆಯಷ್ಟು ಚಿಕ್ಕದಾದ ನಡು ಮನೆಯಲ್ಲ, ವಿಶಾಲವಾಗಿತ್ತು. ಚಿತ್ತಾರದ ಎರಡು ಕಂಬದ ತೊಲೆಗಳು ಎದ್ದು ನಿಂತು ಛಾವಣಿಯನ್ನ ಹಿಡಿದಿದ್ದರಿಂದ ಅದರ ಭದ್ರತೆಗೆ ಯಾವ ಲೋಪವು ಇರಲಿಲ್ಲ.

"ಮನೆ ದೊಡ್ಡದಿದೆ. ಗಾಳಿ ಬೆಳಕು ಚೆನ್ನಾಗಿ ಬರುತ್ತೆ" ಎಂದ ಬಿಳಿಗಿರಿಯವರು ನಡುಮನೆಗೆ ಅಂಟಿಕೊಂಡಿದ್ದ ಎರಡು ಬಾಗಿಲನ್ನ ತೆಗೆದರು, ಅವೆರಡು ಕೋಣೆಗಳು. ಅಡಿಗೆ ಮನೆ, ದೇವರ ಕೋಣೆ ಎಲ್ಲವೂ ಚೆನ್ನಾಗಿತ್ತು. ಹಿಂಬಾಗದಲ್ಲಿದ್ದ ಬಚ್ಚಲು ಮನೆಯನ್ನ ವಿಂಗಡಿಸಿದ್ದರೇ ಸಿಟಿಯಲ್ಲಿ ನಾಲ್ಕು ಮನೆಗಳು ಎದ್ದು ನಿಲ್ಲುತ್ತಿದ್ದವು.

"ಸಧ್ಯಕ್ಕೆ ಇದ್ಕೋ, ನಾಳೆ ನಾಳಿದ್ದು ಕುಂದಣಕ್ಕೆ ಹೋಗಿ ಅಡ್ವಾನ್ಸ್ ಕೊಟ್ಟು ಮಾತಾಡಿಕೊಂಡ್ಬರೋಣ. ಊರಿನ ಜನ ಹೆಚ್ಚು ಈ ಕಡೆ ಬರೋಲ್ಲ. ಏನೇನೋ ಆಸೆಗಳ್ನ ಇಟ್ಕೊಂಡ್ ಬರೋ ಕಳ್ಳ ಕೊರಮರನ್ನ ಮನೆಗೆ ಸೇರಿಸ್ಬೇಡ. ಹೇಗೋ, ಹಾಗೆ...ಇದ್ಕೋ" ಎಂದವರು ಹೊರ ಬಂದರು.

ಇಷ್ಟು ಹೊತ್ತು ಕೈಯಲ್ಲೆ ಇದ್ದ ಬ್ಯಾಗನ್ನ ಉಯ್ಯಾಲೆ ಮೇಲಿಟ್ಟ. ಅದು ಸದ್ದು ಮಾಡುತ್ತ ತೂಗತೊಡಗಿತು. ಕೈ ಗಾತ್ರದ ಕಬ್ಬಿಣದ ಸರಪಣಿಯ ತೂಗುಯ್ಯಾಲೆ ತನ್ನಲ್ಲಿ ಇತಿಹಾಸವನ್ನ ಅಡಗಿಸಿಕೊಂಡಂತೆ ಕಂಡಿತು. ಬಹುಶಃ ಮೂರು ತಲೆ ಮಾರಿನ ಜನರಾದರೂ ಅದರ ಮೇಲೆ ಕೂತು ತೂಗುವ ಸುಖ ಅನುಭವಿಸಿರಬೇಕು. ಆದರೆ ಅದರ 'ಕಿರಿ, ಕಿರಿ' ಸದ್ದು ತಲೆ ಚಿಟ್ಟಿಡಿಸಿತು. ಹಲ್ಕುಡಿ ಕಚ್ಚಿ ಭದ್ರವಾಗಿ ಹಿಡಿದು ನಿಲ್ಲಿಸಿದ. 'ಕಿರಿ, ಕಿರಿ' ಸದ್ದು ಕ್ಷೀಣವಾಯಿತೇ ವಿನಃ ನಿಲ್ಲಲಿಲ್ಲ. ಬ್ಯಾಗು ತೆಗೆದು ಅಷ್ಟು ದೂರಕ್ಕೆಸೆದು, ಹಲಗೆಯನ್ನ ಹಿಡಿದು ನಿಲ್ಲಿಸಿದ ಭದ್ರವಾಗಿ. ನಿಂತಿದ್ದು ನಿಧಾನವಾಗಿಯೆ.

ಗೋಡೆಗೆ ಒರಗಿ ಬ್ಯಾಗ್‌ನ ಪಕ್ಕ ಕೂತ. ತನ್ನ ಬಾಲ್ಯ ಕೂಡ ನಿರಂತರ ವಾಗಿ ಸಾಗಲಿಲ್ಲವೆನಿಸಿತು.

ರೆಸಿಡೆನ್ಸಿಯಲ್ ಶಾಲೆಯಲ್ಲಿ ಅವನ ಓದು ಸಾಗುವಾಗ, ನೋಡಲು ಅವನಪ್ಪ, ಅಮ್ಮ ಎಂದೂ ಜೊತೆಯಾಗಿ ಬರುತ್ತಿರಲಿಲ್ಲ. ಬೇರೆ ವಿದ್ಯಾರ್ಥಿಗಳ ತಾಯ್ತಂದೆಯರಂತೆ ಆಗಾಗ ಬರುತ್ತಿರಲಿಲ್ಲ, ಅವನಿಗೆ ಫೋನ್‌ಗಳು ಬಂದಾಗ ಒಂದೇ ಒಂದು ಪ್ರಶ್ನೆ 'ಹೇಗಿದ್ದಿ ?' ನಂತರ ಒಂದು ಬುದ್ಧಿ ಮಾತು 'ಚೆನ್ನಾಗಿ ಓದು. ಮಾರ್ಕ್ಸ್ ಸರ‍್ಯಾಗಿ ಬರ‍್ಲಿಲ್ಲಾಂದ್ರೆ ಯಾವ್ದೇ ಕೋರ್ಸಿಗೆ ಸೀಟು ಸಿಗೋಲ್ಲ' ಇಷ್ಟೆ ಮಾತುಗಳು. ಅದಕ್ಕಾಗಿ ಕಾಯುವ ದಿನಗಳು ಮುಗಿದಿದ್ದವು. ತಾನಾಗಿ ಫೋನಾಯಿಸುವುದನ್ನು ಬಿಟ್ಟಿದ್ದ.

ಐದನೇ ತರಗತಿಯಲ್ಲಿ ಓದುತ್ತಿದ್ದಾಗ ವೆಕೇಷನ್‌ಗೆ ಮನೆಗೆ ಹೋದ. ಮನೆ ಹಿಂದಿಗಿಂತ ತೀರಾ ಗಂಭೀರವಾಗಿತ್ತು. ಕೆಲವು ಸಾಮಾನುಗಳು ಮಾಯವಾಗಿದ್ದವು. ಅಡಿಗೆ ಮತ್ತು ಕೆಲಸದವಳು ಮಾತು ಕಮ್ಮಿ.

"ಮಮ್ಮಿ ಯಾವಾಗ್ಬರ್ತಾರೆ ?" ಅಡಿಗೆಯವಳನ್ನ ವಿಚಾರಿಸಿದ "ಮೀಟಿಂಗ್ ಇದೆ, ಸಂಜೆ ಲೇಟಾಗುತ್ತೆ ಅಂದ್ರು" ಅಷ್ಟು ಹೇಳಿದ್ದು ವ್ಯಸನದಿಂದಲೇ.

ಬಾಲ್ಕನಿಯಲ್ಲಿ ನಿಂತ. ಅವನಪ್ಪ ಕಾರಿನಿಂದ ಇಳಿಯುವಾಗಲೇ ದುಸ ದುಸ ಎಂದಿದ್ದ "ಯಾವಾಗ್ಬಂದೆ? ಬರೋ ವಿಷ್ಯ ತಿಳಿಸೋಕೆ ಏನಾಗಿತ್ತು? ಕಾರು ಕಳಿಸ್ತಾ ಇದ್ದೆ" ಎಂದು ಕೂಗಾಡಿದರು.

"ಮಮ್ಮಿಗೆ ತಿಳಿಸಿದ್ದೆ. ಕಾರು...ಬಂದಿತ್ತು" ಎಂದ ಮೆಲ್ಲಗೆ. ಅಷ್ಟು ಸಾಕಾಗಿತ್ತು ಮೋಹನ್‌ರಾಮ್‌ಗೆ "ಅವ್ಳಿಗೆ ಎಷ್ಟೊಂದು ದುರಹಂಕಾರ. ನಂಗೆ ಒಂದ್ಮಾತು ತಿಳಿಸದಷ್ಟು ಪೊಗರು. ಬ್ಲಡಿ..ಲೇಡಿ..." ಹಾರಾಡಿದರು. ಬಹುಶಃ ಅಪರೂಪಕ್ಕೆ ಬಂದ ಮಗನ ಬಗ್ಗೆ ಯೋಚಿಸದೇ, ತನ್ನ ಪ್ರತಿಷ್ಠೆ ನಡುಬೀದಿಯಲ್ಲಿ ಬಿದ್ದು ಒದ್ದಾಡುತ್ತಿದೆಯನ್ನುವಂತೆ ಕೂಗಾಡಿದರು.

ಸಾಗರ್ ನಿಂತ ಜಾಗದಿಂದ ಕದಲಲಿಲ್ಲ. ರೆಸಿಡೆನ್ಷಿಯಲ್ ಶಾಲೆಯಲ್ಲಿ ಓದುತ್ತಿದ್ದ ಅವನಿಗೆ ತಂದೆಯ ಪ್ರೀತಿ ಸಿಗುತ್ತಿದ್ದುದು ಬಾಕ್ಸ್‌ಗಟ್ಟಲೇ ಚಾಕಲೇಟ್, ಡ್ರೆಸ್‌ಗಳ ಮೂಲಕ ಮಾತ್ರ.

"ನೀನು ನನ್ನ ಆಫೀಸ್‌ನ ನಂಬರ್‌ಗೆ ಫೋನ್ ಮಾಡಿ ತಿಳ್ಸಬೇಕಿತ್ತು. ನೀನು ಅವ್ಳ ಸಪೋರ್ಟ್‌ಗೆ ನಿಂತಿದ್ದೀಯಾ. ಮೊದ್ಲೇ ದುರಹಂಕಾರದಿಂದ ಮೆರೆಯೋ ಹೆಣ್ಣಿಗೆ ಕೋಡು ಮೂಡಿದಂತಾಗಿದೆ."

ಅವರ ಮಾತುಗಳು ಪೂರ್ತಿ ಅರ್ಥವಾಗದ ವಯಸ್ಸು. ಸಂತೋಷದಿಂದ ಹಾರಿ ಬಂದವನಿಗೆ ಸಿಕ್ಕ ಸ್ವಾಗತ, ಕೂಗಾಟದ ನಂತರ ಮನೆ ನಿಶ್ಯಬ್ದಗೊಂಡ ನಂತರವೆ ಕೆಲಸದ ಆಳು, ಅವನಿಗಾಗಿ ಸಿದ್ಧಪಡಿಸಿದ ರೂಮಿಗೆ ಕರೆದೊಯ್ದುದ್ದು.

"ಈಗ ಏನು ತಗೋತೀಯಾ?" ಪ್ರಶ್ನಿಸಿದ್ದು ಮೃಣಾಲಿನಿಯವರ ಪರ್ಸನಲ್ ಲೇಡಿ ಸರ್ವೆಂಟ್. ಜೋಲು ಮುಖ ಹಾಕಿದ "ಬೇಡ..." ದೊಪ್ಪೆಂದು ಮಂಚದ ಮೇಲೆ ಬಿದ್ದುಕೊಂಡ.

ಯಾರ ಬಲವಂತಕ್ಕೂ ಬಗ್ಗಲಿಲ್ಲ. ಮೃಣಾಲಿನಿ ಏಳರ ನಂತರವೇ ಬಂದಿದ್ದು. ಪ್ರಮೋಷನ್ ಲಿಸ್ಟ್‌ನಲ್ಲಿ ಆಕೆಯ ಹೆಸರು ಇದ್ದುದ್ದರಿಂದ ಇಂದಿನ ಮೀಟಿಂಗ್ ತುಂಬ ಮುಖ್ಯವಾದದ್ದು. ಅದಕ್ಕಾಗಿ ಕೆಲವು ದಿನಗಳಿಂದ ಸಿದ್ಧತೆ ನಡೆಸಿದ್ದರಿಂದ ಟೆನ್‌ಷನ್‌ನಲ್ಲಿಯೇ ಮುಗಿದಿತ್ತು.

ಸ್ವಲ್ಪ ಡಿಪ್ರೆಸ್ಡ್ ಆಗಿಯೇ ಬಂದಿದ್ದತು.

"ಸಾಗರ್....ಬಂದ್ನಾ ?" ವಿಚಾರಿಸಿದ್ದು ಆಯಾಸದಿಂದಲೇ.

ತಕ್ಷಣ ಯಜಮಾನಿಯ ಮುಂದೆ ಪ್ರತ್ಯಕ್ಷವಾದ ಲೇಡಿ ಸರ್ವೆಂಟ್ "ಬಂದ್ರು, ನಾನು ಎಷ್ಟೆಷ್ಟೋ ಹೇಳ್ದೇ ಏನು ತಗೊಳ್ಳಿಲ್ಲ" ವಿನಯದಿಂದ ಉಸುರುತ್ತ ಹಿಂದೆ ಹೋದಳು.

ವಿಪರೀತ ಶಿಸ್ತು ಲೇಡಿ ಮೃಣಾಲಿನಿ. ಅಷ್ಟೇ ಬುದ್ಧಿವಂತೆ ಅದರ ಜೊತೆಗೆ ತಾನು ಬುದ್ಧಿವಂತೆ ಎನ್ನುವ 'ಅಹಂ' ಸ್ವಲ್ಪ ಜಾಸ್ತಿ. ಎನ್ನುವ ವಾದ ಪತಿ ಸೀತಾರಾಮ್ ಮತ್ತು ಅವರ ಗೆಳೆಯರದು. ಜೊತೆಗೆ ಬಂಧುಗಳು ಹಾಗೇ ಅನ್ನುತ್ತಿದ್ದರು.

ಇಂಟರ್‌ಕಾಮ್ ಒಂದೇ ಸಮ ಸದ್ದು ಮಾಡಿದರೂ ಸಾಗರ್ ಮುಟ್ಟಲಿಲ್ಲ. ವೆಕೇಷನ್‌ನಲ್ಲಿ ಮಕ್ಕಳನ್ನ ಕರೆದೊಯ್ಯಲು ಅವರುಗಳ ತಾಯಿ, ತಾಯಿ, ತಂದೆ, ಪೋಷಕರು ಬಂದಿದ್ದರು. ಇವನು ಒಂಟಿಯಾಗಿ ಟ್ರೈನ್ ಹತ್ತಿ ಬಂದಾಗ ಜೊತೆಗೆ ಇದ್ದಿದ್ದು ಲೀಲಾ ಮಾಮ್, ಕಾರು ಹತ್ತಿದಾಗ ಮತ್ತೆ ಒಂಟಿಯಾದ.

"ಎಲ್ಲಿ, ಮಮ್ಮಿ ?" ಡ್ರೈವರ್‌ನ ಕೇಳಿದ್ದ.

"ಇಂಪಾರ್ಟೆಂಟ್ ಮೀಟಿಂಗ್ ಇತ್ತು" ಎಂದ ಸ್ಟೇರಿಂಗ್ ವ್ಹೀಲ್ ಆಡಿಸುತ್ತ.

"ಡ್ಯಾಡಿ, ಯಾಕೆ...ಬರ್ಲಿಲ್ಲ" ಒರಟಾಗಿತ್ತು ಅವನ ಸ್ವರ.

"ಗೊತ್ತಿಲ್ಲ...." ಅಷ್ಟೇ ಅಂದಿದ್ದು.

ತಂದೆ, ತಾಯಿ ಅಥವಾ ಇಬ್ಬರಲ್ಲಿ ಒಬ್ಬರಾದರೂ ತನ್ನನ್ನ ಎದುರುಗೊಳ್ಳಬೇಕೆಂಬ ಆಸೆ ಅವನದು. ಇದ್ದಿದ್ದು ಬರೀ ಕೆಲಸದವರು.

ಹಣೆಗೆ ಕೈಯೊತ್ತಿ ಇನ್ನೊಂದು ಕೈಯಲ್ಲಿ ಫೋನಿಡಿದ ಮೃಣಾಲಿನಿ 'ಉಫ್' ಎಂದು ಉಸಿರು ಊದಿ "ರಾಣಿ, ಹೋಗಿ ಅವನ್ನ ಕರ್ಕೊಂಡ್ಬಾ" ಸೀರೆ ಮಡಚುತ್ತಿದ್ದವಳಿಗೆ ಆಜ್ಞೆ ಮಾಡಿದರು. ಕೆಲವೊಮ್ಮೆ ಆಕೆಗೆ ಆಫೀಸ್, ಮನೆಯ ನಡುವೆ ಅಂತಹ ವ್ಯತ್ಯಾಸ ಕಾಣುತ್ತಿರಲಿಲ್ಲ.

ರಾಣಿ ಎಷ್ಟೇ ರಮಿಸಿದರೂ ಮಲಗಿದ್ದ ಸಾಗರ್ ಮಿಸುಕಲಿಲ್ಲ. ಈ ಸುದ್ದಿ ಮುಟ್ಟಿ ಕೊನೆಗೆ ಸೋತವರಂತೆ ಮೃಣಾಲಿನಿಯೇ ಎದ್ದು ಬಂದರು. ಅವನನ್ನು ನೋಡಿದ ಕೂಡಲೇ ತಾಯ್ತನ ಜಾಗೃತವಾಯಿತು.

"ಸಾಗರ್ ಮೈ ಬಾಯ್...." ಅವನ ಪಕ್ಕ ಕೂತರು.

ತಾಯಿಯ ಮಡಿಲಲ್ಲಿ ಅವನು ಕರಗಿ ಹೋಗಬೇಕು. ಅಷ್ಟರಲ್ಲಿ ಸೀತಾರಾಮ್ ಕೂಗಾಡುತ್ತಿದ್ದರು "ಅವ್ನು, ಎಲ್ಹೋದ? ಸಾಗರ್ ನನ್ನ ರೂಮಿನಲ್ಲಿ ಇರ್ಲಿ" ಜೋರು ದನಿಯಲ್ಲಿ ಆಜ್ಞೆ ಮಾಡುತ್ತಿದ್ದರು.

ಬೆಪ್ಪಾಗಿ ಸಾಗರ್ ತಾಯಿಯ ಕಡೆ ನೋಡಿದ "ಸಾಗರ್, ನಿನ್ನ ಡ್ಯಾಡಿ ಕರೆದ್ರೂ ಹೋಗಕೂಡ್ದು" ತಾಕೀತು ಮಾಡಿದಾಗ, ಹೊರಡಬೇಕಾದ ಹರ್ಷದ ಉದ್ಗಾರ ಅಲ್ಲಿಯೇ ಅಡಗಿ ಹೋಯಿತು.

"ಗೋ ಟು ಹೆಲ್, ಏನು ತಗೋತೀಯಾ? ರಾತ್ರಿ ಡಿನ್ನರ್‌ಗೆ ನಿನ್ನ ಹೋಟೆಲ್ ಸುಭಾಷ್‌ಗೆ ಕರ್ಕೊಂಡ್ಹೋಗ್ತೀನಿ. ಈಗ ರಾಣಿನ ಕಳಿಸ್ತೀನಿ, ಏನು ಬೇಕೋ ತಗೋ" ಭುಜ ತಟ್ಟಿ ಆಕೆ ಹೊರಗೆ ಹೋದರು. ತಾಯಿ, ಮಗನ ಮೊದಲ ಭೇಟಿ ಇಷ್ಟಕ್ಕೆ ಮುಗಿಯಿತು.

ರಾಣಿ ಬರುವ ಮುನ್ನ ಸೀತಾರಾಮ್ ಪರ್ಸನಲ್ ಪಿ.ಎ. ರೂಮಿನೊಳಕ್ಕೆ ಬಂದ "ನಿನ್ನ ಡ್ಯಾಡಿ ಕರ್ಕೊಂಡ್ಬರೋಕೆ ಹೇಳಿದ್ರು" ಮೆಲ್ಲನೆ ಉಸುರಿದ.

ಅವನಿಗೂ ತಂದೆಯ ಮಡಿಲಲ್ಲಿ ಕೂತು ಸಂಭ್ರಮಪಡುವ ಆಸೆ. ಅಂಥ ಕನಸುಗಳು ಎಷ್ಟೋ ಇದ್ದವು. ಬರುವ ದಿನವನ್ನ ನೂರು ಕಣ್ಣುಗಳಿಂದ ಎದುರು ನೋಡುತ್ತಿದ್ದ. ಆ ದಿನಗಳು ಪೋಸ್ಟ್‌ಪೋನ್ ಆಗುತ್ತಿದ್ದುದೇ ಹೆಚ್ಚು. ಒಟ್ಟಿಗೆ ಬರುತ್ತಿದ್ದುದು ಅಪರೂಪವೇ. ಬಂದಾಗ 'ಧುಂ' ಎಂದು ಇರುತ್ತಿದ್ದರು.

"ಅವ್ರು ರೇಗಾಡೋಕೆ ಮೊದ್ಲು ಬಾ" ರೆಟ್ಟೆಗೆ ಕೈ ಹಾಕುವ ವೇಳೆಗೆ ರಾಣಿ ಬಂದಳು "ಮೇಡಮ್ ಕರ್ಕೊಂಡ್ಬರೋಕೆ ಹೇಳಿದ್ದಾರೆ."

"ಅದ್ನೇ ಹೇಳ್ತೀನಿ, ಅಷ್ಟೆ" ಪಿ.ಎ. ಹೊರಗೆ ಹೋದ.

"ಕರೀತಾರೆ, ನಿನ್ನ ಮಮ್ಮಿ" ಅಲ್ಲೇ ನಿಂತ ರಾಣಿಯನ್ನ ನೋಡಿದ "ಬರೋಲ್ಲ..." ಸ್ಪಷ್ಟವಾಗಿತ್ತು ಅವನ ದನಿ.

ರಾಣಿ ಅವನ ಪಕ್ಕ ಕೂತು ರಮಿಸುವ ದನಿಯಲ್ಲಿ "ಮಮ್ಮಿ ತುಂಬ ಟಯರ್ಡ್ ಆಗ್ಬಿಟ್ಟಿದ್ದಾರೆ. ಪ್ಲೀಸ್, ಬಾ....ಮರೀ" ಮೆಲ್ಲಗೆ ಅವನ ತೋಳಿನ ಮೇಲೆ ಕೈ ಇಟ್ಟಾಗ ಕೊಡವಿದ "ಗೆಟ್ ಔಟ್ ಫ಼ಂ ಹಿಯರ್" ಜೋರು ದನಿಯಲ್ಲಿ ಅರಚಿದ.

ಪದೇ ಪದೇ ಜಗಳವಾಡುತ್ತ ಶತ್ರುಗಳಂತೆ ಕತ್ತಿ ಮಸೆಯುವ ಅಪ್ಪ, ಅಮ್ಮನ ಮಧ್ಯೆ ವಾರ ಕಳೆಯುವ ವೇಳೆಗೆ ಸಾಕಾಯಿತು. ಅವರಿಬ್ಬರ ಡೈವೋರ್ಸ್ ಕೇಸ್ ಕೋರ್ಟಿನಲ್ಲಿತ್ತೆಂದು ನಂತರವೇ ಗೊತ್ತಾಗಿದ್ದು.

ಐಷಾರಾಮವಾದ ಬಂಗ್ಲೆಯನ್ನ ಇಬ್ಬರು ಸೇರಿಯೇ ಕಟ್ಟಿಸಿದ್ದು. ಮೃಣಾಲಿನಿ ಲೋನ್ ತೆಗೆದುಕೊಂಡಿದ್ದರೂ ಹೆಚ್ಚು ಹಣ ವ್ಯಯಿಸಿರೋದು ಸೀತಾರಾಮ್. ಈಗ ಬಂಗ್ಲೆ ಯಾರ ಸುಪರ್ದಿಗೆ ಬರಬೇಕು ? ಇವರ ಡೈವೋರ್ಸ್ ಕೇಸ್‌ನಲ್ಲಿ

ಮುಖ್ಯವಾಗಿ ಚರ್ಚಿತವಾಗಿರುವ ವಿಷಯ. 'ಲೋನ್ ತಗೊಂಡು ಕಟ್ಟಿಸಿರುವುದರಿಂದ ಆ ಬಂಗ್ಲೆ ತನಗೇ ಸೇರಬೇಕೆಂದು' ಮೃಣಾಲಿನಿಯ ವಾದವಾದರೂ, ಸೀತಾರಾಮ್ ಕಡೆ ವಕೀಲರು 'ಬಂಗ್ಲೆಗೆ ಖರ್ಚಾಗಿರುವ ಹಣ ಲೆಕ್ಕ ತಗೊಂಡರೇ, ನಿಮ್ಮ ಲೋನ್ ಹಣ ರೂಫ್ (Roof) ವರೆಗೆ ಸಾಕಾಗಲಿಕ್ಕಿಲ್ಲ. ಅದರಿಂದ ಬಂಗ್ಲೆ ತನ್ನ ಕಕ್ಷಿಗಾರರಿಗೆ ಸೇರಬೇಕು.'

ಇಬ್ಬರು ಸಮಾನ ದುಡಿಮೆಗಾರರು. ಸ್ವಂತ ಕಾಲು ಮೇಲೆ ನಿಂತ ಮೃಣಾಲಿನಿ ಕಾಂಪೆನ್‌ಸೇಷನ್ ಬೇಡವಾಗಿತ್ತು. ಆದರೆ ಬಂಧು ಬಳಗ ಕೇಳಬೇಕಲ್ಲ. ಅನಗತ್ಯವಾದ ತಂಟೆ, ತಕರಾರುಗಳನ್ನ ತಂದು ಹಾಕುತ್ತಿದ್ದರು ಇಬ್ಬರ ನಡುವೆ. ಎಲ್ಲಕ್ಕಿಂತ ಇರುವ ಬಂಗ್ಲೆಯದೊಂದು ಸಮಸ್ಯೆಯಾಗಿತ್ತು. ಇಲ್ಲದಿದ್ದರೇ ಎಂದೋ ಬೇರೆ ಬೇರೆ ವಾಸಿಸುತ್ತಿದ್ದರು. ಮಗನಿಗೆ ಸಮಾನವಾಗಿ ಖರ್ಚು ಮಾಡುತ್ತಿದ್ದರು. ಅವನು ತಮ್ಮ ಸ್ವಂತ ಪ್ರಾಪರ್ಟಿಯೆನ್ನುವಂತೆ ಬಹುಶಃ ಇಲ್ಲಿಗೆ ಅವನು ಬರುವವರೆಗೂ ಅವನ ಬಗ್ಗೆ ತೀವ್ರವಾಗಿ ಯೋಚಿಸಿರಲಿಕ್ಕಿಲ್ಲ.

ಭಾನುವಾರ ವಕೀಲರನ್ನ ನೋಡುವ ಪ್ರೋಗ್ರಾಂ ಹಾಕಿಕೊಂಡ ಮೃಣಾಲಿನಿ ಮಗನನ್ನ ಜೊತೆಯಲ್ಲಿ ಕರೆದೊಯ್ಯಲು ತೀರ್ಮಾನಿಸಿ ರಾಣಿಗೆ "ಸಾಗರ್‌ನ ಬೇಗ ರೆಡಿ ಮಾಡಿ ಕರ್ಕೊಂಡ್ ಬಾ" ಹೇಳಿಯೇ ಹಾಸಿಗೆ ಬಿಟ್ಟು ಎದ್ದಿದ್ದು.

ಸ್ವಿಮ್ಮಿಂಗ್ ಡ್ರೆಸ್‌ನಲ್ಲಿ ಹೊರಟ ಅಪ್ಪ, ಮಗನನ್ನ ನೋಡಿ ಹಿಂದಿರುಗಿ ಬಂದು ವಿಷಯ ಮುಟ್ಟಿಸಿದಳು "ಸರ್ ಜೊತೆ ಸಾಗರ್ ಸ್ವಿಮ್ಮಿಂಗ್‌ಗೆ ಹೋಗ್ತಾ ಇದ್ದಾರೆ."

917058R

ಸ್ನಾನಕ್ಕೆ ರೆಡಿಯಾಗುತ್ತಿದ್ದ ಮೃಣಾಲಿನಿಗೆ ಬೆಂಕಿ ಬಿದ್ದಂತಾಯಿತು. ಬಂಗ್ಲೆಯಲ್ಲಿಯೇ ಕೊಳವಿತ್ತು. ಅದರ ಸುತ್ತಲೂ ಸುಂದರ ಪುಟ್ಟದಾದ ಉದ್ಯಾನವನದಂತೆ ಭಾಸವಾಗುವ ವಾತಾವರಣ ನಿರ್ಮಿತವಾಗಿತ್ತು. ಸೀತಾರಾಮ್ ಬೆಳಿಗ್ಗೆ ಸ್ವಿಮ್ಮಿಂಗ್ ಕಡ್ಡಾಯವಾದರೂ, ಕೆಲವೊಮ್ಮೆ ರಾತ್ರಿಯ ವೇಳೆ ಕೂಡ ಕೊಳಕ್ಕೆ ಬಿದ್ದು ಈಜಾಡುತ್ತಿದ್ದರು. ಮಗ ಬಂದ ಮೇಲೆ ಮತ್ತಷ್ಟು ಇಂಟರೆಸ್ಟ್.

ಬಿಚ್ಚಿದ್ದ ಕೂದಲಿಗೆ ಕ್ಲಿಪ್ ಕೂಡ ಸಿಕ್ಕಿಸದೇ ಭುಜದ ಮೇಲೆ ಟವಲು ಹಾಕಿಕೊಂಡು ಬಂದ ಮೃಣಾಲಿನಿ "ಸಾಗರ್...ಬೇಗ್ಬಾ.... ಹೊರ್ಗಡೆ ಹೋಗೋದಿದೆ" ಅವಸರಿಸಿದಳು.

ಮಗನಿಗೆ ಮೇಲ್ಮುಖ ಈಜು ಪ್ರಾಕ್ಟೀಸ್ ಮಾಡಿಸುತ್ತಿದ್ದ ಸೀತಾರಾಮ್ ಅವಡುಗಳು ಬಿಗಿದುಕೊಂಡವು "ವಾಟ್ ಆರ್ ಯು ಟಾಕಿಂಗ್, ನಾನ್ಸೆಸ್!

ಅವ್ನು ಈಗ ಬರೋಲ್ಲ, ಹೋಗು" ಅಬ್ಬರಕ್ಕೆ ಮುಗ್ಗರಿಸಿದಂತಾಯಿತು ಸಾಗರ್‌ಗೆ. ಒಂದಿಷ್ಟು ನೀರು ಕುಡಿದೇ ಚೇತರಿಸಿಕೊಂಡಿದ್ದು.

ಇಬ್ಬರ ಮಧ್ಯೆ ಷುರುವಾಯಿತು ವಾಗ್ಬಾಣಗಳು. ಜಗಳದಲ್ಲಿ ಇಬ್ಬರು ಕಲೀಗಳೇ, ಬಹುಶಃ ಇವನನ್ನೇ ಮರೆತರು. ಪಿ.ಎ. ಜಾನ್ ಬಂದು ಅವನನ್ನ ಈಜುಕೊಳದಿಂದ ಹೊರಗೊಯ್ದ. ಗಡಗಡ ನಡುಗುತ್ತಿದ್ದ ಸಾಗರ್ ಮಂಚದ ಕೆಳಗೆ ಅಡಗಿ ಕೂತ.

ಮೃಣಾಲಿನಿ ತಕ್ಷಣ ತನ್ನ ವಕೀಲರನ್ನ ಸಂಪರ್ಕಿಸಲು ಹೊರಟ ಕಾರಿನ ರಭಸಕ್ಕೆ ಎಲ್ಲಿ ಆಕ್ಸಿಡೆಂಟ್ ಆಗುತ್ತದೆಯೋ ಎಂದು ಹೆದರಿದರು ಮನೆಯಲ್ಲಿನ ನೌಕರ ವರ್ಗ.

ಹೊಸದೊಂದು ಸಮಸ್ಯೆಯನ್ನ ವಕೀಲರ ಮುಂದಿಟ್ಟಾಗ ಬೆಚ್ಚಿಬಿದ್ದರು, ಅಷ್ಟೇ ಸೋಜಿಗದ ನೋಟ ಬೀರಿದರು.

"ಇಷ್ಟು ದಿನ ನಿಮ್ಮ ಮಗನನ್ನೇ ಮರ್‍ತುಬಿಟ್ಟಿದ್ರಿ!" ಅವರ ಮಾತಿನಲ್ಲಿ ವ್ಯಂಗ್ಯ ಬೆರೆತ ಮೊನಚು ಇತ್ತು. ಆಮೇಲೆ ಸಹಾನುಭೂತಿ ನೋಟ ಬೀರಿದರು. "ಈಗ್ಹೇಳಿ, ಮಗು ವಯಸ್ಸು ಜೊತೆ ಉಳಿದೆಲ್ಲ ಡೀಟೈಲ್ಸ್ ಕೊಡಿ" ಸ್ವಲ್ಪ ಚಿಂತಿತರಾದರು. ಇಂದಿನವರೆಗೂ ಆ ಮಗು ತಮ್ಮ ಜೀವನದಲ್ಲಿ ಮುಖ್ಯವೆಂದು ಪರಿಗ್ರಹಿಸದ ಈ ಮಂದಿಯನ್ನು ಯಾವ ಗುಂಪಿಗೆ ಸೇರಿಸುವುದೆಂದು ಯೋಚಿಸುತ್ತಿದ್ದರು.

ಸೀತಾರಾಮ್ ಕಡೆ ವಕೀಲರು ಅವರ ಕ್ಲೋಸ್ ಫ್ರೆಂಡ್ ಆದುದ್ದರಿಂದ ಇಬ್ಬರು ಕೂತು ತೀರ್ಮಾನಿಸಿದ್ದನ್ನ ಮೃಣಾಲಿನಿಗೆ ಹೇಳಿದರು.

"ಬಂಗ್ಲೆಯಲ್ಲಿ ಇಬ್ಬರದು ಫಿಫ್ಟಿ - ಫಿಫ್ಟಿ ಅಂದುಕೊಳ್ಳೋಣ. ಅದ್ಕೇ ಒಂದು ಸರಿಯಾದ ಬೆಲೆ ಕಟ್ಟಿ ವಿಭಾಗಿಸಿ, ಅರ್ಧದಷ್ಟು ಹಣವನ್ನು ಯಾರಾದ ರೊಬ್ಬರಿಗೆ ಇನ್ನೊಬ್ಬರು ಕೊಡುವುದು ಸೂಕ್ತ. ಇದ್ಕೇ ನಿಮ್ಮ ಅಭಿಪ್ರಾಯ ವೇನು ?"

"ನೆವರ್, ಆ ಬಂಗ್ಲೆನ ನಾನು ರಾಮ್‌ಗೆ ಬಿಟ್ಟುಕೊಡೋಲ್ಲ. ಅದ್ರಲ್ಲಿರೋ ಪ್ರತಿಯೊಂದು ನಾನು ಹೊರ್ಗಡೆ ಹೋದಾಗ ಸಾವಿರಾರು ರೂಪಾಯಿ ಕೊಟ್ಟು ಕೊಂಡ್ತಂದು ಅಲಂಕರಿಸಿದ್ದೀನಿ. ಹಾಗೇ ಹೋಗ್ಬೇಕಾದ ಸಂದರ್ಭ ಬಂದರೇ ಆ ಮನುಷ್ಯ ಹೋಗ್ಲಿ" ಮೃಣಾಲಿನಿ ಉದ್ವಿಗ್ನರಾದರು.

"ಅದ್ನ ಕೋರ್ಟು ಹೇಳುತ್ತೆ. ಆಗ ಇಬ್ರೂ ಒಪ್ಪಿಕೋಬೇಕಾಗುತ್ತೆ. ಸುಮ್ನೆ ಯಾಕೆ ಮನಃಶಾಂತಿ ಹಾಳು ಮಾಡ್ಕೋತೀರಾ ! ಅಮೇರಿಕಾ, ರಷ್ಯ ನಡ್ವೆ

ಅಣು ಬಾಂಬ್ ಸ್ಪರ್ಧೆ ಇದ್ದ ಕಾಲದಲ್ಲಿ, ಅದರ ದುಷ್ಪರಿಣಾಮ ವಿವರಿಸುತ್ತ ರಷ್ಯದ ನಾಯಕ ಖುಶ್ಚೋವ್ ಒಂದ್ಮಾತು ಹೇಳಿದ್ರು. The living would envy the dead. ಅಣು ಬಾಂಬ್ ಸಿಡಿತದ ಫಲವಾಗಿ ಸತ್ತವರೇ ಪುಣ್ಯವಂತರು. ಬದುಕಿದ್ದು ರೇಡಿಯೇಷನ್ (ಅಣುವಿಕಿರಣ) ಪರಿಣಾಮ. ಅನುಭವಿಸುವಾಗ ಬದುಕಿರುವವರು ಸತ್ತವರ ಬಗ್ಗೆ ಅಸೂಯೆಪಡುವಂತಾಗುತ್ತೆ. ಕೋರ್ಟು ತನ್ನ ಕೆಲ್ಸ ಮುಗಿಸುತ್ತೆ. ನಂತರ ಪರಿಣಾಮ ಮಾತ್ರ ಬಹಳ ದಿನಗಳವರ್ಗೂ ಇರುತ್ತೆ. ಈಗ್ಲೂ, ಅರ್ಥಮಾಡ್ಕೊಳ್ಳಿ. ಸೀತಾರಾಮ್ ಕೂಡ ನನ್ಗೆ ತಿಳ್ದಂಗೆ ಕೆಟ್ಟ ಮನುಷ್ಯನೇನು ಅಲ್ಲ" ತಾವು ವಕೀಲರು, ಆಕೆ ತನ್ನ ಕಕ್ಷಿಗಾರಳು ಎನ್ನುವುದನ್ನ ಮರೆತು ಒಬ್ಬ ಹಿತೈಷಿಯಂತೆ, ಹಿರಿಯರಂತೆ ಬುದ್ಧಿ ಹೇಳಿದರು.

ಮೃಣಾಲಿನಿ ತಟ್ಟನೆ ಎದ್ದರು. ಮೈಯಲ್ಲಿನ ರಕ್ತವೆಲ್ಲ ಮುಖಕ್ಕೆ ನುಗ್ಗಿದಂತೆ ಕೋಪದಿಂದ ಕೆಂಪು ಕೆಂಪಾದರು.

"ಆ ಘಟ್ಟಗಳೆಲ್ಲ ಮುಗಿದಿದೆ. ಸೀತಾರಾಮ್ ಜೊತೆ ನಾನು ಬದುಕೋಕೆ ಸಾಧ್ಯವಿಲ್ಲ. ಆದಷ್ಟು ಬೇಗ ಡೈವೋರ್ಸ್ ಕೊಡ್ಸಿ. ಸಾಗರ್ ನನ್ಜೊತೆ ಇರ್ಬೇಕು. ದಯವಿಟ್ಟು ನಿಮ್ಮ ಫೀಜಿನ ಬಗ್ಗೆ ಮಾತ್ರ ಮಾತಾಡಿ. ಎಕ್ಸ್‌ಕ್ಯೂಜ್ ಮಿ... ನನ್ನ ಮನಸ್ಸು ಸರ್‍ಯಾಗಿಲ್ಲ" ಆವೇಶ ಕಂಬನಿಯನ್ನ ತರಿಸಿತು.

"ಓಕೆ, ಓಕೆ...ಮೃಣಾಲಿನಿ. ನೀವು ಕೂತ್ಕೊಂಡ್ ರಿಲ್ಯಾಕ್ಸ್ ಮಾಡ್ಕೊಳ್ಳಿ. ಬಂಗ್ಲೆಯ ವಿಷ್ಯದಲ್ಲಿ ನೀವುಗಳೇ ಒಂದು ತೀರ್ಮಾನಕ್ಕೆ ಬನ್ನಿ. ಆಮೇಲೆ ತಮಗೇ ಅನ್ಯಾಯವಾಗಿದೆಯೆಂದು ವಿಲಾಪಿಸುವುದು ಬೇಡ."

ಬಹಳ ಹೊತ್ತು ಮೃಣಾಲಿನಿ ಅವರ ಆಫೀಸ್‌ನಲ್ಲಿಯೇ ಕೂತಿದ್ದಳು. ಹೆತ್ತ ಮಗುವಿನ ಮೇಲೆ ಮಮಕಾರ ಸಹಜ, ಸ್ವಾಭಾವಿಕ. ಬಹುಶಃ ಅದಕ್ಕಿಂತ ಹೆಚ್ಚಾಗಿ ಆಕೆ ತನ್ನ ವೃತ್ತಿಯನ್ನ ಪ್ರೀತಿಸುತ್ತಿದ್ದಳೇನೋ! ಸರಿಯಾಗಿ ನಿರ್ಣಯಿಸುವುದು ಕಷ್ಟವಾಗಿತ್ತು.

ಮನೆಗೆ ಬಂದಾಗ ಅಲ್ಲೋಲ ಕಲ್ಲೋಲ. ಸೀತಾರಾಮ್ ಹೊರಗೆ ಹೋಗಿದ್ದ. ಕೆಲಸಗಾರರ ಜೊತೆ ರಾಣಿ ಕೂಡ ವ್ಯಾಕುಲಗೊಂಡಂತೆ ಕಂಡಳು.

"ಏನಾಗಿದೆ ನಿಮ್ಗೆ ?" ಹುಬ್ಬು ಗಂಟಿಕ್ಕಿದಳು.

"ಸಾಗರ್ ಕಾಣ್ತಾ ಇಲ್ಲ" ಬಾಯಿ ಬಿಟ್ಟಳು ರಾಣಿ.

"ಅವ್ರು, ಕರ್ಕೊಂಡ್ಹೋಗಿರ್ತಾರೆ, ಬಿಡು. ಇದಕ್ಕೆಲ್ಲ ಪೂರ್ಣವಿರಾಮ ಇಡೋ ದಿನ ಹತ್ತಿರದಲ್ಲೇ ಇದೆ."

ಹಿಂಬಾಲಿಸಿದ ರಾಣಿ ಕೈ ಕೈ ಹಿಸುಕಿಕೊಂಡಳು. ಮೂರು ವರ್ಷದಿಂದ ಮೃಣಾಲಿನಿಯ ಪರ್ಸನಲ್ ಸರ್ವೆಂಟ್ ಆಗಿ ಕೆಲಸ ಮಾಡುತ್ತಿದ್ದಳು. ಗಂಡ, ಹೆಂಡತಿ ಒಂದಲ್ಲ ಒಂದು ಸಣ್ಣ ಪುಟ್ಟ ಕಾರಣಗಳಿಗೂ ಮಾತು ಬೆಳೆಸುತ್ತಿದ್ದರು. ಪ್ರತಿ ಸಲವು ವಿಕೋಪಕ್ಕೆ ಹೋಗುತ್ತಿತ್ತು. ಇದೇನು ಗುಟ್ಟಾಗಿರಲಿಲ್ಲ. ಡೈವೋರ್ಸ್ ಹಂತದಲ್ಲಿದ್ದ ದಂಪತಿಗಳು.

"ಮೇಡಮ್, ಸರ್ ಸಾಗರ್‌ನ ಕರ್ಕೊಂಡ್ ಹೋಗ್ಲಿಲ್ಲ" ತುಟಿ ಬಿಚ್ಚಿದ್ದು ಮೆಲ್ಲಗೆ. ಕೂದಲಿಗೆ ಹಾಕಿದ್ದ ಕ್ಲಿಪ್ ಸಡಲಿಸುತ್ತಿದ್ದ ಮೃಣಾಲಿನಿ ಮುಖ ಗಂಟಾಯಿತು. "ಏನಂದೆ, ನೀನು ಸುಳ್ಳು ಪೋಣಿಸೋಕೆ ಷುರು ಮಾಡ್ಬಿಟ್ರೆ, ಕೆಲ್ಸದಿಂದ ಡಿಸ್‌ಮಿಸ್ ಮಾಡಿ ಹೊರಗಟ್ಟಿಬಿಡ್ತೀನಿ" ಜೋರು ಮಾಡಿದರು ಹುಬ್ಬು ಗಂಟಿಕ್ಕಿ.

ತಣ್ಣಗಾದಳು ರಾಣಿ. ಎಲ್ಲಾ ಸಮಯದಲ್ಲು ಮೃಣಾಲಿನಿ ಆವೇಶಕ್ಕೆ ಒಳಗಾಗರೆಂದು ಗೊತ್ತು. ಅವಳ ಪ್ರಕಾರ ಯಜಮಾನಿ ತುಂಬ ಒಳ್ಳೆಯವಳು. ಕಷ್ಟ ಸುಖ ವಿಚಾರಿಸುವುದರ ಜೊತೆಗೆ ಸಹಾಯ ಮಾಡಿದ್ದು ಕೂಡ ಉಂಟು. ಅಂಥದ್ದರಲ್ಲಿ ದಂಪತಿಗಳ ಮಧ್ಯೆ ವಿರಸ ಬಂದುದಾದರೂ ಹೇಗೆ?

ನಿಧಾನವಾಗಿ ಚೇತರಿಸಿಕೊಂಡು "ನಿಜ್ವಾಗ್ಲೂ, ಅವ್ರು ಹೋದಾಗ ನಾನು ಅಲ್ಲೇ ಇದ್ದೆ. ಬಂದ ಫ್ರೆಂಡ್ಸ್ ಜೊತೆ ಮಾತಾಡ್ತಾ ಹೋದ್ರು" ಸ್ಪಷ್ಟ ಚಿತ್ರಣ ಬಿಡಿಸಿಟ್ಟಳು. ಆದರೂ ಅನುಮಾನವೇ ಮೃಣಾಲಿನಿಗೆ.

"ನಿಜ ತಾನೇ ?" ಕಟಕಟೆಯ ಮಧ್ಯೆ ನಿಲ್ಲಿಸಿ ಕೇಳಿದಂತಿತ್ತು.

"ಖಂಡಿತ, ನನ್ನಾಣೆ" ತಲೆಯ ಮೇಲೆ ಕೈಯಿಟ್ಟುಕೊಂಡಳು. ಹೆದರಿದ ಮೃಣಾಲಿನಿ "ಮೊದ್ಲು, ಕೊಳದಲ್ಲಿ ನೋಡ್ಹೋಗು" ಎಂದು ಹಿಂದೆಯೇ ಧಾವಿಸಿದಳು. ಎದೆಯ ಬಡಿತ ಒಂದೇ ಸಮನೆ ಮೂರು ಪಟ್ಟು ಏರಿತು.

ತೀರಾ ಅಚ್ಚುಕಟ್ಟಾಗಿದ್ದ ಸ್ವಿಮ್ಮಿಂಗ್ ಪೂಲ್‌ನೊಳಕ್ಕೆ ಧುಮುಕಿ ಆಳುಗಳು ತಡಕಾಡಿ ಹೊರಗೆ ಬಂದು ತಲೆಯಾಡಿಸಿದರು. ಇಡೀ ಪರಿಸರ ಶೋಧನೆ ಗೊಳಪಟ್ಟಿತು. ಸಾಗರ್ ನಾಪತ್ತೆ. ಇಲ್ಲಿ ಅವನಿಗೆ ಸ್ನೇಹಿತರು, ತಿಳಿದವರು ಯಾರಿಲ್ಲ. ಎಲ್ಲಿಗೆ ಹೋಗಿರಬಹುದು? ಮತ್ತೆ ಷುರುವಾಯಿತು ಅನ್ವೇಷಣೆ.

"ಯಜಮಾನ್ರಿಗೆ ಫೋನ್ ಮಾಡಿ ವಿಷ್ಯ ತಿಳಿಸೋಣ್ವಾ? ರಾಣಿ ಕೇಳಿದಾಗ ಆ ಸಮಯದಲ್ಲೂ ಆಕೆ ರಾಜಿಯಾಗಲು ಇಷ್ಟಪಡಲಿಲ್ಲ. ಬೇಡ ಸುಮ್ನೆ ಅವ್ರವರ್‍ಗ್ಗೆ...ಯಾಕೆ ? ಇನ್ನೊಂದ್ಸಲ ಎಲ್ಲಾ ಕಡೆ ಹುಡ್ಕಿ ಆಜ್ಞೆಮಾಡಿ ಜೋಲು ಮುಖ ಹೊತ್ತು ರೂಮಿಗೆ ಬಂದು ಹಾಸಿಗೆಯ ಮೇಲೆ ಕುಕ್ಕರಿಸಿದ್ದು ತೀರಾ

ಸೋತು. ಎಲ್ಲಿ ಹೋದ ಸಾಗರ್? ಇದೆಲ್ಲ ತೀರಾ ಪಂಚಾಯಿತಿಯೆನಿಸಿತು. ವೆಕೆಷನ್‌ನಲ್ಲಿಯು ಅಲ್ಲೇ ಇರಿಸಿಕೊಳ್ಳುವ ಏರ್ಪಾಟು ಮಾಡಬೇಕಿತ್ತು, ಎನ್ನುವುದನ್ನ ಹತ್ತು ಸಲವಾದರೂ ಅಂದು ಕೊಂಡರು. ಈಗ ಮಗ ದೊಡ್ಡ ಸಮಸ್ಯೆಯಾಗಿ ಕಂಡ. ಹಲವು ಸಮಸ್ಯೆಗಳ ಬೂದಿಯಲ್ಲಿ ತಾನೇ ! ಅಂಥದ್ದರಲ್ಲಿ ಸಾಗರ್ ಕಗ್ಗಂಟಾಗಿ ಕಂಡ. ತಾಯ್ತನ ಸ್ವಲ್ಪ ಹೊತ್ತು ಮರೆಯಾಗಿತ್ತೇನೋ !"

ಸಂಜೆಯ ಕ್ಲೀನಿಂಗ್‌ಗೆ ಬಂದ ನರಸಕ್ಕ ವಿಷಯ ಮುಟ್ಟಿಸಿದಾಗ ಎಲ್ಲಾ ಹೌ ಹಾರಿದರು. ಸಾಗರ್ ಒದ್ದೆಯ ಮೈಯಲ್ಲಿಯೇ ಮಂಚದಡಿಯಲ್ಲಿ ಮಲಗಿ ನಿದ್ರಿಸಿಬಿಟ್ಟಿದ್ದ. ಮಗನನ್ನ ಕೆಲವು ಕ್ಷಣ ಅಪ್ಪಿಕೊಂಡು ಮೈ ಮರೆತರೂ ಛೀಮಾರಿ ಹಾಕಿದರು.

"ದರ್ಟಿ ಬಾಯ್, ನಿಂಗೆ ಸ್ವಲ್ಪ ಕೂಡ ಸೆನ್ಸ್ ಇಲ್ಲ. ನೀನು ಶಾಲೆಯಲ್ಲಿ ಕಲಿತಿದ್ದೇನು? ವೆಕೇಷನ್‌ನಲ್ಲಿ ಕೂಡ ನಿನ್ನ ಅಲ್ಲೇ ಇರಿಸ್ಬೇಕಿತ್ತು."

ಬಿಟ್ಟ ಕಣ್ಣುಗಳಿಂದ ತಾಯಿಯನ್ನ ನೋಡಿದ. ಟೀಪಾಯಿ ಮೇಲಿದ್ದ ವಾಜ್‌ನ ಎತ್ತಿ ನೆಲಕ್ಕೆ ಕುಕ್ಕಿದ ರೋಷದಿಂದ. ಕಾಶ್ಮೀರಕ್ಕೆ ಹೋದಾಗ ಕೊಂಡು ತಂದದ್ದು. ಮೃಣಾಲಿನಿಯ ಮುಂದೆ ಚೂರುಗಳಾಗಿ ಸುತ್ತುವರಿದಾಗ ಫಟಾರನೆ ಕೆನ್ನೆಗೊಂದು ಬಿಟ್ಟರು.

"ರಾಣಿ, ಇವ್ನ ಕರ್ಕೊಂಡ್ಹೋಗು. ರಾತ್ರಿಗೂ ಏನು ಕೊಡ್ಬೇಡ, ಅದೇ ಪನಿಷ್‌ಮೆಂಟ್" ಕನಲಿದರು.

ಮುಖ ತಿರುಗಿಸಿಕೊಂಡು ಹೋದ ಸಾಗರ್ ಹಾಸಿಗೆಯ ಮೇಲೆ ಬಿದ್ದುಕೊಂಡ. ಈ ವಿಷಯಕ್ಕೆ ರಾತ್ರಿ ಸೀತಾರಾಮ್ ಮತ್ತು ಮೃಣಾಲಿನಿಯ ನಡುವೆ ದೊಡ್ಡ ಗಲಾಟೆ ಆಯಿತು. ಅದು ಒಂದು ಹಂತಕ್ಕೆ ಬಂದೇ ಬಿಟ್ಟಿತು.

"ಕೋರ್ಟು ಡಿಸಿಷನ್ ಬರೋವರ್ಗೂ ಬಂಗ್ಲೆನ ಯಾರು ಉಪಯೋಗಿ ಸೋದ್ಬೇಡ."

ಮೃಣಾಲಿನಿಯ ಈ ಸಲಹೆಗೆ ಬಡಪೆಟ್ಟಿಗೆ ಸೀತಾರಾಮ್ ಒಪ್ಪಲಿಲ್ಲ. "ನೀನು ಬೇಕಾದ್ರೆ...ಹೋಗು. ನಾನು ಇಲ್ಲಿರೋನೇ ! ಬಂಗ್ಲೆ ನನ್ನ ಪಾಲಿಗೆ ಬರ್ಬೇಕು."

ಅರ್ಧ ರಾತ್ರಿಯವರೆಗೂ ವಾದ ಜಗಳವಾಗಿ ಮುಂದುವರಿಯಿತು. ಯಾರು ಸೋಲಲಾರರು. ಪ್ರೇಕ್ಷಕನಾಗಿ ನೋಡಿದ ಸಾಗರ್ ಶ್ರದ್ಧೆಯಿಂದ ಆಲಿಸಿದ. ಕೆಲವೊಮ್ಮೆ ಶಾಲೆ, ಕ್ರೀಡಾಂಗಣದಲ್ಲಿ ಸಂಗಡಿಗರು ಜಗಳವಾಡುತ್ತಿದ್ದುದ್ದುಂಟು. ಅವನು ಕೂಡ ಸಹಪಾಠಿಗಳೊಂದಿಗೆ ಜಗಳವಾಡುತ್ತಿದ್ದ. ಆ ಜಗಳ ಒಂದು ಹಂತಕ್ಕೆ ಮುಕ್ತಾಯವಾಗಿ ಒಂದಾಗಿ ನಲಿಯುತ್ತಿದ್ದರು.

ಆ ದಿನಕ್ಕಾಗಿ ಕಾದ. ಇವನ ಹಾಲಿಡೇಸ್ ಮುಗಿದರೂ ಅವರಿಬ್ಬರು ಒಂದಾಗುವ ಲಕ್ಷಣ ಕಾಣಲಿಲ್ಲ. 'ಇನ್ನೇನು ಡೈವೋರ್ಸ್ ಸಿಕ್ಕರೆ ಬೇರೆ ಬೇರೆಯಾಗಿ ಬಿಡ್ತಾರೆ. ಈ ಬಡಿದಾಟಕ್ಕಿಂತ ಅದೇ ವಾಸಿ' ಇದನ್ನು ಮನೆಯ ಆಳುಕಾಳುಗಳು ಆಡಿಕೊಳ್ಳುತ್ತಿದ್ದುದ್ದು ಅವನ ಕಿವಿಗೆ ಬೀಳುತ್ತಿತ್ತು.

"ನಾಳೆ ಹೋಗ್ತಾ ಇದ್ದೀಯಾ ?" ಮೃಣಾಲಿನಿ ಆಫೀಸ್‌ಗೆ ಹೋಗುವ ಮುನ್ನ ಕೇಳಿದಾಗ, ಸಾಸ್ ಕುಡಿಯುತ್ತಿದ್ದವನು ಬಟ್ಟಲೆತ್ತಿ ನೆಲಕ್ಕೆ ಒಗೆದ. "ನಾನು ಹೋಗೋಲ್ಲ" ದಿಟ್ಟನಾಗಿ ನುಡಿದ.

ಸೀರೆಯ ನೆರಿಗೆಗಳನ್ನ ಸರಿಪಡಿಸಿಕೊಳ್ಳುತ್ತಿದ್ದ ಆಕೆ ಅವನತ್ತ ತಿರುಗಿದರು "ಹಾಲಿಡೇಸ್ ಮುಗ್ದುಹೋಯ್ತು. ಸ್ಕೂಲಿಗೆ ಅಟೆಂಡ್ ಆಗ್ಬೇಕಲ್ಲ" ಎಚ್ಚರಿಕೆಯನ್ನ ಗಮನಿಸುವ ಮನಸ್ಥಿತಿಯಲ್ಲಿರಲಿಲ್ಲ "ಹೋಗೋಲ್ಲ" ಎಂದು ನುಡಿದು ಆಚೆಗೆ ಹೋದ.

ಗಂಡ, ಹೆಂಡತಿ ಬೇರೆ ಬೇರೆಯಾಗಿ ಶತಃ ಪ್ರಯತ್ನ ಮಾಡಿ ಸೋತರು. ಒಟ್ಟಾಗಿ ಪ್ರಯತ್ನಿಸಿದ್ದರೇ ಫಲ ಕೊಡುತ್ತಿತ್ತೇನೋ, ಆ ಮನಸ್ಥಿತಿ ಅವರದಲ್ಲ. ಸಧ್ಯಕ್ಕೆ ಅಲ್ಲೇ ಇರುವ ಬೋರ್ಡಿಂಗ್‌ನಲ್ಲಿ ಬಿಡಲು ಒಪ್ಪಿಸಿದರು ತಾತ್ಕಾಲಿಕವಾಗಿ. ಸಧ್ಯದಲ್ಲೇ ಡೈವೋರ್ಸ್ ಸಿಗುತ್ತಿತ್ತು, ನಂತರ ಅವನು ಯಾರ ಬಳಿಯಲ್ಲಿ ಇರಬೇಕು, ಯಾರು ಸಾಗರ್‌ನ ಲಲನೆ ಪಾಲನೆಯ ಹೊಣೆ ಹೊರಬೇಕು ಎನ್ನುವುದು ತೀರ್ಮಾನವಾಗಬೇಕಿತ್ತು.

ಆರು ತಿಂಗಳ ನಂತರ ಮೃಣಾಲಿನಿ, ಸೀತಾರಾಮ್‌ಗೆ ಡೈವೋರ್ಸ್ ಕೊಡುವ ಮುನ್ನ ಸಾಗರ್‌ನ ಕೋರ್ಟಿಗೆ ಕರೆಸಿ ಜಡ್ಜ್ ಪ್ರಶ್ನಿಸಿದಾಗ ಅವನು ದುರುಗುಟ್ಟಿಕೊಂಡು ನೋಡಿದ ತಾಯ್ತಂದೆಯರನ್ನ "ನೋ, ನೆವರ್ ನಂಗೆ ಇವ್ರಿಂದ ಡೈವೋರ್ಸ್ ಬೇಕು. ನಂಗೆ ಯಾರೂ ಇಷ್ಟವಿಲ್ಲ" ಕೋರ್ಟಿನಲ್ಲಿಯೇ ಜನರೆಲ್ಲ ಬೆರಗಾಗುವಂತೆ ನುಡಿದ.

ಜಡ್ಜ್ ನೊಂದರು. ಅವರು ಅವನನ್ನ ತಮ್ಮ ರೂಮಿಗೆ ಕರೆಸಿಕೊಂಡು ಬುದ್ಧಿ ಹೇಳಿದರು. ಪ್ರೀತಿಯಲ್ಲಿ ಹೆತ್ತವರ ಬಗ್ಗೆ ಅವನಿಗೆ ದ್ವೇಷವಿತ್ತು, ಅಸಹ್ಯವಿತ್ತು.

'ಇಷ್ಟ ಬಂದವರೊಂದಿಗೆ ಇರಬಹುದು. ಅವನ ಲಾಲನೆ ಪಾಲನೆಯ ಹೊಣೆ ಇಬ್ಬರದು. ಪ್ರತಿಷ್ಠೆಗಳನ್ನ ಪಣವಾಗಿಡುವ ಮುನ್ನ ದಂಪತಿಗಳು ತಮ್ಮ ಸಂತಾನವನ್ನು ಕುರಿತು ಯೋಚಿಸಬೇಕಾದ ಅಗತ್ಯವಿದೆ' ಎನ್ನುವ ಐತಿಹಾಸಿಕ ತೀರ್ಪನ್ನ ನೀಡಿದರು.

ನೆನಪುಗಳು ಒತ್ತಿಕೊಂಡು ಬಂದಾಗ, ಅವನ್ನ ಕೊಡವಿಕೊಂಡು ಬಂದು

ಸಾಗರ್ ಕಿಟಕಿಯ ಬಳಿ ನಿಂತ. ನಿರಂತರವಾಗಿ ನುರಿದ ಭೂಮಿಯ ವಿರಹವನ್ನ ಇಂಗಿಸಿದ್ದರೇ, ಆಹ್ಲಾದಕರವಾದ ವಾಸನೆ ಎಲ್ಲೆಡೆ ಹರಡಿತ್ತು.

ಹೋಗಿ ತೂಗುಮಣೆಯ ಮೇಲೆ ಕೂತ. ಮೊದಲಿನದೇ 'ಜಿರ, ಜಿರ' ಸದ್ದು. ಹೆಚ್ಚು ಕರ್ಕಶವೆನಿಸಿದಾಗ ಇಳಿದು ಅದನ್ನ ಸದ್ದಿಲ್ಲದಂತೆ ನಿಲ್ಲಿಸಲು ಶ್ರಮಪಟ್ಟ.

ನೋಟ ಮೇಲಕ್ಕೆತ್ತಿದ. ಛಾವಣಿ ಕೂಡ ಅತ್ಯಂತ ಸುಭದ್ರವಾಗಿತ್ತು. ಇದರ ಮಾಲೀಕರಾದ ಅಪ್ಪಯ್ಯ ಶಾಸ್ತ್ರಿಗಳು ಮತ್ತು ಅವರ ಸಂಸಾರದ ಬಗ್ಗೆ ಅವನಿಗೆ ಆಸಕ್ತಿ ಇಲ್ಲ.

"ನಾನು ಕಲ್ಲೇಶಿ" ಕೂಗಿದ ಬಾಗಿಲಲ್ಲಿ ನಿಂತು.

"ಬಾರೋ...ಒಳಕ್ಕೆ" ತಲೆ ಕೆಳಗೆ ಬ್ಯಾಗು ಇಟ್ಟುಕೊಂಡು ನೆಲದ ಮೇಲೆ ಮಲಗಿದ್ದ ಅವನು ಸಿಗರೇಟು ಹಚ್ಚಿದ್ದ. ತಟ್ಟೆಯಲ್ಲಿ ಮುಚ್ಚಿ ತಂದಿದ್ದ ತಿಂಡಿ ಮತ್ತು ಕುಡಿಯುವ ನೀರು ತುಂಬಿದ್ದ ಚಂಬನ್ನ ಉಯ್ಯಾಲೆ ಮೇಲಿಟ್ಟ. ಮಾಮೂಲಿ 'ಜಿರ, ಜಿರ' ಸದ್ದು ಷುರುವಾದಾಗ, ಸಾಗರ್ ಎರಡು ಕೈಗಳಲ್ಲಿ ತಲೆಯನ್ನಿಡಿದುಕೊಂಡ "ನಿಲ್ಲಿಸದಿದ್ದರೇ, ನಿನ್ನ ತಲೆಯೊಡಿತೀನಿ" ಕೂಗಿದವನು ಎದ್ದು ಕೂತ.

ಕಲ್ಲೇಶಿ ಅದನ್ನ ನಿಲ್ಲಿಸಿ ಬಂದವನು ಅದನ್ನ ನೆಟ್ಟ ನೋಟದಿಂದ ದಿಟ್ಟಿಸಿದ. ಬಾಗಿಲ ಬಳಿ ನಿಂತು ನೋಡಿದ್ದನೇ ವಿನಃ ಎಂದೂ ಒಳಗೆ ಬಂದಿರಲಿಲ್ಲ. ಸರೋಜಮ್ಮ ಎಲ್ಲರು ಒಳಗೆ ಬರುವುದನ್ನ ನಿಷೇಧಿಸಿದ್ದರು.

"ಅಕ್ಕ, ಶಾಸ್ತ್ರಿಗಳ ಮನೆ ಉಯ್ಯಾಲೆಯಲ್ಲಿ ಒಂದ್ಸಲ ಕೂತು ತೂಗಿಕೋಬೇಕಲ್ಲ" ಆಸೆ ವ್ಯಕ್ತಪಡಿಸಿದಾಗ ಗೌರಿಯ ಕಣ್ಣುಗಳಲ್ಲಿ ಇಣಕಿದ್ದು ಭಯ. ಅದನ್ನ ಮುಟ್ಟಬಾರದೆಂದು ಸನ್ನೆಯಿಂದಲೇ ಹೇಳಿದ್ದಳು. ಅಂದೇ ಅಕ್ಕ ತಮ್ಮ ಮನೆಯ ಮುಂದಿನ ಮರಕ್ಕೆ ಹಗ್ಗದಿಂದ ಒಂದು ಉಯ್ಯಾಲೆ ಕಟ್ಟಿದ್ದರು. ಇಡೀ ದಿನ ತೂಗಿಕೊಂಡ ಮೇಲೆ ಆಸಕ್ತಿ ಮುದುರಿತ್ತು. ಆಮೇಲೆ ಕಲ್ಲೇಶಿ ಆ ಕಡೆ ನೋಟ ಹರಿಸಿದ್ದಿಲ್ಲ. ಬೇರೆ ತೂಗಿ ತೂಗಿ ಕಿತ್ತೆಸೆದ ಹಗ್ಗ ಮಾತ್ರ ಮರದ ಬುಡದಲ್ಲಿ ಬಿತ್ತು. ಆಗಾಗ ಸೌದೆ ತರಲು ಅದನ್ನ ಒಯ್ದರು, ಆಮೇಲೆ ತಂದು ಅಲ್ಲೇ ಹಾಕುತ್ತಿದ್ದ.

"ಒಂದಿಷ್ಟು ಅಚ್ಚುಕಟ್ಟು ಮಾಡಿಕೊಡ್ಬಾಂದ್ರು, ಅಮ್ಮಾವ್ರು. ಸ್ನಾನ ಮಾಡ್ಕೋತೀರಾ?" ವಿಚಾರಿಸಿದವನು ಈಚೆಗೆ ಬಿಡುಗಡೆಯಾದ ಯಾವುದೋ ಚಿತ್ರದ ಹಾಡು ಗುನುಗತೊಡಗಿದ.

"ಕಲ್ಲೇಶಿ, ಜಾಗ ಖಾಲಿ ಮಾಡು. ನಾಳೆವರ್‍ಗೂ ಮುಖ ತೋರಿಸ್ಬೇಡ" ಅವನ್ನ ರಟ್ಟೆ ಹಿಡಿದು ಒರಗೆ ಕಳಿಸಿ ಬಾಗಿಲು ಹಾಕಿದ. ಒಂಟಿತನ ಅಭದ್ರ ಸ್ಥಿತಿ ಅವನಿಗೆಲ್ಲ ಅಭ್ಯಾಸವೇ.

ಬ್ಯಾಗ್‌ನಲ್ಲಿದ್ದ ಬಟ್ಟೆಗಳನ್ನೆಲ್ಲ ಕಿತ್ತೆಸೆದು ಕೊನೆಯಲ್ಲಿದ್ದ ಸೀಸೆ ತೆಗೆದು ಉಳಿದ ದ್ರವವನ್ನ ಬಾಯಿಗೆ ಸುರಿದುಕೊಂಡು ಬಂದು ಉಯ್ಯಾಲೆಯ ಮೇಲೆ ಕೂತವನು ಹಾಗೆಯೇ ಒರಗಿಕೊಂಡ ಕಾಲು ನೀಡಿ. ಆಮೇಲೆ ಎದ್ದು ಕೂತ. ಬಿಕ್ಕಿ ಬಿಕ್ಕಿ ಅತ್ತ. ಮತ್ತೆ ಮಲಗಿದ. ಅತ್ತು ಅತ್ತು ಸೊರಗಿದ ನಂತರವೇ ನಿದ್ದೆ ಬಂದಿದ್ದು.

ಅವನಿಗೆ ಎಚ್ಚರವಾದಾಗ ಮತ್ತೆ ಮಳೆ ಸುರಿಯುತ್ತಿತ್ತು. ಮುಗಿಲು ನೆಲದ ವಿರಹವನ್ನ ತಣಿಸಲು ಪ್ರೀತಿಯ ಧಾರೆಯನ್ನೆರಸುತ್ತಿತ್ತು. ಎದ್ದು ಕೂತಾಗ ಅವನಿಗೆ ಮತ್ತೆ 'ಜಿರ, ಜಿರ' ಸದ್ದು ಕೇಳಿಸಿತು. ಮತ್ತೆ ನಿಲ್ಲಿಸಿದ್ದು ಪ್ರಯಾಸದಿಂದಲೇ. ಸ್ವಲ್ಪ ಹಸಿವೆನಿಸಿತು. ಎದ್ದು ಎಲ್ಲಾ ಬಾಗಿಲುಗಳನ್ನು ತೆರೆದ. ಬಹುಶಃ ಅದು ದೇವರ ಮನೆ ಇರಬಹುದು. ಚಿತ್ತಾಕರ್ಷಕವಾದ ಹಸೆಗಳು. ಕಲಾವಿದನ ಕುಂಚದಿಂದ ಮೂಡಿ ಬಂದಷ್ಟು ಸೊಗಸಾಗಿದ್ದವು. ಕೆಂಪು ನೆಲದ ಮೇಲೆ ಬಿಳಿಯ ರಂಗೋಲಿಯ ವೈಭವ.

ಬಹಳ ಇಷ್ಟವೆನಿಸಿತು. ಅಲ್ಲೇ ನೆಲದ ಮೇಲೆ ಕೂತ. ರಂಗೋಲಿ ಎಲ್ಲಿ ಪ್ರಾರಂಭವಾಗಿ ಎಲ್ಲಿ ಮುಕ್ತಾಯವಾಗುತ್ತದೆ? ತಲೆ ಕೆರೆದುಕೊಂಡ, ಆದರೂ ಪ್ರಾರಂಭ, ಮುಕ್ತಾಯ ಅವನಿಗೆ ತೋಚಲಿಲ್ಲ. ಹಾಗೇ ಅವನ ನೋಟ ಸರಿಯಿತು. ಕೆಂಪು ಜಗುಲಿಯ ಮೇಲೆ ಶಂಖ, ಚಕ್ರ, ಪದ್ಮನ ಬಿಡಿಸಿ, ಅಂಚಿಗೆ ಬಳ್ಳಿಯನ್ನ ಬಿಡಿಸಿದ್ದು ಚೇತೋಹಾರಿಯಾಗಿ ಕಂಡಿತು.

ಎದ್ದು ಪಕ್ಕದ ಕೋಣೆ ಪ್ರವೇಶಿಸಿದ.

ದೊಡ್ಡ ಕರಿಮರದ ಗಟ್ಟಿಯಾದ ಮಂಚವೊಂದಿತ್ತು. ಏಕಕಾಲಕ್ಕೆ ಹತ್ತು ಜನ ಮಲಗಿದರೂ, ಎಲ್ಲರ ಭಾರವನ್ನ ಹೊರಬಲ್ಲಂಥ ಸಾಮರ್ಥ್ಯ ವಿದ್ದ ಮಂಚ. ಸಣ್ಣ ಪದರದ ಧೂಳು ಇತ್ತೇನೋ, ಆದರೆ ಇಡೀ ಕೋಣೆ ಅಚ್ಚುಕಟ್ಟಾಗಿತ್ತು. ಸಧ್ಯಕ್ಕೆ ಹಾಸಿಗೆ ಯೋಚನೆ ಇಲ್ಲವಾಯಿತು. ಆರಾಮಾಗಿ ಮಲಗಿದ. ಮಂಕು ವಾತವಾರಣ ಬೇಸರವೆನಿಸಿ ಕಿಟಕಿಗಳನ್ನ ತೆರೆದ. ಹೊರಗಿನ ದೃಶ್ಯ ಚೇತೋಹಾರಿ.

ಮುಂಬಾಗಿಲ ಚಿಲಕ ತೆಗೆದು ಬಾಗಿಲನ್ನು ತೆರೆದಿಟ್ಟ. ಎದ್ದು ನಾಲ್ಕು ಮೆಟ್ಟಲುಗಳನ್ನು ಜೋಡಿಸಿ ಎತ್ತರಕ್ಕೆ ಪಾಯ ಹಾಕಿಟ್ಟಿದ್ದು ತೀರಾ

ಮುಂದಾಲೋಚನೆಯಿಂದಲೇ. ಸುತ್ತಲು ಮಳೆ ಸುರಿದು ಹೊಳೆಯಲ್ಲಿ ಪ್ರವಾಹ ಹೆಚ್ಚಾದರೇ ಬಂಡೆಗಳನ್ನು ಬಳಸಿಕೊಂಡು ಊರಿನೊಳಕ್ಕೆ ಸುಲಭವಾಗಿ ನೀರು ಹರಿಯಬಹುದಿತ್ತು. ಮನೆ ಎತ್ತರದಲ್ಲಿ ಇದ್ದುದ್ದರಿಂದ ನೀರು ಒಳಗೆ ಹರಿಯುವುದು ವಿಪರೀತ ಸಂದರ್ಭಗಳಲ್ಲಿ ಮಾತ್ರ.

ಬೀದಿಯಲ್ಲಿ ಹರಿಯುತ್ತಿದ್ದ ನೀರನ್ನ ನೋಡುತ್ತ ನಿಂತ. ದೂರದಲ್ಲಿ ಕೆಲವರು ಓಡಾಡುತ್ತಿರುವುದು ಕಾಣಿಸಿತು. ಮೊಣಕಾಲು ಮಟ್ಟದ ನೀರು ಹರಿಯುತ್ತಿತ್ತು ರೋಡಿನಲ್ಲಿ.

ಮತ್ತೆ ಒಳಕ್ಕೆ ಬಂದ. ಮುಚ್ಚಿ ತಂದ ತಿಂಡಿ ಹಾಗೆಯೇ ಇತ್ತು. ಅವನಿಗೆ ಮೃಣಾಲಿನಿಯ ನೆನಪಾಯಿತು. ವೈಯಕ್ತಿಕ ಜೀವನಕ್ಕಿಂತ ತನ್ನ ವೃತ್ತಿ ಹೊರಗಿನ ಸಮಾಜಕ್ಕೆ ಹೆಚ್ಚು ಸ್ಪಂದಿಸಿದ ಆಕೆ ಮಗನ ಬಗ್ಗೆ ಅಷ್ಟೇನು ಗಮನ ಹರಿಸುತ್ತಿರಲಿಲ್ಲ. ಆದರೆ ತೀರ್ಮಾನದಂತೆ ಒಂದು ವಾರ ಈ ಬಂಗ್ಲೆಯಲ್ಲಿ, ಮತ್ತೊಂದು ವಾರ ಸೀತಾರಾಮ್ ಕೊಂಡಿರುವ ಮನೆಯಲ್ಲಿರುವ ಒಪ್ಪಂದ ಜಾರಿಯಲ್ಲಿದ್ದರೇ ಸಾಕಿತ್ತು. ಆ ಅವಧಿಯ ಮಗನ ಖರ್ಚುವೆಚ್ಚಗಳು ಅವರದೇ. ಅದನ್ನ ಮೃಣಾಲಿನಿ, ಸೀತಾರಾಮ್ ಇಬ್ಬರು ಕರಾರುವಾಕ್ಕಾಗಿ ಪಾಲಿಸುತ್ತಿದ್ದರು.

ಸಾಗರ್ ಸ್ವಂತ ಅಕೌಂಟ್‌ನಲ್ಲಿ ಒಬ್ಬರ ಮೇಲೊಬ್ಬರು ಜಿದ್ದು ಸಾಧಿಸುವಂತೆ ಹಣ ಹಾಕುತ್ತಿದ್ದರು. ವೀಸಾ ಕಾರ್ಡ್ ಕೊಡಿಸಿದರು ಮಗನಿಗೆ ಸೀತಾರಾಮ್. ಮೃಣಾಲಿನಿ ಕೂಡ ಹಿಂದೆ ಬೀಳಲಿಲ್ಲ. ಆದ್ದರಿಂದ ಅವನಿಗೆ ಎಂದೂ ಹಣದ ವಿಷಯದಲ್ಲಿ ಪರದಾಡಿದ್ದೇ ಇಲ್ಲ.

ಒಂಟಿಯಾಗಿ ಮೃಣಾಲಿನಿಗೆ ಊಟ ಮಾಡಿ ಅಭ್ಯಾಸವೇ. ತಾಯಿಯು ಊಟದ ಸಂದರ್ಭದಲ್ಲಿ ಸಾಗರ್ ಅಲ್ಲಿ ಸುಳಿದರೇ "ನಿನ್ನ ಊಟ ಆಗಿಲ್ವಾ?" ಆ ಪ್ರಶ್ನೆಯ ಜೊತೆ ಓದಿನ ಬಗ್ಗೆ ಒಂದೆರಡು ಮಾತುಗಳನ್ನ ಪ್ರಸ್ತಾಪಿಸಿ ಕರ್ತವ್ಯ ಮಾಡುತ್ತಿದ್ದರು.

ಮುಚ್ಚಿದ್ದ ತಟ್ಟೆಯನ್ನ ತೆಗೆದ. ಆರಿ ಪೂರ್ತಿ ತಣ್ಣಗಾಗಿತ್ತು. ತುಸು ಹಳದಿಯ ಬಣ್ಣಕ್ಕೆ ತಿರುಗಿದ ರೊಟ್ಟಿಯಲ್ಲಿ ಅಲ್ಲಲ್ಲಿ ಹಸಿರು ಕಾಣಿಸುತ್ತಿತ್ತು. ಬಹುಶಃ ಕೊತ್ತಂಬರಿ ಸೊಪ್ಪು ಹೆಚ್ಚಿ ಹಾಕಿರಬೇಕು. ಅವನಿಗೆ ಅಡಿಗೆಯ ಮನೆಯ ಪರಿಚಯವಿರಲಿಲ್ಲ. ಹೊಟ್ಟೆ ಹಸಿದಿತ್ತು. ಹೊರಗೆ ಸುರಿಯುವ ಮಳೆ. ಒಳಗೆ ಚಳಿ. ಆ ಸಮಯದಲ್ಲಿ ಅಮೃತಕ್ಕೂ ಕೂಡ ಈ ರುಚಿ ಇರಲಿಲ್ಲ.

ಬಿಳಿಗಿರಿಯವರು ಬಾಗಿಲವರೆಗೂ ಬಂದು ಇಣಕಿದರು.

"ಆರಾಮಾಗಿ ಒಳ್ಗೇ ಸೇರ್ಕೊಂಡ್ ಬಾಗ್ಲು ಹಾಕ್ಕೊಂಡ್‌ಬಿಟ್ಟ. ಅಪ್ಪಯ್ಯ

ಶಾಸ್ತ್ರಿಗಳ ಹಿರಿ ಮಗ ನೇಣು ಹಾಕ್ಕೊಂಡಿದ್ದು ನೆನ್ನೆ ಮೊನ್ನೆ ನಡೆದಂಗಿದೆ. ನಮ್ಮಿಂದ ತಪ್ಪಾಯ್ತು" ಪೇಚಾಡಿಕೊಂಡರು.

ತಿರುಮಲಾಂಬ ಮುಖದಲ್ಲು ಕಾಣಿಸಿದರೂ ಕಾಣಿಸದಂಥ ಕಾರ್ಮೋಡಗಳು ಮೂಡಿ ನಿಧಾನವಾಗಿಯಾದರೂ ಕರಗದೆ ಅಲ್ಲೇ ತಮ್ಮ ಅಸ್ತಿತ್ವ ಉಳಿಸಿಕೊಂಡವು. ಆದರೂ ಆಕೆ ಧೈರ್ಯಗೆಡಲಿಲ್ಲ.

"ತುಂಬಿ ಹರಿಯೋ ಹೊಳೆ, ಬಂಡೆಗಳ ನಡ್ವೇ ಓಡಾಡಿ ಅಪಾಯ ತಂದುಕೊಳ್ಳೋ ಬದ್ಲು....ಶಾಸ್ತ್ರಿಗಳ ಮನೆಯಲ್ಲಿ ಇರ್ಲಿ. ಅಸಾಧ್ಯದ ಹುಡ್ಗ! ಯಾವುದಕ್ಕೂ ಹೆದರದ ಗಂಡೆದೆ ಇದೆ." ಮೆಚ್ಚಿಗೆಯಾಡಿದರು ಅವನ ಬಗ್ಗೆ.

ಸುಮ್ಮನೆ ಕೂರದ ಗೌರಿ ಮಂಕು ಕಟ್ಟಿದ ಹಿತ್ತಾಳೆ, ಕಂಚಿನ ಪಾತ್ರೆಗಳನ್ನ ಬಚ್ಚಲಲ್ಲಿ ಹಾಕಿಕೊಂಡು ತಿಕ್ಕಿ ತಿಕ್ಕಿ ಹಿತ್ತಲ ದೋಣಿಯಿಂದ ಇಳಿಯುವ ಮಳೆಯ ನೀರಲ್ಲಿ ಫಳ ಫಳ ತೊಳೆದು ಬೋರಲು ಹಾಕುವ ಕೈಂಕರ್ಯ ಹಮ್ಮಿಕೊಂಡಿದ್ದಳು. ಕ್ಷಣ ಒಂದೆಡೆ ಕೂರುವ ಹುಡುಗಿಯಲ್ಲ. ಇದ್ದ ಮನೆಯ ಸುತ್ತ ಒಂದು ಮುಳ್ಳಿನ ಬೇಲಿ ಹಾಕಿಕೊಂಡು ಹೂಗಿಡಗಳ ಜೊತೆ, ಒಂದಿಷ್ಟು ಕಾಯಿಪಲ್ಲೆಗಳನ್ನು ಹಾಕಿಕೊಂಡಿದ್ದಳು. ಕಾಲದಲ್ಲಿ ಸೇರುಗಟ್ಟಲೆ ಮೊಗ್ಗುಗಳನ್ನ ಬಿಡುವ ಮಲ್ಲಿಗೆ ಬಳ್ಳಿ ಇಬ್ಬರ ಹೊಟ್ಟೆಯ ಹಸಿವನ್ನ ಹಂಗಿಸುವಷ್ಟು ಸಮರ್ಥವಾಗಿತ್ತು. ಅರ್ಧ ದಿನ ಮೊಗ್ಗು ಬಿಡಿಸಿ ಕಟ್ಟುವುದರಲ್ಲಿಯೇ ಅವಳ ಸಮಯ ಮುಗಿದುಹೋಗುತ್ತಿತ್ತು. ಅದು ಇಷ್ಟವಾದ ಕೆಲಸವು ಕೂಡ ಹೌದು.

ರಾತ್ರಿ ಬಿದ್ದ ಮಳೆಗೆ ಅದೆಲ್ಲ ನುಚ್ಚು ನೂರಾಗಿ ಗಿಡಗಳೆಲ್ಲ ಚಲ್ಲಾಪಿಲ್ಲಿ ಯಾಗಿ ನೀರಿನಲ್ಲಿ ಕೊಚ್ಚಿಕೊಂಡು ಹೋಗಿತ್ತು. ಆ ಸಮಯದಲ್ಲಿ ಸಮಸ್ತವು ಕೊಚ್ಚಿ ಹೋದಂತೆ ದುಃಖಿಸಿದ್ದಳು.

"ಸಾಕು ತೆಗೀ, ಗೌರಿ. ಇನ್ನೆಷ್ಟು ತೊಳೀತೀಯಾ? ನೆಂದು ತೊಪ್ಪೆಯಾಗ್ಬಂದೆ. ನಾಳೆ ನೀನು ಮಲ್ಗಿದ್ರೆ...ಕಲ್ಲೇಶಿಗೆ ಯಾರು ದಿಕ್ಕು?" ರೇಗಿಕೊಂಡಾಗ ಅವಳ ಕೈಯಲ್ಲಿದ್ದ ಹಿತ್ತಾಳೆಯ ಕೊಳದಪ್ಪಲೆ ಹರಿಯುವ ನೀರಿನಲ್ಲಿ ಬಿದ್ದು ಅಷ್ಟು ದೂರ ತೇಲಿ ಹೋದಾಗ, ಹೋಗಿ ಹಿಡಿದು ತರುವಾಗ ಮುಗ್ಗರಿಸಿದ್ದರಿಂದ ಕೊಳದಪ್ಪಲೆ ಮತ್ತೆ ಕೈ ತಪ್ಪಿ ಹರಿಯುವ ನೀರಿನೊಂದಿಗೆ ಅದೃಶ್ಯವಾಯಿತು.

ಮುಂದೆ ಹೆಜ್ಜೆ ಇಟ್ಟವಳನ್ನ ತಿರುಮಲಾಂಬ ರೆಟ್ಟೆ ಹಿಡಿದು ನಿಲ್ಲಿಸಿ "ಹಿಂದಿನಿಂದ ಎಷ್ಟು ರಭಸವಾಗಿ ನೀರು ಹರ್ಕೊಂಡು ಬರ್ತಾ ಇದೆ. ಹೋದರೇ, ಅದೇ ಹೋಯ್ತು. ಅದ್ಕೂ ನಮ್ಗೂ ಇದ್ದ ಋಣ ಅಷ್ಟೆ ಅಂದ್ಕೋಬೇಕು" ಒಳಗೆ ಕರೆದೊಯ್ದರು.

ಕಲ್ಲಿನಿಂದ ಕುಟ್ಟಿದರೂ ನಜ್ಜಾಗದಂಥ ಗಟ್ಟಿ ಕೊಳದಪ್ಪಲೆಯನ್ನು ನೀರಿನಲ್ಲಿ ತೇಲಿ ಹೋಗಲು ಬಿಟ್ಟಿದ್ದು ಅವಳ ಪ್ರಕಾರ ದೊಡ್ಡ ಅಪರಾಧವೇ. ಬಹುಶಃ ಅವಳ ತಾಯಿ ಬದುಕಿದ್ದ ಕಾಲದಲ್ಲಿ ಇಂಥ ಪಾತ್ರೆಗಳು ಇದ್ದವೇನೋ, ಈಗ ಬೆಲೆಯ ಅಲ್ಯೂಮಿನಿಯಂ ಪಾತ್ರೆಗಳಲ್ಲಿ ಅಡಿಗೆ ಬೇಯಬೇಕಿತ್ತು. ಅದಕ್ಕಿಂತ ಅಗ್ಗ ಎಂದು ಜಾತ್ರೆಯಲ್ಲಿ ಕೆಲವು ಸ್ಟೀಲ್ ಪಾತ್ರೆಗಳನ್ನ ಖರೀದಿಸಿ ತಂದಿದ್ದ ಕಲ್ಲೇಶಿ.

ಸಂಜೆ ಹೊತ್ತಿಗೆ ಪೂರ್ತಿ ಮಳೆ ನಿಂತು ಮುಗಿಲು ಬರಿದಾಯಿತು. 'ಸಧ್ಯಕ್ಕೆ ಮಳೆ ಬರದು' ಸಂತೋಷದ ಉವಾಚ ಕೆಲವರದು.

ಮಾಡಿದ ಅಡಿಗೆ ಇನ್ನ ಒಲೆಯ ಮೇಲೆಯೇ ಇತ್ತು. ಯಾಕೋ ಏನೋ ದಂಪತಿಗಳು ಊಟದ ಯೋಚನೆ ಬಿಟ್ಟು ಕೂತಿದ್ದರು. ಈ ಪೂರ್ವಿಕರ ಮನೆಯನ್ನ ಮಾರಿ ಬಿಡುವಂತೆ ಶೀನಿ...ಶ್ರೀನಿವಾಸ ಸಲಹೆ ಕೊಟ್ಟ ದಿನವು ಇದೇ ರೀತಿ ಮಳೆ ಬಂದಿತ್ತು. ಆ ನೆನಪುಗಳು ದಟ್ಟವಾಗಿ ಅವರನ್ನ ಕಾಡಿತ್ತು.

ಅಂದು ಮೂಲೆಯಲ್ಲಿದ್ದ ಕೋಲು ತಗೊಂಡಿದ್ದರು ಬಿಳಿಗಿರಿ ಕೋಪದಿಂದ "ನಿನ್ನ ಹಾಗೇ ಯೋಚಿಸಿದ್ರೆ...ಎಂದೋ ಮಾರ್ಕ್ಯೋಬಹುದಿತ್ತು. ಇದು ನನ್ನ ಪೂರ್ವಿಕರು ನಂಗೋಸ್ಕರ ಕಾಯ್ದಿಟ್ಟಿದ್ರು. ನಾವುಗಳು ಕೂಡ ನಿಂಗೋಸ್ಕರ ಉಳ್ಸಿ ಇಡ್ಬೇಕು. ಇನ್ನೊಂದ್ಸಲ ಈ ಮಾತಾಡಿದ್ರೆ ಕೈಕಾಲು ಮುರ್ದುಬಿಡ್ತೀನಿ" ರೋಪ್ ಹಾಕಿದ್ದರು. ಶೀನಿ ಕೆಕ್ಕರಿಸಿಕೊಂಡು ನೋಡಿ ಎದ್ದು ಹೋಗಿದ್ದ.

ಅಡಿಗೆ ಮನೆಯ ಮುಂಭಾಗದ ಗೋಡೆಗೆ ಅಂಟಿದಂತೆ ಕೂತಿದ್ದ ಕಲ್ಲೇಶಿ ಪದೇ ಪದೇ ಅಕ್ಕನ ಕಡೆ ನೋಡಿ ಹೊಟ್ಟೆ ಮುಟ್ಟಿ ಹಸಿವೆಂದು ಸನ್ನೆ ಮಾಡುತ್ತಿದ್ದ. ಅವಳದು ನಿಸ್ಸಹಾಯಕ ಸ್ಥಿತಿ. ಮನೆಯಲ್ಲಿದ್ದ ರೇಷನ್ ವರುಣನಿಗೆ ಆಹುತಿ ಆಗಿತ್ತು. ಮುಂದೇನು? ಕಾಡುತ್ತಿತ್ತು ಎಳೆಯರನ್ನ.

ಸ್ವಲ್ಪ ಎಚ್ಚೆತ್ತುಕೊಂಡ ಬಿಳಿಗಿರಿ "ತಿರುಮಲ ಎಷ್ಟೊತ್ತು ಹೀಗೆ ಕೂರ್ತೀಯಾ! ನಿಂಗೂ...ನಂಗೂ...ಹಸಿವಾಗ್ದೇ ಇರ್ಬಹುದ್ದು. ಆ ಮಕ್ಳನ ನೋಡು, ಹೋಗಿ ಬಡ್ಸು" ಅಣತಿ ಇತ್ತ ಕೂಡಲೇ ಕಲ್ಲೇಶಿ ಎರಡು ಸುತ್ತಿಟ್ಟಿದ್ದ ಬಾಳೆಯೆಲೆಗಳನ್ನ ತಂದು ತನ್ನ ಮುಂದೊಂದು ಹಾಕ್ಕೊಂಡು ಅಕ್ಕನ ಮುಂದೊಂದು ಹರವಿದ. ತಮ್ಮನ ಸೊಂಟಕ್ಕೆ ಗೌರಿ ಮೊಣಕೈನಿಂದ ತಿವಿದಾಗ ಪೆಚ್ಚಾದ.

"ಛೆ, ನನ್ನ ಬುದ್ಧಿಗೆ ಇಷ್ಟು ಹಾಕಾ ! ಹಸಿದ ಹುಡ್ಗನಿಗೆ ಅನ್ನ ಹಾಕ್ಬಾರ್ದಾ!" ತಿರುಮಲಾಂಬ ತನ್ನನ್ನ ನಿಂದಿಸಿಕೊಳ್ಳುತ್ತ ಹೋಗಿ ಅನ್ನದ ತಪ್ಪಲೆ, ಸಾರಿನ ಕೊಳಗ ತಂದಿಟ್ಟುಕೊಂಡು ಅಲ್ಲೇ ಕೂತರು "ಹಸಿವಾದ್ರೆ, ಕೇಳ್ಬಾರ್ದಿತ್ತ" ಪ್ರೀತಿಯಿಂದ ಬೈಯ್ದರು.

ಸರಿಯಾಗಿ ಗಂಜಿ ಬಸಿಯದಿದ್ದರಿಂದ ಅನ್ನ ಮುದ್ದೆಯಾಗಿತ್ತು. ಆದರೆ ಒಲೆಯ ಮೇಲೆ ಇದ್ದುದ್ದರಿಂದ ಬಿಸಿಯಾರಿರಲಿಲ್ಲ. ಎರಡು ಗೆರಣೆ ಅನ್ನ ತೆಗೆದು ಬಡಿಸಿ ಅದರ ಮೇಲೆ ಕಾಳಿನ ಹುಳಿ ಸುರಿದರು. ಗಬಗಬ ತಿನ್ನಲು ಷುರು ಮಾಡಿದ ಕಲ್ಲೇಶಿ, ಎಲೆಯ ಅನ್ನ ಪೂರ್ತಿಯಾದ ಮೇಲೆಯೇ ಸಂಕೋಚದಿಂದ ಬಿಳಿಗಿರಿಯ ಕಡೆ ನೋಡಿದ್ದು.

"ಇನ್ನ ಅಯ್ಯನೋರು ಊಟ ಆಗಿಲ್ಲ !"

"ಈಗ ನೆನಪಾಯಿತೇನೋ" ನಗಾಡಿದ ಬಿಳಿಗಿರಿ "ನಿಮ್ದು ಮುಗೀಲಿ. ನಮ್ಗೆ ಅಷ್ಟೊಂದು ಹಸಿವು ಇರೋಲ್ಲ." ಎದ್ದು ಬಾಗಿಲಿಗೆ ಹೋದರು. ತುಂಬಿದ ಹೊಳೆ ಎರಡು ಮೆಟ್ಟಲುಗಳನ್ನ ತನ್ನಲ್ಲಿ ಅಡಗಿಸಿಕೊಂಡಿತ್ತು. 'ಶೀನಿ, ಎಲ್ಲಿರಬಹುದು?' ಬಹುಶಃ ಸಾಗರ್‌ನ ಹಾಗೇ ಎಲ್ಲೋ ಸುತ್ತಾಡಿ ಕೊಂಡಿರಬಹುದು. ಅವನಿಗೆ ಮನೆ, ತಾಯ್ತಂದೆಯರ ಯೋಚನೆ ಉಂಟಾ? ಬಹುಶಃ ಸಾಗರ್‌ನ ಕೇಳಿದರೇ ಈ ಪ್ರಶ್ನೆಗೆ ಉತ್ತರ ಸಿಕ್ಕೀತಾ? ಇಬ್ಬರ ಮನಸ್ಥಿತಿ ಒಂದೇ ಆಗಿರುತ್ತದೆಯೆನ್ನುವ ಗ್ಯಾರಂಟಿ ಏನು ?

"ನಿಮ್ಗೂ ಎಲೆ ಹಾಕಿದ್ದೀನಿ" ಹೆಂಡತಿ ಉಸುರಿದಾಗ ಸ್ವಗತದಿಂದ ಮರಳಿದ್ದು "ಹಸಿವಿರಲೀ, ಬಿಡ್ಲಿ...ಒಂಧು ತುತ್ತು ಊಟ ಮಾಡ್ಬಿಡೋಣ. ಊರಿನಲ್ಲಿ ಎಷ್ಟು ಮನೆಗಳು ಕೊಚ್ಚಿಕೊಂಡು ಹೋದವ್ವೋ, ಏನೋ! ನಿಮ್ಮ ತಾತಾ ಸ್ವಲ್ಪ ಎತ್ತರದ ಸ್ಥಳದಲ್ಲಿ ಕಟ್ಟಿಸಿದ್ದರಿಂದ ನಾವು ಬಚಾವ್ ಆದ್ವಿ" ಪೂರ್ವಿಕರನ್ನ ನೆನಸಿಕೊಂಡರು. ಅವರು ಮೇಲಿಂದಲೇ ಖುಷಿಪಟ್ಟಿರಬೇಕು.

ಬಿಳಿಗಿರಿಯವರಿಗೂ ಅದು ಸರಿಯೆನಿಸಿತು. ಊರು ಊರಿನಲ್ಲಿ ಮಾಸ್ತರಿಕೆ ಮಾಡಿ, ಅಲ್ಲಿನ ರಾಜಕೀಯಕ್ಕೆ ದಣಿದ ದೇಹ, ಮನಸ್ಸು ವಯಸ್ಸಿಗೆ ಮೀರಿಯೇ ಆಯಾಸಗೊಂಡಿತ್ತು. ಆದರೆ ಯಾವುದೇ ಪ್ರಬಲವಾದ ಕಾಯಿಲೆಗಳು ಹತ್ತಿರಕ್ಕೆ ಸುಳಿದಿರಲಿಲ್ಲ.

ಎಲೆ ಎಸೆದು ಗೋಮೆ ಮಾಡಿ ಬಂದ ಗೌರಿ ಮತ್ತೆರಡು ಎಲೆಗಳನ್ನು ಹಾಕಿ ಸನ್ನೆಯಿಂದ ಊಟ ಮಾಡುವಂತೆ ಬಲವಂತ ಮಾಡಿದಾಗ ಬಿಳಿಗಿರಿ ವ್ಯಥಿತರಾದರು.

"ಹುಚ್ಚು ಹುಡ್ಗಿ, ಒಂದಿಷ್ಟು ಬಿಕ್ಕಲುಗೋಸ್ಕರ ಸ್ವತಃ ಯಾಕೆ ಮೂಗಿ ಆಗ್ತೀಯಾ! ಮಾತು ಆಡ್ತಾ ಆಡ್ತಾ ಸುಧಾರಿಸುತ್ತೆ" ತಿಳಿ ಹೇಳಿದರು ಕರುಣೆಯಿಂದ. ಅವರ ಕಣ್ಣಲ್ಲಿ ಕಂಬನಿಯ ತುಂತುರು ಮಿನುಗಿದವು ತುಟಿಯಲ್ಲಿ ತೆಳು ನಗೆ. ಸರಿಯೆನ್ನುವಂತೆ ತಲೆಯಾಡಿಸಿದಳು. ಆಗ ಕೂಡ ಮರೆತಿದ್ದು ಮಾತನ್ನ.

ಊಟಕ್ಕೆ ಕೂತಾಗ ಅವರುಗಳು, ಅಕ್ಕ ತಮ್ಮ ಹಿತ್ತಲಿಗೆ ಬಂದರು. ಮುಂದೇನು? ಅವರ ಮನೆಯೆಂಬ ಮಹಲು ನೆಲಸಮವಾಗಿತ್ತು. ಈ ಒಂದು ದಿನ ಇಲ್ಲಿ ಆಶ್ರಯ ಸಿಗಬಹುದು. ನಾಳೆಯೇನು ಮಾಡುವುದು ?

'ಎಲ್ಲಿ ಇರೋದು?' ಅನ್ನುವಂತೆ ತಮ್ಮನತ್ತ ನೋಡಿದಳು.

ವಯಸ್ಸಿಗೆ ಮೀರಿದ ಗಾಂಭೀರ್ಯ ಅಲಂಕರಿಸಿತು ಅವನ ಮುಖವನ್ನ. ಮುಗಿಲು ಬೆಳ್ಳಗಾದರೂ, ಮುಂದಿನ ದಿನಗಳು ಮಳೆ ಸುರಿಯದು ಎನ್ನುವ ಗ್ಯಾರಂಟಿ ಇರಲಿಲ್ಲ. ಒಂದು ಸಣ್ಣ 'ಗುಡ್ಲು' ಎದ್ದು ನಿಲ್ಲಬೇಕಾದರೂ ಸಾಕಷ್ಟು ಶ್ರಮ ಅಗತ್ಯವಿತ್ತು. ದೂರ ದೂರ ಇರುವ ಮನೆಯವರಿಂದ ಸಹಾಯ ನಿರೀಕ್ಷಿಸುವುದರಿಂದ ಪ್ರಯೋಜನವಿರಲಿಲ್ಲ. ಕೆಲವರಿಗೆ ಅವರದೇ ಆದ ಸಮಸ್ಯೆಗಳು. ಕೆಲವು ಮನೆಯ ಗಂಡಸರು ದೂರದ ಎಸ್ಟೇಟ್‌ನಲ್ಲಿ ದುಡಿಯಲು ಹೋಗುತ್ತಿದ್ದರಿಂದ, ಹೆಂಗಸರು ಇಡೀ ಸಂಸಾರವನ್ನು ಸಂಭಾಳಿಸಿ ಕೊಂಡು ಹೋಗುವ ಅಗತ್ಯವಿತ್ತು. ಇನ್ನ ಶ್ರೀಮಂತ ಕುಟುಂಬಗಳು ಇತ್ತ ತಿರುಗಿ ನೋಡವು. ಇಂಥ ಪರಿಸ್ಥಿತಿಯ ಶಿಶುಗಳು ಅವರು.

"ಒಂದ್ನಾಲ್ಕು ದಿನ ದೇವಸ್ಥಾನದಲ್ಲಿ ಇದ್ದರೆ ಹೇಗೆ?" ಹೊಳೆದಿದ್ದನ್ನ ಅಕ್ಕನ ಮುಂದಿಟ್ಟ. ಅವಳ ಮುಖ ಮುದುರಿತು. ತಮ್ಮಂತೆ ಬೀದಿ ಪಾಲಾದ ಕೆಲವರು ಈಗ ಅಲ್ಲಿ ಆಶ್ರಯ ಪಡೆದಿರಬಹುದು. ಗೊತ್ತಾಗುತ್ತಿಲ್ಲ ಎನ್ನುವಂತೆ ತುಟಿ ಅಗಲಿಸಿದಳು.

ಕಲ್ಲೇಶಿ ನೋಟವೆತ್ತಿ ಆಕಾಶವನ್ನ ನೋಡುತ್ತ ನಿಂತ. ಇಂಥ ಸಾವಿರಾರು, ಲಕ್ಷಾಂತರ ನೋಟಗಳು ಅಲ್ಲಿ ನೆಟ್ಟಿವೆಯೋ !

* * *

ಕುಂದಣಕ್ಕೆ ಹೊರಟ ಬಸ್ಸು ಎರಡು ಸಲ ಕೆಟ್ಟು ನಿಂತು ಮೂರನೆಯ ಸಲ ಹೊರಟಾಗ, ಬಸ್ಸಿನಲ್ಲಿ ಕೂತಿದ್ದ ಬಿಳಿಗಿರಿ, ಇಳಿದು ಎತ್ತಲೋ ನೋಡುತ್ತ ನಿಂತಿದ್ದ ಸಾಗರ್‌ನ ಕರೆದರು.

ಬೇಸರದಿಂದಲೇ ಹತ್ತಿ ಬಂದು ಅವರ ಪಕ್ಕ ಕೂತು "ಸಾವಿರಾರು ಮೈಲಿ ಪ್ರಯಾಣ ಮಾಡಿದಂಗಾಯ್ತು. ಶ್ರೀವಳ್ಳಿ ಪುರದಿಂದ ಕುಂದಣಕ್ಕೆ ಎಷ್ಟು ಕಿಲೋಮೀಟರ್?" ಪ್ರಶ್ನಿಸಿದ.

ಅವರಿಗೆ ಬದಲಾಗಿ ಪೀಪಿ ಬಾಯಿಗಿಟ್ಟುಕೊಂಡು ಊದುತ್ತಿದ್ದ ಕಂಡಕ್ಟರ್ ಅದನ್ನ ತುಟಿಯಿಂದ ತೆಗೆದು "ಹೊಸಬರಂಗೆ ಕಾಣ್ತಾರೆ. ಬರೀ ಇಪ್ಪತ್ತು

ಕಿಲೋಮೀಟರ್ ಸಾಹೇಬ್ರೆ" ಎಂದು ನಕ್ಕವನು, ಬ್ಯಾಗಿನಿಂದ ನೋಟುಗಳನ್ನು ತೆಗೆದು ಎಣಿಸತೊಡಗಿದ.

ಹಣೆಯೊತ್ತಿಕೊಂಡ. ನೂರಾರು ಕಿಲೋಮೀಟರ್ ಪ್ರಯಾಣಿಸಿದ್ದ. ಇಪ್ಪತ್ತು ಕಿಲೋಮೀಟರ್‌ಗೆ ಮೂರು ಸಲ ಕೆಟ್ಟು ನಿಂತಿದ್ದು. ಪ್ರಯಾಣಿಕರು ಎಷ್ಟು ಸಹಕಾರ ನೀಡಿದ್ದರೆಂದರೇ, ಆರಾಮಾಗಿ ಕೆಲವರು ಕೆಳಗೆ ಇಳಿದು ಹರಟೆಯೊಡೆಯುತ್ತಿದ್ದರೇ, ಮಿಕ್ಕವರು ಕೂತು ತೂಕಡಿಸಿ ಆಗಾಗ ಬೆಚ್ಚಿ ಬೀಳುತ್ತಿದ್ದರಷ್ಟೆ.

"ಮತ್ತೆ ಕೆಟ್ಟು ನಿಲ್ಲೋಲ್ವಾ?" ಕಿಡಿ ಹಾರಿಸಿದ.

ಎಣಿಸುತ್ತಿದ್ದ ನೋಟುಗಳಿಂದ ತಲೆಯೆತ್ತಿ "ಹೇಳಲಿಕ್ಕಾಗೋಲ್ಲ, ಈ ಸಲ ಕೆಟ್ಟರಂತು ಒರಿಜಿನಲ್ ಮೆಕ್ಯಾನಿಕ್ ಬರ್ಬೇಕು. ಬಸ್ಸು ಕೆಡದೇ ಕುಂದಣಕ್ಕೆ ತಲುಪಿಸೋಕೆ, ದೇವರಲ್ಲಿ ಪ್ರಾರ್ಥನೆ ಮಾಡ್ಕೊಳ್ಳಿ" ತುಟಿಯಂಚಿನಲ್ಲಿ ನಗೆ ಹಾರಿಸಿದ ಕಂಡಕ್ಟರ್.

ಅನಾಮತ್ತಾಗಿ ಅವನನ್ನ ಎತ್ತಿ ಆಚೆ ಎಸೆದು ಬಿಡುವಷ್ಟು ಕೋಪ ಬಂತು, ಸಾಗರ್‌ಗೆ. ಅರ್ಥ ಮಾಡಿಕೊಂಡವರಂತೆ ಬಿಳಿಗಿರಿ ಅವನ ಭುಜದ ಮೇಲೆ ಕೈಯಿಟ್ಟು ಅದುಮಿದರು.

"ಕೋಪದಿಂದ ಪ್ರಯೋಜನವಿಲ್ಲ ! ಜನ ಕೂಡ ನಿನ್ನ ಸಪೋರ್ಟ್‌ಗೆ ನಿಲ್ಲೋಲ್ಲ. ಬಹಳ ವರ್ಷಗಳಿಂದ ಈ ರೂಟ್‌ನಲ್ಲಿ ಓಡಾಡೋ ಬಸ್ಸು. ಕೆಲವೊಮ್ಮೆ ಹಿಂದಿನ ದಿನ ಹೇಳಿದ್ರೆ, ಹತ್ತು ನಿಮಿಷ ತಡವಾದ್ರೂ ಬಸ್ಸು ನಿಲ್ಲಿಸಿ ಹತ್ತಿಸ್ಕೋತಾರೆ. ಕಷ್ಟ, ಸುಖಕ್ಕೆ ಆದ ಜನನ ಯಾರೂ ಎದುರು ಹಾಕ್ಕೊಳೋಲ್ಲ" ಪಿಸುದನಿಯಲ್ಲಿ ವಿವರಿಸಿದರು.

ಅದನ್ನ ಗಮನಿಸಿದ್ದ ದಾರಿಯುದ್ದಕ್ಕೂ ನಿಲ್ದಾಣವೆಂಬುದೇನು ಇರಲಿಲ್ಲ. ಜನ ನಿಂತಿದ್ದ ಕಡೆ ಬಸ್ಸು ನಿಲ್ಲುತ್ತಿತ್ತು. ಡ್ರೈವರ್ ವಿಚಾರಿಸುತ್ತಿದ್ದ. ಕಂಡಕ್ಟರ್ ಕೂಡ ತಲೆದೂಗಿಸುತ್ತಿದ್ದ.

ಕುಂದಣದ ಬಸ್ಸು ನಿಲ್ದಾಣವೆನ್ನುವ ಜಾಗದಲ್ಲಿ ಬಸ್ಸು ನಿಂತಾಗ, ಅವನ ತಾಳ್ಮೆ ಸತ್ತು ಹೋಗಿತ್ತು. ತಳ್ಳಿಕೊಂಡೇ ಮೊದಲು ಇಳಿದು ಹೋದ ಸಾಗರ್.

ನಿಧಾನವಾಗಿ ಇಳಿಯುತ್ತಿದ್ದ ಬಿಳಿಗಿರಿಯವರನ್ನ ಕಂಡಕ್ಟರ್ "ಮಗ್ನ ವಿಷ್ಯ ಏನಾದ್ರೂ ಗೊತ್ತಾಯ್ತ ?" ದನಿ ತಗ್ಗಿಸಿ ವಿಚಾರಿಸಿದ. ಅವರು ತಲೆ ಅಡ್ಡಡ್ಡ ಆಡಿಸಿದರು. "ನೆಂಟರ...ಹುಡ್ಗನಾ ?" ಮತ್ತೊಂದು ಪ್ರಶ್ನೆ. ಹೌದೆಂದು ಗೋಣಾಡಿಸಿದರು. ಮಾತು ಮಾತ್ರ ಅವರ ಬಾಯಿಂದ ಹೊರಡಲಿಲ್ಲ.

ಇಳಿದ ಡ್ರೈವರ್ ಹೋಗುತ್ತಿದ್ದ ಇವರನ್ನ ಕೂಗಿ "ಅಪ್ಪಯ್ಯ ಶಾಸ್ತ್ರಿಗಳ ಮನೆಗಾ? ನಮ್ಮ ಸಲಾಂ ಹೇಳಿ. ನಮ್ಮ ಹುಡ್ಗಿ ಪಳ್ಳಿಯಮ್ಮಗೆ ನಮ್ಮ ನೆನಪು ಮಾಡಿ" ಅರವತ್ತು ತುಂಬಿದ ವ್ಯಕ್ತಿ ಹೇಳಿದ.

ಶ್ರೀವಳ್ಳಿಪುರದ ಹತ್ತಿರ ಬಸ್ಸು ನಿಂತರೇ, ಅಥವಾ ಎಂದಾದರೂ ಪ್ರಯಾಣಿಕರಿಗೆ ಕಾಯಬೇಕಾದ ಸಂದರ್ಭ ಬಂದರೇ ಡ್ರೈವರ್ ಭಾಷಾ ಅಪ್ಪಯ್ಯ ಶಾಸ್ತ್ರಿಗಳ ಮನೆಗೆ ಬಂದು ಅವರ ಮಗಳ ಕೈಯಲ್ಲಿ ಮಜ್ಜಿಗೆ ಕುಡಿದು, ಒಂದು ಇಪ್ಪತ್ತೈದು ಪೈಸೆ ನಾಣ್ಯವನ್ನು ಕೈ ಚಾಚಿ ಪಡೆದುಕೊಳ್ಳುತ್ತಿದ್ದ ಭಕ್ತಿಯಿಂದ.

"ಮಹಾಲಕ್ಷ್ಮಿ ಶಾಸ್ತ್ರಿಗಳೇ, ಈ ಪೈಸಾ ನನ್ನ ಜೇಬಲ್ಲಿ ಇರೋವರ್ಗೂ ಹಣಕ್ಕೆ ಬರವಿರೋಲ್ಲ" ಬಾಯಿ ತುಂಬ ಹೇಳುತ್ತಿದ್ದ.

"ಅಂತು ಭಯಂಕರ ಅನುಭವ !" ಕೂದಲನ್ನ ಹಿಂದಕ್ಕೆ ತಳ್ಳಿಕೊಂಡ ಸಾಗರ್ ಅತ್ತಿತ್ತ ನೋಟ ಹರಿಸಿದ. ಪುಟ್ಟ ಊರಿನಂತೆ ಕಂಡರೂ, ಅಲ್ಲೊಬ್ಬರು, ಇಲ್ಲೊಬ್ಬರು ನಿಂತಿದ್ದರು. ಒಂದೆರಡು ಪೆಟ್ಟಿಗೆ ಅಂಗಡಿಗಳು, ಒಂದೇ ಒಂದು ಪುಟ್ಟ ಹೋಟಲ್ 'ನ್ಯೂ ಉಡುಪಿ ಭವನ್' ಎಂದು ಬೋರ್ಡು ತಗುಲಿ ಹಾಕಿದ್ದರು. ಅದರ ಮುಂದೆ ಹಾದು ಹೋಗುವಾಗ ದಟ್ಟವಾದ ಕಾಫಿಯ ಘಮಲು ಒಮ್ಮೆ ಒಳ ಹೊಕ್ಕು ಕಾಫಿ ಕುಡಿದು ಸಿಗರೇಟು ಸೇದಬಾರದೆಂದುಕೊಂಡರೂ ಮುಂದಾಗಲಿಲ್ಲ ಸಾಗರ್. ಇವನ ಎಷ್ಟೋ ಅವಿಧೇಯತೆಯನ್ನ ಒಳ್ಳೆ ಮನಸ್ಸಿನಿಂದ ಕ್ಷಮಿಸಿದ ಬಿಳಿಗಿರಿಯವರ ಬಗ್ಗೆ ಒಂದಿಷ್ಟು ಗೌರವ ಭಾವ ಮೂಡಿತ್ತು.

"ಇಲ್ಲಿ ಒಳ್ಳೆ ಕಾಫಿ ಸಿಗುತ್ತ" ಎಂದ ಅವರೊಂದಿಗೆ ಹೆಜ್ಜೆ ಹಾಕುತ್ತ.

"ಹೌದೌದು, ದೊಡ್ಡ ಊರುಗಳಿಂದ ಬರೋ ಜನ ಕೂಡ ಇಲ್ಲಿ ಇಳಿದು ಕಾಫಿ ಕುಡೀತಾರೆ. ಬೆಣ್ಣೆ ದೋಸೆನು ಅಷ್ಟೇ ಚೆನ್ನಾಗಿರುತ್ತೆ" ಅಂತ ಹೇಳಿದರು.

ಈಚೆಗೆ ನಾಲಿಗೆ ಚಪಲ ಸತ್ತಿತ್ತು ಮಗನ ಯೋಚನೆಯಲ್ಲಿ. ಹಿಂದೆ ಇನ್ನ ಕೆಲಸದಲ್ಲಿದ್ದ ದಿನಗಳಲ್ಲಿ ಊರು ಕಡೆ ಬಂದರೇ ಕುಂದಣದಲ್ಲಿ ಇಳಿದು ಸಂಸಾರ ಸಮೇತ, ಎರಡೆರಡು ಬೆಣ್ಣೆ ದೋಸೆ ತಿಂದು ಕಾಫಿ ಕುಡಿದೇ ಬಸ್ಸು ಹತ್ತುತ್ತಿದ್ದುದು.

ಉದ್ದದ ರೋಡಿನಲ್ಲಿ ಅಡ್ಡಕ್ಕೆ ತಿರುಗಿ ಮುಂದಕ್ಕೆ ಹೋಗಿ ಹಸಿರು ಪೈಂಟ್ ಹೊಡೆದ ಮನೆಯ ಮುಂದೆ ನಿಂತವರು "ಶಾಸ್ತ್ರಿಗಳು ತುಂಬ ಒಳ್ಳೆ ಜನನೇ. ಸರೋಜಮ್ಮ ಎರಡನೇ ಸಂಸಾರ. ಸ್ವಲ್ಪ ಬಾಯಿ ಮುಂದೆ. ಅಲ್ಲಿನ ತೋಟ, ಗದ್ದೆ ಮಾರಿಯೇ ಈ ಮನೆ ಖರೀದಿಸಿ ಒಂದಿಷ್ಟು ಅಚ್ಚುಗಟ್ಟು ಮಾಡ್ಸಿಕೊಂಡಿದ್ದು. ಪೇಟೆ ಬೀದಿಯಲ್ಲಿ ಒಂದು ಸಣ್ಣ ಅಂಗ್ಡಿ ತೆಗೆದಿದ್ದಾರೆ. ಅಲ್ಲಿ ಶಾಸ್ತ್ರಿಗಳ ಜೊತೆ ಸರೋಜಮ್ಮ ಕೂಡ ಇರ್ತಾರೆ. ದಿಟ್ಟ ಹೆಂಗ್ಸು, ಎರಡು ಮಾತು ಹೆಚ್ಚಿಗೆ

ಆಡಿದ್ರೂ... ಸಹಿಸ್ಕೋಬೇಕು." ಒಳಗೆ ಹೋಗುವ ಮುನ್ನ ಅಲ್ಲಿನ ಜನರನ್ನ ಪರಿಚಯಿಸಿದರು.

ಎತ್ತಲೋ ನೋಡಿದ, ಸಾಗರ್. ಎಲ್ಲಾ ವಿಚಿತ್ರವಾಗಿ ಕಂಡಿತು. ಇದನ್ನೆಲ್ಲ ಅರ್ಥ ಮಾಡಿಕೊಳ್ಳುವಷ್ಟು ಅವನ ಮಿದುಳು ಬೆಳೆದಿರಲಿಲ್ಲವೇನೋ 'ಶಾಸ್ತ್ರಿಗಳು ಇದ್ದರೆ ನಮ್ಮ ಪುಣ್ಯ' ಅಂದುಕೊಂಡರು ಬಿಳಿಗಿರಿ.

ನಾಲ್ಕು ಮೆಟ್ಟಲು ಹತ್ತಿದರೇ ಎದುರು ಬದುರಾಗಿ ಜಗುಲಿಗಳು. ಅವುಗಳ ಎರಡು ಅಂಚನ್ನ ಪುಟ್ಟ ಪುಟ್ಟ ಗಿಳಿಗಳಿಂದ ಸಿಂಗರಿಸಲ್ಪಟ್ಟಿದ್ದರೇ, ಮಧ್ಯದಲ್ಲಿ ದೊಡ್ಡದಾದ ಹಸೆಗಳು 'ಅಬ್ಬಬ್ಬ...' ಭಯಂಕರವೆನಿಸಿತು. ಜಗುಲಿಯ ಮೇಲೆ ನೆಟ್ಟ ನೋಟವನ್ನ ಕೀಳಲಾರದೆ ಹೋದ.

"ವಂಡರ್‌ಫುಲ್..." ಎಂದ ಮೈಮರೆತವನಂತೆ.

"ನಮ್ಮ ವಳ್ಳಿಯ ಕೈವಾಡ. ಎಂಥ ಚಂದದ ರಂಗೋಲಿ ಹಾಕ್ತಾಳೆ. ಆಲ್ ಇಂಡಿಯಾ ರಂಗೋಲಿ ಕಾಂಪಿಟೇಷನ್ ನಡ್ಸಿದರೇ, ನಮ್ಮ ಹುಡ್ಗಿಗೆ ಮೊದಲ ಬಹುಮಾನ" ಮೆಚ್ಚಿಗೆಯಾಡಿದರು ಬಿಳಿಗಿರಿ. ಆ ಹುಡುಗಿಯ ಬಗ್ಗೆ ಅವರಿಗೆ ವಿಪರೀತ ಮಮತೆ.

"ಸರೋಜಮ್ಮನೋರೇ...." ನಿಂತೇ ಕೂಗಿದರು. ಆಕೆಯ ಮನಸ್ಸು ಎಷ್ಟು ಬಿರುಸು, ನಾಲಿಗೆ ಎಷ್ಟು ತೀಕ್ಷ್ಣವೆಂದು ಅವರಿಗೆ ಗೊತ್ತು. ಬಂದಿದ್ದು ನಡುವಯಸ್ಸಿನ ಹೆಣ್ಣು "ಯಾರು, ಬೇಕಿತ್ತು? ವಳ್ಳಿಪುರದ ಮೇಷ್ಟ್ರು...ಅಲ್ವಾ! ಕೂತ್ಕೊಳ್ಳಿ...ಸರೋಜ ಅಂಗ್ಡಿ ಕಡೆಗೆ ಹೋಗಿದ್ದಾಳೆ" ಎಂದರು.

ಆಗಾಗ ಅಣ್ಣನ ಮಗಳ ಮನೆಗೆ ಬರುತ್ತಿದ್ದ ಆಕೆಯ ಪರಿಚಯ ಅಷ್ಟಿಷ್ಟು ಇತ್ತು. ಇವರು ಹೇಳುವ ಮುನ್ನ ಸಾಗರ್ ಕೂತು ಆಗಿತ್ತು. ತಾವು ಕೂತು ಉಭಯಕುಶಲೋಪರಿ ವಿಚಾರಿಸಿದರು.

"ಶ್ರೀವಳ್ಳಿ, ಎಲ್ಲಿ ಕಾಣ್ತಾ... ಇಲ್ಲ" ಅತ್ತಿತ್ತ ನೋಟವರಿಸಿದರು.

"ಮೂರನೆ ಮನೆಗೆ ಹೋಗಿದ್ದಾಳೆ. ಅವ್ರ ವಾರಿಗೆಯವ್ರು ಒಂದಿಬ್ರು ಇದ್ದಾರೆ. ಕಲಿಯೋಕೋ, ಕಲಿಸೋಕೋ ಹೋಗಿದ್ದಾಳೆ. ಅವ್ಳಿಗೆ ಪೂರ್ತಿ ಮಾತೇ ಇಲ್ಲದಂಗಾಯ್ತು" ವ್ಯಥೆಯಾಡಿತು ಆಕೆಯ ಸ್ವರದಲ್ಲಿ.

ಬಿಳಿಗಿರಿಯವರ ಬಾಯಿಂದ ಮಾತೇ ಹೊರಡಲಿಲ್ಲ. ಗಿಣಿಯಂಗೆ ಮೃದುವಾಗಿ ಮತಾಡುತ್ತಿದ್ದಳು. ತ್ಯಾಗರಾಜರ ಕೀರ್ತನೆಗಳ ಜೊತೆಗೆ ದಾಸರ ಪದಗಳನ್ನ ಹಾಡುತ್ತಿದ್ದ ಶ್ರೀವಳ್ಳಿ ಈಗ ಮೂಕಿ...ಮಾತು ಬಾರದ ಹೆಣ್ಣು. ಸಂಕಟದಿಂದ ಒದ್ದಾಡಿತು ಅವರ ಮನ.

"ಎಲ್ಲಾದ್ರೂ ಒಂದಿಷ್ಟು ತೋರಿಸ್ಬೇಕಿತ್ತು" ಎಂದರು. ಮೆತ್ತನೆಯ ದನಿಯಲ್ಲಿ "ಎಲ್ಲ ಮುಗ್ದಂಗೆ ಅಂತಿಟ್ಕೊಳ್ಳಿ. ಏನೋ ಅವ್ರ ಹಣೆ ಬರಹ" ಆರಾಮಾಗಿ ವಿಧಿಯತ್ತ ಕೈ ಮಾಡಿದರು ಆಕೆ.

ಈ ಮಾತುಗಳು ಮುಂದುವರಿಯೋದು ಬೇಕಿರಲಿಲ್ಲ ಬಿಳಿಗಿರಿಯವರಿಗೆ "ಒಂದಿಷ್ಟು ಸರೋಜಮ್ಮನವರಲ್ಲಿ ಮಾತಾಡೋದಿತ್ತು" ಎಂದರು.

"ಅಯ್ಯೋ, ಉಂಟಾ! ಈಗ ಕರ್ದು.... ಬರ್ತೀನಿ. ಒಂದ್ಗಳಿಗೆ ಕೂತ್ಕೊಳ್ಳಿ" ಸೆರಗನ್ನ ಎಳೆದು ಎಳೆದು ಹೊದ್ದುಕೊಳ್ಳುತ್ತ ಆಕೆ ಹೊರಟಾಗ ಬಿಳಿಗಿರಿ ಬಾಯಿ ಬಿಟ್ಟರು. "ಹಳೇ ಮನೆ ಕಡ್ಮೇ ಬೆಲೆಗೆ ಸಿಕ್ತು. ತಗೊಂಡ್ಮೇಲೆ ಅವ್ರಿಗೆ ಬೇಕಾದಂಗೆ ಬದಲಾವಣೆ ಮಾಡ್ಕೊಂಡಿದ್ದಾರೆ. ಶಾಸ್ತ್ರಿಗಳ ಮನೆಯಾಕೆ...ತುಂಬ ಬುದ್ಧಿವಂತೆ" ಕಡೆಯ ಮಾತನ್ನ ಒತ್ತಿ ಹೇಳಿದಂಗೆ ಕಂಡಿತು ಸಾಗರ್‌ಗೆ. ಅವನ ನೋಟ ನಡುಮನೆಯನ್ನೆಲ್ಲ ಆವರಿಸಿಕೊಂಡ ರಂಗೋಲಿಯತ್ತಲೇ ಇತ್ತು.

"ಬಾಮ್ಮ...ಬಾ...." ಎಂದಾಗಲೇ ಅವನು ವಾಸ್ತವಕ್ಕೆ ಬಂದಿದ್ದು. ದೊಡ್ಡ ಅಂಚು ಇದ್ದ ಲಂಗ ತೊಟ್ಟು, ನೇರಳೆ ಬಣ್ಣದ ಜಾರ್ಜೆಟ್ ದಾವಣಿ ಹೊದ್ದ ಹುಡುಗಿ ನಿಂತಿದ್ದಳು "ಇವ್ಳು ವಳ್ಳಿ ಅಂತ, ಅಪ್ಪಯ್ಯ ಶಾಸ್ತ್ರಿಗಳ ಸಂತಾನ" ಪರಿಚಯಿಸಿದರು. ದುರುಗುಟ್ಟಿಕೊಂಡು ನೋಡುವ ಸಾಗರ್‌ನ ನೋಟದಿಂದ ಅವಳ ನೋಟ ತಪ್ಪಿಸಿಕೊಂಡಿತು.

ಏನೋ ಹೇಳುವ ತವಕ ಕಣ್ಣುಗಳಲ್ಲಿ. ಆದರೆ ತುಟಿಗಳು ತೆರೆದು ಕೊಳ್ಳಲಿಲ್ಲ. ಬಿಟ್ಟ ಕಣ್ಣುಗಳಿಂದ ನೋಡಿದ. ಮುದ್ದಾದ ಮುಗ್ಧವಾದ ಹುಡುಗಿ. ಸಂಪಿಗೆ ಬಣ್ಣದ ಹುಡುಗಿ ಸಂಪಿಗೆಯಂತೆಯೇ ಕಂಡಳು. ಯಾಕೋ ಏನೋ ನಿಧಾನವಾಗಿ ಅವನ ಮುಖ ಗಡುಸಾಯಿತು.

ಹತ್ತಿರಕ್ಕೆ ಕರೆದು ಬಿಳಿಗಿರಿಯವರು ಯೋಗಕ್ಷೇಮ ವಿಚಾರಿಸಿದರು. ಮಾತೇ ಇಲ್ಲ. ಆದರೆ ಕಣ್ಣಿನ ಮಾತಿಗೆ ಭಾಷೆ ಬೇಕಿರಲಿಲ್ಲ. ಬಹಳ ಚುರುಕಾಗಿ ಸಂಭಾಷಿಸುತ್ತಿತ್ತು. ಆದರೂ ಬೋರ್ ಕೆಲಸವೆನಿಸಿತು. ಇಷ್ಟೊಂದು ತಾಳ್ಮೆ ಮೂಕರ ಸಹವಾಸ ಬೇಡವೆನಿಸಿತು.

ಎರಡು ಲೋಟ ಹದವಾದ ಬಿಸಿಯುಳ್ಳ ಹಾಲು ತಂದಿತ್ತಳು. ಅಪ್ಪಿ ತಪ್ಪಿ ನೋಟವರಿಸಲಿಲ್ಲ ಸಾಗರ್‌ನ ಕಡೆಗೆ. ಏನೇನೋ ಪ್ರಶ್ನಿಸುವಂತೆ ಕಂಡಳು. ಅಷ್ಟರಲ್ಲಿ ದಂಪತಿಗಳ ಪ್ರವೇಶವಾಯಿತು.

"ಬಂದಿದ್ದು....ಸಂತೋಷ" ಅಪ್ಪಯ್ಯ ಶಾಸ್ತ್ರಿಗಳು ಕೈ ಮುಗಿದರು. "ಎಲ್ಲಾ...ಕ್ಷೇಮನಾ ?" ವಿಚಾರಿಸಿದ ಸರೋಜಮ್ಮ ಸಾಗರ್‌ನ ದಿಟ್ಟಿಸಿದಳು.

ಈ ನೋಟಕ್ಕೆ ಬೆದರುವಂಥ ವ್ಯಕ್ತಿತ್ವ ಅವನದಲ್ಲ. ಎರಡು ಮಾಸ್ಟರ್ ಡಿಗ್ರಿಗಳ ಜೊತೆ ಹಲವಾರು ಚಿನ್ನದ ಪದಕ ಗಳಿಸಿದ ಮೃಣಾಲಿನಿಗೂ ಕೂಡ ಎಂದೂ ಹೆದರಿರಲಿಲ್ಲ.

"ಈ ಹುಡ್ಗನೇ ನಿಮ್ಮ ಮನೆಯಲ್ಲಿರೋದು. ಕೇಳಿದಷ್ಟು ಬಾಡ್ಗೇ, ಅಡ್ವಾನ್ಸ್ ಕೊಡ್ತಾನೆ" ಬಿಳಿಗಿರಿ ಹೇಳಿದರು.

ಸರೋಜಮ್ಮ ಸುಮ್ಮನೆ ಒಳಗೆ ಹೋದರು. ಸಾಗರ್ ಶ್ರೀವಳ್ಳಿಪುರದ ತಮ್ಮ ಮನೆಯಲ್ಲಿ ವಾಸವಾಗಿದ್ದಾನೆಂಬ ಸುದ್ಧಿ ಆಕೆಯ ಕಿವಿಗೆ ಬಿದ್ದಿತ್ತು. ಇಂದೋ, ನಾಳೆಯೋ ಹೋಗಿ ಬಿಳಿಗಿರಿಯವರ ಗ್ರಹಚಾರ ಬಿಡಿಸಿ ಅವನ ಸಾಮಾನುಗಳನ್ನ ಹೊರಗೆಸೆಮ ಬರುವ ತರಾತುರಿಯಲ್ಲಿದ್ದಂಗೆ ಬಂದಿದ್ದರು. ಆದರೂ ಸಿಟ್ಟೇ. 'ತಮಗೆ ತಿಳಿಸದಂತೆ ಕೊಡಲು ಬಿಳಿಗಿರಿಯವರ ಅಪ್ಪನದೇ?' ಅದನ್ನ ಕೇಳಲು ಆಕೆಯ ನಾಲಿಗೆ ತವಕಿಸುತ್ತಿತ್ತು.

ಹಿಂದೆ ಬಂದ ಅಪ್ಪಯ್ಯ ಶಾಸ್ತ್ರಿಗಳು "ಸರೋಜ, ಏನು ಕೇಳ್ಬೇಡ. ಹೇಗೂ ಅಡ್ವಾನ್ಸ್ ಕೊಟ್ಟು ಬಾಡ್ಗೇ ಬಗ್ಗೆ ಮಾತಾಡೋಕೆ ಬಂದಿದ್ದಾರಲ್ಲ, ಅಷ್ಟು ಸಾಕು. ಇಂದು ನೆನ್ನೆಯದಲ್ಲ, ಬಿಳಿಗಿರಿಯವ್ರ ಪರಿಚಯ" ಸಾಂತ್ವನಿಸಿದರು.

"ಬಂಧುತ್ವ, ಪರಿಚಯ ಇಲ್ಬೇಡ. ಅವ್ರೆ ಬಿಟ್ಬಂದ ಮನೆಗೆ ಯಜಮಾನ್ರು ಆಗ್ಬಿಟ್ಟಿದ್ದಾರೆ. ಎಷ್ಟು ತಿಂಗಳಿಂದ ಬಾಡ್ಗೇ ತಗೋತಾ ಇದ್ದಾರೋ" ಅಸಹನೆಯ ತುಂತುರು ಎರಚಾಡಿದರು.

ಹೆಂಡತಿಯ ಹೆಗಲ ಮೇಲೆ ಕೈಯಿಟ್ಟ ಶಾಸ್ತ್ರಿಗಳು "ಏನೇನೋ ಮಾತಾಡ್ಬೇಡ. ಹದಿನೈದು ದಿನದ ಹಿಂದೆ ಹೋದಾಗ ಮನೆ ಖಾಲಿನೇ ಬಿದ್ದಿತ್ತು. ನೀನು ತಿಂಗಳ ಸುದ್ದಿ ಮಾತಾಡ್ತೀಯಾ. ಬಂದ ಜನರ ಮನಸ್ಸು ನೋಯಿಸ್ಬೇಡ. ವಳ್ಳಿಪುರಕ್ಕೆ ಹೊಸ ಜನ ಎಲ್ಲಿ ಬರ್ತಾರೆ ? ಹೇಗೋ ಇದ್ಕೊಳ್ಳಿ ಸುಮ್ಮನಿರು" ಎಂದು ಹೆಂಡತಿಯನ್ನ ತಣ್ಣಗೆ ಮಾಡಿ ಹೊರಗೆ ಕರೆ ತಂದರು.

"ಎಷ್ಟು ಜನ ಇರೋದು ?" ನೇರವಾಗಿ ಸಾಗರ್‌ನ ಕೇಳಿದ್ದು.

ಹಿಂದೂ, ಮುಂದೂ ಅಕ್ಕ ಪಕ್ಕ ನೋಡಿ "ನಾನು ಇವ್ರು...ಅಷ್ಟೆ" ಎಂದ. ಬಿಳಿಗಿರಿಯವರು ತಕ್ಷಣ ಪ್ರವೇಶಿಸಿದರು "ಸಧ್ಯಕ್ಕೆ ಒಬ್ನೇ ! ಒಂದೆರಡು ತಿಂಗ್ಳು ಮಟ್ಟಿಗೆ ಇರ್ಬಹುದ್ದು."

"ಅಕಸ್ಮಾತ್ ಒಂದೆರಡು ದಿನಗಳಲ್ಲಿಯೇ ಹೋಗ್ಬಹುದ್ದು" ತಟ್ಟನೇ ಹೇಳಿದ ಸಾಗರ್. ಸತ್ಯವನ್ನ ಉಸುರಲು ಅವನೆಂದೂ ಹಿಂಜರಿಯುತ್ತಿರಲಿಲ್ಲ. ಬೇಡವೆನಿಸಿದರೇ, ಕುಂದಣದಿಂದಲೇ ಹೊರಟುಬಿಡಬಲ್ಲ.

"ಅಷ್ಟಕ್ಕೆ ಮನೆ ಯಾಕೆ ?" ಸರೋಜಮ್ಮ ಎದ್ದು ಹೋಗುವ ಮುನ್ನ "ಎರ್ಡು ದಿನ, ನಾಲ್ಕು ದಿನಕ್ಕೆ ಬಾಡಿಗೆಗೆ ಕೊಡೋಕೆ ಹೋಟಲ್‌ನ ರೂಮುಗಳಲ್ಲ" ಚುರುಕಾಗಿತ್ತು ಆಕೆಯ ಮಾತು.

ಬಿಳಿಗಿರಿಯವರು ತಮ್ಮ ಬುದ್ಧಿಯನ್ನೆಲ್ಲ ಖರ್ಚು ಮಾಡಿ ಹತ್ತು ಸಾವಿರ ಅಡ್ವಾನ್ಸ್ ಕೊಡಿಸಿದರು. ಒಂದು ತರಹ 'ಲೀಜ್' ಅವನೇನಾದರೂ ಕೆಲವು ದಿನಗಳಲ್ಲಿ ಹೊರಟರೇ, ಅರ್ಧ ಹಣವನ್ನ ಮಾತ್ರ ಹಿಂದಿರುಗಿಸುವುದು. ಕೊಟ್ಟ ಹಣಕ್ಕೆ ಆರು ತಿಂಗಳು ಅಲ್ಲಿ ವಾಸಿಸುವ ಪರವಾನಿಗೆ ಸಿಕ್ಕಿದ್ದು ಸಾಗರ್‌ನ ಅದೃಷ್ಟ.

ಹಣವನ್ನ ಕಬ್ಬಿಣದ ಬೀರುವಿನಲ್ಲಿರಿಸಿ ಹೊರಗೆ ಬಂದ ಆಕೆ "ಊಟ ಮಾಡ್ಕೊಂಡ್ ಹೋಗಿ. ಆ ಸಮಯದಲ್ಲಿ ಅಂಗ್ಡಿ ವ್ಯಾಪಾರ ಜೋರು. ಅವ್ರಿಗೆ ಏನು ತಿಳಿಯೋಲ್ಲ. ಮನೆನಾ ನಾಜೋಕಾಗಿ ಇಟ್ಕೋಬೇಕು" ಎಂದು ಹೇಳಿ ಚಪ್ಪಲಿ ಮೆಟ್ಟಿ ಸೀರೆಯ ನೆರಿಗೆಗಳ ಸರಸರ ಸದ್ದಿನೊಂದಿಗೆ ಅದೃಶ್ಯವಾದಾಗ ಸಾಗರ್ ಕ್ರಾಪ್‌ನಲ್ಲಿ ಕೈ ಇಟ್ಟ. 'ತುಂಬ ಡೈನಾಮಿಕ್ ಲೇಡಿ' ಅಂದುಕೊಂಡ.

ಅಪ್ಪಯ್ಯ ಶಾಸ್ತ್ರಿಗಳು ಸಮಾಧಾನದ ಉಸಿರು ಬಿಟ್ಟರು. ಹೆಂಡತಿ ಎದುರಿಗೆ ಇದ್ದರೇ ಅವರ ನಾಲಿಗೆಗೆ ಅರೆ ಜೀವ. ಆಕೆಯ ನಾಲಿಗೆಯ ಮುಂದೆ ಇವರ ನಾಲಿಗೆ ತತ್ತರಿಸುತ್ತಿತ್ತು.

"ತುಂಬ ಮಳೆ ಆಯ್ತು ಅಂತ ಕೇಳ್ದೆ ಊರಿನಲ್ಲಿ. ಇಲ್ಲಿ ಬರೀ ಜಡಿ. ಆಗಾಗ ನಾಲ್ಕು ತುಂತುರು ಹನಿ. ಊರಿನ ಬೀದಿಯಲ್ಲೆಲ್ಲ ನೀರು ಹರೀತಂತೆ" ಎಂದರು ಮೆಲ್ಲಗೆ ಅಪ್ಪಯ್ಯ ಶಾಸ್ತ್ರಿಗಳು.

ಸ್ವಲ್ಪ ಸರಿಯಾಗಿ ಕೂತರು ಬಿಳಿಗಿರಿ.

"ಹೌದೌದು, ಎಷ್ಟೋ ಮನೆಗಳು ನೀರಿನಲ್ಲಿ ಕೊಚ್ಚಿಹೋಗಿವೆ. ಏನು ಪ್ರಾಣಹಾನಿ ಆಗಿಲ್ಲ ಅನ್ನೋದೊಂದು ಸಮಾಧಾನ ಅಷ್ಟೆ. ನಿಮ್ಮ ಮನೆಯ ಮೂರು ಮೆಟ್ಟಲು ಮುಳುಗೋವರ್ಗೂ ನೀರು ಬಂದಿತ್ತು."

ಅವರಿಬ್ಬರ ಮಾತು ಹೊಳೆ, ನೀರು, ಊರಿನ ಬಗ್ಗೆ ಸಾಗಿದಾಗ ಸಾಗರ್ ಎದ್ದು ಹೊರಗೆ ಬಂದು ನಿಂತ. ದೂರದವರೆಗೂ ನೋಟ ಹರಿಸಿದ. ಹೆಚ್ಚು ಕಡಿಮೆ ಒಂದೇ ತರಹದ ಮನೆಗಳು. ಸ್ವಲ್ಪ ಮಾರ್ಪಾಡಾಗಿತ್ತು ಶಾಸ್ತ್ರಿಗಳ ಮನೆ ಮಾತ್ರ.

"ಈ ಹುಡ್ಗ ಯಾರು? ನೆಂಟರ ಪೈಕಿನಾ?" ಕೇಳಿದರು ಶಾಸ್ತ್ರಿಗಳು. ಬಿಳಿಗಿರಿಯವರಿಗೆ ಸತ್ಯ ಹೇಳಬೇಕೆನಿಸಿತು. "ಇಲ್ಲ, ಹಾಗೇ ಹೇಳದಿದ್ದರೇ ಸರೋಜಮ್ಮ ಎಲ್ಲಿ ಮನೆ ಇಲ್ಲಾಂತ ಹೇಳ್ತಾರೋಂತ ಸುಳ್ಳು ಹೇಳ್ದೆ. ಒಂದು

ದಿನ ಹೊಳೆ ಕಡೆ ಹೋದಾಗ ಕಲ್ಲು ಬಂಡೆ ಮೇಲೆ ಕೂತಿದ್ದ. ಅಲ್ಲಿ ಪಚ್ಚೆ ಕೆಂಪು ಕಲ್ಲು ಸಿಗೋ ಪುಕಾರ್ ಇದೆಯಲ್ಲ, ಅದಕ್ಕೋಸ್ಕರ ಬಂದಿರಬೇಕೆಂದುಕೊಂಡೇ. ಸುಮ್ನೆ ಕೂತಿರೋನು. ಕಲ್ಲೇಶಿ ಕೈಯಲ್ಲಿ ಅದೂ ಇದೂ ತರ್ಸಿಕೊಂಡು ತಿಂದಿದ್ದು ನೋಡ್ದ ನಮ್ಮ ತಿರುಮಲಾಂಬ ಮನಸ್ಸು ತಡಿದೇ ಕರ್ಕೊಂಡ್ಬಂದ್ಳು. ಮಗ್ನ ದೂರ ಮಾಡ್ಕೊಂಡ್ ಹಂಬಲಿಸ್ತಾ ಇರೋ ಜನ ನಾವು. ಹಿಂದೂ ಮುಂದೂ ಯೋಚಿಸ್ದೇ ಎರ್ಡು ದಿನ ಮನೆಯಲ್ಲಿ ಇಟ್ಕೊಂಡ್ವಿ. ಅವ್ನು ಇರೋಕೆ ಒಪ್ಲಿಲ್ಲ, ಹೊಳೆ ತುಂಬಿದ ದಿನ ಹೊರಟಾಗ ಏನು ಅನಾಹುತವಾಗ್ಬಾರ್ದೂಂತ... ನಿಮ್ಮ ಮನೆ ಕೀಲಿ ತೆಗ್ದೆ." ವಿವರಣೆ ನೀಡಿದರು.

ಅಪ್ಪಯ್ಯ ಶಾಸ್ತ್ರಿಗಳು ಮೌನವಹಿಸಿದರು. ಅದೇ ಮೌನ ಅವರಿಗೆ ಇಷ್ಟವಾಗಲಿಲ್ಲವೆಂದು ಸಾರಿ ಹೇಳಿತು.

"ತಪ್ಪಂತ ಅನ್ನಿಸ್ತಾ ?" ಬಿಳಿಗಿರಿ ಕೇಳಿದರು.

"ಹಾಗಲ್ಲ, ಏನೋ ಆಸೆ ಇಟ್ಕೊಂಡ್ ಬರೋದು, ಹೆಣವಾಗೋದು ನೋಡಿ ಸಾಕಾಗಿದೆ. ನಾಲ್ಕು ದಿನ ಬೇಕಾದ್ರೆ ಇದ್ಕೊಳ್ಳಿ. ದಯವಿಟ್ಟು ಬುದ್ಧಿ ಹೇಳಿ ಊರಿಗೆ ಕಳ್ಸಿ. ಪ್ರಾಯದ ಹುಡ್ಗ ಜೀವವಿದ್ರೆ... ಏನೆಲ್ಲ ಸಂಪಾದ್ನೆ ಮಾಡ್ಬಹುದ್ದು."

ಅಪ್ಪಯ್ಯ ಶಾಸ್ತ್ರಿಗಳ ಮಾತು ತಳ್ಳಿ ಹಾಕುವಂಥದಲ್ಲ. ಸಾಗರ್‌ದು ಯಾರ ಮಾತು ಕೇಳುವ ಸ್ವಭಾವವಲ್ಲವೆಂದು ಗೊತ್ತಾಗಿತ್ತು. ಆದರೆ ಪಚ್ಚೆ, ಕೆಂಪು ಕಲ್ಲುಗಳ ಆಸೆಗಾಗಿ ಬಂದಿದ್ದಾನೆನ್ನುವುದರಲ್ಲಿ ಸ್ವಲ್ಪ ಅಪನಂಬಿಕೆ. ಯಾಕೆ.... ಬಂದ ? ಅನ್ನೋ ಪ್ರಶ್ನೆಗೆ ಅಪನಂಬಿಕೆ ಉತ್ತರಿಸಬೇಕಿತ್ತು.

"ನಾನು ಹೇಳಿದ್ದರಲ್ಲಿ ಏನಾದ್ರೂ ತಪ್ಪಿದ್ಯಾ ?" ಮತ್ತೆ ಅವರೇ ಕೇಳಿದರು. ತಲೆ ಅಡ್ಡಡ್ಡ ಆಡಿಸಿದ ಬಿಳಿಗಿರಿ "ಖಂಡಿತ ಇಲ್ಲ. ಹೇಳಿದ್ದು ಕೇಳೋ ಸ್ವಭಾವ ಅವನದಲ್ಲ. ಆದ್ರೂ ಯಾವ್ದೇ ಮಮಕಾರದಿಂದ ಇಷ್ಟೆಲ್ಲ ಮಾಡ್ತಾ ಇದ್ದೀನಿ. ನಡ್ಕೋದ್ನ ತಡ್ಕೋಕೆ ನಾವು ಯಾರು ?" ಮೇಲಿರುವ ಭಗವಂತನತ್ತ ಕೈ ತೋರಿ ತಮ್ಮ ಜವಾಬ್ದಾರಿ ಕಳೆದುಕೊಂಡರು. ಕ್ಲಿಷ್ಟ ಸಮಯದಲ್ಲಿ ಪಾರು ಮಾಡಲು ಇರುವವನೇ ದೇವರು. ಆ ನಂಬಿಕೆಯೊಂದೇ ಮನುಷ್ಯನನ್ನ ಕೆಲವು ಮಟ್ಟಿಗೆ ನಿಶ್ಚಿಂತೆಯಾಗಿಡಬಲ್ಲದು.

"ನೀವು ಹೇಳಿದ್ದು ಸರಿ. ನಮ್ಮ ಹುಡುಗಿ ಮುತ್ತು ಉದುರಿಸಿದಂತೆ ಮಾತಾಡ್ತಾ ಇದ್ಳು. ಈಗ ಪೂರ್ತಿ ಮಾತೇ ಮರೆತಂತೆ ಇದ್ದಾಳೆ. ಈ ಹೊಡೆತ ಅಪ್ಪಯ್ಯ ಶಾಸ್ತ್ರಿನ ಪಾತಾಳಕ್ಕೆ ತಳ್ಳಿಬಿಡ್ತು" ಅತ್ತೇಬಿಟ್ಟರು.

ಆ ವೇಳೆಗೆ ಒಳಗೆ ಬಂದ ಸಾಗರ್ ಮೊದಲು ಕೂತಿದ್ದ ಕಡೆಯೇ ಕೂತು "ನಾನು ನ್ಯೂ ಉಡುಪಿ ಭವನ್‌ನಲ್ಲಿ ಹೋಗಿ ಕಾಫಿ ಕುಡ್ದು ಬರ್ಲಾ" ಕೇಳಿದ.

ಮೇಲೆದ್ದ ಅಪ್ಪಯ್ಯ ಶಾಸ್ತ್ರಿಗಳು "ನಮ್ಮ ವಳ್ಳಿ ಅದ್ಕಿಂತ ಒಳ್ಳೆ ಕಾಫಿ ಕೊಡ್ತಾಳೆ. ಊಟ ಮುಗ್ಸಿಕೊಂಡು ಹೊರಡ್ಬಹುದ್ದು" ಅಡಿಗೆ ಮನೆಗೆ ಹೋದರು.

ಆಫೀಸರ್ ಮನೆಗಳನ್ನ ಸಿಂಗರಿಸುವಂತೆ ಸರೋಜಮ್ಮ ನಡುಮನೆಯ ಮೂಲೆಯಲ್ಲೊಂದು ಟೇಬಲ್ಲು ಇಟ್ಟು ಅದರ ಮೇಲೆ ಕೈಯಲ್ಲಿ ಕಸೂತಿ ಹಾಕಿದ ಬಿಳಿಯ ಬಟ್ಟೆಯ ಚೌಕ ಹಾಸಿ ಅದರ ಮೇಲೊಂದು ಗಾಜಿನ ವಾಸ್ ಇಟ್ಟಿದ್ದರು. ಅದರಲ್ಲಿ ಪ್ಲಾಸ್ಟಿಕ್‌ನ ಬಣ್ಣ ಬಣ್ಣದ ಹೂಗಳು ಇತ್ತು.

ಇವರುಗಳು ಕೂತಿದ್ದು ಬೆತ್ತದ ಕುರ್ಚಿಗಳು, ಮಧ್ಯದಲ್ಲಿ ಒಂದು ಟೀಪಾಯಿ ಇತ್ತು. ಅದರ ಮೇಲೊಂದು ಹಣೆದ ಚೌಕ. ಇವೆಲ್ಲ ಕುಂದಣಕ್ಕೆ ಬಂದ ಮೇಲೆ ಅರೇಂಜ್ ಆಗಿರಬೇಕು.

"ಸರೋಜಮ್ಮ ಇವ್ರಿಗೆ ಏನಾಗ್ಬೇಕು ?" ಕೇಳಿದ ಗಡ್ಡ ಉಜ್ಜುತ್ತ ಸಾಗರ್. ಅವರಿಗೆ ಆಶ್ಚರ್ಯವೋ...ಪರಮಾಶ್ಚರ್ಯ... ಹೊರಡುವಾಗ ಹೇಳಿದ್ದರು. ಇಲ್ಲಿಗೆ ಬಂದ ಮೇಲೆ ಪರಿಚಯಸಿದ್ದರು. ಅಂಥದ್ದರಲ್ಲಿ ಇಂಥ ಪ್ರಶ್ನೆ ? "ಶಾಸ್ತ್ರಿಗಳ ಧರ್ಮಪತ್ನಿ" ಅವರ ಮಾತಿಗೆ ನಕ್ಕುಬಿಟ್ಟ.

"ಏನು ಹಾಗೆಂದರೇ ?" ಕೇಳಿದ ತಮಾಷೆಯಾಗಿ.

ತುಂಬ ತರಲೆ ಹುಡುಗನಾಗಿ ಕಂಡ ಸಾಗರ್ "ನಮ್ಮ ತಂದೆಗೂ ನಮ್ಮ ತಾಯಿ ಧರ್ಮಪತ್ನಿ. ಹಾಗೆಂದರೇನು?" ನೇರವಾಗಿತ್ತು ಅವನ ಪ್ರಶ್ನೆ. ಮುಖ ಕೂಡ ಅಷ್ಟೇ ಸೀರಿಯಸ್ಸಾಗಿತ್ತು.

"ಈ ಪ್ರಶ್ನೆಗೆ ಸರ್ಯಾಗಿ ಉತ್ತರ ಹೇಳ್ಬೇಕೆಂದರೇ, ವೇದಗಳ ಕಾಲದ ನಡಾವಳಿಯಿಂದಲು ಪ್ರಾರಂಭಿಸಬೇಕಾಗುತ್ತೆ" ಎಂದ ಕೂಡಲೇ ಕೈಯೆತ್ತಿ ತಡೆದ "ಬೇಡ ಬಿಡಿ, ನಂಗೆ ಅಷ್ಟೊಂದು ಪೇಷನ್ಸ್ ಇಲ್ಲ. ಹೋಗೋದೇ... ತಾನೇ!"

ಅಷ್ಟು ಎತ್ತರ ಬೆಳೆದ ಸಾಗರ್ ಪುಟ್ಟ ಹಟಮಾರಿ ಹುಡುಗನಾಗಿ ಕಂಡ ಅವರ ಕಣ್ಣುಗಳಿಗೆ. ಕೆಲವೊಮ್ಮೆ ಮಕ್ಕಳ ಅಳತೆ ಮೀರಿದ ಪ್ರಶ್ನೆಗಳು, ಅವಿಧೇಯತೆ ಕೂಡ ಹಿರಿಯರಿಗೆ ಇಷ್ಟವಾಗುತ್ತೆ.

ಅಷ್ಟರಲ್ಲಿ ಎರಡು ಲೋಟ ಬಿಸಿ ಬಿಸಿ ಕಾಫಿ ಹಿಡಿದು ಬಂದ ಶ್ರೀವಳ್ಳಿ ಮುಂದಿರುವ ಟೀಪಾಯಿ ಮೇಲೆ ತಟ್ಟೆ ಸಮೇತ ಇಟ್ಟಳು. ತೀರಾ ಹಳೆಯ ಸಿನಿಮಾದ ಮುಗ್ಧ ಹೀರೋಯಿನ್‌ನಂತೆ ಕಂಡಳು. ಈಚೆಗೆ ಅಂದರೇ ಮನೆಯಿಂದ ಹೊರ ಬೀಳುವ ಮುನ್ನ ಟಿ.ವಿ.ಯಲ್ಲಿ ಬ್ಲಾಕ್ ಅಂಡ್ ವೈಟ್ ಸಿನಿಮಾದ

ಹಾಡು ನೋಡಿದ. ಹಿಂದಿ ಚಲನಚಿತ್ರ ಹೆಸರಾಂತ ನಟ ರಾಜ್‌ಕಪೂರ್ ಮತ್ತು ನರ್ಗಿಸ್ ಮಳೆಯಲ್ಲಿ ಕೊಡೆ ಹಿಡಿದು ಹಾಡುವ ದೃಶ್ಯ. ಅಂಥ ಮುಗ್ಧತೆಯೇ ಈ ಹೆಣ್ಣಿನ ಮುಖದ ಮೇಲೆ ಇದೆಯೆನಿಸಿತು.

'ತಗೊಳ್ಳಿ...' ಎಂದು ಸನ್ನೆ ಮಾಡಿದವಳು 'ಅಡಿಗೆ ಆಗ್ತಾ ಇದೆ, ಊಟ ಮುಗ್ಸಿಕೊಂಡ್ಹೋಗಿ' ಎಂಬುದನ್ನ ಸೇರಿಸಿದಾಗ ಬಿಳಿಗಿರಿಯವರು ಅವಳನ್ನ ಹತ್ತಿರಕ್ಕೆ ಕರೆದು ಒಂದು ಪೆನ್ನನ್ನ ಅವಳ ಕೈಯಲ್ಲಿಟ್ಟಾಗ, ಸರ್ಪ ಕಂಡಂತೆ ಹೆದರಿದರೂ ಒಂದು ರೀತಿಯ ಹರ್ಷದ ತುಂತುರು ಅವಳ ಕಣ್ಣಲ್ಲಿ.

ಆರಾಮಾಗಿ ಕಾಫಿ ಕುಡಿದ. ಚೆನ್ನಾಗಿದೆಯೆನಿಸಿತು. ಇನ್ನ ಬಿಳಿಗಿರಿಯವರಿಗಾಗಿ ಕಾಯುತ್ತಿದ್ದ ಲೋಟದಿಂದ ತನ್ನ ಲೋಟಕ್ಕೆ ಅರ್ಧದಷ್ಟು ಸುರಿದುಕೊಂಡ.

"ವಳ್ಳಿ....ಶ್ರೀವಳ್ಳಿ ಅಂತ ಅಪ್ಪಯ್ಯ ಶಾಸ್ತ್ರಿಗಳ ಸಂತಾನ" ಈಗ ಪರಿಚಯಿದರು. "ರಂಗೋಲಿ ಬಿಡಿಸಿದ ಹುಡ್ಗಿ" ಎರಡು ಕೈಗಳನ್ನ ಜೋಡಿಸಿದಾಗ ನಕ್ಕುಬಿಟ್ಟ "ಅಯ್ಯೋ, ನಮ್ಮಂತವ್ರಿಗ್ಯಾಕೆ ನಮಸ್ಕಾರ? ಬೇಕಾದ್ರೆ ಇವ್ರ ಕಾಲಿಗೆ ಬಿದ್ದು ಆಶೀರ್ವಾದ ತಗೋ" ಎಂದ ಉತ್ಪ್ರೇಕ್ಷೆಯಿಂದ.

ಬೆದರು ಕಣ್ಣುಗಳಿಂದ ಬಿಳಿಗಿರಿಯವರತ್ತ ನೋಡಿದಳು.

"ಬಹಳ ಒಳ್ಳೇ ಹುಡ್ಗ! ಮಾತು ಮಾತ್ರ ಈ ತರಹ ಆಡ್ತಾನೆ. ಊರಿನಲ್ಲಿರೋ ನಿಮ್ಮ ಮನೆಯಲ್ಲಿ ಬಾಡ್ಗಗೇ ನಿಂತಿದ್ದಾನೆ" ತಿಳಿಸಿದಾಗ ಅವರ ಕಣ್ಣುಗಳು ಮತ್ತಷ್ಟು ಅಗಲವಾಗಿ, ನಂತರ ತೀರಾ ಪುಟ್ಟದಾಗಿ ಬೆಳಕು ಹೊರ ಹೊಮ್ಮಿತು. 'ಸಂತೋಷ' ಎನ್ನುವಂತೆ ತುಟಿ ಅರಳಿಸಿದಳು.

"ನಿನ್ನ ರಂಗೋಲಿ ನೋಡಿ ತುಂಬ ಮೆಚ್ಕೊಂಡ. ಊರಿನಲ್ಲಿ ದೇವರ ಮನೆಯಲ್ಲಿ ಬಿಡ್ಸಿರೋ ರಂಗೋಲಿನ ಕಲಿಯೋಕು ಪ್ರಯತ್ನಪಟ್ಟ. ಊಟದವರ್ಗೂ ನಿನ್ನ ರಂಗೋಲಿ ಪುಸ್ತಕ ತಂದ್ಕೊಡು ನೋಡ್ಲಿ" ಹೇಳಿದರು. ಅವರೊಂದಿಷ್ಟು ಅಂಗಡಿಯ ಕಡೆ ಹೋಗಬೇಕಿತ್ತು. ತೀರಾ ತಾಳ್ಮೆ ಕಡಿಮೆ ಇರುವ ಸಾಗರ್ ಜೊತೆಯಲ್ಲಿ ಕರೆದೊಯ್ಯುವ ಬದಲು, ಅಲ್ಲಿಯವರೆಗೂ ಇಲ್ಲಿಯೇ ಇರಿಸಿ ಹೋಗುವುದು ಸೂಕ್ತವಾಗಿ ಕಂಡಿತು.

ಅವರು, ಶಾಸ್ತ್ರಿಗಳು ಹೊರಡುವ ಮುನ್ನ "ಸಾಗರ್ ಮೂರಕ್ಕೆ ಬಸ್ಸಿದೆ. ಊಟ ಮಾಡ್ಕೊಂಡ್ ಹೊರಡೋಣ. ಅಲ್ಲಿವರ್ಗೂ ರಂಗೋಲಿ ಪುಸ್ತಕ ನೋಡ್ಕೊಂಡ್ ಇರು" ಎಂದ ಕೂಡಲೇ ನಕ್ಕುಬಿಟ್ಟ. ಹೆತ್ತ ಅಮ್ಮ ಹೊರ ಹೋಗುವ ಮುನ್ನ ಕಾಮಿಕ್ಸ್ ಪುಸ್ತಕ ಕೊಟ್ಟು ಹೊರಟಂತೆ ಕಂಡಿತು "ಹೋಗ್ಬನ್ನಿ, ನೋ ಪ್ರಾಬ್ಲಮ್ ಇಲ್ಲಿ ಸಿಗದಿದ್ರೂ.... ಮೂರರ ಬಸ್ಸಿನಲ್ಲಿ ಇರ್ತೀನಿ" ಎಂದ.

ಬಿಳಿಗಿರಿಯುವರಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಮೌನವಾಗಿ ಹೊ ಟರು. ಬಹುಶಃ ಅವನು ಜಾಗ ಖಾಲಿ ಮಾಡುವ ಸಲುವಾಗಿಯೇ ಬಾಗಿಲ ಬಳಿ ಹೊರಟವನನ್ನ ಕೈ ಹಿಡಿದು ನಿಲ್ಲಿಸಿದ ಶ್ರೀವಳ್ಳಿ ಬರುವಂತೆ ಕರೆದೊಯ್ದಳು ಒಂದು ಕೋಣೆಗೆ. ಸ್ವಲ್ಪ ಎತ್ತರವಾದ ಅಟ್ಟವಿತ್ತು. ಅದರ ಮೇಲಿರುವ ಟ್ರಂಕ್ ಕಡೆ ತೋರಿಸಿ ತೆಗೆದುಕೊಡುವಂತೆ ತಿಳಿಸಿದಳು.

ಮೂತಿ ಸೊಟ್ಟ ಮಾಡಿ 'ಹ್ಞೂ' ಎಂದರು ನಿರಾಕರಿಸದೇ ಒಂದು ಸ್ಟೂಲ್ ತಂದು ಹಾಕಿಕೊಂಡು ಟ್ರಂಕ್ ಇಳಿಸಿಕೊಟ್ಟ. ಅವಳಂತು ಖುಷಿಯಿಂದ ಆ ಟ್ರಂಕ್‌ನ ಮುಚ್ಚಳ ತೆಗೆದು ಅದರಲ್ಲಿರುವ ಪುಸ್ತಕಗಳನ್ನೆಲ್ಲ ತೆಗೆದು ತೆಗೆದು ಹೊರ ಹಾಕಿ ಒಂದೊಂದು ಪುಸ್ತಕವನ್ನ ತೆರೆದು ತೆರೆದು ಬಿಡಿಸಿಟ್ಟ ರಂಗೋಲಿಗಳನ್ನ ತೋರಿಸಿದ್ದನ್ನ ಕಣ್ಣರಳಿಸಿ ನೋಡಿದ.

ರಂಗೋಲಿ ಸಾಮ್ರಾಜ್ಯದ ಒಂದು ಪುಟ್ಟ ಜಗತ್ತೇ ಅವುಗಳಲ್ಲಿ ಇತ್ತು. ನೋಡಿದಷ್ಟು ಸೊಗಸು. ಬಹುಶಃ ಮೊದಲೇ ಅವನಲ್ಲಿ ಇಂಟರೆಸ್ಟ್ ಮೂಡಿರದಿದ್ದಲೇ ಎಸೆದು ಹೋಗಿ ಬಿಡುತ್ತಿದ್ದನೇನೋ, ಈಗಂತು ಪ್ರತಿಯೊಂದು ಪುಟವನ್ನು ಬಿಡಿಸಿ ಬಿಡಿಸಿ ನೋಡತೊಡಗಿದಾಗ ಅವನ ಕೈ ಹಿಡಿದು ಅಲುಗಿಸಿ 'ತಾನು ಅಡಿಗೆ ಮುಗಿಸಿ ಬರುವುದಾಗಿ' ಹೇಳಿ ಹೋದದ್ದು ಸನ್ನೆಯಿಂದಲೇ. ಒಬ್ಬ ಅಪರಿಚಿತನ ಬಳಿ ಇಷ್ಟು ಮುಗ್ಧವಾಗಿ ಸರಳವಾಗಿ ನಡೆದುಕೊಳ್ಳುವ ಹೆಣ್ಣಿನ ಬಗ್ಗೆ ಒಂದಿಷ್ಟು ಬೇಸರವೇ ಆಯಿತು.

ನಾಲ್ಕಾರು ರಂಗೋಲಿ ಪುಸ್ತಕಗಳು ನೋಡಿ ಮುಗಿಸುವ ವೇಳೆಗೆ ಬಿಳಿಗಿರಿ, ಅಪ್ಪಯ್ಯಶಾಸ್ತ್ರಿಗಳು ಬಂದರು.

"ನನ್ನ ಪುಣ್ಯ !" ತಲೆಯ ಮೇಲೆ ಕೈಯಾಡಿಸಿಕೊಂಡ ಬಿಳಿಗಿರಿ "ಅಂತು ನಿಂಗೆ ರಂಗೋಲಿ ಮೇಲೆ ಇಂಟರೆಸ್ಟ್ ಇದೇಂತ ಆಯ್ತು. ನಗಾಡುವ ವೇಳೆಗೆ ಸಣ್ಣಗೆ ಘಲ್ ಘಲ್ ಅನ್ನುವಂಥ ನವಿರಾದ ಶಬ್ಧ ಅವನನ್ನ ಸೆಳೆಯಿತು. ಚಂಬು ಹಿಡಿದು ಬಂದ ಶ್ರೀವಳ್ಳಿಯನ್ನ ಅಡಿಯಿಂದ ಮುಡಿಯ ವರೆಗೂ ನೋಡಿದ. ಕಾಲುನಲ್ಲಿದ್ದ ಬೆಳ್ಳಿಯ ಚೈನ್ ಬಳಿ ನಿಂತಿತು ಅವನ ನೋಟ. ಬಿಳಿಯ ಪಾದದ ಮೇಲೆ ಆಕರ್ಷಕವಾಗಿ ಕಂಡಿತು."

ಸರೋಜಮ್ಮನ ದನಿ ಹೇಗೆ ಬಂದು ಅಪ್ಪಳಿಸಿತೆಂದರೆ, ಬಂಡೆಗೆ ಅಲೆಗಳು ಅಪ್ಪಳಿಸಿ ಅದರ ಏಕಾಗ್ರತೆಯ ಕದಡಿದಂತೆ, ಮೈ ಮರೆತು ಹಾಡುವ ಒಬ್ಬ ಸಂಗೀತಗಾರನ ಮೇಲೆ ಪಟಾಕಿ ಎಸೆದಂತೆ ತುಂಬಿದ ಸಭೆಯಲ್ಲಿ ಗೂಳಿ ನುಗ್ಗಿ ಅಲ್ಲೋಲ ಕಲ್ಲೋಲ ಮಾಡಿದಂತೆ - ಅಂತು ಅವನ ಚಿತ್ತ ಚಲಿಸಿ ಹೋಯಿತು.

"ಅದ್ಗೆ ಆಯ್ತು,? ಬಂದ ಗಿರಾಕಿಗಳ ಜೊತೆ ಮಾತಾಡಿ ಮಾತಾಡಿ ಗಂಟ್ಲು ಒಣಗಿಹೋಯ್ತು." ಸರೋಜಮ್ಮ ಆರ್ಭಟಿಸುತ್ತಲೇ ಕೈ ತೊಳೆದು ಬಂದು ಹಾಕಿದ್ದ ಎಲೆಯ ಮುಂದೆ ಕೂತೇಬಿಟ್ಟರು. ಸಂಕೋಚ ಇಟ್ಟುಕೊಳ್ಳದ ಹೆಂಗಸು ಆಕೆ.

ದಢದಢ ಎಂದು ಪಾತ್ರೆಗಳನ್ನ ತಂದಿಟ್ಟುಕೊಂಡ ಶ್ರೀವಳ್ಳಿ ಬಡಿಸಿ ನಂತರವೇ ಇನ್ನೊಂದು ಎಲೆ ಹಾಕಿದ್ದು. ಸಾಗರ್ ಬಿಳಿಗಿರಿಯವರತ್ತ ನೋಡಿದ. ಅವರಿಗೂ ಒಂದು ರೀತಿಯ ಮುಜುಗರ.

"ಶಾಸ್ತ್ರಿಗಳೇ...ಬರ್ತೀನಿ. ನ್ಯೂ ಉಡುಪಿ ಹೋಟಲ್ ಭಟ್ರು ಬರೋವಾಗ್ಲೇ ಅಡ್ಡ ಹಾಕ್ಕೊಂಡ್ರು. ಈಗ ಹೋಗೋದಂತು ತಪ್ಪೋಲ್ಲ. ಹೋದ್ಮೇಲೆ ಏನಾದ್ರೂ ತಿನ್ನಬೇಕಾಗುತ್ತೆ. ಇಲ್ಲಿ ಊಟ ಮಾಡಿದ್ಮೇಲೆ ಅಲ್ಲೇನು ತಿನ್ನೋಕ್ಕಾಗೋಲ್ಲ ಇನ್ನೊಂದ್ ದಿನ....ಬರ್ತೀನಿ" ಆ ಮನುಷ್ಯ ಮಾತಾಡಲು ಅವಕಾಶ ಕೊಡದಂತೆ ತಪ್ಪಿಸಿಕೊಂಡರು.

ಅಪ್ಪಯ್ಯಶಾಸ್ತ್ರಿಗಳ ಬಾಯಿಂದ ಮಾತುಗಳೇ ಹೊರಡಲಿಲ್ಲ.

"ಹೌದೌದು, ನಮ್ಮ ಊರಿನ ಜನರನ್ನ ಕಂಡರೇ...ಭಟ್ಟರಿಗೆ ಬೋ ವಿಶ್ವಾಸ. ಹೋಗೋ ದಾರಿಯಲ್ವಾ, ನಿಂತು ಮಾತಾಡ್ಸಿಕೊಂಡ್ಹೋಗಿ" ಅನ್ನ ಕಲೆಸುತ್ತ ಸರೋಜಮ್ಮ ಒಂದು ಠರಾವ್ ಹೊರಡಿಸಿದರು.

ಎದೆಯ ಮೇಲೆ ಕೈಯಿಟ್ಟುಕೊಂಡ ಸಾಗರ್, ಆಕೆ ಊಟ ಮಾಡುವ ಕಡೆ ಹೋಗಿ ಕುಕ್ಕರುಗಾಲಿನಲ್ಲಿ ಕೂತು "ದಯವಿಟ್ಟು ನಿಮ್ಮ ಹೆಸರು ಹೇಳಿ. ಬಹಳ ದಿನ ನನ್ನ ನೆನಪಿನಲ್ಲಿ ಇರ್ತೀರಾ! ಇನ್ನೊಮ್ಮೆ ನಿಮ್ಮನ್ನ ಭೇಟಿ ಮಾಡಿದ್ರೆ....ನನ್ನಾಣೆ" ಎರಡು ಕೈ ಜೋಡಿಸಿ ಹೊರಗೆ ಬಂದವನು ಬಿಳಿಗಿರಿಯವರಿಗೂ ಕಾಯದೇ, ಆರಾಮಾಗಿ ಬಸ್‌ಸ್ಟಾಂಡ್‌ನ ಹಾದಿ ಹಿಡಿದ.

ಆಮೇಲೆ ಏನಾಯಿತೋ ಗೊತ್ತಿಲ್ಲ ಬಿಳಿಗಿರಿಯವರ ಜೊತೆ ನ್ಯೂ ಉಡುಪಿ ಭವನ್‌ಗೆ ಅಪ್ಪಯ್ಯ ಶಾಸ್ತ್ರಿಗಳು ಕೂಡ ಬಂದರು. ಅವರ ಮುಖದಲ್ಲಿ ಕಿಂಚಿತ್ ಕಳೆ ಇರಲಿಲ್ಲ. ನೂರು ಕೆ.ಜಿ ಸೌದೆ ಹೊತ್ತು ಬಸವಳಿದಂತೆ ಕಂಡರು.

ದೋಸೆ ಮುರಿಯುತ್ತಿದ್ದ ಸಾಗರ್‌ನ ತುಟಿಯಂಚಿನಲ್ಲಿ ಮೂಡಿದ್ದ ಅಪಹಾಸ್ಯದ ನಗು ಇರಬಹುದು. ಬಂದ ಕೂಡಲೇ ದೋಸೆಯ ವಾಸನೆ ಹಿಡಿದು ಮಸಾಲೆ ದೋಸೆಗೆ ಆರ್ಡರ್ ಮಾಡಿದ್ದ. ಸಣ್ಣ ನಿಂಬೆ ಗಾತ್ರದ ಬೆಣ್ಣೆಯನ್ನ ಬಿಸಿಯ ದೋಸೆಯ ಮೇಲಿಟ್ಟು ತಂದಾಗ, ಅದರ ಘಮಲು ಆಘ್ರಾಣಿಸುವಂತಿತ್ತು. ಒಡನೆಯೇ ಕೈ ಹಾಕಿದ್ದ.

ಹತ್ತಿರಕ್ಕೆ ಬಂದ ಅಪ್ಪಯ್ಯಶಾಸ್ತ್ರಿಗಳು "ಊಟದ ಸಮಯ, ಊಟ ಮಾಡ್ಬಿಡ್ಬೇಕಿತ್ತು ; ಭಟ್ಟರು ಅಡಿಗೆನ ಚೆನ್ನಾಗಿ ಮಾಡ್ತಾರೆ."

ಬಾಯಲ್ಲಿದ್ದ ದೋಸೆಯನ್ನ ನುಂಗಿ ಒಂದು ಲೋಟ ನೀರನ್ನ ಪೂರ್ತಿಯಾಗಿ ಕುಡಿದಿಟ್ಟ "ಯಾಕೋ, ನಿಮ್ಮ ಧರ್ಮಪತ್ನಿಯವ್ರ ಎಲೆಯಲ್ಲಿ ಅನ್ನ ನೋಡಿದ್ಮೇಲೆ ಊಟ ಬೇಕೂಂತ ಅನ್ನಿಸ್ಲಿಲ್ಲ. ದೋಸೆ ವಾಸನೆ ಮೂಗು ಸೋತ ಮೇಲೇನೇ ಏನಾದ್ರೂ ತಿನ್ನಬೇಕೂಂತ ಅನ್ನಿಸಿದ್ದು" ಮುಲಾಜು ಇಲ್ಲದೆ ಸ್ಪಷ್ಟವಾಗಿ ಉಸುರಿದ ಗಂಡು.

ಅಪ್ಪಯ್ಯಶಾಸ್ತ್ರಿಗಳು ತುಟಿ ತೆರೆಯಲಿಲ್ಲ. ಅವರ ಮನಸ್ಸಿಗೆ ನೋವಾಗಿತ್ತು. ಯಾರ ಮುಂದೆ ತೋಡಿಕೊಂಡಾರು? ಅಕಸ್ಮಾತ್ ತೋಡಿಕೊಂಡರೂ ಪ್ರಯೋಜನವಿಲ್ಲ. ಎರಡನೆ ಹೆಂಡತಿಯೆಂದು ಹೆಚ್ಚು ಮುಚ್ಚಟೆ ಮಾಡಿದ್ದರಿಂದಲೇನೋ, ಗಂಡನ ಜುಟ್ಟನ್ನು ಭದ್ರವಾಗಿ ತನ್ನ ಹಿಡಿಯಲ್ಲಿ ಇಟ್ಟುಕೊಂಡಿದ್ದಳು.

ತಲೆ ತಗ್ಗಿಸಿಕೊಂಡು ಅಪ್ಪಯ್ಯಶಾಸ್ತ್ರಿ, ಸಪ್ಪೆಯಾಗಿ ಬರುತ್ತಿದ್ದ ಒಳ ಕೋಣೆಗೆ ನುಗ್ಗಿದರು. ಮತ್ತೆ ಬಂದು ಬಿಳಿಗಿರಿಯವರನ್ನು ಕರೆದೊಯ್ಯುವ ಮುನ್ನ ಅವನ ಬಳಿಗೆ ಬಂದರು.

"ಅಡ್ಗೆ ತಯಾರಿದೆ. ಊಟ ಮಾಡ್ಬಹುದ್ದು."

"ಬೇಡಿ, ಇದೇ ಸಾಕಾಯ್ತು" ಎಂದುಬಿಟ್ಟ.

ಅವರು ಹೋದ ಮೇಲೆ ಇನ್ನೊಂದು ದೋಸೆ ತರಿಸಿಕೊಂಡ, ನಂತರ ಬಿಸಿ ಜಿಲೇಬಿ ನೋಡಿದ ಮೇಲೆ ಅದೊಂದು ಪ್ಲೇಟ್ ತರಿಸಿಕೊಂಡ, ನಂತರ ಎರಡು ಪ್ಲೇಟ್ ಬಿಸಿ ಬಾಳೆಕಾಯಿ ಬಜ್ಜಿಯೊಡೆದ ಮೇಲೆ ಮೇಲೆದ್ದಿದ್ದ.

ಕ್ಯಾಷ್ ಕೌಂಟರ್ ಬಳಿ ನಡೆದ. ಸೀಟು ಖಾಲಿ. ಪಂಚೆಯನ್ನ ಮೇಲಕ್ಕೆ ಕಟ್ಟಿಕೊಂಡು ಕಿವಿಯಲ್ಲಿ ಪೆನ್ಸಿಲ್ ಸಿಕ್ಕಿಸಿಕೊಂಡು ಸಪ್ಲೇ ಮಾಡುತ್ತಿದ್ದ ವ್ಯಕ್ತಿ ಬಂದವನೇ ಕಿರು ನಗು ಬೀರಿದ.

"ಬಿಲ್ ಶಾಸ್ತ್ರಿಗಳು ಕೊಡ್ತಾರೆ. ತಮ್ದು ಯಾವ ಕಡೆ? ಹೊಸಬರಂಗೆ ಕಾಣ್ತೀರಾ? ಬಿಳಿಗಿರಿಯವ್ರ ನೆಂಟರಾ?" ಒಂದೇ ಸಲ ಕೇಳಿದ. ಬಹುಶಃ ಇಡ್ಲಿ ವಡೆ, ಮಸಾಲೆ ದೋಸೆ, ರವೆದೋಸೆ, ವೆಜಿಟೇಬಲ್ ಮಸಾಲೆ ದೋಸೆ ಎಂದು ಸದಾ ಕೂಗಿ ಕೂಗಿ ಅದೇ ಮೂಡಿನಲ್ಲಿರುತ್ತಾರೇನೋ!

"ಏನಾದ್ರೂ....ಅಂದ್ಕೊಳ್ಳಿ ! ಬಿಲ್ ಕೊಟ್ಟರೆ ಕೊಟ್ಟು ಹೋಗ್ತೀನಿ" ಅಂದ

ಚಲಿಸದೇ. ವಾಡಿಕೆಯಂತೆ ಕಿವಿಯ ಮೇಲಿದ್ದ ಪೆನ್ಸಿಲ್ ತೆಗೆದವನು "ಬೇಡ, ಒಂದ್ಗಳಿಗೆ ಕೂತ್ಕೊಳ್ಳಿ. ಅವ್ರುಗಳು ನಿಮ್ಜೊತೆ ಬರ್ತಾರೆ" ಎಂದರು ಕಿರಿ ಭಟ್ಟರು.

ಜೇಬಿನಲ್ಲಿಟ್ಟ ಕೈ ಹೊರ ತೆಗೆದ ಸಾಗರ್ ಹೊರಗಡೆ ಹೋಗಿ ಬೋರ್ಡ್ ನೋಡಿ ಬಂದ "ಇಲ್ಲಿ ಎಲ್ಲಾನು ಫ್ರೀನಾ? ಎಷ್ಟು ಜನಕೇಂತ ಕೊಡ್ತೀರಾ? ದ್ರೌಪತಿಯ ಅಕ್ಷಯ ಪಾತ್ರೆ ನಿಮ್ಮಲ್ಲಿದೆಯೇ?" ಅನ್ನುತ್ತ ಆಶ್ಚರ್ಯ ನಟಿಸಿದ.

ಹಣೆಗೆ ಕೈಯೊತ್ತಿದ ಭಟ್ಟರು "ಒಳ್ಳೆ ಜೋಕ್ ಕಟ್ ಮಾಡ್ತೀರಾ, ಬಿಡಿ. ಈ ಕಾಲದಲ್ಲಿ ಅಂಥ ಪವಾಡಗಳು ನಡ್ಯೋದುಂಟಾ? ನಮ್ಗೂ ಹೆಂಡ್ತಿ ಮಕ್ಳು ಉಂಟು. ಶಾಸ್ತ್ರಿಗಳ ಮನೆಗೆ ಬಂದ ಜನರಲ್ವಾ, ನೀವು. ನಮ್ಗೆ ಬಂಧುಗಳು ಇದ್ದಂಗೆ" ಎಂದವರು ಬಂದ ಗಿರಾಕಿಗಳತ್ತ ಗಮನ ಕೊಡಲು ಬೇರೆಡೆ ಹೋದರು.

ಇದು ಇಷ್ಟವಾಗಲಿಲ್ಲ ಸಾಗರ್‌ಗೆ. ನೂರರ ಒಂದು ನೋಟು ತೆಗೆದು ಟೇಬಲ್ಲು ಮೇಲಿಟ್ಟು ತನ್ನ ಪಾಡಿಗೆ ತಾನು ಹೋದ. ಮೂಲೆಯಲ್ಲಿ ಕೂತಿದ್ದ ಹಿರಿಯ ಭಟ್ಟರು ಇದನ್ನು ಗಮನಿಸಿದ್ದರಿಂದ ಸರಿ ಹೋಯಿತು. ಇಲ್ಲದಿದ್ದರೇ, ಬೇರೆಯವರ ಜೇಬು ಸೇರುತ್ತಿತ್ತೇನೋ !

ಮಂಗನನ್ನ ಕರೆದು ವಿಚಾರಿಸಿ ಬಿಳಿಗಿರಿಯವರು ಹೋಗುವಾಗ ಹಿಂದಿರುಗಿಸುವಂತೆ ಹೇಳಿದರು. ಹಳೆಯ ಕಾಲದ ಮನುಷ್ಯ. ದೇವರು ಧರ್ಮದ ಬಗ್ಗೆ ಭಯವಿತ್ತು. ಇಲ್ಲಿ ಮೌಲ್ಯಗಳು ಉಚ್ಚಾರಣೆಯಲ್ಲಿಲ್ಲದಿದ್ದರೂ ಆಚರಣೆಯಲ್ಲಿತ್ತು.

ಬಸ್‌ಸ್ಟಾಪ್‌ನಲ್ಲಿ ನಿಂತು ಸಿಗರೇಟು ಕಚ್ಚಿ ಹೊಗೆ ಉಗುಳುತ್ತಿದ್ದವನು, ಬರುತ್ತಿದ್ದ ಬಿಳಿಗಿರಿ, ಭಟ್ಟರನ್ನ ನೋಡಿ ಸಿಗರೇಟನ್ನ ಕೆಳಗೆ ಹಾಕಿ ಷೂ ಕಾಲಿನಿಂದ ಹೊಸಕಿಬಿಟ್ಟ.

ಬಂದ ಅಪ್ಪಯ್ಯಶಾಸ್ತ್ರಿ "ನಮ್ಗೆ ಊರಿನ ಮನೆಯಲ್ಲಿ ದೀಪ ಉರಿಯೋದು ಮುಖ್ಯ...." ಅನ್ನುತ್ತಿದ್ದಂಗೆ ನಕ್ಕುಬಿಟ್ಟ "ಮಾರಾಯರೇ, ನಿಮ್ಮ ಶ್ರೀಮತಿಯವ್ರು ಮುಂಗಡ ಇಸ್ಕೊಂಡಿದ್ದಾರೆ. ನೀವು ಅಲ್ಲೇ ಇದ್ದರಲ್ಲ" ನೆನಪಿಸಿದ ವ್ಯಂಗ್ಯವಾಗಿ.

ಅಪ್ಪಯ್ಯ ಶಾಸ್ತ್ರಿಗಳು ಬೇಸರ ಮಾಡಿಕೊಳ್ಳಲಿಲ್ಲ.

"ಹೌದು, ನಾನು ಕೆಲವು ವಿಷ್ಯಗಳಲ್ಲಿ ನಿಸ್ಸಹಾಯಕ."

"ಬರೀ ಕೆಲವು ವಿಷ್ಯಗಳಲ್ಲಿ ಮಾತ್ರವಲ್ಲ, ಎಲ್ಲಾ ವಿಚಾರಗಳಲ್ಲು ನಿಸ್ಸಾಯಕರೆ. ಇಂಥ ಬದ್ಕು...ಹೇಗೆ ಸಾಧ್ಯ?" ಚುಚ್ಚಿದ ಮೆಲ್ಲಗೆ. ಅವರನ್ನ ನೋಯಿಸಬೇಕೆಂದೇನು ಇರಲಿಲ್ಲ. ಅವರಿಬ್ಬರ ನಡತೆ ಯಕ್ಷ ಪ್ರಶ್ನೆಯಾಗಿತ್ತು.

"ನಿಜಾಂತಲೇ ಇಟ್ಕೋ ! ಅಡ್ಜಿಟ್ಟು ಮಾಡೋದೇನಿದೆ. ದಾಂಪತ್ಯದಲ್ಲಿ ಇಬ್ಬರಲ್ಲಿ, ಒಬ್ರು....ಸಹಿಸ್ಕೋಬೇಕು. ಇಲ್ಲಿ ಮಕ್ಳ ಭವಿಷ್ಯ ಮುಖ್ಯವಾಗುತ್ತೆ. ಸದಾ ಅಪ್ಪ, ಅಮ್ಮ ಜಗಳವಾಡಿದ್ರೆ ಅದರ ನೆರಳು ಮಕ್ಳು ಮೇಲೆ ಬೀಳುತ್ತೆ. ಅವ್ರು ದಿಕ್ಕೆಟ್ಟಂತಾಗ್ತಾರೆ" ಅಪ್ಪಯ್ಯ ಶಾಸ್ತ್ರಿಗಳು ತಮ್ಮ ಅನುಭವವನ್ನು ಬಿಡಿಸಿಟ್ಟರು.

ಅವನಿಗೇನು ಅರ್ಥವಾಗಲಿಲ್ಲ. ಅಂಥ ಪ್ರಯತ್ನ ಕೂಡ ಸಾಗರ್ ಮಾಡೋಲ್ಲ.

ಇಷ್ಟು ಒರಟಾಗಿ ಶಾಸ್ತ್ರಿಗಳೊಂದಿಗೆ ಮಾತಾಡಿದ್ದು ಬಿಳಿಗಿರಿಯವರಿಗೆ ಇಷ್ಟವಾಗಲಿಲ್ಲ. ಅವನಿಗೆ ಬುದ್ಧಿ ಹೇಳುವುದು ಕೂಡ ಕಷ್ಟವೆಂದು ಅವರಿಗೆ ಗೊತ್ತು. ಮನಸ್ಸಿದ್ದರೇ ಮಾತಿಗೆ ಮಾತು ಸೇರಿಸುತ್ತಾನೆ, ಇಲ್ಲದಿದ್ದರೇ, ಮೌನವಹಿಸುತ್ತಾನೆ. ಯಾವುದಕ್ಕೂ ಪ್ರತಿಕ್ರಿಯಿಸುವುದಿಲ್ಲ.

ಬಸ್ಸು ಮೂರು ಗಂಟೆಗೇನು ಹೊರಡಲಿಲ್ಲ. ಕಂಡಕ್ಟರ್ ನಾಲ್ಕು ಸಲ ಹೊರಡಲು ಪೀಪಿ ಊದಿದರೂ ಡ್ರೈವರ್ ಬಗ್ಗಿ ಯಾರೊಂದಿಗೊ ಮಾತಾಡುತ್ತಿದ್ದ. ಮಧ್ಯೆ ಮಧ್ಯೆ ಓಡಿ ಬರೋ ಜನ ಕೈ ಅಡ್ಡ ಹಿಡಿಯುತ್ತಿದ್ದರಿಂದ ಸ್ಟಾಂಡಿಂಗ್‌ನಲ್ಲೆ ನಿಲ್ಲಿಸಿಕೊಂಡಿದ್ದ. ಅದರ ಸದ್ದು ಚಿಟ್ಟಿಡಿಸುತ್ತಿತ್ತು. ಬಾಳೆ ಹಣ್ಣು ತಿಂಡಿ ಮಾಡುವವರ ಗಲಾಟೆಯೋ...ಗಲಾಟೆ. ಆ ಕೆಲವು ನಿಮಿಷಗಳಾದರೂ ಬೆಂಗಳೂರಿನ ಮೆಜಸ್ಟಿಕ್ ಅಲ್ಲ, ಕಲ್ಯಾಸಿಪಾಳ್ಯಂ ಬಸ್‌ಸ್ಟಾಂಡ್‌ನ ಅನುಭವವಾಯಿತು.

ಬಿಳಿಗಿರಿಯವರು ಒಂದು ಚಿಪ್ ಏಲಕ್ಕಿ ಬಾಳೆಹಣ್ಣನ್ನ ಖರೀದಿಸಿ ಬ್ಯಾಗ್‌ಗೆ ಇಟ್ಟುಕೊಂಡರು. ಇನ್ನೇನು ಬಸ್ಸು ಹೊರಡಬೇಕು, ಕೂಗಿಕೊಂಡರು.

"ಡ್ರೈವರ್, ಸ್ವಲ್ಪ ಬಸ್ಸು ನಿಲ್ಲಿಸಪ್ಪ" ದೂರದಲ್ಲಿ ಬರುತ್ತಿದ್ದ ವ್ಯಕ್ತಿಯನ್ನ ಕೈ ತಟ್ಟಿ ಹತ್ತಿರಕ್ಕೆ ಕರೆದಾಗ ಉದ್ವಿಗ್ನರಾದರು. "ನಮ್ಮ ಶೀನಿ ಸ್ನೇಹಿತ. ಹೇಗಿದ್ದೀಯಪ್ಪ, ಉಪ್ಪಿ?" ಒಂದೆರಡು ನಿಮಿಷ ಮಾತಾಡುವವರೆಗೂ ಬಸ್ಸು ನಿಂತಿತ್ತು. ಆದರೆ ಯಾರು ಉಸಿರೆತ್ತಲಿಲ್ಲ. ಇದೆಲ್ಲ ಪ್ರಯಾಣಿಕರಿಗೆ ಕಾಮನ್.

ಬಸ್ಸು ಹೊರಡುವವರೆಗೂ ಸಾಗರ್ ಬಸ್ಸಿನ ಕಿಟಕಿಯ ಪಕ್ಕ ಕೂತವನು ಹೊರಗೆ ನೋಡುತ್ತಿದ್ದ. ಆದರೆ ರಂಗೋಲಿಗಳ ನಡುವೆ ಬಂಧಿಯಾಗಿದ್ದ. ಅವನಿಗೆ ಅದು ಬಹಳ ಪ್ರಯಾಸದ ಕೆಲಸವಾಗಿ ಕಂಡಿದ್ದು ಮಾತ್ರವಲ್ಲ ಗೂಢವೆನಿಸಿತು.

ಅಂತೂ ಬಸ್ಸು ಹೊರಟಿತು. ಅದೇ ಕಂಡಕ್ಟರ್ ಕಿವಿ ಮೇಲೆ ಪೆನ್ಸಿಲ್ ಸಿಕ್ಕಿಸಿಕೊಂಡು ಇವನತ್ತ ನೋಡಿ ನಗೆ ಬೀರಿದ "ಕುಂದಣ ನೋಡ್ಕೊಂಡ್

ಆಗ್ಲೇ ಹಿಂದಿರುಗಿದ್ದೀರಿ. ಅಪ್ಪಯ್ಯಶಾಸ್ತ್ರಿಗಳ ಮನೆಗೆ ಹೆಣ್ಣು ನೋಡೋ ಸಲುವಾಗಿ ಹೋಗಿದ್ದರೋ" ಎಂಬ ಮಾತಿಗೆ ಸಿಡಿಮಿಡಿಗೊಂಡ.

"ನೀನು ಬರೀ ಟಿಕೆಟ್ ಕೊಡೋ ಕೆಲ್ಸ ನೋಡ್ಕೋ. ಹೋಗೋ ಬರೋವರ ಉಸಾಬರಿ ಯಾಕೆ?" ಐವತ್ತರ ನೋಟು ತೆಗೆದು ಅವನ ಕೈಯಲ್ಲಿಟ್ಟ "ಅಮ್ಮಮ್ಮ ಎಂಥಾ ಕೋಪ! ಈ ನಗ್ಗಾಟಿಕೆಗೆಲ್ಲ ಕೋಪ ಮಾಡ್ಕೊಂಡ್ರೆ....ಹೇಗೆ ಮದ್ವೆ ಆಗ್ತೀಯೋ ಹುಡ್ಗ!" ಎಂದು ಟಿಕೆಟ್ ಹರಿದು ಚಿಲ್ಲರೆಯೊಂದಿಗೆ ಅವನ ಕೈಯಲ್ಲಿಟ್ಟು ಮುಂದಕ್ಕೆ ಹೋದ.

ಬಿಳಿಗಿರಿಯವರು ತಡೆಯದಿದ್ದರೇ ಕಂಡಕ್ಟರ್ ಕುತ್ತಿಗೆಯ ಪಟ್ಟಿ ಹಿಡಿದು ನಾಲ್ಕು ಬಾರಿಸುವವನೆ.

ಸಧ್ಯಕ್ಕೆ ಅಪ್ಪಯ್ಯಶಾಸ್ತ್ರಿಗಳ ಮನೆಯಲ್ಲಿ ಪ್ರತಿಷ್ಠಾಪನೆ ಆಗಿದ್ದ. ಆದರೂ ಹೆಚ್ಚು ಹೊತ್ತು ಬಂಡೆಗಳ ನಡುವೆ ಹೊಳೆಯ ಬದಿಯಲ್ಲಿ ಇರುತ್ತಿದ್ದ. ಊರಿನವರಿಗೆ ಮಾತ್ರವಲ್ಲ ಬಿಳಿಗಿರಿ, ತಿರುಮಲಾಂಬ ಕೂಡ ಇವನು ಕೆಂಪು ಪಚ್ಚೆ ಕಲ್ಲುಗಳ ಹುಡುಕಾಟಕ್ಕೆ ಬಂದವನೇ ಎಂದು ಅನುಮಾನಿಸುತ್ತಿದ್ದರು.

ಅಂದು ಕಲ್ಲೇಶಿ ಬಸ್‌ಸ್ಟಾಂಡ್‌ನಲ್ಲಿ ಹಲಸಿನ ತೊಳೆ ಮಾರಲು ಹೋಗಿದ್ದವನು ಇವನನ್ನ ಹುಡುಕಿಕೊಂಡು ಬಂದಾಗ ಎತ್ತರದ ಬಂಡೆಯ ಮೇಲೆ ಕೂತು ಹರಿಯುತ್ತಿದ್ದ ಹೊಳೆಯನ್ನ ನೋಡುತ್ತಿದ್ದ ಸಾಗರ್.

"ಗುರು, ಬದ್ಕು ಸಾಕಾಗಿದೆ. ಹಣ ಸಂಪಾದಿಸೋಕೆ ಏನಾದ್ರೂ ಮಾರ್ಗ ತೋರ್ಸು" ಸುಸ್ತಾದವನಂತೆ ಇವನ ಮುಂದೆ ಬಂದು ಕೂತ. ಕೈಗೆ ಸಿಕ್ಕ ಕಲ್ಲನ್ನ ಗುರಿ ಇಟ್ಟು ದೂರಕ್ಕೆ ಎಸೆದ ಸಾಗರ್ ಸೀರಿಯಸ್ಸಾಗಿ "ಕಳ್ಳತನ ಮಾಡ್ತೀಯಾ?" ಅವನ ನೋಟದಲ್ಲಿ ಸಿಡಿಲಿನ ಉಂಡೆಗಳು ಇದ್ದವು.

"ಬೇಡಪ್ಪ, ನಂಗೆ ತುಂಬ ಭಯ! ನಾನು ಮೊದಲ ಸಲ ನಿನ್ನ ಪ್ಯಾಂಟ್‌ನಿಂದ ಹಣ ತೆಗೆದಿದ್ದೇ. ಆ ದಿನ ಎಷ್ಟೊಂದು ಭಯವಾಯ್ತು."

ಕಲ್ಲೇಶಿಯ ಮಾತಿಗೆ ಪಟ್ಟೆಂದು ಬಿತ್ತು ಅವನ ಬೆನ್ನ ಮೇಲೆ ಏಟು. "ಏಯ್, ನಿಂಗೆ ಭಯ ಆಯ್ತ ! ಸುಳ್ಳು ಬೊಗಳಿದರೆ ನಾಲ್ಕು ಬಿಗೀತೀನಿ" ಗದರಿದ. ಆ ಗದರಿಕೆಯಲ್ಲಿ ಕೋಪಕ್ಕಿಂತ ಹೆಚ್ಚು ಕರುಣೆಯೇ ಇತ್ತು.

"ಖಂಡಿತ, ನನ್ನಕ್ಕನ ಆಣೇ ! ಅವ್ಳನ ಬಿಟ್ಟು ನಂಗ್ಯಾರಿದ್ದಾರೆ? ಇರೋ ಗುಡ್ಲು ನೀರು ಪಾಲಾಯ್ತು. ಮುಂದೇನು? ಇಡೀ ದಿನ ದುಡಿದ್ರೆ....ಎರ್ಡು ಹೊತ್ತಿನ ಕೂಳುಗೆ ಸಾಕಾಗೋಲ್ಲ" ತೋಡಿಕೊಂಡು ಅತ್ತುಬಿಟ್ಟ.

ಆಡುವ ವಯಸ್ಸಿನ ಬಾಲಕನ ಮೇಲೆ ಎಷ್ಟೊಂದು ದೊಡ್ಡ ಜವಾಬ್ದಾರಿ! ಆ ಭಾವ ಮೂಡಿದ್ದು ಸಾಗರ್‌ನಲ್ಲಿ ಕೆಲವು ಕ್ಷಣ. ಭೂಮಿಗೆ ಬರುವಾಗ ಬರಿಗೈಯಾದರೂ ಇಷ್ಟೆಲ್ಲ ಮ್ಯಾನೇಜ್ ಮಾಡುವ ಕೆಪಾಸಿಟಿ ಇರಬೇಕು. ಇಲ್ಲದೋನು ಯಾಕಿರಬೇಕು? ಇಂಥ ಯೋಚನೆಗಳೇ ಅವನ ತಲೆಯಲ್ಲಿ ಮೂಡುತ್ತಿದ್ದುದು.

ಅವನ ರಟ್ಟೆಯ ಮೇಲೆ ಕೈ ಹಾಕಿ ಹತ್ತಿರಕ್ಕೆಳೆದುಕೊಂಡ.

"ಹೊಡಿಬೇಡಣ್ಣ..." ಎಂದಾಗ ಸಾಗರ್ ನಕ್ಕುಬಿಟ್ಟ.

"ನೋಡೋ ಕಲ್ಲೇಶಿ, ನಾನು ಹುಟ್ಟಿ ಬೆಳೆದಿದ್ದು ಹಣವಿರೋ ಕಡೆನೇ. ನಂಗೆ ಹಸಿವು ಗೊತ್ತಾಗಿದ್ದು ಮನೆ ಬಿಟ್ಟು ಹೊರ ಹೋದ ಮೇಲೇನೇ. ಬಡತನ ಅನ್ನೋದು ಭಯಂಕರ ಪಿಡುಗು ಅನ್ನೋದ್ನ ಪುಸ್ತಕದಲ್ಲಿ ಮಾತ್ರ ಓದಿದ್ದೆ" ಎಂದವನು ಗಂಭೀರವಾದ. ಫ್ರಿಜ್ ತುಂಬ ಐಟಂಗಳು. ಡೈನಿಂಗ್ ಟೇಬಲ್ ಮೇಲೆ ಹಾಟ್ ಬಾಕ್ಸ್‌ನಲ್ಲಿ ಬಿಸಿಯಾದ ಅಡಿಗೆ. ಬಡಿಸಲು ಅಡಿಗೆಯವರು ಇದ್ದರು. ಆದರೂ ಆ ಸಮಯದಲ್ಲಿ ಅವನ ಹಸಿವು ಸಾಯುತ್ತಿತ್ತು. ಕೆಲವೊಮ್ಮೆ ಡೈನಿಂಗ್ ಟೇಬಲು ಮೇಲಿದ್ದುದ್ದನ್ನೆಲ್ಲ ಚೆಲ್ಲಾಡಿದ್ದ.

ಅವನ ಮುಖ ಬಿರುಸಾಯಿತು. ಅವುಡುಗಳು ಬಿಗಿದುಕೊಂಡವು. 'ಓ.....' ಎಂದು ಶಕ್ತಿ ಮೀರಿ ಕಿರುಚಬೇಕೆಂದುಕೊಂಡ. ದನಿ ಹೊರಡಲಿಲ್ಲ. ಮುಖ ಮೈ ಕೂಡ ಬೆವತು ಹೋಯಿತು.

"ಅಣ್ಣ, ತಗೋ....ನಿಂಗೋಸ್ಕರ ತೆಗ್ದು ಇಟ್ಕೊಂಡಿದ್ದೆ" ದೊಡ್ಡ ಸೈಜಿನ ಎರಡು ಹಲಸಿನ ತೊಳೆಗಳನ್ನ ಅವನತ್ತ ಚಾಚಿದ. ತಿನ್ನಲು ಮನಸ್ಸಿಲ್ಲದಿದ್ದರೂ ತಗೊಂಡ ಒಂದನ್ನ "ಅದ್ನ ನೀನು ತಿನ್ನು. ಈವೊತ್ತಿನ ಸಂಪಾದ್ನೆ ಎಷ್ಟು?" ಕೇಳಿದ ಹಲಸಿನ ತೊಳೆ ಬಿಡಿಸುತ್ತ.

"ಏನಿಲ್ಲ, ಉಳಿದ ಎರ್ಡು ಹಲಸಿನ ತೊಳೆನೇ ಲಾಭ. ಏನು ಗಿಟ್ಲಿಲ್ಲ. ಕೆಲವರು ಪುಗಸಟ್ಟೆ ತಿಂದರು. ಒಂದಿಬ್ರು ಸಾಲ ಹೇಳಿದ್ರು. ಇದ್ನೆಲ್ಲ ಹೊಂದ್ಕೊಂಡೋಗ್ಬೇಕು. ಅಣ್ಣ...ಒಂದ್ಮಾತು ಕೇಳ್ಲಾ ?" ಜೇಬಿನಲ್ಲಿದ್ದ ಚಿಲ್ಲರೆಯನ್ನ ಎಣಿಸತೊಡಗಿದ.

"ಈಗ್ಬೇಡ, ನೇರವಾಗಿ ಮನೆಗೆ ಹೋಗು" ಎಂದವನೇ ಹಲಸಿನ ಬೀಜನ ಗುರಿ ಇಟ್ಟು ಮುಂದಿದ್ದ ಕಲ್ಲಿಗೆ ಹೊಡೆದ. ರಭಸದಿಂದ ಹೋದ ಹಲಸಿನ ಬೀಜ ಬಂಡೆಗೆ ಬಡಿದು ಅಲ್ಲೇ ಕುಸಿಯಿತು. ಹೆಕ್ಕಿ ನಿಕ್ಕರ್‌ಗೆ ಒರೆಸಿ ತಾನು ತಂದಿದ್ದ ಬಿದಿರಿನ ತಟ್ಟೆಗೆ ಹಾಕ್ಕೊಂಡ ಕಲ್ಲೇಶಿ "ಕೆಂಡದಲ್ಲಿ ಸುಟ್ಟು ತಿಂದರೇ

ಚೆನ್ನಾಗಿರುತ್ತೆ'' ಎಂದ. ಎಷ್ಟೋ ದಿನ ಈ ಹಲಸಿನ ಬೀಜಗಳು ಆಹಾರವಾದುದ್ದುಂಟು.

ಕಲ್ಲೇಶಿ ಹೋದತ್ತಲೇ ತಲೆ ತಿರುಗಿಸಿ ನೋಡಿದ. ಅವನ ಸರಿಯಾದ ವಯಸ್ಸು ಇವನಿಗೆ ಗೊತ್ತಿಲ್ಲ. ಕಲ್ಲೇಶಿಯ ವಯಸ್ಸಿನಲ್ಲಿ ಅವನು ರೆಸಿಡೆನ್ಷಿಯಲ್ ಸ್ಕೂಲುನಲ್ಲಿ ಓದುತ್ತಿದ್ದನೇನೋ! ಎಷ್ಟೋ ಸಲ ಮಾರ್ಕ್ಸ್ ಕಮ್ಮಿ ತೆಗೆದು ಶಿಕ್ಷೆಗೆ ಗುರಿಯಾದುದ್ದುಂಟು. ಅಂಥ ಸಮಯದಲ್ಲಿ ಅವನಿಗೆ ನಾಚಿಕೆಯೆನಿಸುತ್ತಿರಲಿಲ್ಲ. ಬೇರೆಯ ಹುಡುಗರಂತೆ ತಲೆ ತಗ್ಗಿಸಿ ನೆಲ ನೋಡುತ್ತಿರಲಿಲ್ಲ. 'ಪೇರೆಂಟ್ಸ್‌ಗೆ ಕಂಪ್ಲೇಂಟ್ ಮಾಡ್ತೀವಿ. ನಿನ್ನ ಶಾಲೆಯಿಂದ ವಜಾ ಮಾಡ್ತೀವಿ ಅಂದಾಗಲು ಅವನೇನು ಅಂಜುತ್ತಿರಲಿಲ್ಲ. ಭಯ ಎನ್ನುವುದನ್ನ ಮರೆತಂತೆ ದಿನ ದೂಡಿದ ಹಿಂದಿನ ದಿನಗಳಲ್ಲಿ ಅಂಜುಕುಳಿಯಾಗಿ ಭಯದ ನಡುವೆ ಬಂಧಿ ಆಗಿದ್ದುಂಟು.

ಡೈವೋರ್ಸ್ ಸಿಕ್ಕ ಮೇಲೆ ಮೃಣಾಲಿನಿ, ಸೀತಾರಾಮ್ ಬೇರೆ ಬೇರೆ ವಾಸಿಸತೊಡಗಿದರು. ಆಕೆಯ ಪಾಲಿಗೆ ಬಂಗ್ಲೆ ಬಂದರೂ ಸಾಕಷ್ಟು ಹಣ ತೆರಬೇಕಾಯಿತು ಮಾಜಿ ಗಂಡನಿಗೆ. ಅವನು ತಂದು ಹಾಕಿದ ವಸ್ತುಗಳನ್ನೆಲ್ಲ ಒಂದು ಬಿಡದಂಗೆ ಲಾರಿಗೆ ತುಂಬಿ ಕಳಿಸಿದಳು ಸ್ವಾಭಿಮಾನಿ ಹೆಣ್ಣು. ಕಟ್ಟಿದ್ದ ಮಂಗಳ ಸೂತ್ರವನ್ನ ಕೂಡ ಹಿಂದಕ್ಕೆ ಕಳಿಸಿದ ದಿಟ್ಟೆ. ಆದರೆ ಗಂಡನಿಂದ ಪಡೆದ ಮಗನನ್ನ ಮಾತ್ರ ಹಿಂದಿರುಗಿಸಲು ಸಾಧ್ಯವಿಲ್ಲ. ಅವನು ಇಬ್ಬರಲ್ಲಿ ಯಾರ ಬಳಿಯಾದರೂ ವಾಸಿಸಬಹುದು. ಅಕಸ್ಮಾತ್ ಅವರಿಬ್ಬರ ಬಳಿ ವಾಸಿಸಲು ಇಷ್ಟವಾಗದ ಪಕ್ಷದಲ್ಲಿ ಅವನ ವಿದ್ಯಾಭ್ಯಾಸ, ಖರ್ಚುವೆಚ್ಚಗಳು ಇಬ್ಬರಿಗೂ ಸೇರಿತ್ತು.

ತಾಯಿಯ ಬಂಗ್ಲೆಯಲ್ಲಿ ಮಾತ್ರವಲ್ಲ , ತಂದೆ ಇತ್ತೀಚೆಗೆ ಕೊಂಡ ಬಂಗ್ಲೆಯಲ್ಲಿ ಅವನಿಗಾಗಿ ಒಂದು ರೂಮು ಇತ್ತು. ವಿಚಾರಿಸಲು ಆಳುಕಾಳುಗಳು ಇದ್ದರು. ಇಬ್ಬರು ಅವನಿಗೆ ಪಾಕೇಟ್ ಮನಿ ಕೊಡುವಷ್ಟು ಬಾಧ್ಯತೆ ವಹಿಸಿಕೊಂಡಿದ್ದರು. ಆದರೂ ಅವರಿಬ್ಬರಿಗೂ ಅವನು ಅವಿಧೇಯ ಮಗನೇ. ಯಾರ ಮಾತುಗಳ ಬಗ್ಗೆಯು ಲಕ್ಷವಿರಲಿಲ್ಲ.

ಎಸ್.ಎಸ್.ಎಲ್.ಸಿ. ಯಲ್ಲಿ ಓದುತ್ತಿದ್ದಾಗ, ಮೃಣಾಲಿನಿ ಒಮ್ಮೆ ಅವನನ್ನ ರೂಮಿಗೆ ಕರೆಸಿಕೊಂಡು "ಕೂತ್ಕೋ...ಬಾ" ಎಂದರು.

ಸಾಗರ್ ನಿಂತೇ ಇದ್ದ. ಸದಾ ಬಡಿದಾಡಿ ಅವನ ಚಿತ್ತವನ್ನ ಕಲುಕಿ ಬಿಟ್ಟ ತಾಯ್ತಂದೆಯರ ಬಗ್ಗೆ ಅವನಿಗೇನು ಒಲುಮೆ ಇರಲಿಲ್ಲ.

"ಇಲ್ಲೇ ಕೂತ್ಕೋ...ಬಾ" ಮತ್ತೇ ಹೇಳಿದರು.

ಅವನು ಒಂದಿಂಚು ಚಲಿಸಲಿಲ್ಲ. ಗೊಂಬೆಯಂತೆ ನಿಂತಿದ್ದ. ಮತ್ತಷ್ಟು ಅವಿಧೇಯತೆ ಪ್ರದರ್ಶಿಸುವ ಕೆಟ್ಟ ಹಟ ಅವನದು. ನಿಂತಲ್ಲೇ ಧುಮುಗುಟ್ಟುತ್ತಿದ್ದ.

"ಸಾಗರ್, ಕೇಳಿಸಲಿಲ್ವಾ ?" ಸ್ವಲ್ಪ ಗಡಸು ಬೆರೆಯಿತು ಆಕೆಯ ಸ್ವರದಲ್ಲಿ. ಬೇರೆಡೆ ಮುಖ ತಿರುಗಿಸಿಕೊಂಡು ನಿಂತವನು ತಾಯಿಯತ್ತ ತಿರುಗಿದ "ನಂಗೆ ನಿಂತಿರೋದೇ ಇಷ್ಟ."

ಉಗುಳು ನುಂಗಿದರು ಮೃಣಾಲಿನಿ. ಗಂಡನ ಜೊತೆ ವಾದಕ್ಕೆ, ಜಗಳಕ್ಕೆ ನಿಲ್ಲುತ್ತಿದ್ದ ಆಕೆ ಮಗನ ಮುಂದೆ ತಣ್ಣಗಾಗುತ್ತಿದ್ದರು. ಯಾಕೆ ? ಬಹುಶಃ ಇದೆಲ್ಲ ಸೃಷ್ಟಿಯ ಚಮತ್ಕಾರವಿರಬಹುದು.

"ಯಾವ ಸಬ್‌ಜೆಕ್ಟ್‌ನಲ್ಲಿ ವೀಕಾಗಿದ್ದೀಯಾ ?"

"ಎಲ್ಲಾ ಸಬ್‌ಜೆಕ್ಟ್‌ನಲ್ಲು ವೀಕೆ ?" ತಾಯಿಯ ಪ್ರಶ್ನೆಗೆ ಅವನದು ಅಸಂಬದ್ಧ ಉತ್ತರ. ಕಪಾಳಕ್ಕೆ ಬಾರಿಸಬೇಕೆನಿಸಿತು ಮೃಣಾಲಿನಿಗೆ. ಆ ತಪ್ಪು ಮಾಡಲಾರರು. ಅವನು ಪೂರ್ತಿ ಸೀತಾರಾಮ್ ಜೊತೆ ಉಳಿದು ಬಿಟ್ಟರೇ, ಅಂಥ ಸೋಲನ್ನ ಸಹಿಸಲಾರರು.

"ನಂಗೇನು ಹಾಗೆ ಅನ್ನಿಸೋಲ್ಲ. ಯಾವ ಸಬ್‌ಜೆಕ್ಟ್ ನಿಂಗೆ ಕಷ್ಟವೆನಿಸಿದ್ದರೇ, ಆ ಸಬ್‌ಜೆಕ್ಟ್‌ಗೆ ಟ್ಯೂಷನ್‌ಗೆ ಹೋಗು. ನಾನು ನಿಮ್ಮ ಮ್ಯಾನೇಜರ್ ಸದಾಶಿವು ಹತ್ರ ಮಾತಾಡಿದ್ದೀನಿ. ಅವ್ರು ನಿಂಗೆ ಗೈಡ್ ಮಾಡ್ತಾರೆ" ನಯವಾಗಿ ಮಗನನ್ನ ಒಲಿಸಿಕೊಳ್ಳುವ ಪ್ರಯತ್ನ ಮಾಡಿದರು.

"ಸದಾಶಿವುಗೂ, ನನ್ನ ಟ್ಯೂಷನ್‌ಗೂ ಏನು ಸಂಬಂಧ. ನಂಗೆ ಟ್ಯೂಷನ್ ಅಗತ್ಯವಿಲ್ಲ" ಹೊರಗೆ ಬಂದಿದ್ದ.

ಅವಾಕ್ಕಾಗಿದ್ದರು ಮೃಣಾಲಿನಿ. ಇವನ ಅವಿಧೇಯತೆಯ ಹಿಂದೆ ಸೀತಾರಾಮ್ ಕೈವಾಡವೇನಾದರೂ ಇದೆಯೇ? ಅದನ್ನ ತಿಳಿಯುವುದು ಹೇಗೆ? ತಿಳಿದರೂ ಏನು ಮಾಡುವುದು? ತೀವ್ರವಾಗಿ ಚಿಂತೆಗೀಡಾದರು.

ಆಗ ಇನ್ನೊಬ್ಬ ಮಗನ ಬಳಿ ಇದ್ದ ಸೀತಾರಾಮ್ ತಂದೆಯನ್ನ ಫೋನ್‌ನಲ್ಲಿ ಸಂಪರ್ಕಿಸಿ ವಿಷಯವನ್ನ ಅವರ ಮುಂದಿಟ್ಟಾಗ ನಕ್ಕಿದ್ದು ಬಂದು ಆಕೆ ಕಿವಿಗಳಿಗೆ ಅಪ್ಪಳಿಸಿತು.

"ಹಾಗೇನು ಆಗೋಲ್ಲ, ಮೃಣಾಲಿನಿ. ನಾರ್ಮಲೀ ಸಾಗರ್ ಬುದ್ಧಿವಂತ. ನೀನು ತಲೆ ಕೆಡ್ಸಿಕೊಳ್ಳುವುದ್ಬೇಡ. ಮಕ್ಳ ಭವಿಷ್ಯದ ಸಲುವಾಗಿ ಯಾದ್ರೂ ಹೆತ್ತವರು ಒಂದಿಷ್ಟು ತ್ಯಾಗ ಮಾಡೋಕೆ ರೆಡಿಯಾಗಿರ್ಬೇಕು. ಏನಿವೇ... ಅವನೊಂದಿಗೆ ಮಾತಾಡ್ತೀನಿ. ಆರೋಗ್ಯ ಹೇಗಿದೆ ? ಊಟ ತಿಂಡಿನ

ಅಲಕ್ಷಿಸ್ಬೇಡ. ಮೊದ್ಲೇ ಒಂಟಿ...ಆರೋಗ್ಯ ಕೆಟ್ಟರೇ ಯಾರು ನೋಡ್ಕೋತಾರೆ?" ಅವರೆದೆಯ ನೋವು ವ್ಯಂಗ್ಯವಾಗಿ ಇರಿಯಿತು.

"ಎಕ್ಸ್‌ಕ್ಯೂಜ್ ಮಿ, ನಾನು ನಿಮ್ಗೆ ಫೋನ್ ಮಾಡ್ಬಾರ್ದಿತ್ತು" ಫೋನಿಟ್ಟೇ ಬಿಟ್ಟರು. ಅದು ಕೂಡ ಸದ್ದಿಲ್ಲದೇ ಮಲಗಿತು. ಮಾಜೀ ಸೊಸೆಯ ಸ್ವಭಾವ ಬಲ್ಲವರಾದ್ದರಿಂದ ಫೋನ್ ಮಾಡುವ ರಿಸ್ಕ್ ತೆಗೆದುಕೊಳ್ಳಲಾರರು.

ಅವರಿಗೆ ಮಗ ಸೊಸೆಯ ಬಗ್ಗೆ ಕೋಪವಿಲ್ಲ, ಬರೀ ಸಹಾನುಭೂತಿ. ಅದಕ್ಕೆ ಮೀರಿದ ಸಂತಾಪ. ಪ್ರೇಮಿಸಿ ಮದುವೆಯಾದವರೇ. ಅವರುಗಳ ಮಧ್ಯೆ ತಿಕ್ಕಾಟ ತಂದು ಹಾಕಲು ಯಾರಿರಲಿಲ್ಲ. ಆರ್ಥಿಕವಾಗಿ ಸುಭದ್ರ ಸ್ಥಿತಿಯಲ್ಲಿದ್ದರು. ಗಂಡನ ಮುಂದೆ ಕೈ ಚಾಚಿ ಒಡವೆ, ಸೀರೆ ಎಂದು ಕಾಡುವ ಸ್ಥಿತಿ ಮೃಣಾಲಿನಿಗೆ ಇರಲಿಲ್ಲ ಮಾತ್ರವಲ್ಲ ಅಂಥ ಮನಸ್ಕಳಲ್ಲ. ತೀರಾ ಸಾಧಾರಣ ಸ್ತ್ರೀಗಿಂತ ಸ್ವಲ್ಪ ಡಿಫರೆಂಟಾಗಿ ತನ್ನ ವ್ಯಕ್ತಿತ್ವದ ಬಗ್ಗೆ ಯೋಚಿಸುತ್ತಿದ್ದು ಮಹಿಳೆಯರಲ್ಲಿನ ಕೀಳರಿಮೆಯ ಬಗ್ಗೆ ದ್ವೇಷ... ಸಮಾನತೆ ಯನ್ನ ಪ್ರತಿಪಾದಿಸುತ್ತಿದ್ದಳು. ಅದೇ ಅವರ ಪ್ರೇಮಮಯ ಸಂಸಾರಕ್ಕೆ ಮುಳುವಾಯಿತೇನೋ !

ಸೀತಾರಾಮ್ ಪ್ರೇಮಿಸಿ ಮದುವೆಯಾದರೂ ಭಯಂಕರವಾದ 'ಈಗೋ'ಗೆ ತುತ್ತಾಗಿ ಸ್ಯಾಡಿಸ್ಟ್ ಆಗಿದ್ದರು. ಮಡದಿಯ ಪ್ರತಿಯೊಂದು ಮಾತು, ಕಾರ್ಯ ಓವರ್ ಆಗಿ ಕಾಣುತ್ತಿತ್ತು. ಚುಚ್ಚಿ ನುಡಿಯುವುದು ಅಭ್ಯಾಸವಾದಂತೆ, ಮೃಣಾಲಿನಿಯ ಪ್ರತಿಭಟನೆ ಜೋರಾಯಿತು. ಸಾಗರ್ ಹುಟ್ಟಿದ ಕೆಲವು ದಿನ ಮರೆತಂತೆ ಇಬ್ಬರು ಮೃದುವಾದರೂ, ನಂತರ ಅದೇ ಸ್ವಭಾವಗಳ ವಿಜೃಂಭಣೆ. ಯಾರು ಸೋಲರು. ಇದರ ಪ್ರತಿಕ್ರಿಯೆನೇ ನೇರವಾಗಿ ಗುರಿಯಾಗಿದ್ದು ಸೀತಾರಾಮ್ ವಿನಯ ಸಾಗರ್. ಇಬ್ಬರ ಪ್ರೀತಿನು ಸಿಗಲಿಲ್ಲ. ಜಗಳ, ಚರ್ಚೆಗೆ ಪುಟ್ಟ ಮಗುವೇ ಪ್ರೇಕ್ಷಕನಾಗಿ ಹೋಗಿದ್ದು ದುರಂತ.

ಅಲ್ಲಿ, ಇಲ್ಲಿ ಇದ್ದು ರಸಿಡೆನ್ಷಿಯಲ್ ಸ್ಕೂಲು ಸೇರಿದ್ದು. ನಂತರ ಪ್ರತಿಭಟಿಸಿ ಇಲ್ಲೇ ನಿಂತಿದ್ದು ಬಾಲ್ಯದ ದುರಂತ ಕತೆ ಸಾಗರ್‌ದು.

ಒಂದು ಸಲ ಇಪ್ಪತ್ತು ದಿನ ತಂದೆಯ ಮನೆಯಲ್ಲಿ ಉಳಿದ. ಉಳಿದ ಅಂದರೆ ಶಾಲೆಗೆ ಹೋಗಿ ಯಾವಾಗಲೋ ಇಷ್ಟ ಬಂದಾಗ ಮನೆಯಲ್ಲಿ ಊಟ, ಇಲ್ಲದಿದ್ದಾಗ ಹೋಟಲಲ್ಲಿ ಸಿಕ್ಕಿದ್ದು ತಿನ್ನುತ್ತಿದ್ದ. ಆ ದಿನಗಳಲ್ಲಿಯೇ ಗೆಳೆಯರೊಂದಿಗೆ ಸಿಗರೇಟು ಸೇದಲು ಕಲಿತಿದ್ದು. ಕುಡಿತದ ಅಭ್ಯಾಸವಾಗಿದ್ದು.

ಒಂದು ದಿನ ಲೇಟಾಗಿ ಮನೆಗೆ ಬಂದಾಗ ಸೀತಾರಾಮ್ ಎದ್ದೇ ಇದ್ದರು

"ಯಾಕೆ, ಲೇಟು ?" ಕೇಳಿದಾಗ ಅವನೇನು ಹೆದರಲಿಲ್ಲ "ಸಿನಿಮಾಗೆ ಹೋಗಿದ್ಯಾ?" ಉತ್ತರಿಸುವ ಮುನ್ನ ಪ್ರಶ್ನಿಸಿದರು.

"ಇಲ್ಲ, ನಂಗೆ ಸಿನಿಮಾ ಇಷ್ಟವಾಗೋಲ್ಲ" ಎಂದ ನೇರವಾಗಿ.

ಬಾಯಲ್ಲಿದ್ದ ಸಿಗಾರ್ ತೆಗೆದ ಸೀತಾರಾಮ್ ಮಗನತ್ತ ನೋಡಿದ್ದು ಸೂಕ್ಷ್ಮವಾಗಿ, ಇವನೇನಾದರೂ ಸುಳ್ಳು ಹೇಳುತ್ತಿದ್ದಾನ ಎನ್ನುವ ಅನುಮಾನ ಅವರದು.

"ಯಾಕೆ ಇಷ್ಟವಾಗೋಲ್ಲ? ಸಿನಿಮಾ ನೋಡೋ ಫ್ರೆಂಡ್ಸ್ ನಿಂಗಿಲ್ವಾ, ಅಥ್ವಾ ನಿಮ್ಮಮ್ಮ ಸಿನಿಮಾ ನೋಡೋದ್ನ ನಿಷೇಧಿಸಿದ್ದಾಳ ?" ಚುಚ್ಚಿದಂತೆ ಕೇಳಿದರು.

"ಎರ್ಡು ಅಲ್ಲ !" ಎಂದವನು ಒಂದು ಬಾಂಬ್ ಎಸೆದ. "ಹೆಣ್ಣು, ಗಂಡು ಅರೆ ನಗ್ನರಾಗಿ ಕುಣಿಯೋದು ನಂಗಿಷ್ಟವಾಗೋಲ್ಲ" ಅತ್ಯಂತ ಸ್ಪಷ್ಟವಾಗಿ ಹೇಳಿ ತನ್ನ ಪಾಡಿಗೆ ತಾನು ಹೋದ.

ಸೀತಾರಾಮ್ ಚೇತರಿಸಿಕೊಳ್ಳಲು ಅರ್ಧ ಗಂಟೆಯೇ ಬೇಕಾಯಿತು. ಅವನ ವಯಸ್ಸು ಹದಿನಾಲ್ಕು ತುಂಬಿರಬೇಕು. ಈ ವಯಸ್ಸು ಅಡ್ಡ ದಾರಿ ಹಿಡಿಯುವ ವಯಸ್ಸಲ್ಲವೆಂದುಕೊಂಡರೂ, ಸಹವಾಸ ಎಲ್ಲಿಗಾದರೂ ಒಯ್ಯಬಹುದು. ಆ ಬಾಗಿಲನ್ನ ಮುಚ್ಚಿ ಬಿಟ್ಟಿತ್ತು ಸಾಗರ್‌ನ ಮನ.

ಮಗನ ರೂಮಿನ ಒಳಗೆ ಬಂದವರು "ನಿನ್ನ ಮಮ್ಮಿ ಫೋನ್ ಮಾಡಿ ಕುಕ್‌ನ ವಿಚಾರಿಸಿದರಂತೆ. ಒಂದ್ಸಲ ಫೋನ್ ಮಾಡೋಕ್ಹೇಳು. ನಿಂಗೆ ಅಲ್ಲಿಗೆ ಹೋಗೋಕೆ ಇಷ್ಟವಿಲ್ಲದಿದ್ರೆ ನೇರವಾಗಿಯೇ ಹೇಳು. ಇಲ್ಲಿ ನಿಂಗೇನು ತೊಂದರೆ" ಬಾಗಿಲ ಹಿಡಿ ಹಿಡಿದು ಕೇಳಿದಾಗ ಅವನಿಗೆ ನಗಬೇಕೆನಿಸಿತು. ಆದರೆ ನಗಲಿಲ್ಲ. ನಗು ಇಲ್ಲಿ ಅಪಹಾಸ್ಯವಾಗಿತ್ತು, ಅರ್ಥ ಕಳೆದುಕೊಂಡಿತ್ತು.

ಮಗ ಮಾತನಾಡದಿದ್ದಾಗ, ಅವರಿಗೆ ಕೆನ್ನೆಗೊಡೆದಂತಾಯಿತು. ಸದಾ ಬಿಜಿ ಇರುವ ಮನುಷ್ಯನ ಪಾಲಿಗೆ ಇವೆಲ್ಲ ಸಣ್ಣ ವಿಷಯಗಳೇ. ತಮ್ಮ ಬೆಡ್‌ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡರು. ಅಪ್ಪ, ಮಗನ ರೂಮುಗಳ ಮಧ್ಯದ ಅಂತರ ಇಪ್ಪತ್ತು ಹೆಜ್ಜೆಯಮು ಇರಬಹುದು. ಆದರೆ ಅವರುಗಳ ಮಧ್ಯದ ಅಂತರ ಕಿಲೋಮೀಟರ್‌ಗಳ ಅಳತೆಗೆ ಸಿಗದು.

ತಂದೆ ಸ್ಟೋರೇಜ್ ಮಾಡಿರುವ ವಿದೇಶಿ ವಿಸ್ಕಿಯನ್ನ ಗಂಟಲಲ್ಲಿ ಸುರಿದು ಕೊಂಡು ಹಾಸಿಗೆಯ ಮೇಲೆ ಬಿದ್ದುಕೊಂಡ. ಬಹುಶಃ ಸೀತಾರಾಮ್ ರೂಮಿನತ್ತ

ತಲೆ ಹಾಕದಿದ್ದರೇ, ಅಭ್ಯಾಸದಲ್ಲಿ ಮಗ್ನನಾಗುತ್ತಿದ್ದನೇನೋ. ಈಗ ಅವನ ಮೂಡ್ ಪೂರ್ತಿ ಕೆಟ್ಟಿತ್ತು. ಅಮ್ಮನ ನೆನಪು ಕೂಡ ಕಾಡಲಿಲ್ಲ.

ಬೆಳಿಗ್ಗೆ ಅವನಿಗೆ ಎಚ್ಚರವಾದಾಗ ಹತ್ತರ ಸುಮಾರು. ಸೀತಾರಾಮ್ ಹೋಗುವ ಮುನ್ನ ಮಗನ ಬಗ್ಗೆ ವಿಚಾರಿಸಲಿಲ್ಲ. ಅಂಥ ಅಭ್ಯಾಸ ಮಾಡಿ ಕೊಳ್ಳಲಾರದಷ್ಟು ಬಿಜಿ ಮನುಷ್ಯ. ಸಮಾಜದಲ್ಲಿ ಅಪಾರವಾದ ಸ್ಥಾನಮಾನಗಳನ್ನ ಹೊಂದಿದ ವ್ಯಕ್ತಿ. ಅಂಥವರಿಗೆ ಸಮಾಜದ ಕೆಲಸವೇ ಬೇಕಾ ದಷ್ಟು ಇರುವುದರಿಂದ, ವೈಯಕ್ತಿಕ ಜೀವನ ಇರದು.

ಅಂದು ಮತ್ತೆ ಮೃಣಾಲಿನಿಯ ಫೋನ್ ಬರದಿದ್ದರೇ, ಬಹುಶಃ ಏಳುತ್ತಿದ್ದನೋ, ಇಲ್ಲವೋ ! ಸ್ನಾನ ಬಟ್ಟೆ ಬದಲಾಯಿಸುವುದು ಅಂಥ ಕೆಲ ಸಗಳಿಗೆ ಕೈ ಹಾಕದೇ, ಮುಖ ತೊಳೆದು ಕೆಳಗಿಳಿದು ಬಂದ.

ಆಳು ಬಂದು ಹಲ್ಲು ಕಿರಿದ "ಎದ್ದೇ ಬಿಟ್ಟಿದ್ದೀರಾ ! ನೀವು ತುಂಬ ಸ್ಟ್ರಾಂಗ್. ಗಾತ್ರಿ ಕುಡಿದಿದ್ದು ಪೂರ್ತಿ ವಿದೇಶಿದು" ಏನೋ ಹೇಳಲು ಷುರು ಮಾಡಿದಾಗ ಕೈನಿಂದ ಪಕ್ಕಕ್ಕೆ ತಳ್ಳಿ ಹೋದ.

'ಗೇಟಿನಿಂದ ಹೊರಗಡೇ ಕಾರು ನಿಂತಿರುತ್ತೆ' ಮೃಣಾಲಿನಿ ಹೇಳಿದ್ದರು. ಒಳ ಸೇರಿದ ಪರಮಾತ್ಮ ಇನ್ನ ಅವನನ್ನ ಮಂಕುನಲ್ಲಿಯೇ ಕೆಡವಿದ್ದ. ತಲೆ 'ಧಿಂ' ಎನ್ನುತ್ತಿತ್ತು. ಹೆಜ್ಜೆ ದೃಢವಾಗಿ ನೆಲದಲ್ಲಿ ನಿಲ್ಲದು.

ನೋಡಿದ ಡ್ರೈವರ್ ಓಡಿ ಬಂದು ಕರೆದೊಯ್ದ "ಹುಷಾರಿಲ್ವಾ, ಸ್ವಾಮಿ?" ಅವನ ಕೇಳಿಕೆಗೆ ಉತ್ತರ ನೀಡಲಿಲ್ಲ. ವಯಸ್ಸಾದ ಮನುಷ್ಯ ಈಗಾಗಲೇ ಐದು ವರ್ಷದಿಂದ ಮೃಣಾಲಿನಿಯವರ ಬಳಿ ಕೆಲಸ ಮಾಡುತ್ತಿದ್ದ. ಸಂಸಾರಸ್ಥ, ಕಷ್ಟ ಸುಖಗಳನ್ನ ಕಂಡ ಮಕ್ಕಳೊಂದಿಗೆ. ಸಂತಾನದ ಬಗ್ಗೆ ಪ್ರೇಮ ಉಳ್ಳವ. ಈ ಡೈವೋರ್ಸ್ ಪ್ರಸಕ್ತ ಸ್ವಲ್ಪ ಕೂಡ ಹಿಡಿಸಿರಲಿಲ್ಲ. ಹಾಗೆಂದು ಕಲಿತವರ ವಿಷಯದಲ್ಲಿ ಬಾಯಿ ಹಾಕಲು ಸಾಧ್ಯವೇ ?

ಮೃಣಾಲಿನಿ ರಜ ಹಾಕಿ ಮನೆಯಲ್ಲಿಯೇ ಇದ್ದಳು. ಹಿಂದೆಲ್ಲ ತಾಯಿಯ ಪ್ರೀತಿಗೆ ಹಂಬಲಿಸುತ್ತಿದ್ದ. ಈಗ ಅಂಥ ಆಸೆ ಸುಟ್ಟು ಸುಡುಗಾಡು ಸೇರಿ ಬಹಳ ದಿನಗಳಾಗಿತ್ತು.

ಕಾರು ನಿಂತ ಕೂಡಲೇ ಡ್ರೈವರ್ ಬಂದು ಡೋರ್ ತೆಗೆದ. ಅವನ ನೀರಸವಾದ ಮುಖ, ಮತ್ತಿನಿಂದ ತೂಗುವ ಕಣ್ಣುಗಳನ್ನ ನೋಡಿ ಏನೋ ಅನುಮಾನ. ಹಾಗೆಂದು ಬಾಯಿ ಬಿಟ್ಟು ಕೇಳಲು ಸಾಧ್ಯವೇ ?

"ಇವತ್ತು ಹುಷಾರ್ ಇದ್ದಂಗಿಲ್ಲ, ಸ್ವಾಮಿ" ಮತ್ತೆ ಹೇಳಿದ ಮರುಕದಿಂದ. ಅವನ ಮಾತಿನತ್ತ ಗಮನವಿಲ್ಲ ಸಾಗರ್‌ಗೆ. ಒಳಗೆ ಹೋದ. ಮೃಣಾಲಿನಿ ಹಾಲ್‌ನಲ್ಲೇ ಕೂತಿದ್ದಳು. ಆ ಕಡೆ ಕೂಡ ನೋಡದೇ ರೂಮಿಗೆ ಹೋದವನೇ ಹಾಸಿಗೆಯ ಮೇಲೆ ಬಿದ್ದುಕೊಂಡ.

ಇಂಥ ನಿರ್ಲಕ್ಷತನಕ್ಕೆ ಸೀತಾರಾಮ್ ಕಾರಣವೆಂದುಕೊಂಡಳು. ತನ್ನ ಪ್ರತಿಷ್ಠೆ ತಗ್ಗಿಸಲು, ಅವಮಾನಗೊಳಿಸಲು ಮಗನಿಗೆ ತರಬೇತಿ ನೀಡುತ್ತಿದ್ದಾನೆ ಆಕೆ ಮನಸ್ಸಿನಲ್ಲಿ ಮೂಡಿದ್ದು ಇಷ್ಟೆ ವಿಚಾರ. ಕರುಳ ಕುಡಿಯ ಮಾನಸಿಕ ಸ್ವಾಸ್ಥ ಸರಿಯಾಗಿದೆಯೆ ? ಅವನು ಯಾವ ತರಹದ ಸಮಸ್ಯೆಗಳನ್ನ ಫೇಸ್ ಮಾಡುತ್ತಿದ್ದಾನೆ. ಇಷ್ಟನ್ನ ಯೋಚಿಸದ ತಾಯ್ತನ ಇಲ್ಲಿ ಅಪಹಾಸ್ಯಕ್ಕೆ ಒಳಗಾಗಿತ್ತು.

"ಸ್ವಾಮಿಯೋರಿಗೆ, ಹುಷಾರಿದ್ದಂಗೆ ಕಾಣ್ಲಲ್ಲ. ಮಾತಾಡಿಸಿದರೇ, ಒಂದೇ ಒಂದ್ಮಾತು ಕೂಡ ಆಡ್ಲಿಲ್ಲ" ಡ್ರೈವರ್ ಅಹವಾಲು ಸಲ್ಲಿಸಿದ.

ತಟ್ಟನೆ ಎದ್ದ ಮೃಣಾಲಿನಿ "ದೊಡ್ಡ ಇಂಡಸ್ಟ್ರಿಯಲಿಸ್ಟ್. ಮಗನ್ನ ತನ್ನ ಬಳಿಯಲ್ಲೇ ಇಟ್ಟುಕೊಳ್ಳೋಕೆ ತರಬೇತಿ ಕೊಡ್ತಾ ಇದ್ದಾರೆ" ಅವುಡು ಕಚ್ಚಿ ಹಲ್ಲು ಕಡಿದರು ಆಕೆ.

ಮಗನ ರೂಮಿನ ಬಳಿಗೆ ಹೋದರು. ಮಕಡೆಯಾಗಿ ಮಲಗಿದ್ದ. ಒಂದಲ್ಲ ನಾಲ್ಕು ಸಲ ಕೂಗಿ ರೋಸಿ ಕಾಲುಗಳನ್ನು ನೆಲಕ್ಕೆ ಅಪ್ಪಳಿಸಿದರು. "ಛಾಲೆಂಜ್, ಇನ್ಮೇಲೆ ಅದೆಂಗೆ ಅವ್ನು ಅಲ್ಲಿಗೆ ಹೋಗ್ತಾನೋ, ನೋಡ್ತೀನಿ" ಜೋರಾಗಿಯೇ ಹೇಳಿದರು. ಆದರೆ ಯಾರು ಕೇಳಿಸಿಕೊಳ್ಳಲಿಲ್ಲ. ಇದ್ದ ಅಡಿಗೆಯವನು ಕಿಚನ್‌ನಲ್ಲಿದ್ದ ಡ್ರೈವರ್ ಕಾರಿನ ಬಳಿ ಇದ್ದ. ಕೆಲಸದವನು ಮತ್ತೆಲ್ಲೋ ಇವರುಗಳೆಲ್ಲ ಸಂಬಳಕ್ಕಾಗಿ ಕೆಲಸ ಮಾಡುವವರು.

ಆ ದಿನ ಆಕೆಯ ಮೂಡ್ ಪೂರ್ತಿ ಔಟ್. ಬಾಳಿನಲ್ಲಿ ಹೀರೋ ಆಗಿ ಕಾಲಿಟ್ಟ ವ್ಯಕ್ತಿ ಈಗ ವಿಲನ್ ಆಗಿ ಕಾಣಿಸುತ್ತಿದ್ದ. ಇವರಿಬ್ಬರ ಪ್ರೇಮ, ಪ್ರೀತಿ, ದಾಂಪತ್ಯಕ್ಕೆ ಸಾಕ್ಷಿಯಾಗಿ ಸೀತಾರಾಮ್ ದಯಾನಂದ ಸಾಗರ್ ಇಲ್ಲದಿದ್ದರೇ, ಡೈವೋರ್ಸ್ ಆದ ಮೇಲೆ ಕೆಲವು ದಿನ ಕಾಡಿದ ನೆನಪುಗಳು ಸ್ವಲ್ಪ ಸ್ವಲ್ಪ ಮರೆಯಾಗುವುದರ ಜೊತೆಗೆ ಕಹಿಯನ್ನ ಕಡಿಮೆ ಮಾಡಿ, ಒಂದೇ ಊರಿನಲ್ಲಿ ಇದ್ದುದ್ದರಿಂದ ಎದುರು ಬದುರು ಸಿಕ್ಕಾಗ ಮುಖ ತಿರುಗಿಸದೇ ಸರಿದು ಹೋಗುತ್ತಿದ್ದರೇನೋ, ಈಗ ಮಾತ್ರ ಒಬ್ಬರನ್ನು ಕಂಡರೆ ಮತ್ತೊಬ್ಬರು ಉರಿದು ಬೀಳುತ್ತಿದ್ದರು.

ಮಧ್ಯಾಹ್ನದ ಮೇಲೆ ಎದ್ದ ಸಾಗರ್ ತಾನೇ ಸ್ನಾನ ಮಾಡಿ ಊಟ ಮುಗಿಸಿ

"ಅಮ್ಮೊವ್ರು, ಮನೆಯಲ್ಲೇ ಇದ್ದಾರೆ" ಅಡಿಗೆಯವನು ಹೇಳಿದರೂ ಉತ್ಪ್ರೇಕ್ಷಿಸಿ ತನ್ನ ಪಾಡಿಗೆ ತಾನು ಗೆಳೆಯರನ್ನ ಹುಡುಕಿಕೊಂಡು ಆಟದ ಮೈದಾನಕ್ಕೆ ಹೋದ. ಕ್ರಿಕೆಟ್ ಕಂಡರೇ ಇಷ್ಟ. ಅವನ ಷಾಟ್‌ಗಳನ್ನು ನೋಡಿ ಸಚಿನ್ ತಂಡೂಲ್ಕರ್‌ನ ನೆನಪಿಸಿಕೊಳ್ಳುತ್ತಿದ್ದ ಪಿ.ಟಿ.ಮಾಸ್ಟರ್ 'ಸಚಿನ್' ಎಂದೇ ಕೂಗುತ್ತಿದ್ದ. ತಾಯ್ತಂದೆಯರ ಪೂರ್ಣ ಪ್ರಮಾಣದ ಪ್ರೀತಿ ಪಡೆದು ಬೆಳೆದಿದ್ದರೇ ಇನ್ನೊಬ್ಬ 'ಸಚಿನ್' ನ ನಿರೀಕ್ಷಿಸಬಹುದಾಗಿತ್ತು. ಆದರೆ ಹಾಗಾಗಲಿಲ್ಲ.

ಹುಡುಗರ ಜೊತೆ ಓಡಾಡಿದ. ಸಿಗರೇಟು ಸೇದಿದ. ಮನೆಗೆ ಹಿಂದಿರುಗಿದಾಗ ರಾತ್ರಿ ಹತ್ತು. ಮದುವೆಯ ರಿಸೆಪ್ಷನ್‌ಗೆ ಹೋಗಿದ್ದ ಮೃಣಾಲಿನಿ ಇನ್ನ ಬಂದಿರಲಿಲ್ಲ. ಮಗನನ್ನ ಕರೆದೊಯ್ಯುವ ಇರಾದೆ ಆಕೆಗಿತ್ತು. ಮತ್ತೆ ಸೀತಾರಾಮ್ ಮನೆಗೆ ಫೋನ್ ಮಾಡಲಿಲ್ಲ. ಅವನು ಅಲ್ಲೇ ಇರುತ್ತಾನೆಂಬ ನಿರೀಕ್ಷೆ. ಸ್ವಲ್ಪ ಮನಸ್ಸಿಗೆ ಬಿದ್ದ 'ಅಹಂ' ತೆರೆಯನ್ನ ಪಕ್ಕಕ್ಕೆ ಸರಿಸಿ ಪ್ರೀತಿಯ ಜ್ಯೋತಿಯನ್ನಿಡಿದು ಹುಡುಕಾಡಿದರೇ ಮಗ ಸಿಕ್ಕುತ್ತಿದ್ದನೇನೋ ! ಆ ರೀತಿ ಯೋಚಿಸಳು.

ಎರಡು ಟೀಂಗಳ ಗೋಲ್‌ಕೀಪರ್‌ಗಳಂತೆ ಅವನನ್ನ ಮೈದಾನವೆಲ್ಲ ಓಡಾಡಿಸಿದ ಫುಟ್‌ಬಾಲ್‌ನಂತೆ ಕಂಡರು. ಆದರೆ ಅವನು ಗೋಲ್ ಹೊಡೆಯುವುದನ್ನ ತಡೆದು ಪುಣ್ಯ ಕಟ್ಟಿಕೊಂಡರು.

ಎಕ್ಸಾಮ್ ಮುಗಿಯಿತು. ಇವನ ದಿನಚರಿ, ಓಡಾಟದಲ್ಲಿ ಯಾವುದೇ ಬದಲಾವಣೆ ಇಲ್ಲ. ಸಿಕ್ಕಾಗಲೆಲ್ಲ ಒಬ್ಬರ ಮೇಲೊಬ್ಬರು ದ್ವೇಷ ಕಾರುತ್ತಿದ್ದರೇ ವಿನಃ ಅವನನ್ನು ಪ್ರೀತಿಯಿಂದ ವಿಚಾರಿಸಲಿಲ್ಲ. ಇಬ್ಬರ ಪಾಲಿಗೂ ಅವನು ರೆಬಲ್ ಆದ. ಮಾತಿಗೆ ಮಾತು, ಅದು ಯಾವಾಗಲೂ ಒರಟಾಗಿಯೇ ಇರುತ್ತಿತ್ತು.

ಮೊದಲ ರ್‍ಯಾಂಕ್ ಪಡೆದ ಸೀತಾರಾಮ್ ದಯಾನಂದ ಸಾಗರ್, ಅಂದು ಅಪ್ಪನ ಮನೆಯಲ್ಲೇ ಇದ್ದ. ಅಂದು ಸೀತಾರಾಮ್‌ಗೆ ವಿಪರೀತ ಖುಷಿ. ಗೆಳೆಯರು, ಬಂಧುಗಳಿಂದ ಬಂದ ಶುಭಾಶಯಗಳನ್ನ ರಿಸೀವ್ ಮಾಡಿಕೊಂಡರು.

"ಸಾಗರ್, ಮೊದಲ ರ್‍ಯಾಂಕ್ ಪಡೆದಿದ್ದಕ್ಕೆ ಒಂದು ಗ್ರಾಂಡ್ ಪಾರ್ಟಿ ಅರೇಂಜ್ ಮಾಡ್ತೀನಿ. ಎರ್‍ಡು ದಿನ ಎಲ್ಲಿಗೂ ಹೋಗ್ಬೇಡ" ಎಂದರು. ಪರೋಕ್ಷವಾಗಿ ಅವನು ಅಮ್ಮನ ಮನೆಗೆ ಹೋಗುವುದನ್ನು ನಿಷೇಧಿಸಿದ್ದರು.

ಈಗ ಅದೆಲ್ಲ ಸಾಗರ್‌ಗೆ ಅರ್ಥವಾಗುತ್ತಿತ್ತು "ಯಾಕೆ, ನಂಗೆ ಹೊರ್‍ಗಡೆ ಹೋಗೋದಿದೆ" ಎಂದ ದಿಟ್ಟವಾಗಿ.

ಕೋಪಗೊಳ್ಳಲಿಲ್ಲ ಸೀತಾರಾಮ್. ಕೋಪ, ಬೆದರಿಕೆಗೆ ಅವನು ಜಗ್ಗನು. ಅದೆಲ್ಲದರ ಕುಮ್ಮಕ್ ಮೃಣಾಲಿನಿಯದು ಎಂದು ಅವರ ಅಭಿಪ್ರಾಯ.

ನಗು ಮುಖದಿಂದ ಅರೆ ಬೆಲೆ ಬಾಳುವ ಒಂದು ವಿದೇಶಿ ವಾಚನ್ನ ಮಗನ ರಿಸ್ಟ್‌ಗೆ ಕಟ್ಟಿ "ಇದು ನನ್ನ ಪ್ರಸೆಂಟೇಷನ್, ಒಂದು ಲಕ್ಷ ರೂಪಾಯಿನ ನಿನ್ನ ಅಕೌಂಟ್‌ಗೆ ಹಾಕ್ತ ಇದ್ದೀನಿ. ಯಾವ ತಂದೆನು ಇಷ್ಟು ದುಡ್ಡು ಉಡುಗೊರೆ ಕೊಟ್ಟಿರಲಾರ" ಎದೆಯುಬ್ಬಿಸಿ ಹೇಳಿದರು.

"ತಂದೆ ಅನ್ನೋದೊಂದು ಪೋಸ್ಟಾ ? ಇಷ್ಟಿಷ್ಟು ವರ್ಕ್ಸ್ ಅಂತ ಯಾರು ಅಲಾಟ್ ಮಾಡೋದು" ಮಗನ ದಿಟ್ಟ ಪ್ರಶ್ನೆಗೆ ಅವರ ಮೈ ಉರಿದು ಹೋಯಿತು. "ನೀನು ಮೃಣಾಲಿನಿ ಮಗ ಅಲ್ವಾ ? ಅವಳದೇ ಅಹಂಕಾರ, ಛೀ..." ಮುಖ ಸಿಂಡರಿಸಿಕೊಂಡು ತಮ್ಮ ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡರು. ಆ ಸಂದರ್ಭದಲ್ಲಿ ಅವರು ಶರಣಾಗಿದ್ದು ಬಾಟಲಿಗೆ. ನೀರು ಕುಡಿಯುವಷ್ಟು ಸಹಜವಾಗಿದೆ ಆಲ್ಕೋಹಾಲ್. ಟಿ.ವಿ.ಯಲ್ಲಿ ದೊಡ್ಡ ದೊಡ್ಡ ಮಾಡೆಲ್‌ಗಳೊಂದಿಗೆ ಪ್ರಚಾರ. ಪ್ರೈಮರಿ ವ್ಯಾಸಂಗ ಮಾಡುವ ಹುಡುಗರಿಗೂ ಗೊತ್ತು, ಈ ಪಾನೀಯದ ಶುಭ ನಾಮಧೇಯಗಳು.

ಹತ್ತಾರು ಸಲ ಮೃಣಾಲಿನಿ ಫೋನಾಯಿಸಿದಳು. ಅದೇ ಹಳೇ ಡ್ರೈವರ್ ಬಂದು ಗೇಟಿನ ಬಳಿ ನಿಂತ "ಅಮ್ಮಾವ್ರು ಕರ್ಕೊಂಡ್ ಬರೋಕ್ಹೇಳಿದ್ದಾರೆ."

ತಂದೆಯ ನಿಷೇಧವನ್ನ ಭಂಗಪಡಿಸಬೇಕೆಂಬ ಒಂದೇ ಹಟದಿಂದ ಸಾಗರ್ ಹೋಗಿ ಕಾರು ಹತ್ತಿಕೊಂಡ. ಮಗ ರ್‍ಯಾಂಕ್ ಬಂದಿದ್ದಕ್ಕೆ ಅವಳ ಕೊಲೀಗ್ಸ್, ಬಂಧುಗಳು, ಕೈಕೆಳಗಿನ ಅಧಿಕಾರಿಗಳಿಂದ ಶುಭಾಶಯದ ಸುರಿಮಳೆ. ಅದನ್ನ ಅರಗಿಸಿಕೊಳ್ಳಲಾರದೆ ಒದ್ದಾಡಿದಳು.

"ಕಂಗ್ರ್ಯಾಜುಲೇಷನ್" ಮಗನನ್ನ ಕಂಡ ಕೂಡಲೇ ಹತ್ತಿರಕ್ಕೆ ಬಂದು ಕೈ ಹಿಡಿದುಕೊಂಡ ಮೃಣಾಲಿನಿ ಅವನನ್ನ ತಬ್ಬಿಕೊಂಡು ಹಣೆಗೆ ಚುಂಬಿಸುವ ಅಪರೂಪದ ಆಸೆಯನ್ನ ಹತ್ತಿಕ್ಕಿಕೊಂಡರು. ಒಂದು ರೀತಿಯ ಹಿಂಜರಿಕೆ. ಸ್ನೇಹ, ಸಲಿಗೆ ತೋರಲು ಅವನ ನೇರ ನೋಟ ತಡೆಯುತ್ತಿತ್ತು. ಆ ನೋಟದಲ್ಲಿ ಇದ್ದಿದ್ದೇನು ? ಎಂದಾದರೂ ಯೋಚಿಸಿದ್ರೆ ಚೆನ್ನಿತ್ತು. ಅದಕ್ಕೆ ಪುರಸತ್ತು ಇರಲಿಲ್ಲ.

'ಥ್ಯಾಂಕ್ಯೂ ಮಮ್ಮಿ' ಎಂದು ಕೂಡ ಅವನು ಅನ್ನಲಿಲ್ಲ.

ಹಾಲ್‌ನಲ್ಲಿ ಟಿ.ವಿ. ಆನ್ ಮಾಡಿಕೊಂಡು ಕೂತ. ಅವನ ಪುಟ್ಟ ಸಂದರ್ಶನಕ್ಕಾಗಿ ಟಿ.ವಿ. ರೇಡಿಯೋ ಅವರು ಸೀತಾರಾಮ್‌ನ ಸಂಪರ್ಕಿಸಿದಾಗ ಕೈ ಕೈ ಇಸುಕಿಕೊಂಡರು. ತಕ್ಷಣ ಮೃಣಾಲಿನಿ ಮನೆಗೆ ಫೋನ್ ಬಂತು. ಎತ್ತಿದ್ದು ಆಕೆಯೇ.

"ಸ್ವಲ್ಪ ಸಾಗರ್‌ಗೆ ಫೋನ್ ಕೊಡಿ" ಎಂದರು.

ನಿರಾಕರಿಸುತ್ತಿದ್ದರೇನೋ, ಆದರೆ ಅವರಿಬ್ಬರ ನಡುವೆ ಒಂದು ಒಡಂಬಡಿಕೆ ಇತ್ತು. ಸಾಗರ್‌ಗೆ ಸೀತಾರಾಮ್‌ನಿಂದ ಫೋನ್ ಬಂದರೂ, ಮೃಣಾಲಿನಿಯಿಂದ ಸಾಗರ್‌ಗೆ ಫೋನ್ ಬಂದರೂ ನಿರಾಕರಿಸುವಂತಿರಲಿಲ್ಲ.

"ನಿಂಗೆ...ಫೋನ್" ಆಕೆ ಮಗನಿಗೆ ಫೋನ್ ಕೊಟ್ಟು "ಅವ್ರು ಬರೋದಿಕ್ಕೆ ಹೇಳಿದ್ರೆ, ಇಲ್ಲಾನ್ನು. ಕೆಲವರು ನೇರವಾಗಿ ಅಭಿನಂದಿಸೋಕೆ ಇಲ್ಲಿಗೆ ಬರ್ತಾರೆ. ಆ ಸಮಯದಲ್ಲಿ ನೀನು ಇಲ್ಲೇ ಇರ್ಬೇಕು" ಒತ್ತಾಯವೇರಿದರು.

ಆಕೆ ಆಡಿದ ಮಾತುಗಳು ತನಗೇ ಸಂಬಂಧವೇ ಇಲ್ಲವೆನ್ನುವಂತೆ ಫೋನ್ ತಗೊಂಡ "ಅಲ್ಲೇನು ಮಾಡ್ತಾ ಇದ್ದೀಯಾ ?" ಕೇಳಿದರು ಸೀತಾರಾಮ್. ತಂದೆಯ ಗಂಟಾದ ಮುಖವನ್ನು ನೆನಪು ಮಾಡಿಕೊಂಡ. "ಟಿ.ವಿ. ನೋಡ್ತಾ ಇದ್ದೀನಿ" ತಣ್ಣಗೆ ನುಡಿದ.

"ಕೂಡ್ಲೇ ಬಾ, ಟಿ.ವಿ., ರೇಡಿಯೋನವ್ರು ನಿನ್ನ ಸಂದರ್ಶನ ಮಾಡ್ಬೇಕಂತೆ" ಸೀತಾರಾಮ್ ದನಿ ಉದ್ವೇಗದಿಂದ ಕೂಡಿತ್ತು. "ಈಗ ತಾನೇ, ಇಲ್ಲಿಗೆ...ಬಂದಿದ್ದೀನಿ. ಈಗ ಅಲ್ಲಿಗೆ ಬರೋ ಮೂಡ್ ಇಲ್ಲ" ಫೋನಿಟ್ಟ. ಟಿ.ವಿ. ನೋಡತೊಡಗಿದ ಆರಾಮಾಗಿ.

ಮತ್ತೆ ಫೋನ್ ರಿಂಗ್ ಆಯಿತು. ಮೃಣಾಲಿನಿ ತಗೊಂಡಿದ್ದು "ಹಲೋ ಸ್ವಲ್ಪ ಸಾಗರ್‌ಗೆ ಕೊಡು, ಫೋನ್" ಸೀತಾರಾಮ್ ಸ್ವರ. ಹಲ್ಲುಗಳನ್ನ ಕಚ್ಚಿಡಿದ ಮೃಣಾಲಿನಿ "ನಿಂಗೆ ಫೋನ್, ಬರೋಲ್ಲಾಂತ ಹೇಳು" ಮಗನಿಗೆ ತಾಕೀತು.

"ಹಲೋ...." ನಿರುತ್ಸಾಹದಿಂದ ಅಂದ.

"ನಿಂಗೆ ಸ್ವಲ್ಪ ಕೂಡ ಕಾಮನ್‌ಸೆನ್ಸ್ ಬೇಡ್ವಾ ! ಈಗಾಗ್ಲೇ ಸೆಲ್ವಾ ಕಾರು ತಗೊಂಡ್ ಹೊರಟಿದ್ದಾನೆ. ತಕ್ಷಣ ಹೊರಟ್ಬಾ. ಅವ್ರೆಲ್ಲ ಬಂದರೇ ಹೇಗೆ ಫೇಸ್ ಮಾಡೋದು ?" ಸಿಡಿಮಿಡಿಗುಟ್ಟಿದರು.

ಫೋನಿಟ್ಟವನು, ಟಿ.ವಿ. ಕೂಡ ಆಫ್ ಮಾಡಿ ಹಾಲ್‌ನಿಂದ ವರಾಂಡಾಗೆ ಬಂದವನೇ ಷೂಯೇರಿಸಿಕೊಂಡು ಅವನ ಪಾಡಿಗೆ ಅವನು ಹೊರಟವನನ್ನ ಮೃಣಾಲಿನಿ ಕೂಗು ನಿಲ್ಲಿಸಲು ಸಮರ್ಥವಾಗಲಿಲ್ಲ.

ಗೇಟು ತೆಗೆಯುತ್ತಿದ್ದಾಗ ಓಡಿ ಬಂದ ಡ್ರೈವರ್ "ಅಮ್ಮಾವ್ರು ಕೂಗ್ತಾ ಇದ್ದಾರೆ" ಹೇಳಿದ ವಿನಯದಿಂದ.

ಜೇಬಿನಿಂದ ನೂರರ ಒಂದು ನೋಟು ತೆಗೆದು ಅವನ ಕೈಯಲ್ಲಿಟ್ಟು "ನಾನು

ರ್‍ಯಾಂಕ್ ಬಂದಿದ್ದೀನಿ. ನೀನು ಸಿಹಿ ತಿನ್ನು" ಅಷ್ಟೇ ಹೇಳಿದ್ದು. ಕಾರು ನಿಲ್ಲಿಸಿದ ಸೆಲ್ವಾ ಕೂಡ ಓಡಿ ಬಂದ. ಆಟೋ ನಿಲ್ಲಿಸಿ ಹತ್ತಿಕೊಂಡಾಗ, ಎದುರು ಬದುರಾದ ಇಬ್ಬರು ಡ್ರೈವರ್‌ಗಳು ಮುಖ ಮುಖ ನೋಡಿಕೊಂಡರು.

"ಮಾಡಿದ್ದುಣ್ಣೋ ಮಹರಾಯ" ಮೃಣಾಲಿನಿ ಡ್ರೈವರ್ ನುಡಿದಾಗ, ಸೆಲ್ವಾ ತಲೆ ಚಚ್ಚಿಕೊಂಡ. ಹೆತ್ತ ಮಗನಿಗೆ ನಾಲ್ಕು ಏಟು ಬಿಗಿದು ಬುದ್ಧಿ ಹೇಳುವ ಚೈತನ್ಯ ಕಳೆದುಕೊಂಡ ನಿರ್ಭಾಗ್ಯ ತಾಯ್ತಂದೆಯರಾಗಿ ಕಂಡರು ಮೃಣಾಲಿನಿ ಮತ್ತು ಸೀತಾರಾಮ್.

ಪ್ರಿನ್ಸಿಪಾಲರ ರೂಮಿನಲ್ಲಿಯೇ ಟಿ.ವಿ. ಯವರು ಅವನನ್ನು ಸಂದರ್ಶಿಸಿದ್ದು.

"ಮೊದಲ ರ್‍ಯಾಂಕ್ ಪಡೆದು ಶಾಲೆಗೂ ನಿಮ್ಮ ತಾಯ್ತಂದೆಯರಿಗೂ ಕೀರ್ತಿ ತಂದಿದ್ದೀರಿ. ನಿಮ್ಮನ್ನ ಅಭಿನಂದಿಸಲು ಸಂತೋಷ."

ಸಾಗರ್ ಮಾತೇ ಆಡಲಿಲ್ಲ. ಅವನೆಂದು ಕ್ಲಾಸ್, ರ್‍ಯಾಂಕ್ ಬಗ್ಗೆ ತಲೆ ಕೆಡಿಸಿಕೊಂಡವನೇ ಅಲ್ಲ.

"ನಿಮ್ಮ ಈ ಸಾಧನೆ ಹಿಂದೆ ಯಾರಿದ್ದಾರೆ" ಕೇಳಿದರು.

"ಯಾರಿಲ್ಲ" ತಕ್ಷಣ ಉತ್ತರಿಸಿದ.

ಪ್ರಿನ್ಸಿಪಾಲರು ನೆರೆದ ಮಾಸ್ತರು ವೃಂದಕ್ಕೆ ತಲೆ ತಗ್ಗಿಸುವಂತಾಯಿತು. ಅವರ ಎಣಿಕೆಯನ್ನ ಸುಳ್ಳು ಮಾಡಿದ್ದ ನಿರ್ದಾಕ್ಷಿಣ್ಯವಾಗಿ.

"ಯಾಕೆ, ನಿಮ್ಮ ಅಧ್ಯಾಪಕರ ವರ್ಗದವರು ಇದಕ್ಕೆ ಕಾರಣರಾಗಿರ ಬಹುದಲ್ಲ" ಈ ಕೇಳಿಕೆಗೆ ಎರಡು ನಿಮಿಷದಷ್ಟು ಮೌನದ ನಂತರ ಹೇಳಿದ "ಎಲ್ಲರಿಗೂ ಪಾಠ ಹೇಳಿದಂತೆ ನಂಗೂ ಪಾಠ ಹೇಳಿರೋದು. ನಂಗೋಸ್ಕರ ಸ್ಪೆಷಲ್ ಇಂಟರೆಸ್ಟ್ ತಗೊಂಡಿಲ್ಲ" ಬೆಚ್ಚಿ ಬಿದ್ದರು ಎಲ್ಲರೂ ಒಮ್ಮೆಲೆ.

"ನಿಮ್ತಂದೆ ತಾಯಿ ನಿಮ್ಮ ಈ ಸಾಧನೆ ಹಿಂದೆ ಇರ್ಬಹುದ್ದು" ಅವನಿಗೆ ಇದು ಕೀಟಲೆಯ ಪ್ರಶ್ನೆಯಾಗಿ ಕಂಡಿತು "ಇಲ್ಲ, ನನ್ನ ರ್‍ಯಾಂಕ್ ಹಿಂದೆ ಯಾರಿಲ್ಲ." ಚಟ್ಟೆಂದು ಉತ್ತರಿಸಿದ.

ಕೇಳುವವರ ಕಪಾಳಕ್ಕೆ ಬಾರಿಸಿದಂತಾಯಿತು.

"ಯಾವ ಸಮಯದಲ್ಲಿ ಓದ್ತಾ ಇದ್ರಿ? ದಿನಕ್ಕೆ ಎಷ್ಟು ಗಂಟೆ ಅಭ್ಯಾಸ ಮಾಡ್ತಾ ಇದ್ರಿ."

"ಇಷ್ಟ ಬಂದಾಗ ಓದ್ತಾ ಇದ್ದೆ. ಗಂಟೆಗಟ್ಟಲೇ ಅಭ್ಯಾಸ ಮಾಡೋಂಥದೇನಿಲ್ಲ. ನಾನೆಂದೂ ರ್‍ಯಾಂಕ್ ಬಗ್ಗೆ ಯೋಚಿಸಿಯೇ ಇಲ್ಲ."

ಅತ್ಯಂತ ಸ್ಪಷ್ಟವಾಗಿತ್ತು ಅವನ ಉತ್ತರ. ಬೇರೆ ವಿದ್ಯಾರ್ಥಿಗಳಿಗಿಂತ ಬಹಳ ಭಿನ್ನವಾಗಿ ಪ್ರತಿಕ್ರಿಯಿಸಿದ್ದ.

"ಕೊನೆಯ ಪ್ರಶ್ನೆ, ಮುಂದೆ ಏನಾಗಬೇಕೆಂದು ಬಯುಸುತ್ತೀರಾ ?"

ಹೆಚ್ಚಿನ ಪ್ರತಿಭಾವಂತ ಅಂದರೆ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ತಾವು ಇಂಜಿನಿಯರ್ ಆಗಬೇಕು, ಇಲ್ಲ ಮೆಡಿಸಿನ್‌ಗೆ ಜಾಯಿನ್ ಆಗಬೇಕೆಂದು ಹೇಳಿದ್ದರು. ಇವನು ಏನು ಹೇಳಬಹುದೆಂದು ಎಲ್ಲರಿಗೂ ಕುತೂಹಲ.

"ಕುತೂಹಲ, ಸಧ್ಯಕ್ಕೆ ಓದು ಮುಂದುವರಿಸೋ ಇಚ್ಛೆ ನಂಗಿಲ್ಲ" ಎಂದ ದಿಟ್ಟವಾಗಿ. ಎಲ್ಲರೂ ಒಟ್ಟಿಗೆ ಸುಸ್ತಾದರು. ಅಷ್ಟೇ ಅಲ್ಲ, ಇವನ ಸಂದರ್ಶನ ನೋಡಿದ ಟಿ.ವಿ. ಪ್ರೇಕ್ಷಕರ ಜೊತೆ ಸೀತಾರಾಮ್, ಮೃಣಾಲಿನಿ ಕೂಡ ಷಾಕ್ ತಿಂದಿರಬೇಕು.

ಅಂದು ಅವನು ನೇರವಾಗಿ ಮನೆಗೆ ಹೋಗಲಿಲ್ಲ. ಪ್ಲಾಟ್‌ಫಾರಂ ಮೇಲೆ ಹೊರಡಲು ಸಿದ್ಧವಾಗಿದ್ದ ಟ್ರೈನ್ ಹತ್ತಿದ. ಪರಿಚಯದವರು ಇದ್ದುದ್ದರಿಂದ ಬಲವಂತ ಮಾಡಿ ತಮ್ಮ ಮನೆಗೆ ಕರೆದೊಯ್ದು ಸೀತಾರಾಮ್‌ಗೆ ಸುದ್ದಿ ಮುಟ್ಟಿಸಿದ್ದರು. ಆ ಕ್ಷಣವು ಇದಕ್ಕೆ ಕಾರಣ ಮೃಣಾಲಿನಿಯೇ ಎಂದು ವಾದಿಸಿದ ಮೂರ್ಖ.

* * *

ತಾನೇ ಮನೆ ಕಟ್ಟುವವನಂತೆ ಸಾಗರ್ ಗೌರಿ, ಕಲ್ಲೇಶಿ ಕಲೆಸಿಕೊಟ್ಟ ಮಣ್ಣನ್ನ ಹಾಕಿ ಗೋಡೆಗಳಿಗೆ ರೂಪ ಬರೆಸುತ್ತಿದ್ದಾಗ ಬಂದ ಬಿಳಿಗಿರಿಯವರು ತಡೆದರು.

"ಸಾಗರ್, ಇಂಥ ವಿಪರೀತ ಶ್ರಮ ಯಾಕೆ?" ಅವರ ಮಾತನ್ನ ಲೆಕ್ಕಕ್ಕೆ ತಗೊಳ್ಳಲಿಲ್ಲ.

ಮೂರು ದಿನ ಕೆಲಸ ಮಾಡಿ ಮನೆಗೊಂದು ರೂಪಕೊಟ್ಟ ಗಳಗಳನ್ನ ಹಾಸಿ ಅದರ ಮೇಲೆ ಗರಿಗಳನ್ನ ಹಾಕಿ ಬಿಗಿಯಾಗಿ ಕಟ್ಟಿದ್ದ. ಕೊಚ್ಚಿ ಹೋಗಿದ್ದ ಬಾಗಿಲನ್ನು ಎಳೆದು ತಂದಿದ್ದರಿಂದ, ಅದನ್ನೇ ನಿಲ್ಲಿಸಿ ಸೌಧ ಕಟ್ಟಿದಷ್ಟು ಸಾಧನೆ ಮಾಡಿದ್ದು ದೊಡ್ಡ ವಿಷಯವೇ.

ಅಕ್ಕ, ತಮ್ಮನಿಗಂತೂ ಹೇಳಲಾರದಷ್ಟು ಖುಷಿ. ಕೂಲಿ ಇಲ್ಲದೆ ಕೆಲಸ ಮಾಡಿದ ಸಾಗರ್ ಅವರ ಪಾಲಿಗೆ ದೇವರಂತೆ ಕಂಡ. ಗೌರಿಯಂತು ಕೈ ಕೈ ಮುಗಿದಿದ್ದೇ ನೋಡಿ ಸಾಕಾದ ಸಾಗರ್ ತಲೆಯ ಮೇಲೊಂದು ಮೊಟಕಿದ.

"ನಂಗೆ ಮೂಗರನ್ನ ಕಂಡರಾಗ್ದು. ಏನಾದ್ರೂ ಹೇಳೋದಿದ್ದರೇ ಮಾತುನಲ್ಲಿ

ಹೇಳು. ನಿಂಗೆ ಸನ್ನೆಯಲ್ಲಿ ಹೇಳೋದೂಂದರೆ ಅಷ್ಟೊಂದು ಪ್ರೀತಿನಾ. ಮೂಕಿ ಚಿತ್ರಗಳು ನಮ್ಮ ತಾತನ ಕಾಲದ್ದು" ಸ್ವಲ್ಪ ಚುರುಕಾಗಿಯೇ ಮೂದಲಿಸಿದ.

ಗೌರಿ ಸಪ್ಪಗಾದಳು. ಕಿವುಡಳಲ್ಲ, ಮೂಕಳಲ್ಲ, ಬಿಕ್ಕುವಿಕೆಯನ್ನು ಬಿಟ್ಟರೇ, ನಿಧಾನವಾಗಿಯಾದರೂ ಪದಗಳನ್ನ ಸೇರಿಸುತ್ತಿದ್ದಳು. ಅವರಿವರು ಆಡಿಕೊಂಡನಂತರ ಮಾತನ್ನೆ ಮರೆತಳು. ಮಾತಿಗಿಂತ ಸನ್ನೆಯೇ ಪ್ರಿಯವಾಯಿತು. ಅವಳನ್ನ ಕೂಡ ಜನ ಸನ್ನೆಯಿಂದಲೇ ಮಾತಾಡಿಸಲು ಅಭ್ಯಾಸಮಾಡಿಕೊಂಡಿದ್ದು ಮಾತ್ರ ದುರಂತ.

ಮನೆಗೆ ಹಿಂದಿರುಗಿದಾಗ ತೀರಾ ಬೇಸರಗೊಂಡಿದ್ದ ಸಾಗರ್ ಹಗ್ಗದ ಮೇಲಿನ ಬಟ್ಟೆಗಳನ್ನ ತನ್ನ ಲೆದರ್ ಬ್ಯಾಗಿಗಿ ತುರುಕಿಕೊಂಡ. ರೌದ್ರಾವತಾರ ತಾಳಿದ ಹೊಳೆ ಈಗ ಮೊದಲಿನ ಸ್ಥಿತಿಗೆ ಬಂದಿತ್ತು. ಈಗಲೂ ಗಂಟೆಗಟ್ಟಲೇ ಈಜಾಡುತ್ತಿದ್ದ, ಬಂಡೆಗಳ ಮೇಲೆ ಕೂಡುತ್ತಿದ್ದ. ಕೆಲವೊಮ್ಮೆ ಕಲ್ಲೇಶಿ ಅವನ ಜೊತೆ ಇರುತ್ತಿದ್ದ.

ಬಂದ ಬಿಳಿಗಿರಿಯವರು ಸಪ್ಪಗಿದ್ದರು. ಇಂದು ಸೋತವರಂತೆ ಗೋಡೆಗೆ ಆತು ಕೂತು ಬಲವಾಗಿ ಉಸಿರೆಳೆದು ದಬ್ಬಿದರು.

"ನಿನ್ನ, ಅವ್ವ ಊಟಕ್ಕೆ ಬರ ಹೇಳಿದ್ಲು. ಒಂದಿಷ್ಟು ಕಾಲು ಉಳುಕಿ ನೋವಿಲ್ಲದಿದ್ದರೇ...ಅವ್ಳೇ ಬರ್‍ತಾ ಇದ್ಲು. ಇಷ್ಟಿಗೆ ಕಾದು ಕಾದು ನಮ್ಮ ಜೀವಗಳು ಸೋತು ಹೋಯ್ತು" ನಿಡುಸೊಯ್ದರು.

'ಛುಳ್' ಎನಿಸಿತು ಅವನಿಗೆ. ತಟ್ಟನೇ ಅವನ ನೆನಪಿನಲ್ಲಿ ಬಂದು ಇಣಕಿದರು ಮೃಣಾಲಿನಿ, ಸೀತಾರಾಮ್. ಇಬ್ಬರು ಕನ್ನಡಕಧಾರಿಗಳು, ವಿದ್ಯಾವಂತರು, ಬುದ್ಧಿಜೀವಿಗಳು ತಮ್ಮ ಕಾದಾಟ ಪ್ರತಿಷ್ಠೆಗೆ ಪಣವಾಗಿ ಒಡ್ಡಿದ್ದರು ತಮ್ಮ ಏಕೈಕ ಸಂತಾನವನ್ನು.

ಅದನ್ನ ನೆನಪಿಸಿಕೊಂಡೇ ಜೋರಾಗಿ ನಕ್ಕ. ಮತ್ತಷ್ಟು ನಕ್ಕ. ಅವನಿಗೆ ತಾಯ್ತಂದೆಯರ ನೆನಪೆಂದರೇ ಅವರುಗಳು ಕಾದಾಡುತ್ತಿದ್ದ ಕದನವನ್ನ. ಅಲ್ಲಿ ಪ್ರೀತಿ, ವಿಶ್ವಾಸದ ಸೆಳೆತವಿರಲಿಲ್ಲ. ಮಗನ ಭವಿಷ್ಯದ ಚಿಂತೆ ಇರಲಿಲ್ಲ. ಪ್ರತಿಷ್ಠೆಯ ಹಣಾಹಣಿ, ಇಬ್ಬರು ಸೋಲರು. ಮನರಂಜನೆಯೆನಿಸಿತು ಅವನಿಗೆ.

ಅವನ ನಗುವನ್ನ ನೋಡಿ ಗಾಬರಿಯಾದ ಬಿಳಿಗಿರಿ ಗಪ್‌ಚಿಪ್ಪಾಗಿ ಕೂತರು. ನಂತರ ಅವನ ಕಣ್ಣಿಂದ ಒಂದೇ ಸಮನೆ ಹರಿದಿದ್ದು ಅಶ್ರುಧಾರೆ. 'ಅಯ್ಯೋ' ಎನಿಸಿತು. ಒಂದು ದುರಂತ ಕತೆಯ ನಾಯಕನಾಗಿ ಕಂಡ. ಹೆಚ್ಚು ನಕ್ಕಿದ್ದು ನೋವೇ ಇರಬೇಕು.

ಬಿಳಿಗಿರಿ ಅರ್ಥಮಾಡಿಕೊಂಡರು.

"ಬರ್ತೀಯಾ, ಸಾಗರ್...ಅವ್ವ ಇನ್ನ ಕಾಯ್ತ ಇರ್ತಾಳೆ" ನೆನಪಿಸಿದರು. ಕದಲದೆ ಕೂತ ಸಾಗರ್, ತಟ್ಟನೆ ಎದ್ದವನೆ ಷೂ ಕಟ್ಟಿಕೊಂಡು ಬ್ಯಾಗೆತ್ತಿ ಕೊಂಡ. ಹೊರ ಹೋಗುವ ಮುನ್ನ ನಿಂತ.

"ನಾನು ಹೋಗ್ತಾ ಇದ್ದೀನಿ. ನೀವುಗಳು ನನ್ನ ನೆನಪಿನಲ್ಲಿ ಅಚ್ಚ ಹಸಿರು" ನುಡಿದ ಪ್ರಯಾಸದಿಂದ. ಅವು ಸೌಜನ್ಯಕ್ಕಾಗಿ ಉದುರಿಸಿದ ನಟನೆಯ ಮಾತುಗಳಲ್ಲ. ಹೃದಯ ತುಂಬಿ ಬಂದ ಆಣಿ ಮುತ್ತುಗಳು.

ತುಂಬ ಆತಂಕಗೊಂಡ ಬಿಳಿಗಿರಿಯವರು ಅವನ ಕೈ ಹಿಡಿದು ಕೊಂಡರು. "ಇದೇನು, ಅವ್ವಿಗೆ ಒಂದ್ಮಾತು ಕೂಡ ಹೇಳ್ದೇ ಹೋಗೋ ಯೋಚ್ನೆ ಮಾಡಿದ್ದೀಯಲ್ಲ ! ಈಗ್ಲೇ ಮಗ್ನ ಯೋಚ್ನೆಯಲ್ಲಿ ಸವೆದು ಹೋಗಿರೋ ತಿರುಮಲಾಂಬ ಒಂದೇ ಏಟಿಗೆ ವೆಂಕಟೇಶನ ಪಾದ ಹುಡ್ಕಿಕೊಂಡ್ಹೋಗಿ ಬಿಡ್ತಾಳೆ. ಇನ್ನ ನಾಲ್ಕು ದಿನ ಶೀನಿಗಾಗಿ ಕಾಯ್ತೀವಿ" ಕಣ್ತುಂಬಿದಾಗ ಕರಗಿ ಹೋದ.

ಬ್ಯಾಗ್‌ನ ನೆಲದ ಮೇಲೆ ಹಾಕಿ ಉದ್ವೇಗದಿಂದ ಅವರ ಎರಡು ಕೈಗಳನ್ನು ಹಿಡಿದುಕೊಂಡು ಕಣ್ಣೊತ್ತಿಕೊಂಡ. ಒಂದು ರೀತಿಯ ಸಂಘರ್ಷ ಅವನ ಮನದಲ್ಲಿ.

"ಬಾ, ಊಟ ಮಾಡಿ...ಒಂದ್ಮಾತು ಹೇಳಿ ಹೋಗ್ಬಹುದು" ಎಂದರು ಬಿಳಿಗಿರಿ. ಅವನು ಅಷ್ಟು ಮೃದುವಾಗಿದ್ದು ಅವರಿಗೆ ಸಾಕಿತ್ತು. "ನೀವ್ಹೋಗಿ... ಬರ್ತೀನಿ" ಗೋಡೆಗೊರಗಿ ಕುಸಿದಂತೆ ಕೂತ.

ಇನ್ನ ಹೆಚ್ಚಿನ ಬಲವಂತ ಬೇಡವೆಂದು ಬಿಳಿಗಿರಿಯವರು ಹೊರಟರು. ಅವನು ಬಂದೇ ಬರುತ್ತಾನೆಂಬುದು ಅವರ ನಂಬಿಕೆ.

ಅರ್ಧ ಗಂಟೆಯ ನಂತರ ಹೋದಾಗ ಗಂಡ, ಹೆಂಡತಿ ಅವನಿಗಾಗಿ ಕಾದಿದ್ದರು. ಕಾಯುವಲ್ಲೇ ಹಿತ ಕಂಡ ಜನ. ಆಕೆ ಎರಡು ಎಲೆ ಹಾಕಿದಾಗ, ಸಾಗರ್ ಇನ್ನೊಂದ್ ಎಲೆ ಹಾಕಿದ.

"ನೀವು ನಮ್ಜೊತೆ ಊಟ ಮಾಡ್ತೀರಾ."

ಆಕೆ ಸಾಗರ್ ಮಾತಿಗೆ ಬದಲು ಹೇಳಲಿಲ್ಲ. ಮೂರು ಎಲೆಗೂ ಬಡಿಸಿದರು. ಇಂದು ಪಾಯಸದ ಅಡಿಗೆ ಮಾಡಿದ್ದರು. ಮಗನ ಹುಟ್ಟಿದ ಹಬ್ಬ. ಯಾರು ಮರೆತರು ತಾಯಿ ಕರುಳು ಮರೆತೀತೇ ? ಅಡಿಗೆಯನ್ನ

ಅಕ್ಕರೆಯಿಂದ ಬಡಿಸಿದರು ಆಕೆಗೆ ತಿನ್ನಲಾಗಲಿಲ್ಲ. ಅದನ್ನ ಗಮನಿಸದಂತೆ ಊಟ ಮಾಡಿ ಎದ್ದ ಸಾಗರ್.

"ಪಾಯಸ ಚೆನ್ನಾಗಿತ್ತು" ಹೇಳಿದ. ಇಷ್ಟು ದಿನಕ್ಕೆ ಆಕೆಯ ಅಡಿಗೆಯನ್ನ ಹೊಗಳಿ ಆಡಿದ ಒಂದೇ ಒಂದು ಮಾತು "ಇವತ್ತು ಶೀನಿ ಹುಟ್ಟಿದ ಹಬ್ಬ" ಎಂದರು ತಿರುಮಲಾಂಬ. ವಾತಾವರಣ ಗಂಭೀರವಾಯಿತು. ಯಾರ ಬಾಯಿಂದಲು ಮಾತುಗಳು ಹೊರಡಲಿಲ್ಲ.

"ಐ ಡೋಂಟ್ ಲೈಕ್ ಇಟ್, ಎಂದೋ ಎಲ್ಲೋ ಹೋದ ಮಗನಿಗಾಗಿ ಅಳೋದು ಯಾಕೆ, ಕಾಯೋದು ಯಾಕೆ ? ಈ ಒಂಟಿತನದ ನೋವು ಅನುಭವಿಸೋದೇಕೆ ? ಕಲ್ಲೇಶಿ ಗೌರಿಗೆ ಹಿರಿಯರೂಂತ ಯಾರಾದ್ರೂ ಬೇಕು. ಅವ್ರುನ್ನ ನಿಮ್ಮ ಮಕ್ಕಳಂತೆ ಇಲ್ಲಿ ಇಟ್ಕೊಂಡ್ ಬಿಡಿ. ಅವ್ರಿಗೆ ಮಾತ್ರವಲ್ಲ ನಿಮ್ಗೂ ಸಹಾಯವಾಗುತ್ತೆ" ಸ್ವಲ್ಪ ಗಟ್ಟಿಯಾಗಿಯೇ ಹೇಳಿದ. ಮೃದುವಾಗಿ, ನಯವಾಗಿ ಮಾತಾಡುವುದು ಅವನ ಸ್ವಭಾವವಲ್ಲ.

ತಿರುಮಲಾಂಬ ಬಾಯಿಂದ ಮಾತೇ ಬರಲಿಲ್ಲ.

ಚೆಂಬುನಲ್ಲಿದ್ದ ನೀರನ್ನ ಲೋಟಕ್ಕೆ ಬಗ್ಗಿಸಿ ಆಕೆಯ ಮುಂದಿಡಿದ. "ವಾಸಿಸುವ ಕಟ್ಟಡ ಮನೆಯ ರೂಪ ತಾಳಿದ್ದರೂ, ಗಟ್ಟಿಯಾಗಿ ಮಳೆ ಬಂದರೇ ಗೋಡೆಗಳು ಆರಾಮಾಗಿ ಕರಗಿಹೋಗುತ್ತೆ. ಮತ್ತೆ ಮೊದಲಿನ ಸ್ಥಿತಿ ಅವರದು" ಒಂದು ಚಿತ್ರ ಬಿಡಿಸಿಟ್ಟ.

ಬಿಳಿಗಿರಿಯವರಿಗೂ ಕೂಡ 'ಯಾಕಾಗಬಾರದು ?' ಎನಿಸಿತು. ಹೆಚ್ಚು ಕೆಲಸ ಮಾಡಲಾರದ ಸ್ಥಿತಿಯಲ್ಲಿ ಅವರೇ ಸಹಾಯಕರು. ಗೌರಿ ಅಂಥ ಹುಡುಗಿ ತಮ್ಮ ಮನೆಯಲ್ಲಿದ್ದರೇ, ಯಾಕೋ ಪ್ರಪಂಚ ದಾಟಿ ಮುಂದು ವರಿಯಲು ಅಂಜಿದರು.' ಈ ವಯಸ್ಸಿನಲ್ಲಿ ಇಬ್ಬರ ಜವಾಬ್ದಾರಿ ಹೊರುವ ಕೆಲಸ, ಅನಗತ್ಯವಾಗಿ ಎಳೆದುಕೊಂಡ ಬಂಡೆಯೆನಿಸಿತು.

"ಮಾತು ಸುಲಭವಾಗಿ, ಪ್ರಯೋಜಕವಾಗಿ ಕಂಡರೂ ಅನುವು ಮಾಡೋದು ಕಷ್ಟ. ನಮ್ದು ಹೆಚ್ಚು ಭಾರ ಹೊರಲಾರದ ಸ್ಥಿತಿ" ಎಂದರು ಬಿಳಿಗಿರಿ.

"ನಿಮ್ಮ ಮನಸ್ಸು ತೀರಾ ಚಿಕ್ದು ಅಷ್ಟೆ. ಬರೋ ಮಗ ನಿಮ್ಗೆ ಭಾರವಾಗ ಬಹುದೇನೋ, ಅವ್ರಂತು ಭಾರವಾಗರು. ಒಂದಲ್ಲ ಒಂದ್ಕೆಲ್ಸ ಮಾಡಿ ಕಲ್ಲೇಶಿ ತಮ್ಮ ಇಬ್ರು ಅನ್ನಕ್ಕೆ ಆಗೋಷ್ಟು ದುಡೀತಾನೆ. ಗೌರಿ ತಾನೇ ಎಲ್ಲಿ ಸುಮ್ನೆ ಕೂಡ್ತಾಳೆ. ಅವರಿಬ್ರೂ ನಿಮ್ಮ ಬದ್ಕಿನ ಮುಂದಿನ ದಿನಗಳ ಪುಟದಲ್ಲಿ ನವಿರಾದ ಅಕ್ಷರಗಳಿಂದ ತುಂಬ್ತಾರೆ. ಮಿಕ್ಕಷ್ಟು ನಿಮ್ಮಿಷ್ಟ. ನಂಗೆ ತೋಚಿದ್ದು ಇಷ್ಟೆ."

ಮೇಲೆದ್ದು ಬಾಗಿಲಿಗೆ ಹೋದಾಗ, ಕಲ್ಲೇಶಿ ಬಂದು ಹಳೆಯ ಬ್ಯಾಗುನಲ್ಲಿ ತರಕಾರಿ ಹಿಡಿದು ನಿಂತಿದ್ದ. "ಒಂದಿಷ್ಟು ತರಕಾರಿ ಉಳೀತು. ಅವ್ವಾರಿಗೆ ಕೊಟ್ಹೋಗೋಣಾಂತ್ಬಂದೆ."

ಸಾಗರ್ ಪಕ್ಕಕ್ಕೆ ಸರಿದ.

ಬ್ಯಾಗ್‌ನಲ್ಲಿದ್ದ ಒಂದು ಪಡವಲಕಾಯಿ, ಎರಡು ಹೀರೇಕಾಯಿ ಜೊತೆ, ಒಂದಿಷ್ಟು ಹಸಿ ಮೆಣಸಿನಕಾಯಿಯನ್ನು ನೆಲಕ್ಕೆ ಸುರಿದ. ಇಂದು ಸ್ವಲ್ಪ ಗೆಲುವಿತ್ತು ಅವನ ಮುಖದಲ್ಲಿ.

"ಬರ್ತೀನಿ, ಅಮ್ಮಾವ್ರೇ...." ಹೊರಟಾಗ ಆಕೆ ಕೂಗಿದರು. "ಏಯ್ ನಿಂತ್ಕೋ, ಒಂದು ತುತ್ತು ಊಟ ಮಾಡ್ಕೊಂಡ್ಹೋಗು."

"ಇವತ್ತು ಬೇಡ, ಅಕ್ಕ ರೊಟ್ಟಿ, ಪಲ್ಯದ ಜೊತೆ ಹಲಸಿನ ಹಪ್ಪಳ ಸುಟ್ಟಿದ್ದಾಳೆ." ಓಡಿದವನನ್ನ ಹಿಡಿದ ಸಾಗರ್ "ಸ್ವಲ್ಪ ಹೇಳ್ದಂಗೆ ಕೇಳು" ರೆಟ್ಟೆ ಬಿಟ್ಟ.

ಅವನಿಗೆ ನಗು ಬಂತು. ಅವನು ಹೇಳಿದಂಗೆ ಕೇಳಿದ್ದುಂಟಾ ? ಇಲ್ಲ ಎನಿಸಿತು. ಪ್ರತಿ ಮಾತಿಗೂ ವಿರೋಧವೇ. ಅವನೆಂದೂ ಸೀತಾರಾಮ್, ಮೃಣಾಲಿನಿ ಹೇಳಿದಂತೆ ಕೇಳುತ್ತಿರಲಿಲ್ಲ. 'ಓದಿನ' ವಿಷಯ ಪ್ರಸ್ತಾಪ ವಾದರೇ ಸಾಕು, ಮಲಗಿಬಿಡುತ್ತಿದ್ದ. 'ವಿಪರೀತ ಓದು ಕಣ್ಣಿಗೆ ಆಯಾಸ ತರುತ್ತೆ' ಎಂದು ಎಂದಾದರೂ ಮೃಣಾಲಿನಿ ಹೇಳಿದರೇ ಇಡೀ ರಾತ್ರಿ ಅಭ್ಯಾಸ ಮಾಡುತ್ತಿದ್ದ. ನಡವಳಿಕೆಯಲ್ಲಿ ಅಂಥ ದುರುದ್ದೇಶವೇನು ಇಲ್ಲ ದಿದ್ದರೂ, ಅವಿಧೇಯತೆಯ ಪ್ರದರ್ಶನ ಅವನ ಅಂತರಾಳದ ಬಿಸಿಯ ಭಯಂಕರ ತಾಪ. ಅದಕ್ಕೆ ಹೆತ್ತವರ ಮಮತೆಯ ಸಿಂಪರಣೆಯಾಗಿದ್ದರೇ, ಆರಿ ತಣ್ಣಗಾಗುತ್ತಿತ್ತು.

ಅಪ್ಪಯ್ಯ ಶಾಸ್ತ್ರಿಗಳ ಮನೆಗೆ ಹಿಂದಿರುಗಿದವನೇ ನೆಲದ ಮೇಲೆ ಅಂಗಾತ ನಾಗಿ ಮಲಗಿದ. ಇಲ್ಲಿಂದ ಹೋಗಬೇಕೆಂಬ ಒತ್ತಡವಿತ್ತೆ ವಿನಃ ಎಲ್ಲಿಗೆ ಹೋಗಬೇಕೆಂಬ ಅಂದಾಜು ಇರಲಿಲ್ಲ. ಒಂದರ್ಧ ಗಂಟೆ ಕಳೆದಿರಬಹುದು. ಬಾಗಿಲು ಕೆಟ್ಟ ಶಬ್ದದೊಂದಿಗೆ ತೆಗೆದುಕೊಂಡಿತು.

"ಅಣ್ಣಾ, ನೀವು ಹೊರಟಿದ್ದೀರಾಂತ ತಿಳೀತು" ಸನ್ನಿಹದಲ್ಲಿ ಬಂದು ನಿಂತ. "ಈಗೇನು, ನಿನ್ನ ಪರ್ಮಿಷನ್‌ಗೆ ಅಪ್ಲಿಕೇಷನ್ ಹಾಕ್ಕೋಬೇಕಾ" ಎಂದ ಮಲಗಿಯೇ.

ಕಲ್ಲೇಶಿ ಸಂಕೋಚದಿಂದ ಹಿಡಿಯಾದ. ಆದರೆ ಅವನ ಮನಸ್ಸಿನ

ಅನುಮಾನ ಪರಿಹಾರವಾಗಿರಲಿಲ್ಲ. ಕೇಳಲು ಭಯ. ಸಣ್ಣ ಪುಟ್ಟ ವಿಷಯಗಳು ಪ್ರಸ್ತಾಪಿಸಿದಾಗಲೇ ಪಟ್ಟೆಂದು ಪೊಡೆಯುತ್ತಿದ್ದ. ಈಗ... ಸ್ವರ ಉಡುಗಿ ಹೋಗುತ್ತಿತ್ತು.

ಮೈಮುರಿದು ಎದ್ದು ಕೂತ. ಕಲ್ಲೇಶಿ ಕೈ ಜೋಡಿಸಿ ವಿನಯ ತುಂಬಿದ ದನಿಯಲ್ಲಿ "ನನ್ನೊತೆಯಲ್ಲಿ ಒಂದೇ ಒಂದ್ಸಲ ಬಾರಣ್ಣ. ಖಂಡಿತ ಹೊಡೀ ಬಾರ್ದು" ಅವನ ಮಾತುಗಳಿಗೆ ಸಾಗರ್ ನಕ್ಕುಬಿಟ್ಟ.

"ನನ್ನ ಏಟು ಅಷ್ಟೊಂದು ನೋವು ಕೊಡುತ್ತಾ ? ಮೊದ್ಲೇ ಯಾಕೆ ಹೇಳ್ಬಾರ್ದು, ನಡೀ" ಅವನ ಭುಜದ ಮೇಲೆ ಕೈ ಹಾಕಿದ. ಇಬ್ಬರು ಹೊಳೆಯ ಪಕ್ಕದ ಬಂಡೆಗಳ ಸಮೂಹ ಸೇರಿಕೊಂಡರು.

ಕಲ್ಲೇಶಿ ಎಲ್ಲಾ ಕಡೆ ಕಣ್ಣೊರಳಿಸಿ ಯಾರು ಇಲ್ಲವೆಂದು ಖಾತ್ರಿಯಾದ ನಂತರವೇ ಎರಡು ಬಂಡೆಗಳು ತಲೆಗಳನ್ನ ಆನಿಸಿದ ಬಂಡೆಗಳ ನಡುವಿನ ಕಿರಿದಾದ ಪ್ರದೇಶಕ್ಕೆ ನುಗ್ಗಿ ಒಂದು ಸಣ್ಣ ಕಬ್ಬಿಣದ ಆಯುಧದಿಂದ ಬಗೆದು ಎರಡು ಚೀಲಗಳನ್ನ ಪ್ರಯಾಸದಿಂದ ಹೊರಗೆಳೆದ.

"ಇವನ್ನ ನೋಡಿ ! ಇಲ್ಲಿನ ಪಚ್ಚೆ, ಕೆಂಪು ಕಲ್ಲುಗಳ್ನ ಒಯ್ದವ್ರು ಕೋಟ್ಯಾಧೀಶರಾಗಿದ್ದಾರಂತೆ. ನಮ್ಮಪ್ಪ ಕೂಡಿ ಹಾಕಿದ್ದು. ಯಾರೋ ಕಳ್ಳತನದಿಂದ ಒಯ್ದರು. ನಾನು ಕೂಡ್ಸಿದ್ದು ಪ್ರವಾಹದಲ್ಲಿ ಕೊಚ್ಚಿ ಹೋದ್ರು.... ಒಂದಿಷ್ಟು ಉಳ್ಸಿಕೊಂಡೇ. ಈ ಕಲ್ಲುಗಳಲ್ಲಿ ಯಾವ್ದು ಬೆಲೆ ಬಾಳೋದು... ಹೇಳಿ" ಉದ್ವೇಗದಿಂದ ಅವನ ಮುಂದೆ ಸುರಿದ.

ಮೇಲಕ್ಕೆತ್ತಿ ಕೈ ಮಾಮೂಲಾಗಿ ಏಟು ಹಾಕದೇ ಅವನ ತಲೆ ಸವರಿತು. "ಎಲಾ, ಈಡಿಯೆಟ್ ! ನಾನು ಈ ಕಲ್ಲುಗಳಿಗೋಸ್ಕರ ಬಂದೇಂತ ತಿಳಿದ್ಯಾ? ನಂಗೆ ಕಲ್ಲುಗಳ ಮಧ್ಯ ವ್ಯತ್ಯಾಸ ತಿಳೀದು. ಅಂಥ ಆಸಕ್ತಿ ಕೂಡ ಇರ್ಲಿಲ್ಲ." ಅದರಲ್ಲೇ ನಾಲ್ಕು ಕಲ್ಲುಗಳನ್ನ ಆರಿಸಿ ದೂರಕ್ಕೆಸೆದ ಸಾಗರ್. ಅದನ್ನ ಆಯ್ದು ತಂದ ಕಲ್ಲೇಶಿ ಅದಕ್ಕೆ ಸೇರಿಸಿದ.

ಮತ್ತೆ ತುಂಬಲು ಷುರುಮಾಡಿದಾಗ ಅವನಿಗೆ ಸಹಾಯ ಮಾಡಿದ. ಇವನಿಗೆ ಹೇಗೆ ಹೇಳಿದರೆ ಅರ್ಥವಾಗಬಹುದು.

"ಕಲ್ಲೇಶಿ, ಈ ಕಲ್ಲುಗಳ್ನ ಕೂಡಿಡೋ ದಂಧೆನ ಬಿಟ್ಬಿಡು. ಗಾಳಿ ಹರಡಿರೋ ಸುದ್ದಿ ಇರ್ಬಹ್ದು. ಇಲ್ಲಿ ಅಂಥ ಬೆಲೆ ಬಾಳೋ ಕಲ್ಲುಗಳು ಸಿಗೋ ಹಾಗಿದ್ರೆ...ಸರ್ಕಾರ ಸುಮ್ನೇ ಕೂತ್ಕೋತಾ ಇತ್ತಾ ? ಕೆಲ್ಸವಿಲ್ದ ಜನ ಕಟ್ಟಿರೋ ಕಟ್ಟು ಕತೆ" ಹೇಳಿದ ಸಾಗರ್.

ಆದರೆ ಕಲ್ಲೇಶಿ ಯಾರು ಏನೇ ಹೇಳಿದರೂ ಇಂಥದೊಂದು ಕಾಯಕ ನಿಲ್ಲಿಸಲಾರ. ಒಂದಲ್ಲ ಒಂದು ದಿನ ಕೋಟ್ಯಾಧೀಶನಲ್ಲದಿದ್ದರೂ ಲಕ್ಷಾಧೀಶನಾಗುವ ಸತ್ಯವನ್ನ ಕಾಣುತ್ತಿದ್ದ.

ಮತ್ತೆ ಚೀಲಗಳಿಗೆ ತುಂಬಿ, ಅದನ್ನೆಲ್ಲ ಉಗಿದು ಬಂದ ಅದೇ ಜಾಗದಲ್ಲಿ. ತಟಸ್ಥನಾಗಿ ನೋಡುತ್ತ ಕೂತಿದ್ದ ಸಾಗರ್ ಹಣದ ಅಗಾಧವಾದ ಗುಣ, ಲಕ್ಷಣ, ಸ್ವಭಾವಗಳನ್ನು ತಿಳಿಯದೇ ಬೆಳೆದಿದ್ದ.

ಎಷ್ಟೋ ಹೊತ್ತು ಕೂತಿದ್ದ ಸಾಗರ್. ಸಂಜೆಯಾಗಿದ್ದು ಅವನ ಗಮನಕ್ಕೆ ಬರಲಿಲ್ಲ. ಹೊರಟಿದ್ದನ್ನ ಮರೆತಿದ್ದ.

"ಅಣ್ಣಾ, ಹೋಗೋಣ. ಅಕ್ಕ ಇನ್ನ ರೊಟ್ಟಿ ಇಟ್ಕಂಡ್ ಕಾಯ್ತ ಇರ್ತಾಳೆ. ನೀನ್ವಂದು ನಮ್ಮನೆಯಲ್ಲಿ ರೊಟ್ಟಿ ಯಾಕೆ ತಿನ್ಬಾರ್ದು ?" ಸಂಕೋಚಿಸುತ್ತಲೇ ಒಂದು ಆಹ್ವಾನ ಕೊಟ್ಟ ಕಲ್ಲೇಶಿ.

ನೇರವಾಗಿ ಕಲ್ಲೇಶಿಯ ಭುಜದ ಮೇಲೆ ಕೈ ಹಾಕಿ ನೆಟ್ಟಗೆ ಹೋಗಿದ್ದ ಅವರ ಮನೆಗೆ. ಮುಂದೆ ಒಂದೆರಡು ಚಪ್ಪರಗಳು ಎದ್ದು ಎಳೆಯ ಬಳ್ಳಿ ಗಳು ಹಬ್ಬಿಕೊಂಡಿತ್ತು. ಎಲ್ಲಾ ಕೊಚ್ಚಿಕೊಂಡು ಹೋಗಿ ಸ್ಮಶಾನದಂತೆ ಕಾಣುತ್ತಿದ್ದ ಕಡೆ, ಒಂದು ಸೆಟ್ ಮೇಲೆದ್ದಿತ್ತು. ಅದನ್ನ ತೀರಾ ಅಚ್ಚುಕಟ್ಟಾಗಿ ರೂಪಿಸಿ ಗೌರಿ ಜಾಣೆಯಾಗಿ ಕಂಡಳು.

"ಅಕ್ಕ, ನಾನು ಮಧ್ಯಾಹ್ನ ಅಮ್ಮೋರ ಮನೆಗೆ ಉಂಡೆ. ಈಗ ಅಣ್ಣಂಗೆ ರೊಟ್ಟಿ ಕೊಡು" ತಮ್ಮ ಹೇಳಿದಾಗ ಸಾಗರ್‌ನತ್ತ ಕೃತಜ್ಞತೆ ನೋಟ ಬೀರಿದರು. "ಅಮ್ಮ....ತಾಯಿ...ಸ್ಪಷ್ಟವಾಗಿ ಏನಾದ್ರೂ ಹೇಳೋದಿದ್ದರೇ ಬಾಯಲ್ಲಿ ಹೇಳು. ಕಣ್ಣುಗಳಲ್ಲಿನ ಭಾವನೆ, ಕೈ ಸನ್ನೆಗಳ್ನ ಅರ್ಥ ಮಾಡಿಕೊಳ್ಳೋಷ್ಟು ಪೇಷನ್ಸ್ ಇಲ್ಲ.... ಅಂದರೆ ಸಹನೆ ಇಲ್ಲ. ಏನೋ ಪುಣ್ಯ, ಕಿವಿಯಾದ್ರೂ ಕೇಳುತ್ತೆ" ತಟ್ಟೆಂದು ಅಂದೇಬಿಟ್ಟ.

ಗೌರಿ ಮೆಲ್ಲಗೆ ಗೋಡೆಯ ಪಕ್ಕಕ್ಕೆ ಸರಿದು ಕಣ್ಣೊರೆಸಿಕೊಂಡಳು.

"ಅಕ್ಕ ಅಳ್ತಾ ಇದ್ದಾಳೆ" ಎಂದ ವಿಷಾದದಿಂದ ಕಲ್ಲೇಶಿ.

"ನಂಗೆ ಇಂಥ ಅಳು ಕೂಡ ಇಷ್ಟವಾಗೋಲ್ಲ" ಸಿಡಿಮಿಡಿಗೊಂಡು ಹೊರಟವನನ್ನ ಕೈ ಹಿಡಿದು ಕೂಡಿಸಿದ ಕಲ್ಲೇಶಿ "ರೊಟ್ಟಿ ಭೋ ಪಸಂದ ವಾಗಿರುತ್ತೆ" ಅವನ ಮಾತಿಗೆ ಎರಡು ಕೈಯಲ್ಲು ತಲೆ ಹಿಡಿದುಕೊಂಡ.

'ಪಸಂದ್' ಎಂದರೇನು ? ಅವನ ನಾಲಿಗೆ ಅಂಥದ್ದಕ್ಕೆಲ್ಲ ಪ್ರತಿಕ್ರಿಯಿಸ

ಲಾರದೆ ಜಡವಾಗಿತ್ತು. ದಕ್ಷಿಣ ಭಾರತ, ಉತ್ತರ ಭಾರತದ ತಿಂಡಿ ತಿನಿಸುಗಳಿಂದ ಹಿಡಿದು ಚೀನಿ ಹೋಟಲ್‌ನ ಐಟಂಗಳನ್ನ ರುಚಿ ನೋಡಿದ್ದ. ಜೊತೆಗೆ ಬೀದಿಯಲ್ಲಿ ತಳ್ಳು ಗಾಡಿಗಳಲ್ಲಿ ಮಾರುವ ಬೇಲ್‌ಪೂರಿ, ಮಸಾಲೆ ಪೂರಿಯಿಂದ ಹಿಡಿದು ಎಲ್ಲವನ್ನು ರುಚಿ ನೋಡಿದ್ದ. ಕಾಶಿಗೆ ಹೋಗಿದ್ದಾಗ ಒಬ್ಬ ಸಾಧು ಮಣ್ಣಿನ ಪಾತ್ರೆಯಲ್ಲಿ ಬೇಯಿಸಿದ ಹುಗ್ಗಿಯೆನ್ನುವ ಸಪ್ಪಗೆ ಬರೀ ಉಪ್ಪು ಬೆರೆತ ಪದಾರ್ಥವನ್ನು ಒಂದು ವಾರ ತಿಂದಿದ್ದ.

ತಿನ್ನುವ ಪದಾರ್ಥಗಳ ರುಚಿ ಸವಿಯುವ ಮನಸ್ಥಿತಿ ಸಾಗರ್‌ದಲ್ಲ. ಒಂದು ಲೋಪ ಸಾಗರ್ ಇಂದ್ರಿಯಗಳ ಬಗ್ಗೆ ನಿಗಾ ವಹಿಸಿ ಹಾಳು ಮಾಡಿತ್ತು.

ಒಂದು ದೊಡ್ಡ ಸೈಜಿನ ರೊಟ್ಟಿಯ ಮೇಲೆ ದೊಡ್ಡ ಹಿಡಿಯಷ್ಟು ಪಲ್ಯ ಇಟ್ಟುಕೊಂಡು ಬಂದು ಕೊಟ್ಟಳು ಗೌರಿ.

"ನಿಂಗೇನು ಸಿಕ್ತು ?" ಕೇಳಿದ.

ಅರ್ಥವಾಗವಳಂತೆ ಅತ್ತಿತ್ತ ನೋಡಿ ಹಿಂದೆ ಮುಂದೆ ನೋಡಿದಳು ಆತಂಕದಿಂದ.

"ಅತ್ತಿದ್ದಕ್ಕೆ ಏನು ಸಿಕ್ತು ?" ಮತ್ತೆ ಪ್ರಶ್ನಿಸಿದ.

ಅಕ್ಕ ತಮ್ಮ ಮುಖ ಮುಖ ನೋಡಿಕೊಂಡರು. ಇದೆಂಥ ಪ್ರಶ್ನೆ ? ಅತ್ತರೆ ಏನು ಸಿಗುತ್ತೆ ? ಇಂಥ ಪ್ರಶ್ನೆಗೆ ಉತ್ತರಿಸುವಂಥ ಚುರುಕುತನ ಅವರುಗಳದು ಅಲ್ಲವೇನೋ, ಸುಮ್ಮನಾದರು.

ಆರಾಮಾಗಿ ರೊಟ್ಟಿ ಮುಗಿಸಿ ಮೇಲೆದ್ದ 'ಚೆನ್ನಾಗಿದೆ,' 'ಚೆನ್ನಾಗಿಲ್ಲ' ಎನ್ನುವ ಎರಡು ಪದಗಳನ್ನು ತನ್ನ ಡಿಕ್ಷನರಿಯಿಂದ ತೆಗೆದು ಹಾಕಿದ.

ನಡೆದು ಬರುತ್ತಿದ್ದವನು ನಿಂತ. ಈ ಹೆಂಗಸನ್ನ ಎಲ್ಲಿ ನೋಡಿದ್ದೀನಿ, ಒಮ್ಮೆ ಅಂದುಕೊಂಡ.

"ಚೆನ್ನಾಗಿದ್ದಿಯೇನಪ್ಪ ?" ಆಕೆಯ ಪ್ರಶ್ನೆಗೆ ತಲೆ ಕುಣಿಸಿದ.

ಸರೋಜಮ್ಮ ದಿಗ್ಭ್ರಾಂತರಾದರು. ಪರಿಚಯವೇ ಇಲ್ಲವೆನ್ನುವಂತೆ ನಡೆದು ಹೋಗುತ್ತಿರುವ ವ್ಯಕ್ತಿಗೆ ಮರುವಿನ ಕಾಯಿಲೇನಾ ? ಆಕೆ ಅದನ್ನು ವಿಚಾರಿಸಲೆಂದೇ ಬಿಳಿಗಿರಿಯವರ ಮನೆಗೆ ಹೋದರು.

ಬಾಗಿಲು ಪೂರ್ತಿಯಾಗಿ ತೆರೆದಿತ್ತು. ಆ ಬಗ್ಗೆ ಅವನೇನು ತಲೆ ಕೆಡಿಸಿ ಕೊಳ್ಳಲಿಲ್ಲ. ಗೂಳಿಯಂತೆ ಒಳಗೆ ನುಗ್ಗಿದಾಗ ಕಂಬಕ್ಕೆ ಒರಗಿ ಕೂತಿದ್ದ ಅಪ್ಪಯ್ಯ ಶಾಸ್ತ್ರಿಗಳು ನೆಲಕ್ಕೆ ಕೈಯೂರಿ ಎದ್ದರು.

"ಬಾಗ್ಲು ಸುಮ್ನೆ ಮುಚ್ಚಿತ್ತು. ತಳ್ಳಿಕೊಂಡು ಒಳಕ್ಕೆ ಬಂದ್ವಿ. ಏನು ತಿಳ್ಕೋಬೇಡಿ. ಬಾಡಿಗೆಗೆ ಕೊಟ್ಮೇಲೆ ಅಷ್ಟೆಲ್ಲ ಸ್ವತಂತ್ರ ನಮ್ಗೆ ಇರೋಲ್ಲ" ಸಂಕೋಚ ವ್ಯಕ್ತಪಡಿಸಿದರು.

"ದಟ್ಸ್ ಆಲ್ ರೈಟ್" ಎರಡು ಕೈಗಳನ್ನು ಹೊಸೆದು ಅವನು ಎದುರಿನ ಗೋಡೆಗೊರಗಿ ಕೂತ ಅಷ್ಟೆ. ಒಂದೇ ಒಂದು ಮಾತಿಲ್ಲ. ಸುಮ್ಮನೆ ಛಾವಣಿ ನೋಡುತ್ತ ಮಲಗಿದ.

"ಹೇಗಿದ್ದೀರಾ ?" ಅಪ್ಪಯ್ಯ ಶಾಸ್ತ್ರಿಗಳ ಪ್ರಶ್ನೆ.

"ಹೀಗಿದ್ದೀನಿ" ಅಷ್ಟೆ ಅಂದಿದ್ದು.

"ಏನು ತೊಂದರೆ ಆಗಲಿಲ್ವಾ ? ಸಿಟಿ ಜನ, ಹಳೇ ಮಾದರಿಯ ಮನೆ. ಸ್ವಲ್ಪ ಇರುಸು ಮುರುಸು ಉಂಟಾಗಿರ್ಬಹ್ದು. ಬೀಗ ಹಾಕಿರೋ ಉಗ್ರಾಣದಲ್ಲಿ ಕುರ್ಚಿ, ಬೆಂಚ್ ಎಲ್ಲಾ ಇದೆ. ಬೇಕಾದ್ರೆ ತೆಗ್ದು ಉಪಯೋ ಗಿಸ್ಕೋಬಹ್ದು" ಧಾರಾಳ ಮನಸ್ಸಿನಿಂದ ಹೇಳಿದರು.

ಅವರ ಪುಣ್ಯಕ್ಕೆ ಯಜಮಾನಿತಿ ಇರಲಿಲ್ಲ. ಇದ್ದಿದ್ದರೇ ದನಿಗೆ ಜೀವ ಬರುತ್ತಿರಲಿಲ್ಲ.

"ಅವೆಲ್ಲ ಬೇಕೂಂತ ಅನ್ನಿಸ್ಲಿಲ್ಲ. ಬಾಡಿಗೆಯವ್ರು ಉಪಯೋಗ್ಸಿಕೊಳ್ಳಿ ಅನ್ನೋ ಇರಾದೆ ಇದ್ದಿದ್ರೆ...ಅವೆಲ್ಲ ಇಲ್ಲೇ ಬಿಡಬಹುದಿತ್ತಲ್ಲ" ಚಮತ್ಕಾರದಿಂದ ಮಾತಾಡಿದ. ಅವರಿಗೆ ಮಾತ್ರ ಕತ್ತೆ ಒದ್ದಂತಿತ್ತು. ಹೆಂಡತಿಯಾಡುವ ಮಾತುಗಳನ್ನ ಕೇಳಿ ಕೇಳಿ ಅದಕ್ಕಿಂತ ತೀಕ್ಷ್ಣವಾಗಿ ಮಾತಾಡುವ ಜನರೇ ಎನ್ನುವಷ್ಟರ ಮಟ್ಟಿಗೆ ಜಡವಾಗಿದ್ದರಿಂದ ಕೋಪಗೊಳ್ಳಲಿಲ್ಲ.

"ನೀನು ಹೇಳೋದು ಸತ್ಯವಾದ ಮಾತು" ಒಪ್ಪಿಕೊಂಡರು. ಆದರೂ ಇನ್ನೊಂದು ಮಾತು ಹೇಳಲು ಮರೆಯಲಿಲ್ಲ. "ಈಗ್ಲೂ ತೊಂದರೆ ಇಲ್ಲ. ಬೇಕೂಂತ ಅನ್ನಿಸಿದ್ದು ತೆಗ್ದು ಉಪಯೋಗ್ಸಿಕೊಳ್ಳಿ."

ಅವರನ್ನೇ ನೋಡಿದ. ತೀರಾ ಮೆದುವಾಗಿ ಕಂಡರು. ಸರೋಜಮ್ಮ ತಮ್ಮ ಮಾತುಗಳಿಂದ ಬಡಿದು ಬಡಿದು ಒಳ್ಳೆ ಹದವಾದ ಚಪಾತಿ ಹಿಟ್ಟಿನಂತೆ ನಾದಿ ಬಿಟ್ಟಿದ್ದರು.

"ಈಗ ಬಂದಿದ್ದೇನು ?" ಕೇಳಿದ ನೇರವಾಗಿ.

ಅಪ್ಪಯ್ಯ ಶಾಸ್ತ್ರಿಗಳು ಅವಕ್ಕಾದರು. ಆದರೂ ಬೇಗ ಚೇತರಿಸಿಕೊಂಡರು. "ಸರೋಜ ಗಂಗೆ ಪೂಜೆ ಮಾಡ್ಬೇಕೂಂದ್ಲು. ಈ ಶ್ರೀವಳ್ಳಿ ಹೊಳೆ ಹರಿದು ಹದಿನೆಂಟು ಕಿಲೋಮೀಟರ್ ಆಚೆ ಜಲಪಾತವಾಗಿ ಧುಮುಕಿ ಶ್ರೀಮುಖಿ ನದಿ

ಸೇರುತ್ತೆ. ಎಂಥಾ ಪ್ರೇಕ್ಷಣೀಯ ಸ್ಥಳ ಅಂತೀರಾ ! ನೀವು ಖಂಡಿತ ನೋಡ್ಬೇಕಾದ್ದೆ. ಅಲ್ಲಿಗೆ ಹೋಗ್ಬರೋದೂಂದರೇ ನಮ್ಮ ಶ್ರೀವಳ್ಳಿಗೆ ಇಷ್ಟ. ಈ ಎರಡು ಕೆಲ್ಸಗಳ್ನ ಇಟ್ಕೊಂಡ್ ಬಂದಿದ್ದೀನಿ. ಒಂದೆರಡು ದಿನ ಉಳ್ಕೋ ಬಹ್ದು. ಈ ಕಡೆಯ ಕೋಣೆಗಳ್ನ ತೆಗ್ದೇ ಇಲ್ಲ. ಅಡ್ಗೆ ಮನೆ ಕೂಡ ಉಪಯೋಗ್ಸಿಲ್ಲ, ಆದಷ್ಟು ಒಂದೆರಡು ದಿನದ ಮಟ್ಟಿಗೆ ನಾವು ಉಪಯೋಗಿ ಸ್ಕೋಬಹುದಲ್ಲ" ಸೌಜನ್ಯದಿಂದ ಕೇಳಿದರು.

"ಉಪಯೋಗ್ಸಿ ಕೊಳ್ಳಿ" ಎಂದ ಯಾವುದೋ ಮೂಡ್‌ನಲ್ಲಿ.

ಅಪ್ಪಯ್ಯ ಶಾಸ್ತ್ರಿಗಳು ಸಮಾಧಾನದ ಉಸಿರು ಬಿಟ್ಟರು. ಈ ಹುಡುಗ ಏನೇನೋ ಮಾತಾಡಿ ಸರೋಜಳೊಂದಿಗೆ ಜಗಳ ಕಾಯುತ್ತಾನೋ ಎಂದು ಕೊಂಡಿದ್ದು ಸಧ್ಯಕ್ಕೆ ತಪ್ಪಿತ್ತು.

"ಊಟ, ತಿಂಡಿ ನಮ್ಮಲ್ಲೇ ಮಾಡ್ಬಹ್ದು" ಅಪ್ಪಯ್ಯ ಶಾಸ್ತ್ರಿಗಳ ಇನ್ನೊಂದು ಮಾತು ಹೇಳಿದರು. ಅವನ ಕಿವಿಗೆ ಬೀಳಲೇ ಇಲ್ಲ. ಅವನು ಅಂತರ್ ಮುಖಿ ಕೆಲವು ಸಂದರ್ಭ.

ನೆನಪುಗಳು ಬಾಧಿಸುತ್ತಿತ್ತು ಅವನನ್ನು. ಮೆಲ್ಲ ಮೆಲ್ಲಗೆ ಇಂಚು ಇಂಚಾಗಿ ಚಿತ್ತ ಕ್ಷೋಭೆಗೊಳಿಸುತ್ತಿತ್ತು. ಕಟುವಾದ ನಿರ್ಣಯಗಳನ್ನ ಪ್ರೋತ್ಸಾಹಿಸುತ್ತಿತ್ತು. ಧಿಕ್ಕರಿಸುತ್ತಿತ್ತು. ಕೆಲವೊಮ್ಮೆ ವಿಚಿತ್ರವಾದ ಘರ್ಷಣೆಯಲ್ಲಿ ಬೆಂದು ಹೋಗುತ್ತಿದ್ದ.

ಎಷ್ಟು ಹೊತ್ತಿಗೆ ಬಂದರೋ ಸರೋಜಮ್ಮ, ಶ್ರೀವಳ್ಳಿ, ಅರಿವಿಲ್ಲದವನಂತೆ ನಡುಮನೆಯಲ್ಲಿ ಬಿದ್ದುಕೊಂಡಿದ್ದ ಸಾಗರ್ ತೊಟ್ಟ ಬಟ್ಟೆಯಲ್ಲಿಯೇ.

"ಛಿ...." ಎಂದರು ಸರೋಜಮ್ಮ.

ಎಲ್ಲೋ ಇದ್ದವನನ್ನ 'ಛಿ' ಎನ್ನುವ ಪದ ಎಳೆತಂದಂತಾಯಿತು. ಎದ್ದು ಕೂತ ಮೆಲ್ಲಗೆ. ಸರೋಜಮ್ಮ ಉಯ್ಯಾಲೆಯ ಮೇಲೆ ಕೂತ ಅದು "ಜಿರ ಜಿರ" ಎನ್ನುವ ಸದ್ದಿನ ಜೊತೆ ಸ್ವಲ್ಪ ದೀರ್ಘವಾಗಿ ಜಿರಕ್ ಜಿರಕ್ ಎನ್ನುವುದಕ್ಕೆ ಷುರು ಮಾಡಿತು.

"ಯಾರು...ನೀವು ?" ಎಂದ ಹುಬ್ಬು ಗಂಟಿಕ್ಕಿ.

"ಎಷ್ಟು ಹಾಕಿದ್ದೀಯಾ ?" ವ್ಯಂಗ್ಯವಾಗಿ ಕೇಳಿದರು.

ಮೇಲೆದ್ದು ನಿಂತವನು ಕ್ರಾಪ್‌ನ ಬೆರಳುಗಳಿಂದ ಹಿಂದಕ್ಕೆ ತೀಡಿ ಉಯ್ಯಾಲೆಯ ಸರಪಣಿಯನ್ನಿಡಿದು ನಿಲ್ಲಿಸಿ ಕೆಕ್ಕರಿಸಿಕೊಂಡು ನೋಡಿದ.

"ಮೊದ್ಲು ಎದ್ದು ಬಾಗಿಲಿನಿಂದ ಹೋರ್ಗೆ ಹೋಗಿ ನಿಂತ್ಕೊಳ್ಳಿ. ಎಷ್ಟು

ಹಾಕಿದ್ದೀನಿ ಅನ್ನೋ ಬಗ್ಗೆ ನಿಧಾನವಾಗಿ ಡೀಟೈಲ್ ಕಲೆಕ್ಟ್ ಮಾಡ್ಕೋ ಬಹ್ದು. ಗೆಟ್ ಅಪ್...ಗೆಟ್ ಔಟ್..." ಅಬ್ಬರಿಸಿದ. ಆ ಏಟಿಗೆ ಎಗರಿ ಬಿದ್ದರು. ಮದುವೆಯಾದ ಮೇಲೆ ಮೊದಲ ಸಲ ಹೆದರಿಕೊಂಡಿದ್ದರು.

"ಏಯ್....ಏನಂದ್ಕೊಂಡೇ ?" ಆಕೆ ಧೈರ್ಯವನ್ನೆಲ್ಲ ಒಟ್ಟುಗೂಡಿಸಿ ಕೊಂಡು ಇಷ್ಟು ಹೇಳಲು ಸಮರ್ಥವಾದರು ಆಕೆ.

ಇನ್ನಷ್ಟು ಸನ್ನಿಹಕ್ಕೆ ಹೋದವನೆ "ಸುಮ್ನೆ ಎದ್ದು ಹೋಗ್ತೀಯೋ, ಇಲ್ಲ ಅನಾಮತ್ತಾಗಿ ಎತ್ತಿ ಹೊರ್ಗೆ ಎಸೆದು ಬಿಡ್ಲೋ ? ವರ್ಷಾನು ಗಟ್ಲೇ ಆಸ್ಪತ್ರೆಯಲ್ಲಿ ಮಲ್ಗಿರಬೇಕಾಗುತ್ತೆ" ದಬಾಯಿಸಿದ ಏಟಿಗೆ ತತ್ತರಿಸಿದರು ಆಕೆ. ಅವನ ರಭಸ ನೋಡಿದರೇ ಇನ್ನ ಒಂದೆರಡು ಕ್ಷಣದಲ್ಲಿ ಹೊರಗೆ ಬಿದ್ದು ಒದ್ದಾಡಬೇಕಾಗುತ್ತೆ ಎನ್ನಿಸಿದವರೇ, ಎದ್ದು ಹೊರಗೆ ಹೋದರು.

ಗೊಂಬೆಯಂತೆ ಗೋಡೆಯಂಚಿಗೆ ನಿಂತಿದ್ದ ಶ್ರೀವಳ್ಳಿಯತ್ತ ನೋಡಿದ. ಹೆದರಿದ ಹಕ್ಕಿಯಂತೆ ಕಂಡಳು. ಷರಟಿನ ಉದ್ದ ತೋಳುಗಳನ್ನ ಹಿಂದಕ್ಕೆ ಮಡಚುತ್ತ "ನಿಂಗೇನಾದ್ರೂ ಸ್ಪೆಷಲ್ಲಾಗಿ ಹೇಳ್ಬೇಕಾ ? ಬೇಗ ಜಾಗ ಖಾಲಿ ಮಾಡು" ಗುಟುರು ಹಾಕಿದ.

ಶ್ರೀವಳ್ಳಿ ನಿಧಾನವಾಗಿ ನಡೆದು ಹೊರಗೆ ಹೋದಳು.

ಚಿಕ್ಕಮ್ಮ ಮಗಳು ಬಿಳಿಗಿರಿಯವರ ಮನೆ ತಲುಪಿದಾಗ ಶಾಸ್ತ್ರಿಗಳು ಅಲ್ಲೇ ಇದ್ದರು. ಸರೋಜಮ್ಮ ನಖಶಿಖಾಂತ ಉರಿಯುತ್ತಿದ್ದರು. ಬ್ರಹ್ಮಾಂಡವಾದ ಉರಿ. ಆ ಜ್ವಾಲೆಗಳು ತಮ್ಮನ್ನ ಅಟ್ಟಿಸಿಕೊಂಡು ಬಂದಂ ತಾಯಿತು.

"ಏನೇ ಸರೋಜ, ಯಾಕೆ ಒಂದು ತರಹ ಇದ್ದೀಯಾ ?" ಎಂದು ಕೇಳಿದರಷ್ಟೆ. ಇಡೀ ಪ್ರಹರವನ್ನ ಒದರಿದರು "ಈಗ್ಲೇ, ಅವ್ನ ಹೊರ್ಗಡೆ ತಳ್ಳಿಸಿ. ಏನಂತ ತಿಳ್ಕೊಂಡಿದ್ದಾನೆ ? ಅಯೋಗ್ಯ... ಸೂಳೆಮಗ..." ಬಯ್ಯಲು ಷುರುಮಾಡಿದರು.

ಬಿಳಿಗಿರಿ ತಿರುಮಲಾಂಬ ಸಮಾಧಾನಿಸಿ ಸಾಕಾದರು.

"ನಿಮ್ಮಿಷ್ಟ, ನಿಮ್ಗೆ ಹೇಗೆ ಬೇಕೋ ಹಾಗೆ ಮಾಡ್ಕೊಳ್ಳಿ. ಅಡ್ವಾನ್ಸ್ ಕೊಟ್ಟಿದ್ದಾನೆ, ಅದ್ಬಿಟ್ಟು ಈ ತಿಂಗ್ಳ ಬಾಡ್ಗೇ ಹಣವನ್ನ ಮುಂಗಡವಾಗಿ ಕೊಟ್ಟಿದ್ದಾನೆ. ನೀವುಂಟು... ಅವರುಂಟು. ನಾವೇನು ಇದ್ರಿಂದ ಲಾಭ ಮಾಡಿಕೊಂಡಿಲ್ಲ. ಇಂದೋ, ನಾಳೆನೋ ಹೊರಟು ಹೋಗ್ತಾನೆ. ಆಗ ಅಡ್ವಾನ್ಸ್ ಹಣಕ್ಕಾಗಿ ನಿಮ್ಮ ಮನೆ ಬಾಗ್ಲಿಗೆ ಬರೋಂಥವನಲ್ಲ. ಅದೇನು ಬೇಕೋ ಮಾಡ್ಕೊಳ್ಳಿ" ಬಿಳಿಗಿರಿಯವರು ಚಪ್ಪಲಿ ಮೆಟ್ಟಿ ಹೊರಗೆ ಹೋದರು.

ಸಾಗರ್ ಸ್ವಲ್ಪ ಒರಟು ಇರಬಹುದು. ಅವಿಧೇಯತೆಯಿಂದ ನಡೆದು ಕೊಳ್ಳಬಹುದು. ಅದರ ಹಿಂದೆ ಯಾವ ಕಾರಣ ಇದೆಯೋ, ಅಂತು ಕೆಟ್ಟವನೆಂದು ಮಾತ್ರ ಒಪ್ಪಿಕೊಳ್ಳರು. ಯಾವ ಮಮಕಾರವೋ, ಇಲ್ಲ ಹಿಂದಿನ ಜನ್ಮದ ಬಂಧವೋ ಅವನು ಅವರಿಗೆ ಇಷ್ಟವಾಗಿದ್ದ.

ಆಮೇಲೆ ತಿರುಮಲಾಂಬ, ಅಪ್ಪಯ್ಯ ಶಾಸ್ತ್ರಿಗಳು ತಿಳಿ ಹೇಳಿದರು. ಆರ್ಭಟನೆ ಹಂತ ಹಂತವಾಗಿ ಕರಗಿ ಹೋಗಿ ಸರೋಜಮ್ಮ ಒಂದು ಹಂತಕ್ಕೆ ಬಂದು ನಿಂತರು.

"ಬೇಗ ಹೊರಟು ಹೋಗ್ತಾನೇ ತಾನೇ ?" ಮತ್ತೊಮ್ಮೆ ಕೇಳಿದರು.

ತಿರುಮಲಾಂಬ ಮುಖ ಸಪ್ಪಗಾಯಿತು. ಸಧ್ಯದ ಸ್ಥಿತಿಯಲ್ಲಿ ಆಕೆಯನ್ನ ಸುಮ್ಮನಾಗಿಸದಿದ್ದರೇ ಹಗರಣವೆಂದು ಗೊತ್ತು. ಸಾಗರ್ ಬಗ್ಗೆ ಏನು ಹೇಳಲಾಗದು. ಈ ಕ್ಷಣದಲ್ಲಿ ಬೇಕಾದರೂ ಅವನು ಹೊರಟು ಹೋಗಬಹುದು.

"ಖಂಡಿತ ಹೋಗ್ತಾನೆ. ಅವ್ನು ಈಗಾಗ್ಲೇ ಹೊರಟಿದ್ದ. ಸಾಗರ್ ತುಂಬ ಒಳ್ಳೆ ಹುಡುಗನೇ. ಬೆಳವಣಿಗೆಯಲ್ಲಿ ಏನೋ ಲೋಪವಾಗಿದೆ. ನೀವು ನಮ್ಮನೆಯಲ್ಲೇ ಎರ್ಡು ದಿನ ಉಳ್ದುಕೊಳ್ಳಿ" ಸಮಾಧಾನಿಸಿದರು.

ಸರೋಜಮ್ಮನದು ವಿಪರೀತದ ಸ್ವಾಭಿಮಾನ. ಈಚೆಗೆ ಅಂಗಡಿಯಲ್ಲಿ ಸಾವಿರದವರೆಗೂ ವ್ಯಾಪಾರವಾಗುತ್ತಿತ್ತು. ಅಂಥದ್ದರಲ್ಲಿ ಇಲ್ಲಿದ್ದು ಮಾಡೋದೇನಿದೆ, ಅಪ್ಪ ಮಗಳೇ ಹೋಗಿ ಪೂಜೆ ಮಾಡ್ಸಿಕೊಂಡು ಬರಲಿ ಅಂತ ಹೊರಟು ಬಿಡಲು ತೀರ್ಮಾನಿಸಿದರು.

"ಹೇಗೂ, ಬಿಟ್ಟು ಹೋಗ್ತಾನಲ್ಲ...ಆಮೇಲೆ ಬಂದು ನಾಲ್ಕು ದಿನ ಇದ್ದು ಹೋಗ್ತೀನಿ. ಮಕ್ಳನ ಹದ್ದು ಬಸ್ತಿನಲ್ಲಿ ಇಟ್ಕೊಂಡ್ ಬೆಳೆಸ್ಬೇಕು. ಇಲ್ಲದಿದ್ರೆ...ಪುಂಡು, ಪೋಕರಿಗಳಂತೆ ತಯಾರಾಗ್ತಾರೆ" ಸಾಗರ್‌ನ ಉದ್ದೇಶ ಪೂರ್ವಕವಾಗಿ ಅಂದರು.

"ಹೋಗ್ಲಿ ಬಿಡಿ, ಬೇರೆಯವ್ರ ಸುದ್ದಿ ನಮಗ್ಯಾಕೆ ? ಬಾಡ್ಗೆ ಅಡ್ವಾನ್ಸ್ ಕೊಡ್ತೀನಿ ಅಂದಿದಕ್ಕೆ ಅವ್ರು ನಿಮ್ಮವರ್ಗೂ ಕರ್ಕೊಂಡ್ ಬಂದ್ರು" ಎಂದು, ಇದರಲ್ಲಿ ತಮ್ಮ ಸ್ವಾರ್ಥವೇನಿಲ್ಲವೆಂದು ಸ್ಪಷ್ಟಪಡಿಸಿದರು.

ಇನ್ನ ಹೆಚ್ಚು ಮಾತು ಬೇಡವೆಂದು ಹಿಂದಿನ ದಿನ ಮಾಡಿದ್ದ ಅವಲಕ್ಕಿ ಪೂರಿಯ ಉಂಡೆ, ಶೇಂಗಾ, ಒಣ ಕೊಬ್ಬರಿಯ ಚೂರು, ಹುರಿಗಡಲೆ, ಎಳ್ಳನ್ನ ಬೆಲ್ಲದ ಪಾಕದಲ್ಲಿ ಹಾಕಿ ತಯಾರಿಸಿದ ಉಂಡೆಗಳನ್ನ ತಟ್ಟೆಯಲ್ಲಿ ಇಟ್ಟುಕೊಂಡು ಬಂದು ಕೊಟ್ಟರು.

"ಒಂದಿಷ್ಟು ಬಾಯಿಗೆ ಹಾಕ್ಕೊಳ್ಳಿ. ವಳ್ಳಿಗೆ ಯಾವುದಾದ್ರೂ ಸಂಬಂಧಗಳು ಬಂದ್ವಾ ?" ಮಾತನ್ನ ಬೇರೆಡೆಗೆ ಒಯ್ದರು ತಿರುಮಲಾಂಬ. ಆ ಮುದ್ದಾದ ಮುಗ್ಧಳಾದ ಹುಡುಗಿಯನ್ನ ಕಂಡರೇ ಆಕೆಗೆ ವಿಪರೀತ ಅಂತಃ ಕರಣ.

ಆ ಪ್ರಶ್ನೆ ಸರೋಜಮ್ಮನಿಗೆ ಹಿತವಾಗಲಿಲ್ಲವೆಂದು ಆಕೆಯ ಮುಖ ವ್ಯಕ್ತಪಡಿಸಿತು. ಮೂರು ಮಕ್ಕಳ ತಾಯಿಯೇ. ಆದರೆ ಅವರೆಲ್ಲ ಇದ್ದಿದ್ದು ಅಜ್ಜಿಯ ಮನೆಯಲ್ಲಿ. ಬರುತ್ತಿದ್ದುದ್ದು ಅಪರೂಪವೆ. ಅವರ ಬೆಳವಣಿಗೆಗೆ ಇಲ್ಲಿಂದ ಸಾಕಷ್ಟು ಸಾಗಾಕುತ್ತಿದ್ದಳು. ಆಕೆಯ ಕೈ ತಡೆಯೋ ಶಕ್ತಿ ಅಪ್ಪಯ್ಯ ಶಾಸ್ತ್ರಿಗಳಿಗೆ ಇದ್ದೀತಾ ? ಖಂಡಿತ...ಇಲ್ಲ.

"ನಮ್ಗೂ ನೋಡಿ...ನೋಡಿ ಸಾಕಾಯ್ತು. ಜಾತ್ಕ ಕೂಡ ಅಂಥ ಪ್ರಶಸ್ತವಾದಲ್ಲಿ. ಈಗಂತು ಪೂರ್ತಿ ಮಾತು ನಿಂತೋಯ್ತು. ಗಂಟಲು ಆಪರೇಷನ್ ವಿದೇಶದಲ್ಲಿ ಮಾಡಿಸಿದ್ದರೇ ಸರಿ ಹೋಗ್ಬಹ್ದು...ಅಂದರು ಡಾಕ್ಟು. ಅದು ಪೂರ್ತಿ ಗ್ಯಾರಂಟಿ ಇಲ್ಲಾಂದ್ರು. ಅವ್ರು ಬೇಡವೇ ಬೇಡಾಂತಾಳೆ. ನಮ್ಗೆ ಇರೋ ಆಸ್ತಿನೆಲ್ಲ ಮಾರಿದ್ರೂ ಪ್ಲೇನ್ ಟಿಕೆಟ್‌ಗೆ ಸರಿ ಹೋಗುತ್ತೇನೋ ! ಮುಂದಿನ ಖರ್ಚಿಗೆ ಯಾರು ಕೊಡ್ತಾರೆ. ಬಂದ ವರಗಳೆಲ್ಲ ಕೈಯಾಡ್ಸಿ ಬಿಟ್ಟರು" ಪೂರ್ತಿ ಡೀಟೈಲ್ ಕೊಟ್ಟರು. ಮತ್ತೆ ಮತ್ತೆ ಪ್ರಶ್ನೆಗಳು ಉದ್ಭವವಾಗಿ ಆಕೆಯ ಮುಂದೆ ಬಂದು ನಿಲ್ಲಬಾರದಲ್ಲ.

ತಿರುಮಲಾಂಬ ಸುಮ್ಮನಾದರು. ದಂತದ ಗೊಂಬೆಯಂಥ ಹುಡುಗಿ ಶ್ರೀವಳ್ಳಿ. ಮಾರುದ್ದ ಜಡೆಯ ಅವಳು ಸರಿಗೆಯ ಲಂಗ ತೊಟ್ಟು ಅದರ ಮೇಲೆ ಧಾವಣಿ ಹೊದ್ದು ಬಂದಳೆಂದರೇ, ಬೆಳಕು ಚೆಲ್ಲಿದಂತಿರುತ್ತಿತ್ತು. ಎಂಥ ಕಂಠ ! ಸೊಗಸಾಗಿ ಹಾಡುತ್ತಿದ್ದಳು. ನವಿರಾಗಿ ಮಾತಾಡುತ್ತಿದ್ದಳು. ಅಂಥ ಹುಡುಗಿ ಮೂಕಳಾದುದ್ದು ಹೇಗೆ ? ಈ ಪ್ರಶ್ನೆಗೆ ಯಾರು ಉತ್ತರಿಸ ಬೇಕು ?

ತಂದಿಟ್ಟ ಉಂಡೆಗಳೆಲ್ಲ ತಿಂದರು. ನಾಲಿಗೆ ಚುರುಕಿನಿಂದ ಹಲ್ಲುಗಳು ಗಟ್ಟಿಯಾಗಿದ್ದವು. ಆಕೆ ಊರಿಗೆ ಹಿಂದಿರುಗೋದಂತು ಗ್ಯಾರಂಟಿ. ಶ್ರೀವಳ್ಳಿನ ಒಂದೆರಡು ದಿನ ನಿಲ್ಲಿಸಿಕೊಳ್ಳಬೇಕೆನಿಸಿತು.

ಆ ಸಮಯಕ್ಕೆ ಶ್ರೀವಳ್ಳಿಯೊಂದಿಗೆ ಗೌರಿನು ಬಂದಳು. ದಂಡೆಯಂತೆ ಕಟ್ಟಿದ್ದ ಒಂದೆರಡು ಮಾರು ಹೂವನ್ನ ಆಕೆಯ ಮುಂದಿಟ್ಟಳು. 'ಚೆನ್ನಾಗಿದ್ದೀರಾ ?' ಎನ್ನುವಂತೆ ಕೇಳಲು ಬಾಯಿ ತೆರೆಯಲು ಹೋದವಳು ಸುಮ್ಮನಾಗಿದ್ದಕ್ಕೆ ಒಂದು ಕಾರಣವಿತ್ತು. ಇವಳ ಉಗ್ಗುವಿಕೆಯನ್ನ ಅಸಹ್ಯಿಸಿ ಕೊಳ್ಳುವುದರ ಜೊತೆಗೆ 'ಸಾಕಮ್ಮ ಸಾಕು. ಸ್ವರ ತೆಗ್ದು ಕರ್ಕಶವಾಗಿ ಮಾತಾಡೋ ಬದ್ಲು ಸನ್ನೆಯಿಂದಲೇ

ಹೇಳು. ಕೇಳೋಕ್ಕಿಂತ ನೋಡಿ ಅರ್ಥ ಮಾಡಿಕೊಳ್ಳೋದೇ... ವಾಸಿ' ಹತ್ತಾರು ಸಲ ಮಾಡಿದ ಉಪದೇಶ ಜಾರಿಗೆ ಬಂದಿತ್ತು.

"ಚೆನ್ನಾಗಿದ್ದಿಯೇನೇ ? ಎಲ್ಹೋದ, ಕಲ್ಲೇಶಿ ? ಅವ್ನು ಕೂಡ ಅವನ ಪ್ಪನ ಹಾದಿನೆ ಹಿಡೀತಾನೆ. ಈಗ್ಲೂ ಬಂಡೆಗಳ ನಡ್ವೇ ಓಡಾಡೋದು ಬಿಟ್ಟಿಲ್ವಾ ?" ಪಟ ಪಟ ಉದುರಿಸಿದರು ಅಣಿ ಮುತ್ತುಗಳನ್ನ. ಕಟುವಾಗಿ ಮಾತಾಡುವ ಅಭ್ಯಾಸ ಆಕೆಯದು.

ಉತ್ಸಾಹದಿಂದ ಬಂದ ಗೌರಿ ಹೆದರಿದ ಗುಬ್ಬಚ್ಚಿಯಾದಳು. ಸದಾ ಇಂಥ ಭಯದಿಂದ ನರಳುತ್ತಿದ್ದ ಅವಳ ಮೇಲೆ ಎಸೆದಿದ್ದು ಸಿಡಿಯುವ ಬಾಂಬನ್ನ.

"ತೆಪ್ಪಗೆ ಇರೋದಿಕ್ಹೇಳು. ಇಲ್ಲದಿದ್ದರೇ...ಬಂಡೆಗಳ ಸಂದಿಯಲ್ಲಿ ಹೆಣವಾಗಿ ಹೋಗ್ತಾನೆ" ಎಂದ ಸರೋಜಮ್ಮ ಮೇಲೆದ್ದರು. "ಎಲ್ಲಿ ನಿಮ್ಮಪ್ಪ? ಮುಂದಿನ ತಿಂಗ್ಳು ಬಂದು ಪೂಜೆ ಮುಗ್ಸಿಕೊಂಡ್ಹೋಗ್ಬಹುದ್ದು. ಸಂಜೆ ಬಸ್ಸಿಗೆ ಹೊರಡೋಣಾಂತ ಹೇಳು. ನಾನು ಕಾಕಿ ಮನೆಗೆ ಹೋಗ್ಬಂದ್ಬಿಡ್ತೀನಿ" ಆಕೆ ಹೊಸಲು ದಾಟಿದರು.

ತಿರುಮಲಾಂಬ ಆಕೆ ಹೋದ ಕಡೆಗೆ ನೋಡಿ ನಿಟ್ಟುಸಿರು ದಬ್ಬಿದ್ದು ಪ್ರಯಾಸದಿಂದಲೇ. "ದೇವರು, ಜಗತ್ತನ್ನ ಸೃಷ್ಟಿಸಿದಾಗ ಮಾನವ ವರ್ಗಕ್ಕೆ ಮಾತ್ರ ಮಾತು, ಮಿದುಳು ಕೊಟ್ಟ. ಅದ್ರ ಸರ್ರ್ಯಾದ ಉಪಯೋಗ ಎಲ್ಲಿ ಆಗ್ತಾ ಇದೆ ? ಎರ್ಡು ಒಳ್ಳೇ ಮಾತು ಆಡಿದ್ರೆ... ಏನು ? ಯಾರ ಸಾವು ಎಂದೋ, ಯಾರು ಕಂಡಿದ್ದಾರೆ ? ಶ್ರೀವಳ್ಳಿ ಯಾಕೆ ಮೂಗಿಯಾದುದ್ದೂಂತ ಈಗ ಗೊತ್ತಾಗ್ತಾ ಇದೆ. ಇದೇ ಮಾತುಗಳ್ನ ಕೇಳ್ತಾ ಇದ್ದರೇ...." ಮುಂದಿನ ಮಾತನ್ನ ತುಟಿಗಳ ನಡುವೆ ಬಂಧಿಸಿಟ್ಟರು.

ಹತ್ತಿರಕ್ಕೆ ಶ್ರೀವಳ್ಳಿಯನ್ನ ಕರೆದು ತಲೆ ಸವರಿದರು ಕರುಣೆಯಿಂದ "ನೀನು ಇಲ್ಲೇ ಇದ್ದು ಪೂಜೆ ಮುಗ್ಸಿಕೊಂಡ್ಹೋಗು. ನಾವು ಕೂಡ ಶ್ರೀವಳ್ಳಿ ಜಲಪಾತಕ್ಕೆ ಹೋಗಿ ಒಂದೆರಡ್ವರ್ಷ ಆಗಿ ಹೋಯ್ತು."

ಗೌರಿ ಕೂಡ ಆ ಮಾತಿಗೆ ಸಂತೋಷದಿಂದ ಶ್ರೀವಳ್ಳಿಯ ಕೈ ಹಿಡಿದು ಕೊಂಡು ಇರುವಂತೆ ಕಣ್ಣಲ್ಲಿಯೇ ಒತ್ತಾಯ ಮಾಡಿದಳು. ಅವಳು ನಿಸ್ಸಹಾಯಕಿ. ಸ್ವಂತ ಯೋಚನೆಗಳಾಗಲಿ, ತನ್ನದೇ ಆದ ಆಕಾಂಕ್ಷೆಗಳಾಗ್ಲಿ ಅವಳಿಗೆ ಇಲ್ಲ ! ಬಹುಶಃ ಅವು ಭೂಗತವಾಗಿ ಹೋಗಿರಬೇಕು.

ಬಂದ ಸಾಗರ್ ಅಲ್ಲೇ ನಿಂತು ಎರಡು ಕೈಗಳನ್ನ ಬೆಸೆದು ತಲೆಯ ಮೇಲಿಟ್ಟುಕೊಂಡ "ಇರೋದೆಲ್ಲ ಮೂಕರ ದಂಡು." ಹಿಂದಿರುಗಲು ಹೊರಟ ಅವನನ್ನ ತಿರುಮಲಾಂಬ ದನಿ ಹಿಡಿದು ನಿಲ್ಲಿಸಿತು "ಒಂದಿಷ್ಟು ಮಾತಾಡೋದಿದೆ."

ಅವನು ಹಿಂದಕ್ಕೆ ಬಂದಾಗ ಗೌರಿ, ಶ್ರೀವಳ್ಳಿ ಹೊರಗೆ ಹೋದರು.

"ಸಾಗರ್, ಸರೋಜಮ್ಮನ ಮೇಲೆ ಯಾಕೆ ರೋಪ್ ಹಾಕ್ದೇ ? ಆಕೆ ಮನೆ ಯಜಮಾನಿ. ಮನೆ ಅವ್ರ ಸ್ವಂತದ್ದು. ನೀನು ಅಷ್ಟನ್ನಾದ್ರೂ ಅರ್ಥ ಮಾಡ್ಕೋಬೇಕಿತ್ತು" ನವಿರಾಗಿ ಚಿತ್ರ ಬಿಡಿಸಿಟ್ಟರು.

"ಯಜಮಾನಿ.... ಸ್ವಂತದ್ದು ಅಂದರೇನು ?" ಪ್ರಶ್ನೆ ಎಸೆದ.

ತಿರುಮಲಾಂಬಗೆ ನಗು ಬಂತು. ಇವನು ಬರೀ ಒರಟಾಗಿ ಮಾತ್ರ ಮಾತಾಡೋಲ್ಲ, ಸಾಕಷ್ಟು ಕೀಟಲೆ ಕೂಡ ಮಾಡ್ತಾನೆ ಅಂದುಕೊಂಡರು.

"ನೀನು ಇರೋ ಮನೆ ಅವ್ರ ಸ್ವಂತದ್ದು."

"ನಿಮ್ಮ ಮಾತು ನಂಗೇನು ಅರ್ಥವಾಗ್ಲಿಲ್ಲ, ಒಂದಿಷ್ಟು ಬಿಡ್ಸಿ ಹೇಳಿ. ಈಗ ಇಪ್ಪತ್ತು ವರ್ಷದ ಹಿಂದೆ ಮನೆ ಯಾರದಾಗಿತ್ತು ?" ಯಕ್ಷ ಪ್ರಶ್ನೆಯೆನಿಸಿದರೂ, ಸುಲಭವಾಗಿ ಹೇಳಿದರು "ಆಗ ಪೂರಾ ಅಪ್ಪಯ್ಯ ಶಾಸ್ತ್ರಿಗಳೇ ಯಜಮಾನರು. ವಳ್ಳಿಯ ಅಮ್ಮ ಬದ್ಕಿದ್ರು" ನೋಡಿದ ನೆನಪುಂಟು ಆಕೆಗೆ.

"ಅದ್ಕೆ ಇಪ್ಪತ್ತು ವರ್ಷಗಳ ಹಿಂದೆ" ಮತ್ತೆ ಕೀಟಲೆಯ ಪ್ರಶ್ನೆ ಅವನದು. "ಸಾಕಪ್ಪ ಸಾಗರ್, ಆಗ ಶಾಸ್ತ್ರಿಗಳ ತಂದೆ ಇದ್ರೂಂತ ಕಾಣುತ್ತೆ. ಅವ್ರೆ ಯಜಮಾನರು. ಅದ್ಕೇ ಇಪ್ಪತ್ತು ವರ್ಷದ ವಿಚಾರ ನನ್ನ ಕೇಳ್ಬೇಡ" ನಗೆ ಚೆಲ್ಲಿದರು ತಿರುಮಲಾಂಬ.

"ಹಿಂದಿನದು ಬೇಡ, ಮುಂದಿನ ಹತ್ತು ವರ್ಷದ ನಂತರ ಈ ಮನೆ ಯಾರ್ದು?" ಅವನ ಪ್ರಶ್ನೆಗೆ ಆಕೆ ಸುಮ್ಮನೆ ಕೂತರು "ನಂಗೆ ಗೊತ್ತಿಲ್ಲ. ಮುಂದಿನದು ಯಾರ್ಗೆ ಗೊತ್ತು. ಭೂತಕಾಲದಾದ್ರೂ ಹೇಳ್ಬಹುದು. ಭವಿಷ್ಯ ಕಾಲದಲ್ಲಿ ಹೀಗೇ ನಡೆಯುತ್ತೆ ಅಂತ ಹೇಗೆ...ಹೇಳ್ಲಿ ?" ಆಕೆ ಕೈ ಚೆಲ್ಲಿದರು.

"ಈಗ ಸಧ್ಯಕ್ಕೆ ನಾನೇ ಯಜಮಾನ !" ಎಂದ ದೃಢವಾಗಿ.

ಆಕೆ ತಲೆಯೆತ್ತಿ ಸಾಗರ್‌ನತ್ತ ನೋಡಿದಳು. ಸರೋಜಮ್ಮನ ಬಂಧು ಬಳಗದವರು ಒಂದಿಷ್ಟು ಅನಾಗರೀಕರು. ಮಾತಿಗಿಂತ ಬಡಿಗೆ ಹಿಡಿದು ಬರೋ ಜನನೇ ಜಾಸ್ತಿ. ಈ ಒಂಟಿ ಹುಡುಗ ಅವರುಗಳ ಕೈಗೆ ಸಿಕ್ಕಿ ಘಾಸಿಗೊಳ್ಳುವುದು ಬೇಡವೆನಿಸಿತು.

"ನೀನು ಎಂದೂ ಹೋಗ್ತೀಯಾ ?" ಕೇಳಿದರು. ದನಿ ಸೊರಗಿತ್ತು. "ಸಧ್ಯಕ್ಕೆ ಆ ಯೋಚ್ನೆ ಇಲ್ಲ" ಎಂದಾಗ ಮಾತ್ರ ಬೆಚ್ಚಿ ಬಿದ್ದರು. ಡೋಲಾಯ ಮಾನ ಮನಸ್ಥಿತಿಯ ಹುಡುಗನೆಂದುಕೊಂಡರು. ಹೆಚ್ಚು ಮಾತು ಬೆಳೆಸಿದರೇ ಅವನು ಇನ್ನಷ್ಟು ಗಟ್ಟಿಯಾಗುತ್ತಾನೆಂದು ಸುಮ್ಮನಾದರು.

ಹೊರಟ ಸಾಗರ್‌ನ ಕೂಗಿ "ನಿಂಗೆ ಮನೆ ಕೊಡ್ಸಿದ್ದಕ್ಕೆ ನಾವುಗಳ್ ತಪ್ಪಿತಸ್ಥರಾಗೋದ್ಬೇಡ. ಅಷ್ಟು ದೊಡ್ಡ ಮನೆ. ಶ್ರೀವಳ್ಳಿ ಜಲಪಾತಕ್ಕೆ ಹೋಗಿ ಬರೋ ಸಲುವಾಗಿ ಬಂದಿದ್ದಾರೆ. ಅವ್ರುಗಳು ಇರೋಕೆ ತಕರಾರು ತೆಗೀಬೇಡ. ಆಕೆಯ ಬಾಯಿ ಸ್ವಲ್ಪ ಉದ್ದ. ಶಾಸ್ತ್ರಿಗಳು, ಶ್ರೀವಳ್ಳಿ ಒಳ್ಳೆ ಜನ. ನಿಂಗೇನು ತೊಂದರೆ ಆಗೋಲ್ಲ" ಬುದ್ಧಿ ಹೇಳಿದರು.

ಅಂತು ಇಂತು ಅವನನ್ನ ಒಪ್ಪಿಸಿದರು. ಯಾವ ಭಯಕ್ಕೂ ಜಗ್ಗಲಾರ ನೆಂದು ಇಂದು ಸ್ಪಷ್ಟವಾಗಿ ತಿಳಿದುಕೊಂಡರು ತಿರುಮಲಾಂಬ. ಆ ವಿಷಯನ ಸರೋಜಮ್ಮ, ಶಾಸ್ತ್ರಿಗಳ ಕಿವಿಯ ಮೇಲೆ ಹಾಕಿದರು.

"ಇಲ್ಲಿ, ನಾನಂತು ಹೊರಟು ನಿಂತಿದ್ದೀನಿ. ಅವ್ನ ಮುಲಾಜು ನಮಗ್ಯಾಕೆ. ಹೇಗೋ, ಇಂದೋ...ನಾಳೆಯೋ ಬಿಟ್ಟು ಹೋಗ್ತಾನಲ್ಲ... ಆಗ ಬಂದರಾಯ್ತು. ಯಾವ ಕಡೆಯೋನು ?" ತಿರುಮಲಾಂಬನ ಕೇಳಿದರು ಸರೋಜಮ್ಮ.

ಆಕೆ ಎಚ್ಚರಿಕೆವಹಿಸಿದರು. ಪತಿ ಮನೆ ಬಾಡಿಗೆ ಮಾತಾಡುವಾಗ ಏನು ಹೇಳಿದ್ದರೋ ಅವರಿಗೆ ಗೊತ್ತಿಲ್ಲ. ಈಗ ಏನಾದರೂ ಹೇಳಿ ಇಕ್ಕಟ್ಟಿಗೆ ಸಿಕ್ಕಿ ಹಾಕಿಕೊಳ್ಳುವುದು ಬೇಡವಾಗಿತ್ತು.

"ನಿಮ್ಗೇಂತ ಉಪ್ಪಿನಕಾಯಿ ತೆಗೆದಿಟ್ಟೆ. ನೀವುಗಳು ಹೊರಟ್ಮೇಲೆ ಜ್ಞಾಪಕಕ್ಕೆ ಬರುತ್ತೆ" ಎಂದು ತಿರುಮಲಾಂಬ ಅದನ್ನು ತರಲು ಅಡಿಗೆಯ ಮನೆಗೆ ಹೋದರು. 'ದುಷ್ಟ ಹೆಂಗ್ಸು, ಇವ್ಳ ಅತಿಯಾದ ನಾಲಿಗೆಯಿಂದ ಆ ಮಗು ದನಿ ಇಂಗಿ ಹೋಯ್ತು' ಮನದಲ್ಲಿ ಬಯ್ದುಕೊಂಡರು.

ಒಂದು ಸಣ್ಣ ಜಾಡಿಯ ಉಪ್ಪಿನಕಾಯಿ ಕೈ ಸೇರಿದ ಮೇಲೆ ಸರೋಜಮ್ಮ ಒಂದಿಷ್ಟು ಸಂತುಷ್ಟರಾಗಿದ್ದು. ಅಪ್ಪಯ್ಯ ಶಾಸ್ತ್ರಿಗಳಿಗೆ ಹೋಗುವ ಮನಸ್ಸಿಲ್ಲ.

"ಸರೋಜ, ಐತಾಳ ತೋಟದಲ್ಲಿ ಇಂದೋ ನಾಳೆಯೋ ಬಾಳೆಗೊನೆಗಳ್ನ ಕೀಳಿಸ್ತಾರೆ. ಈಗ ಒಳ್ಳೆ ಬೆಲೆ ಇದೆ. ಇನ್ನಷ್ಟು ಹೆಚ್ಚು ಬೆಲೆ ಬಂದರೇ ಬೇರೆಯವ್ರಿಗೆ ಮಾರಿ ಬಿಡ್ಬಹುದ್ದು. ನಾನು ಇದ್ದು ಕೀಳಿಸಿಕೊಂಡು ಜೊತೆಯಲ್ಲೇ ತರ್ತೀನಿ" ಎಂದರು ಹೆಂಡತಿಗೆ.

ಆಕೆಗೂ ಅದು ಸರಿಯೆನಿಸಿತ್ತು. ಹಣದ ಬೆಲೆ ಗೊತ್ತಿತ್ತು. ಆಕೆಗೆ ಕುಂದಣದಲ್ಲಿ ಹೊಸ ನಮೂನೆಯ ಇಪ್ಪತ್ತೈದು ಚದುರದ ಮನೆ ಕಟ್ಟಿ ಈಗ ಇರೋ ಜಮೀನಿನ ಜೊತೆ ಇಪ್ಪತ್ತು ಎಕರೆ ತೋಟ ಮಾಡೋ ಆಸೆ. ಅದಕ್ಕಾಗಿ ಹಣ ಕೂಡಿಡುತ್ತಿದ್ದಳು.

"ಹಾಗೇ ಮಾಡಿ, ಒಂದು ಗೊನೆನು ಮಾರಿ ಹೋಗೋಕೆ ಬಿಡ್ಬೇಡಿ. ನಾನು

ಶ್ರೀವಳ್ಳಿನ ಕರ್ಕೊಂಡ್ಹೋಗ್ತೀನಿ" ಆಕೆ ಉಪ್ಪಿನಕಾಯಿ ಜಾಡಿಯನ್ನ ಚೀಲಕ್ಕೆ ಸೇರಿಸಿ ಹೊರಟು ನಿಂತರು.

"ಎರ್ಡು ದಿನ ವಳ್ಳಿ ಇಲ್ಲೇ ಇರ್ಲಿ" ತಿರುಮಲಾಂಬ ಹೇಳಿದರು.

"ಅಲ್ಲಿ ಮಾಡೋರು, ಯಾರಿದ್ದಾರೆ? ನಂಗೆ ಇಡೀ ದಿನ ಅಂಗ್ಡಿ ಸರಿ ಹೋಗುತ್ತೆ" ನಿರಾಕರಿಸಿದರು. ತಕ್ಷಣ ನೆನಪು ಮಾಡಿಕೊಂಡು "ಆಯ್ತು, ಹೇಗೂ ವಿಳೆದೆಲೆ ಕೇಳಿಸೋದಿದೆ. ನಿಂತು ಆ ಕೆಲ್ಸ ಮಾಡಿಸ್ಲಿ" ಒಪ್ಪಿಗೆ ಸೂಚಿಸಿದ್ದು ಪುಣ್ಯ.

ಹತ್ತು ಊರಿಗೇನೇ ಇವರ ವಿಳೆಯದೆಲೆ ತೋಟದಲ್ಲಿ ಹೆಚ್ಚು ಎಲೆ ಸಿಗುತ್ತಿತ್ತು. ಬಿಳಿಯಾದ ಬಾದಾಮಿ ಆಕಾರದ ಎಲೆಗೆ ವಿಪರೀತ ಬೇಡಿಕೆ. ಒಂದು ಸಂಸಾರವೆ ಇತ್ತು ತೋಟವನ್ನು ಕಾಯಲು.

ಅಂತು ಶಾಸ್ತ್ರಿಗಳು, ಶ್ರೀವಳ್ಳಿ ಕೂಡಿಯೇ ಹೋಗಿ ಆಕೆಯನ್ನ ಬಸ್ಸಿಗೆ ಹತ್ತಿಸಿ ಬಂದಿದ್ದು. ಬರುವಾಗ ಜೊತೆಯಾದ ಗೌರಿ ತನ್ನ ಮನೆಗೆ ಕರೆದೊಯ್ದಳು. ಪಂಜರದಲ್ಲಿ ಕೂಡಿ ಹಾಕಿದ ಪಕ್ಷಿಯನ್ನ ಹಾರಲು ಬಿಟ್ಟಾಗಿನ ಸ್ಥಿತಿ ಶಾಸ್ತ್ರಿಗಳ ಮಗಳದು. ತಲೆ ಎತ್ತಿ ಮೇಲಕ್ಕೆ ನೋಡಿದಳು. ಸ್ವಚ್ಛಂದವಾಗಿ ಹಾರಾಡುವ ಹಕ್ಕಿಗಳು ಮಧ್ಯೆ ತಾನೊಂದು ಹಕ್ಕಿಯಾಗಿ ಹೋದರೇ ಅದು ಅವಳ ಪಾಲಿಗೆ ಬಹಳ ಸಂತೋಷದ ವಿಷಯ. ಸಾಧ್ಯವೇ ?

ತನ್ನದೇ ಆದ ಸನ್ನೆಯಲ್ಲಿ ಮಳೆ ಹೊಳೆ ಪ್ರವಾಹವಾಗಿ ಬಂದು ಇಡೀ ಮನೆ ಕೊಚ್ಚಿ ಹೋಗಿ ತಾವು ತಿರುಮಲಾಂಬ ಅವರ ಮನೆಯಲ್ಲಿ ಆಶ್ರಯ ಪಡೆದಿದ್ದು, ನಂತರ ಸಾಗರ್ ನಿಂತು ತಾನೇ ಮನೆ ಕಟ್ಟಿಕೊಟ್ಟಿದ್ದು ಎಲ್ಲಾ ಹೇಳುತ್ತ ಅತ್ತಳು.

ಶ್ರೀವಳ್ಳಿಯ ಕಣ್ಣು ಕಿರಿದಾದವು. ಅವಳ ಭುಜದ ಮೇಲೆ ಕೈ ಇಟ್ಟು ಕುತೂಹಲದಿಂದ 'ಯಾರು ?' ಎನ್ನುವಂತೆ ಪ್ರಶ್ನಿಸಿದಳು.

"ಸಾ....ಗ...ರ್" ಎಂದವಳೇ ಬಾಯಿ ಮುಚ್ಚಿಕೊಂಡು ಗೌರಿ ಗೋಳೋ ಎಂದು ಅತ್ತಳು. ಅದು ಕೃತಜ್ಞತೆಯ ಕಣ್ಣೀರು. ಅವಳಿಗೆ ಮತ್ತಷ್ಟು ಕುತೂಹಲ. ಮುಲಾಜಿಲ್ಲದೆ ಹೊರಗೆ ದಬ್ಬಿದ ಬಾಡಿಗೆದಾರ 'ಸಾಗರ್.' ಅಂದು ಅಕ್ಕರೆಯಿಂದ ರಂಗೋಲಿಗಳನ್ನ ನೋಡಿದ ಸಾಗರ್‌ನ ಸ್ವಭಾವ ಒಂದು ಅಳತೆಗೆ ಸಿಕ್ಕಂತಾಯಿತು.

ಹೊರಗೆ ಬೆಳೆದ ಹಾಗಲಕಾಯಿ, ಪಡವಳಕಾಯಿ ಬಳ್ಳಿಗಳನ್ನ ಕುತೂಹಲದಿಂದ ನೋಡಿದಳು ಶ್ರೀವಳ್ಳಿ. ಇಲ್ಲಿಂದ ಹೋದ ಮೇಲೆ ಕುಂದಣದ ಮನೆಯಲ್ಲಿ ಅವಳು ಬಂಧಿ. ಬೆಳಗಿನ ಜಾವ ನಾಲ್ಕಕ್ಕೆ ಎದ್ದರೆ ರಾತ್ರಿಯ ವರೆಗೂ ಅವಳಿಗೆ ಕೆಲಸ ಇರುತ್ತಿತ್ತು. ಅಂಗಡಿಯಲ್ಲಿ ಮಾರಲು ಬೆಲ್ಲದ ಕಡ್ಡಿ, ಮಿಠಾಯಿಗಳನ್ನ

ಮನೆಯಲ್ಲಿ ತಯಾರಿಸಿ ನಾಜೂಕಾಗಿ ಅಲ್ಯುಮಿನಿಯಂನ ದೊಡ್ಡ ದೊಡ್ಡ ತಟ್ಟೆಗಳಲ್ಲಿ ಅಂಗಡಿಗೆ ಕಳುಹಿಸಬೇಕು.

ಇದೊಂದು ಮಾತ್ರವಲ್ಲ, ಹಲವು ಬಗೆಯ ಉಪ್ಪಿನಕಾಯಿಗಳು ಮನೆಯಲ್ಲಿ ತಯಾರಾಗುತ್ತಿತ್ತು. ಆಯಾ ಕಾಲದಲ್ಲಿ ಯಥೇಚ್ಛವಾಗಿ ಕಡಿಮೆ ಬೆಲೆಯಲ್ಲಿ ಸಿಗುವ ನಿಂಬೆಹಣ್ಣು, ಎಳ್ಳಿಕಾಯಿ, ಮಾಕಳಿ ಬೇರು, ನೆಲ್ಲಿಕಾಯಿ, ಮಾವಿನಕಾಯಿ ಉಪ್ಪಿನ ಕಾಯಿಗಳು ಜಾಡಿಯಲ್ಲಿ ಸಂಗ್ರಹವಾಗುವುದು ಮಾತ್ರವಲ್ಲ, ಪ್ಯಾಕೆಟ್‌ಗಳಾಗಿ ಅಂಗಡಿ ಸೇರುತ್ತಿತ್ತು. ಸುತ್ತಮುತ್ತಲ ಹತ್ತು ಊರಿನ ಜನರು ಉಪ್ಪಿನಕಾಯಿಗಾಗಿ ಇಲ್ಲಿಗೆ ಬರುತ್ತಿದ್ದರು. ಕೆಲವರು ಇಲ್ಲಿಂದ ಒಯ್ದು ತಮ್ಮ ಊರುಗಳಲ್ಲಿ ಇಟ್ಟು ಮಾರಾಟ ಮಾಡುತ್ತಿದ್ದರು. ಅಧಿಕ ಲಾಭ ಬರುತ್ತಿದ್ದುದ್ದು ಇದರಿಂದಲೇ. ಶಾಸ್ತ್ರಿ ಅಂಗಡಿ ಉಪ್ಪಿನಕಾಯಿ ಎಂದರೇ ಇಡೀ ಜಿಲ್ಲೆಯಲ್ಲಿ ಫೇಮಸ್. ಇದರ ಎಲ್ಲದರ ಒತ್ತಡ ಹೆಚ್ಚು ಬೀಳುತ್ತಿದ್ದುದ್ದು ಶ್ರೀವಳ್ಳಿಯ ಮೇಲೆ. ಮೊದಲೇ ಸರೋಜಮ್ಮನ ಎದುರು ತುಟಿಕ್‌ಪಿಟಿಕ್ ಅನ್ನದ ಹುಡುಗಿ ಈಗ ಪೂರ್ತಿ ಮೂಗಿಯಾಗಿದ್ದು ಒಂದು ದೌರ್ಭಾಗ್ಯ.

ಗೌರಿ ಇವಳನ್ನ ಕರೆದುಕೊಂಡು, ಅವನು ಬಾಡಿಗೆಗೆ ಪಡೆದಿದ್ದ ಅಪ್ಪಯ್ಯ ಶಾಸ್ತ್ರಿಗಳ ಮನೆಯ ಬಳಿಗೆ ಕರೆದೊಯ್ದಾಗ ಬೇಡವೆನ್ನುವಂತೆ ಹಿಂಜರಿದಳು. ರೋಪ್ ಹಾಕಿದ ಅವನ ರೌದ್ರಾವತಾರ ಮರೆಯಳು.

'ಏನು....ಮಾಡೋಲ್ಲ. ತುಂಬ... ಒಳ್ಳೆಯವರು' ಎನ್ನುವ ಅರ್ಥದಲ್ಲಿ ಸನ್ನೆ ಮಾಡಿ ಕೈ ಹಿಡಿದು ಕರೆದೊಯ್ದಾಗ, ಅಂಗಾತನಾಗಿ ಉಯ್ಯಾಲೆಯ ಮೇಲೆ ಮಲಗಿದ್ದ ಕಾಲು ನೀಡಿಕೊಂಡು ಎದೆಯ ಮೇಲೆ ಕೈ ಕಟ್ಟಿಕೊಂಡು.

ಸದ್ದಿಗೆ ಇತ್ತ ತಿರುಗಿದವನು ತಟ್ಟನೇ ಎದ್ದುಕೂತ. ಅವನ ಕೈ ಅರಿವಾಗದಂತೆ ತಲೆಯ ಮೇಲಕ್ಕೆ ಹೋಯಿತು. ನಿಧಾನವಾಗಿ ಕೈ ಇಳಿಯಿತು.

"ಗೌರಿ, ನಿಂಗೂ ನಿನ್ನ ಫ್ರೆಂಡ್‌ಗೂ ಕೋಟಿ ನಮಸ್ಕಾರಗಳು. ದಯವಿಟ್ಟು ಜಾಗ ಖಾಲಿ ಮಾಡಿ. ನನ್ನಿಂದ ಮೂಕಾಭಿನಯ ಸಾಧ್ಯವಿಲ್ಲ." ಮುಲಾಜಿಲ್ಲದೆ ಹೇಳಿದ.

ಶ್ರೀವಳ್ಳಿ ಮುಖ ತಗ್ಗಿತು. ನೋಟ ನೆಲವನ್ನ ಕೊರೆಯತೊಡಗಿತು. ಸ್ವಲ್ಪ ಅವನ ಸ್ವಭಾವ ಅಭ್ಯಾಸವಾಗಿದ್ದ ಗೌರಿ ಮಾತ್ರ ಏನೋ ಹೇಳಲು ಸನ್ನೆಯಿಂದ ಹೇಳಲು ಉಪಕ್ರಮಿಸಿದಾಗ, ಕೈಯೆತ್ತಿ ತಡೆದ.

"ಮಾತು...ಮಾತುನಲ್ಲಿ ಹೇಳು. ನೀನು ಉಗ್ಗಿದರೂ ಪರ್‍ವಾಗಿಲ್ಲ, ಬಿಕ್ಕಿದರೂ

ಪರ್ವಾಗಿಲ್ಲ, ಅದಕ್ಕೊಂದು ಭಾಷೆ ಇರೋದ್ರಿಂದ ಅರ್ಥಮಾಡಿ ಕೊಳ್ಳೋಕೆ ಕಷ್ಟವಾಗೋಲ್ಲ" ಎಂದ.

"ನಾ....ವಿಬ್ರೂ..... ಇ....ಧ...ನ್ನೆಲ್ಲ" ಮಿಕ್ಕಿದ್ದು ಹೇಳಲಿಲ್ಲ. ಅವನಿಗೆ ಅರ್ಥವಾಯಿತು. ತೀರಾ ಉಗ್ಗುವಿಕೆಯ ಕಷ್ಟವಾಯಿತು "ಆಯ್ತು...ಆಯ್ತು... ಏನ್ಬೇಕಾದ್ರೂ ಮಾಡ್ಕೊಳ್ಳಿ ನನ್ನ ಡಿಸ್ಟರ್ಬ್ ಮಾಡ್ಬಾರ್ದು. ಮಿಸೆಸ್ ಉಪ್ಪಿನ ಕಾಯಿ ಶಾಸ್ತ್ರಿ ಎಲ್ಹೋದ್ರು ? ಅವನ ಕೇಳಿಕೆ ಇಬ್ಬರಿಗೂ ಅರ್ಥವಾಗಲಿಲ್ಲ ತಕ್ಷಣಕ್ಕೆ" ಅದೇ ಕುಂದಣದ ಉಪ್ಪಿನಕಾಯಿ ಅಂಗಡಿ ಮಾಲೀಕಳು ಸರೋಜಮ್ಮ.

ಅವನ ಹೇಳಿಕೆಗೆ ಗೌರಿ ಜೋರಾಗಿ ನಕ್ಕರೇ, ಶ್ರೀವಳ್ಳಿಯ ತುಟಿಗಳ ಮೇಲೆ ಅಪರೂಪದ ನಗೆ ಹರಡಿತು. ಅವಳದು ನಗು ಮುಖವೇ. ಸದಾ ಅವಳ ಮಿಂಚುವ ತುಟಿಗಳ ಮೇಲೆ ಹೂನಗೆ ಇದೆಯೆನಿಸುತ್ತಿತು. ಜಗತ್ ಪ್ರಸಿದ್ಧ ಲಿಯೋನಾರ್ಡೋ ಡ್ರಾವಿಂಚಿಯ ಮೊನಲಿಸಾ ಚಿತ್ರ ಪಟದ ಪಕ್ಕ ಶ್ರೀವಳ್ಳಿಯನ್ನ ನಿಲ್ಲಿಸಿ, ಯಾರ ನಗೆ ಚಂದ ? ಎಂದು ಪ್ರಶ್ನಿಸಿದರೇ ಚಿತ್ರಪಟದ ಮೊನಾಲಿಸಾಗಿಂತ ಜೀವಂತ ಹುಡುಗಿ ಶ್ರೀವಳ್ಳಿಯ ನಗೆಯೇ ಚೆಂದ ಎನ್ನುತ್ತಿದ್ದ ಮುಲಾಜಿಲ್ಲದೆ.

"ಅ...ವ...ರು..." ಹೋದರು ಎನ್ನುವಂತೆ ಹೇಳಿದಳು ಗೌರಿ.

"ಛೆ, ಇದ್ದಿದ್ರೆ...ಚೆನ್ನಾಗಿತ್ತು. ನಂಗೂ ಬೋರ್. ಒಂದಿಷ್ಟು ಮಾತಿನ ಫೈಟಿಂಗಾದ್ರೂ ನಡೀತಾ ಇತ್ತು" ಎಂದ ಸರಳವಾಗಿ.

ಗೌರಿ, ಅವಳು ಸೇರಿಕೊಂಡು ಇಡೀ ಮನೆಯಲ್ಲಿನ, ಗೋಡೆಯ ಮೇಲಿನ ಕಸ, ಧೂಳುಗಳನ್ನ ತೆಗೆದು ಸ್ವಚ್ಛಗೊಳಿಸುವ ವೇಳೆಗೆ ಅಪ್ಪಯ್ಯ ಶಾಸ್ತ್ರಿಗಳು ಬಂದರು. ಇಂದು ನಿಶ್ಚಿಂತೆಯಿಂದ ಗುರುತಿನ ಜನರನ್ನೆಲ್ಲ ಮಾತಾಡಿಸಿಕೊಂಡು, ಅವರ ಕಷ್ಟಸುಖ ವಿಚಾರಿಸಿಕೊಂಡು ಬಂದಿದ್ದರಿಂದ ಹರ್ಷಿತರಾಗಿದ್ದರು.

"ನಿಮ್ಮ ಧರ್ಮಪತ್ನಿ ಸರೋಜಮ್ಮ ಹೊರಟು ಹೋದ್ರಂತೆ, ಮೇಲಕ್ಕಲ್ಲ.... ಕುಂದಣಕ್ಕೆ" ಎಂದ ಮೇಲಕ್ಕೆ ಕೈ ತೋರುತ್ತ. ಬೇರೆಯವರಾದರೆ ಕೋಪಿಸಿಕೊಳ್ಳುತ್ತಿದ್ದರೇನೋ, ಆದರೆ ಶಾಸ್ತ್ರಿಗಳು ನಕ್ಕುಬಿಟ್ಟರು. ಅವರು ನಗುತ್ತಿದ್ದುದ್ದು ಅಪರೂಪ. ನಕ್ಕರೇ ಧರ್ಮಪತ್ನಿಗೆ ಸರಿ ಬರದು "ಅದೇನು ನಗು ನಿಮ್ಮ ಮುಖದ ಮೇಲಿನ ನಗು ಚೆಂದ ಕಾಣಿಸದು" ಕುಟುಕುತ್ತಿದ್ದರು.

"ಎಂಥ ಹುಚ್ಚು ಹೆಣ್ಣು ! ಅಲ್ಲ ಕಣೇ, ನಗು, ಅಳು, ಕೋಪ ನಮ್ಮ ಸ್ವಂತದ್ದು. ಅದ್ರ ಉಪಯೋಗ ಕೂಡ ನಮ್ದೇ. ಬೇರೆಯವ್ರಿಗಾಗಿ ನಮ್ಮ ಸಹಜ ಪ್ರತಿಕ್ರಿಯೆಗಳ್ನ ಮುಚ್ಚಿಟ್ಟುಕೊಳ್ಳೋಕೆ.... ಸಾಧ್ಯನಾ ?" ಎಂದೋ ಮದುವೆಯಾದ ಹೊಸತರಲ್ಲಿ ಕೇಳಿದ್ದರು.

"ನಿಮ್ಮ ಭಾಗವತ ಪುರಾಣ ನಂಗ್ಬೇಡ. ನೀವು ನಗ್ಬೇಡಿ ಅಷ್ಟೆ" ಖಾರವಾಗಿ ಅಂದ ಮೇಲೆ ತಮ್ಮ ನಗೆಯನ್ನ ಅಮೂಲ್ಯವನ್ನೇ ಕಾಯ್ದಿರಿಸಲು ಅಭ್ಯಾಸ ಮಾಡಿಕೊಂಡಿದ್ದರು.

"ನನ್ನ ನಗೋ ಹಾಗೇ ಮಾಡ್ದೇ. ನಿನ್ನ ಪಕ್ಕದಲ್ಲಿ ಕೂಡೋಕೆ ಅಭ್ಯಂತರವೇನಿಲ್ಲವಲ್ಲ" ಉಯ್ಯಾಲೆಯಲ್ಲಿ ಅವನ ಪಕ್ಕ ಕೂತ ಕೂಡಲೇ 'ಜಿರ, ಜಿರ' ಸದ್ದು ಷುರುವಾಯಿತು. "ದಯವಿಟ್ಟು ಕೆಳಗಡೆ ಕೂಡಿ. ನಾನು ನಿಮ್ಜೊತೆ ಕೂತು ಬಿಡ್ತೀನಿ. ನಿಮ್ಮ ಧರ್ಮ ಪತ್ನಿಯವ್ರ ಕರ್ಕಶ ದನಿ ಸದಾ ಕೇಳಿ ಕೇಳಿ ಅಭ್ಯಾಸವಾಗಿರೋದ್ರಿಂದ...ಇದರ ಶಬ್ಧ ನಿಮ್ಗೇನು ಅನ್ನಿಸದು. ನಂಗಂತೂ ಯಾರದಾದ್ರೂ ತಲೆಯೊಡ್ದು ಬಿಡೋಣಾಂತ ಅನ್ನಿಸುತ್ತೆ" ಅವರ ಕೈ ಹಿಡಿದು ಕೆಳಗೆ ಕೂಡಿಸಿಬಿಟ್ಟ.

ಕಲ್ಲೇಶಿ ಒಂದು ಸಣ್ಣ ಚೆಂಬುನಲ್ಲಿ ಕಾಫಿಯ ಜೊತೆ ಲೋಟಗಳನ್ನ ತಂದಿಟ್ಟ. ಸರೋಜಮ್ಮ ಎದುರಿಗೆ ಇದ್ದಾಗ ಸಂಪ್ರದಾಯಗಳು, ಮಡಿ ಮೈಲಿಗೆಗಳು ಆಚರಣೆಯಲ್ಲಿದ್ದವು. ಈಗ ಅಂಥದ್ದೇನಿಲ್ಲ. ಮಕ್ಕಳೊಂದಿಗೂ ಸರಳವಾಗಿ ಬೆರತು ಹೋಗುವಂಥ ಒಳ್ಳೆಯ ಮನಸ್ಸಿನ ವ್ಯಕ್ತಿ. ಒಳ್ಳೆಯತನವೆ ಅವರನ್ನ ಶತ್ರುವಾಗಿ ಕಾಡುತ್ತಿತ್ತು.

ಅಪ್ಪಯ್ಯ ಶಾಸ್ತ್ರಿಗಳು ಇನ್ನಷ್ಟು ನಕ್ಕರು.

ನಗೆ ಜಾಡು ಹಿಡಿದು ಅವತರಿಸಿದ ಗೌರಿ, ಶ್ರೀವಳ್ಳಿ ಗೊಂಬೆಗಳಂತೆ ನಿಂತರು.

"ಎಲ್ಲರಿಗೂ ಕಾಫಿ ಕೊಡ್ಪಾ. ನೀನು ಸಾಗರ್‌ನ ಮಾತು ಕೇಳ್ಬಾ. ನಿನ್ನ ಚಿಕ್ಕಮ್ಮನ ಮಾತುಗಳ್ನ ಕೇಳಿ ಓಡಿ ಹೋದವರೇ ಹೆಚ್ಚು. ಇವ್ನು ತಲೆಯೊಡಿತೀನಿ ಅಂದ. ಇದನ್ನೇನು ಕಮ್ಮಿ ಧೈರ್ಯ ಅನ್ನೋಕಾಗುತ್ತ?" ಇನ್ನಷ್ಟು ನಗೆ ಚೆಲ್ಲಿದರು.

ತದೇಕಚಿತ್ತಳಾಗಿ ತಂದೆಯನ್ನ ನೋಡಿದಳು. ಇಂಥ ನಗೆಯೇ ಅಪರೂಪ. ಸದಾ ಯಾಕೆ ಹೀಗೆ ನಗುತ್ತಿರಬಾರದು? ಆ ಪ್ರಶ್ನೆಗೆ ಉತ್ತರ ಗೊತ್ತಿತ್ತು. ಅದೇ ಪರಿಪೂರ್ಣ ಉತ್ತರವೆಂದು ತಿಳಿಯಲಾರದಷ್ಟು ಮುಗ್ಧಳೇ. ಅವಳು ಬೆಳೆದ ವಾತವರಣವೆ ಅಂಥದ್ದು.

ಗೌರಿ ಲೋಟಗಳಿಗೆ ಕಾಫಿ ಬಗ್ಗಿಸಿ ಕೊಟ್ಟು ಉಳಿದಿದ್ದನ್ನ ತಾನು, ಶ್ರೀವಳ್ಳಿ ಷೇರ್ ಮಾಡಿಕೊಂಡಳು. ಲೊಟ್ಟೆಯೊಡೆದು ಕುಡಿದಿದ್ದು ಶಾಸ್ತ್ರಿಗಳು. ತೊಡಿಸಿದ ಬಲವಾದ ಸರಪಣಿಗಳನ್ನ ಒಮ್ಮೆಲೆ ಕಿತ್ತೆಸೆದಂತಾಗಿತ್ತು.

"ಸಾಗರ್, ಒಂದ್ಮಾತು ಕೇಳ್ಲಾ ?" ಎಂದರು ಖಾಲಿ ಲೋಟ ಕೆಳಗಿಡುತ್ತ

ನೇರವಾಗಿ ಅವರತ್ತ ನೋಡಿದ. ನೋಟದಲ್ಲಿಯೇ ನುಂಗುವಂತೆ ಕಂಡ. "ಏನಿದೆ, ಕೇಳೋಕೆ ?" ಖಾರವಾಗಿತ್ತು ಅವನ ದನಿ.

ಮಹಾನ್ ಬಿರುಸಿನ ಹುಡುಗ ಎಂದುಕೊಂಡರು ಅಪ್ಪಯ್ಯ ಶಾಸ್ತ್ರಿಗಳು. "ಸಾಗರ್‌ನು ಜೊತೆಗೆ ಕರ್ರ್‍ದು ಕೊಳ್ಳೋಣ" ಬಿಳಿಗಿರಿಯವರು ಹೇಳಿದಾಗ ಸೂಕ್ತವಾಗಿ ಕಂಡಿತ್ತು "ನಂಗೆ ನಂಬ್ಕೇ ಇಲ್ಲ, ಅವ್ನು ಬರೋದು. ಅವ್ನ ಸ್ವಭಾವ ಹೀಗೇಂತ ಹೇಳೋಕ್ಕಾಗೋಲ್ಲ. ಬಂದ ದಿನ ಅಪ್ಪಿ ತಪ್ಪಿ ಕೂಡ ಅಪ್ಪ, ಅಮ್ಮ ಒಡ ಹುಟ್ಟಿದವ್ರ ಬಗ್ಗೆ ಒಂದ್ಮಾತು ಆಡಿದ್ದಾನಾ? ಇಲ್ವೆ...ಇಲ್ಲ. ಅವ್ನ ಹೆಸರು ತಿಳ್ದುಕೊಳ್ಳೋಕೆ ನಾಲ್ಕು ದಿನ ಬೇಕಾಯ್ತು" ತಿರುಮಲಾಂಬ ಅವನ ಬರುವಿಕೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು.

"ಏನಿಲ್ಲ, ಒಂದ್ಗಳಿಗೆ ಮಲಕ್ಕೋತೀನಿ. ಒಂದೆರಡು ದಿನ ನಿಂಗೆ ತೊಂದರೆ ಕೊಡದಂತೆ ಹೊರ್‍ಗಿನ ಕೋಣೆ ಉಪಯೋಗಿಸ್ಕೋತೀವಿ. ದಯವಿಟ್ಟು ಅಭ್ಯಂತರ ಹೇಳ್ಬೇಡ" ಮೇಲೆದ್ದರು ಮೈ ಮೇಲಿನ ಶಾಲು ಸರಿ ಮಾಡಿಕೊಳ್ಳುತ್ತ.

ಉಗ್ರಾಣದಲ್ಲಿ ತುಂಬಿಟ್ಟ ಮಂದಲಿಗೆಯನ್ನು ತಂದು ಕೋಣೆಯಲ್ಲಿ ಹಾಸಿಕೊಟ್ಟ ಶ್ರೀವಳ್ಳಿ, ಒಂದು ಜಮಖಾನ ಹಾಕಿ, ದಿಂಬಿನ ಬದಲು ಒಂದು ಮಣೆ ಇಟ್ಟು ಅದರ ಮೇಲೆ ಒಂದು ವಸ್ತ್ರವನ್ನು ಮಡಚಿ ಹಾಕಿದಳು.

ಅಕ್ಕರೆಯ ಮಗಳನ್ನ ನೋಡಿ ಅವರ ಕಣ್ತುಂಬಿತು. ಆ ಹುಡುಗಿಗೆ ಭವಿಷ್ಯವೆ ಇಲ್ಲವೆಂದುಕೊಂಡಾಗ ಅವರ ಹೃದಯ ಕಿತ್ತು ಬಾಯಿಗೆ ಬರುತ್ತಿತ್ತು. ಕೆಲವೊಮ್ಮೆ ಕ್ರೋಧದಿಂದ ಕತ್ತಿ ಹಿಡಿದು ರುದ್ರ ತಾಂಡವ ಆಡಿ ಸಿಕ್ಕವರನ್ನ ಬಗೆದು ಬಿಡಲೇ ಎನ್ನುವಂತೆ ಹೋಗಿ ನಂತರ ಶಾಂತರಾಗುತ್ತಿದ್ದರು. ಇಂಥದ್ದು ಒಮ್ಮೆ ಘಟಿಸಿದರೇ, ಅದಕ್ಕೆ ಯಾರನ್ನ ಹೊಣೆಗಾರರನ್ನಾಗಿ ಮಾಡುವುದು? ಶಿಕ್ಷಾರ್ಹರು ಯಾರು? ಸದಾ ಕೋಪಿಗಳಿಗಿಂತ ಅಪರೂಪದ ಕೋಪಕ್ಕೆ ಹೆಚ್ಚು ದಂಡ ತೆರಬೇಕಾಗುತ್ತೆ.

"ನಾನು ತಪ್ಪು ಮಾಡ್ದೇ ಶ್ರೀವಳ್ಳಿ. ಅದ್ಕೆ ನಿಂಗೆ ಶಿಕ್ಷೆ" ಮಗಳ ತಲೆದಡವಿ ಕಣ್ಣೀರು ಸುರಿಸಿದರು. ಅವಳ ಗಂಟಲು ತುಂಬಿತು. ಹೇಳಲಾರದ ಸ್ಥಿತಿ ತಂದೆಯ ಕಣ್ಣೀರನ್ನ ತೊಡೆದು ಅಳಬಾರದೆಂದು ತಲೆಯಾಡಿಸಿ, ಅವರೆದೆಯ ಮೇಲೆ ತಲೆ ಇಟ್ಟಳು.

ತುಟಿ ಕಚ್ಚಿ ಅಳುವನ್ನು ನುಂಗಿದಳು. ಅವರ ಕೈ ತಲೆ ನೇವರಿಸುತ್ತಿತ್ತು. ತಕ್ಷಣ ಒಳಕ್ಕೆ ಬಂದ ಸಾಗರ್ ನಿಂತ "ಗುಡ್ ಸೀನ್, ವಂಡರ್‌ಫುಲ್ ಸೀಕ್ವೆನ್ಸ್....ಒಂದೇ ಷಾಟ್‌ನಲ್ಲಿ ಷಾಟ್ ಓಕೆ...ಆಗ್ಬಿಡುತ್ತೆ" ಕಣ್ಣರಳಿಸಿದ. ತಂದೆ, ಮಗಳ ಪ್ರೇಮ ಒಂದು ಸೆಂಟಿಮೆಂಟ್ ಚಿತ್ರದ ದೃಶ್ಯವಾಗಿ ಕಂಡಿದ್ದು ಅವನ ಅಪರಾಧವಲ್ಲ.

ಅಪ್ಪ, ಮಗಳು ಅವನನ್ನ ನೋಡಿದರು. ಸಾಗರ್ ಕೆಟ್ಟ ವ್ಯಕ್ತಿಯಾಗಿ ಕಾಣಲಿಲ್ಲ. ವಿಪರೀತ ಮಳೆ ಸುರಿದು ಹೊಳೆ ಹುಚ್ಚಾಗಿ ಊರಲ್ಲೆಲ್ಲ ಹರಿದಾಗ, ಜೀನ್ಸ್ ಜಾಕೆಟ್ ಕೊಟ್ಟ ಯುವಕ ಜಾತಿ, ವರ್ಗ ಭೇದ ಮರೆತು ನೀರಿನಲ್ಲಿ ಮುಳುಗಿದ ಎಷ್ಟೋ ಕುಟುಂಬಗಳ ರಕ್ಷಣೆಯಲ್ಲಿ ತನ್ನ ಪ್ರಾಣವನ್ನೆ ಒತ್ತೆಯಾಗಿಟ್ಟಿದ್ದ. ಇದನ್ನೆಲ್ಲ ಹೇಳಿಕೊಂಡ ಶ್ರೀವಳ್ಳಿಪುರದ ಜನರು ಅವನ ಬಗ್ಗೆ ಒಳ್ಳೆ ಮಾತಾಡಿದರು.

"ಡಿಸ್ಟರ್ಬ್ ಆಗಿದ್ದಕ್ಕೆ, ನಾನೇನು ಸಾರಿ ಕೇಳೋಲ್ಲ. ತೋಟದೋರು ಹುಡ್ಕಿಕೊಂಡು ಬಂದಿದ್ದಾರೆ" ವಿಷಯ ಮುಟ್ಟಿಸಿ ಹೊರಗೆ ಬಂದ.

ಹಿಂದೆಯೆ ಬಂದ ಅಪ್ಪಯ್ಯಶಾಸ್ತ್ರಿ ಮಾತಾಡಿ ಅವನನ್ನ ಕಳಿಸಿದರು ಹಿಂದಕ್ಕೆ. ಸಿಗರೇಟು ಮುಗಿದಿತ್ತು. ತಲೆ ಚಿಟ್ಟೆನಿಸಿದಾಗ ಸಾಗರ್ ಹೊರ ಬಂದವನು ಹೊಳೆಯತ್ತ ನಡೆದ. ಶಾಂತವಾಗಿ ಹರಿಯುವ ಹೊಳೆ. ಎಷ್ಟೋ ವರ್ಷಗಳಿಂದ ಎಲ್ಲಕ್ಕೂ ಸಾಕ್ಷಿಯೆನ್ನುವಂತಿದ್ದ ಬಂಡೆಗಳ ಸಮೂಹ. ಏನೋ ಈ ರೀತಿಯ ಹುಚ್ಚು ವ್ಯಾಮೋಹ ಈ ಸ್ಥಳದ ಬಗ್ಗೆ.

ನಿಧಾನವಾಗಿ ಒಂದೆಡೆ ಹರಿದು ನಿಂತಿತು. ಅವನ ತುಟಿಯಂಚಿನಲ್ಲಿ ನಗುವಿನ ಚಿಕ್ಕ ಸಿಂಚನ. ಅಲ್ಲಿ ಕಲ್ಲೇಶಿ ತನ್ನ ಅಮೂಲ್ಯ ನಿಧಿಯನ್ನ ಹೂತಿಟ್ಟಿದ್ದ. ತೀರಾ ಕಾನ್ಫಿಡೆನ್‌ಷಿಯಲ್ಲಾಗಿ ಕಾಯ್ದುಕೊಂಡಿದ್ದು ಇವನಿಗೆ ಮಾತ್ರ ತೋರಿಸಿದ್ದ. ನೋಟವನ್ನ ಅಲ್ಲಿಂದ ಕೀಳಲಾಗಲಿಲ್ಲ. ಅಂದು ಅವನ ಕಣ್ಣುಗಳಲ್ಲಿ ಆಕಾಂಕ್ಷೆಯ ಅದ್ಭುತ ದೀಪಗಳನ್ನ ಕಂಡಿದ್ದ.

ಪಚ್ಚೆ, ಕೆಂಪು ಎಂಬ ಅಮೂಲ್ಯ ಕಲ್ಲುಗಳ ಬಗ್ಗೆ ಅವನಿಗೇನು ಗೊತ್ತಿಲ್ಲ. ತನಗೇ ಯಾವ ವಿಷಯದ ಬಗ್ಗೆ ಇಂಟರೆಸ್ಟ್ ? ಅವನನ್ನ ಅವನೇ ಪ್ರಶ್ನಿಸಿಕೊಂಡ. 'ಗೊತ್ತಿಲ್ಲ, ಗೊತ್ತಿಲ್ಲ, ಗೊತ್ತಿಲ್ಲ' ಸಿಕ್ಕಿದ್ದು ಇದೇ ಉತ್ತರ.

ಅಷ್ಟರಲ್ಲಿ ಒಂದು ಹಾಳೆ ಹಾರಿಕೊಂಡು ಬಂದು ಅವನ ಮುಂದೆ ಬಿತ್ತು. ಎತ್ತಿಕೊಂಡು ನೋಡಿ 'ನಾಳೆ ನಾವೆಲ್ಲ ಶ್ರೀವಳ್ಳಿ ಜಲಪಾತಕ್ಕೆ ಹೋಗುತ್ತಾ ಇದ್ದೀವಿ. ದಾರಿಯಲ್ಲಿ ಕಳ್ಳಕಾಕರ, ಪುಂಡರ ಕಾಟ. ನಮ್ಮ ಚಿಕ್ಕಮ್ಮ ಇಲ್ಲದೇ ಇರೋದರಿಂದ ನೀವು ಬರೋದು ಉತ್ತಮ. ನಾನು ಮತ್ತಷ್ಟು ರಂಗೋಲಿಗಳನ್ನ ತಂದಿದ್ದೀನಿ. ನಿಮಗೆ ತೋರಿಸ್ತೀನಿ'

ಇಂತಿ ನಮಸ್ಕಾರಗಳು

ಶ್ರೀವಳ್ಳಿ.

ಒಂದಲ್ಲ ನಾಲ್ಕು ಸಲ ಓದಿದ ಮೇಲೆ ಸುತ್ತಲೂ ನೋಟ ಹರಿಸಿ, ಒಂದೆಡೆ

ನಿಲ್ಲಿಸಿದ. ಒಂಟಿಯಾಗಿ ನಿಂತಿದ್ದ ಬಂಗಾರದ ಮುದ್ದೆಯಂತೆ ಕಾಣುವ ಅವಳ ಮುಖದಲ್ಲಿ ಸೂರ್ಯ ತನ್ನ ರಶ್ಮಿಗಳ ಮೂಲಕ ಆಟವಾಡುತ್ತಿದ್ದ.

ಬಂಡೆಯ ಮೇಲಿದ್ದ ಧುಮುಕಿ ಅವಳೆಡೆ ಬಂದ "ಭಲಾರೇ, ಹುಡ್ಗಿ! ನಾನು ನಿಂಗೆ ರಂಗೋಲಿ ಹಾಕೋದರ ಜೊತೆಗೆ ಬರೀ ಉಪ್ಪಿನಕಾಯಿ ಹಾಕೋ ಕೆಲ್ಸ ಮಾತ್ರ ಗೊತ್ತಂತ ಅಂದ್ಕೊಂಡೆ. ನಿನ್ನ ಚಿಕ್ಕಮ್ಮ ಶಾಸ್ತ್ರಿಗಳ ಧರ್ಮಪತ್ನಿ ಸರೋಜಮ್ಮ ನಿಮ್ಮಗಳ ಜೊತೆಯಲ್ಲಿ ಇದ್ದಿದ್ರೆ ಕಳ್ಳಕಾಕರು, ಪುಂಡರನ್ನ ಸದೆಬಡಿದು ಬಿಡ್ತಾ ಇದ್ರಾ ? ಆಕೆ ದೊಡ್ಡ ಪೈಲ್ವಾನಾ?" ಹುಬ್ಬೇರಿಸಿ ಕೇಳಿದ.

ಅಲ್ಲವೆಂದು ತಲೆಯಾಡಿಸಿದವಳು ಗಂಟಲನ್ನ ಮುಟ್ಟಿ ತೋರಿಸಿ ಬಾಯನ್ನು ಅಗಲಿಸಿ ಕಿಲ ಕಿಲ ನಕ್ಕುಬಿಟ್ಟಳು. ಸುತ್ತಲ ಮರಗಳ ಮೇಲೆ ಗೂಡು ಕಟ್ಟಿದ್ದ ಪಕ್ಷಿಗಳೆಲ್ಲ ಹಾರಿ ಹೋದಂತಾಯಿತು.

ಸಾಗರ್ ಜೋರಾಗಿ ನಕ್ಕ. ಹರಿಯುವ ಹೊಳೆ ಕೂಡ ತನ್ನ ಕೆಲಸ ನಿಲ್ಲಿಸಿ ಒಮ್ಮೆ ಅವನತ್ತ ಚುರುಕು ನೋಟ ಬೀರಿದಂತಾಯಿತು. ಸದ್ದು ಮಾಡದೇ ನಕ್ಕಿತು ಗಾಳಿ, ಕಲ್ಮಷವಿಲ್ಲದ ಮನಸ್ಸುಗಳಿಗಾಗಿ.

"ಅಂತು ನಿನ್ನ ಚಿಕ್ಕಮ್ಮನ ಗಂಟಲು ಅಷ್ಟು ಜೋರಿದೆ ಅಂದ್ಕೋ. ಅದ್ಕೇ ಕಾರಣ ನೀನೇ. ನೀನು ಒಂದೇ ಸಮ ಮಾತಾಡೋಕೆ ಷುರು ಮಾಡಿದ್ರೆ ಆಕೆ ಗಪ್ ಚಿಪ್ಪಾಗಿ ಬಿಡ್ತಾರೆ" ಛೇಡಿಸಿದ. ಬಹುಶಃ ಒಂದು ಹುಡುಗಿಯನ್ನು ಛೇಡಿಸಿದ್ದು ಮೊದಲ ಸಲ.

ಎರಡು ಕೈಯಲ್ಲು ಮುಖ ಮುಚ್ಚಿಕೊಂಡಳಷ್ಟೆ.

"ಅಬ್ಬ.... ಅಬ್ಬ...ನಾಚ್ಕೇ ಅಂದರೇ ಇದೇನಾ ! ಗೌರಿನ ಎಲ್ಲಿ ಬಿಟ್ಬಂದೆ? ನಿಮ್ಮಿಬ್ಬರದು ಎಂಥ ಜೋಡಿ. ಬಾಯಿ ತೆರೆಯದೆ ಮಾತಾಡ್ಕೋಬಹುದ್ದು. ಈ ಕಡೆ ಓಡಾಡೋಕೆ ಹೆದರಿ ಸಾಯ್ತಾರೆ, ನೀನ್ಯಾಕೆ...ಬಂದೇ. ಎಂದಾದ್ರೂ ಬರ್ಬೇಕೂಂತ ಅನ್ನಿಸಿದ್ರೆ...ನಿನ್ನ ಚಿಕ್ಕಮ್ಮನ ಕರ್ಕೊಂಡ್ ಬಾ. ಒಂದೊಂದು ದಬಾವಣೆಗೂ ಬಂಡೆಗಳು ಚೂರು ಚೂರಾಗಿ...ಇಡೀ ಜಾಗನೇ ಬಟ್ಟ ಬಯಲಾಗ್ಬಿಡುತ್ತೆ" ಇನ್ನಷ್ಟು ಮಾತಾಡಿದ.

ತಾನು ಮಾತಾಡುವುದು, ಅವಳು ಕೇಳುತ್ತ ನಿಲ್ಲುವುದು ಸರಿಯೆನಿಸಲಿಲ್ಲ. ಕೈ ಹಿಡಿದು ಚೀಟಿಯನ್ನ ತುರುಕಿ "ಬೇಗ ಪರಾರಿಯಾಗ್ಬಿಡು. ಆ ಕಡೆ ಹರಿಯೋ ಹೊಳೆ ಈ ಕಡೆಗೆ ಹರಿದೇ, ನಿನ್ನ ಆರಾಮಾಗಿ ಎತ್ಕೊಂಡ್ ಹೋಗ್ಬಿಡುತ್ತೆ. ಆಗ ನಿನ್ನ ರಕ್ಷಿಸೋಕೆ ನಿನ್ನ ಚಿಕ್ಕಮ್ಮ ಇರೋಲ್ಲ" ಹೆದರಿಸಿದ.

ನಗೆಯ ಮಲ್ಲಿಗೆಗಳನ್ನ ಉದುರಿಸುತ್ತ ಇನ್ನ ಎರಡು ಹೆಜ್ಜೆ ಮುಂದಕ್ಕೆ ಬಂದವಳು 'ನೀವಿದ್ದೀರಲ್ಲ' ಎನ್ನುವಂತೆ ಅವನತ್ತ ನೋಡಿದಳು.

"ನನ್ನ ನಂಬ್ಕೋಬೇಡ. ನೀನು ಹೊಳೆಯಲ್ಲಿ ಕೊಚ್ಚಿಕೊಂಡ್ಹೋದ್ರು... ನಾನೇನು ನಿನ್ನ ರಕ್ಷಿಸೋಕೆ ಹೊಳೆಯಲ್ಲಿ ಬೀಳೋ ಪೈಕಿಯಲ್ಲ. ಈಗ ತೆಪ್ಪಗೆ ಮನೆಗೆ ಹೋಗಿ ಆರಾಮಾಗಿ ರಂಗೋಲಿ ಬರ್ಕೋ" ಎಂದು ಹೇಳಿದವನು ಬಂಡೆಯನ್ನು ಹತ್ತಿ ಮತ್ತೊಂದನ್ನ ದಾಟಿ ಬೇಗ ಕಣ್ಮರೆಯಾದ.

ನೇರವಾಗಿ ಸಾಗರ್ ಹೇಳಿದ್ದರಿಂದ ಸ್ವಲ್ಪ ಅರ್ಥವಾಗಿತ್ತು ಅವಳಿಗೆ. ವಿಸ್ಮಿತಳಾದಳು. ನೀರಿನಲ್ಲಿ ಕೊಚ್ಚಿಕೊಂಡು ಹೋದ ದನ, ಕರುಗಳನ್ನ ರಕ್ಷಿಸಿದನೆಂದು ಊರ ಜನ ಕೊಂಡಾಡುವ ಸಾಗರ್‌ನಿಂದಲೇ ಇಂಥ ಮಾತು.

ಬಂದ ಮಗಳನ್ನ ನೋಡಿದ ಶಾಸ್ತ್ರಿಗಳು "ತೋಟದವ ಒಂದು ಸಾವಿರ ನಿಂಬೆಹಣ್ಣು ತಂದಾಕಿ ಹೋಗಿದ್ದಾನೆ. ಅವ್ವ ಹೇಳಿದ್ದಳಂತೆ" ಮುಂದಿನ ಮಾತುಗಳನ್ನು ನುಂಗಿಕೊಂಡರು "ಎಲ್ಲಾ ಹೆಚ್ಚಿ ಬಕೆಟ್‌ಗಳಿಗೆ ಹಾಕಿ ನಾಳೆ ಬೆಳಗಿನ ಬಸ್ಸಿಗೆ ಕಳಿಸೋಕೆ ಹೇಳಿ" ಸರೋಜಮ್ಮ ಹಿಂದೆಯೇ ಅಂಗಡಿಯ ಆಳನ್ನ ಅಟ್ಟಿದ್ದಳು. ಇವೊಂದು ರಾತ್ರಿ ಕೂಡ ಶ್ರೀವಳ್ಳಿ ಪುರಸತ್ತಾಗಿರಬಾರದು ಎನ್ನುವ ಉದ್ದೇಶವೇ? ಹೌದು ಅಂದ್ಕೊಂಡರೂ ಅಷ್ಟೆ, ಇಲ್ಲವೆಂದರೂ ಅಷ್ಟೆ.

ಉಗ್ರಾಣದಲ್ಲಿದ್ದ ಬಕೆಟ್‌ಗಳನ್ನ ಸರಸರನೆ ತಂದು ಬಾವಿಯಲ್ಲಿ ನೀರು ಸೇದಿಕೊಂಡು ಬಂದು ಎಲ್ಲವನ್ನ ಅಚ್ಚುಕಟ್ಟಾಗಿ ತೊಳೆದು ಆರಲು ಹರವಿದಳು. ಹೆಚ್ಚುವಿಕೆಯ ಅಭ್ಯಾಸವಿದ್ದ ಕೈಗಳೇ.

"ಏಳು ಗಂಟೆ ಬಸ್ಸಿಗೆ ತನ್ನ ಬರೋಕ್ಹೇಳಿದ್ದಾರೆ" ಎಂದ ಆಳು ಚಾಕು, ಮಣೆಗಳನ್ನ ಚೀಲದಿಂದ ತೆಗೆದಿಟ್ಟ. ಬಹಳ ಹುಷಾರಿ ಹೆಣ್ಣು ಸರೋಜಮ್ಮ. ಒಂದು ನೆಪ ಹೇಳಬಾರದಲ್ಲ.

ಎರಡು ಹಳೆ ಟವಲುಗಳನ್ನ ತಗೊಂಡ ಅಪ್ಪಯ್ಯಶಾಸ್ತ್ರಿಗಳು ಒರೆಸಲು ಷುರು ಮಾಡಿದಾಗ ತಡೆದಳು ಶ್ರೀವಳ್ಳಿ. 'ಬೇಡ, ಖಂಡಿತ ಬೇಡ. ನೀವ್ಹೋಗಿ ಗೌರಿ, ಕಲ್ಲೇಶಿನ ಕಳ್ಸಿ...ವಿಳೆದೆಲೆ ಕಿತ್ತಿಸಿ ಇಟ್ಟಿಡು. ಇಲ್ಲದಿದ್ರೆ ನಾವು ಶ್ರೀವಳ್ಳಿ ಜಲಪಾತಕ್ಕೆ ಹೋಗೋಕ್ಕಾಗೋಲ್ಲ'ವೆಂದು ದೈನ್ಯದಿಂದ ವಿನಂತಿಸಿದಾಗ, ಸರಿಯೆನಿಸಿ ಎದ್ದರು.

ಆ ವೇಳೆಗೆ ಒಳಗೆ ಬಂದ ಸಾಗರ್ ನಿಂಬೆಕಾಯಿಯ ರಾಶಿ ನೋಡಿ ಬಾಯಿ ಮೇಲೆ ಬೆರಳಿಟ್ಟ. ಇಲ್ಲೆ ಏನಾದರೂ ಉಪ್ಪಿನಕಾಯಿ ಫ್ಯಾಕ್ಟರಿ ತೆಗೆಯುತ್ತಾರ ?

ಅವನಿಗೆ ರೇಗಿತು. ಬಾಚಿ ಬಾಚಿ ಹೊರಗೆ ಎಸೆಯ ತೊಡಗಿದಾಗ ಅವನ ಕೈ ಹಿಡಿದುಕೊಂಡಳು ಶ್ರೀವಳ್ಳಿ. ನಿಸ್ಸಹಾಯಕತೆಯ ಕಣ್ಣೀರು ಅವಳ ಕೆನ್ನೆಯ ಮೇಲೆ ಇಳಿದಾಗ, ಅವನ ಕೈಯಲ್ಲಿದ್ದ ನಿಂಬೆ ಹಣ್ಣು ಕೆಳಗೆ ಬಿದ್ದವು.

"ನಾನು ಈ ಮನೆಗೆ ಅಡ್ವಾನ್ಸ್ ಕೊಟ್ಟಿದ್ದೀನಿ. ಬಾಡ್ಗೇ ಕೊಡ್ತಾ ಇದ್ದೀನಿ. ಈಗ ನಾನು ಈ ಮನೆ ಯಜಮಾನ. ಇಲ್ಲಿ ಉಪ್ಪಿನಕಾಯಿ ಫ್ಯಾಕ್ಟರಿ ತೆಗೆಯೋಕೆ ಹೋದರೇ...ನಿಂಬೆ ಹಣ್ಣು ಇಲ್ಲೇ ಇದ್ದರೆ ಪರ್ವಾಗಿಲ್ಲ, ನಿನ್ನ ಎತ್ತಿ ಎಸ್ದು ಬಿಡ್ತೀನಿ. ದರ್ಟಿ....ಫೆಲೋಸ್" ಕೂಗಾಡಿದ. ಕೊನೆಯ ಮಾತೊಂದು ಬಿಟ್ಟು ಅವಳಿಗೆ ಮಿಕ್ಕೆಲ್ಲ ಅರ್ಥವಾಯಿತು.

ಹರಡಿದ ನಿಂಬೆಹಣ್ಣುಗಳನ್ನ ಮತ್ತೆ ಬಕೆಟ್‌ಗಳಿಗೆ ತುಂಬಿಕೊಂಡು ಎಲ್ಲಿಗೆ ಒಯ್ಯುವುದು ? ದಿಕ್ಕು ತೋಚದ ಸ್ಥಿತಿಯಲ್ಲಿ ಪರಮಾತ್ಮನಂತೆ ಅವತರಿಸಿದ ಕಲ್ಲೇಶಿ.

"ಅಣ್ಣಾ....ಅಣ್ಣಾ...ಪ್ಲೀಸ್...ಇಲ್ಬನ್ನಿ" ಎಂದು ಅವನನ್ನ ಬಹು ಸಾಹಸದಿಂದ ಹೊರಗೆಳೆದುಕೊಂಡು ಹೋದ. "ಬೇಡಣ್ಣಾ, ಶ್ರೀವಳ್ಳಿ ಅಕ್ಕ ದೇವರಂಗೆ. ಆ ಚಂಡಾಲಿ ಈಗ ಮಾತಿಲ್ಲದಂತೆ ಮಾಡಿದ್ದಾಳೆ. ನಾಳೆ ಕೈ ಇಲ್ದಂಗೆ ಮಾಡಿದ್ರೆ...ಹೆಚ್ಚಲ್ಲ. ನಾನು ಗೌರಕ್ಕ ಎಲ್ಲಾ ಸಹಾಯ ಮಾಡ್ತೀವಿ. ನಿಮ್ಗೆ ತೊಂದರೆಯಾದ್ರೆ.... ಹಿತ್ತಲಲ್ಲಿ ಹಚ್ತುತ್ತೀವಿ" ಕೈ ಕೈ ಮುಗಿಯುವ ಜೊತೆಗೆ ಕಾಲಿಡಿದು ಬಿಟ್ಟ.

ತಲೆ ಕೆರೆದುಕೊಂಡ ಸಾಗರ್. ಅದು ತೊಂದರೆ ಅನ್ನಿಸದಿದ್ದರೂ, ವಿರೋಧ - ಪ್ರತಿಭಟನೆ ಅಭ್ಯಾಸವಾಗಿ ಹೋಗಿತ್ತು.

"ಅಣ್ಣಾ, ಪ್ಲೀಸ್...ಪ್ಲೀಸ್" ಅನ್ನುತ್ತ "ಬುಟ್ಟಿ ನಿಂಬೆಹಣ್ಣು, ಹಲಸಿನ ತೊಳೆ ಮಾರ್ಬಿಡ್ತೀನಿ. ಶ್ರೀವಳ್ಳಿ ಅಕ್ಕ ಇರೋವರ್ಗೂ ಒಳ್ಳೆ ಊಟ ಸಿಕ್ಕುತ್ತೆ" ಮಿಠಾಯಿ ಕೊಡಿಸುವಂತೆ ಆಸೆ ತೂರಿಸಿದಾಗ ತಲೆಯ ಮೇಲೆ ಮೊಟಕಿದ. "ಯೂ ಸ್ಕೌಂಡ್ರಲ್, ನಂಗೆ ಪೂಸಿ ಹೊಡೀತೀಯಾ."

ಅಂತೂ ಇಂತು ಒಪ್ಪಿಸಿ ವಿಜಯದ ಪತಾಕೆ ಹಾರಿಸಿದಂತೆ ಬಂದು ಸುದ್ದಿ ಮುಟ್ಟಿಸಿದ. "ಒಪ್ಸಿದ್ದೀನಿ, ಅಕ್ಕ. ಇದ್ನೆಲ್ಲ ಹಿಂದಕ್ಕೆ ಸಾಗ್ಸಿಬಿಡೋಣ" ಬುಟ್ಟಿಯನ್ನ ತಂದು ತುಂಬಿ ಕೊಂಡೊಯ್ದು ಹಿಂದಿನ ನಡುಮನೆಗೆ ಹಳೆಯ ಕಾಲದ ಮನೆ. ಬಚ್ಚಲು ಮನೆ, ಅಡಿಗೆಯ ಮನೆ ಮಧ್ಯೆ ಒಂದು ಊಟದ ಮನೆ ಇತ್ತು. ಅದು ಕೂಡ ನಡುಮನೆಯಷ್ಟು ದೊಡ್ಡದಿತ್ತು. ಅದನ್ನು ಹಿಂದಿನ ನಡುಮನೆಯೆಂದೇ ಕೂಗುತ್ತಿದ್ದುದು.

ಅಲ್ಲಿ ಮೂರು ಜನರ ಬೈಠಕ್. ಶ್ರೀವಳ್ಳಿಯ ಜೊತೆ ಗೌರಿ, ಕಲ್ಲೇಶಿ ಕೂಡ ಚಾಕು ಹಿಡಿದಿದ್ದರು. ಚಕ ಚಕ ಕೆಲಸ ಸಾಗತೊಡಗಿತು. ನುರಿತ ಶ್ರೀವಳ್ಳಿಯ ಕೈ ಸಮಕ್ಕೆ ಇವರುಗಳು ಕೆಲಸ ಮಾಡದಿದ್ದರೂ, ಬೇಗ ಮುಗಿಯುವ ಪ್ರಯತ್ನದಲ್ಲಿ ಅವಳಿಗೆ ಸಹಾಯಕರಾಗಿದ್ದರು.

ಹಿಂದೆ ಸರೋಜಮ್ಮ ಮನೆಯೊಳಕ್ಕೆ ಯಾರನ್ನೂ ಸೇರಿಸುತ್ತಿರಲಿಲ್ಲ. ಗೌರಿ, ಕಲ್ಲೇಶಿ ಬಂದರೆ ಹಿತ್ತಲಲ್ಲಿ ಮಾತಾಡಬೇಕು. ಇಲ್ಲ ಹೊರಗೆ ಶ್ರೀವಳ್ಳಿಯನ್ನ ಮಾತಾಡಿಸಿಕೊಂಡು ಹೋಗಬೇಕು. ಅಪ್ಪಿತಪ್ಪಿ ಅಂಗಳದಲ್ಲಿ ಬೆಳೆದ ತರಕಾರಿ ತಂದರೆ ಒಂದಿಷ್ಟು ತಿಂಡಿ ಕೊಟ್ಟು ಕಳುಹಿಸುತ್ತಿದ್ದಳೇ ವಿನಃ ಪೈಸಾ ಬಿಚ್ಚದ ಜಿಪುಣಿ.

ಇಂದಂತು ಕಲ್ಲೇಶಿಗೆ ಸಂತೋಷವೋ, ಸಂತೋಷ. ಬೀಗ ತೆಗೆದು ಉಗ್ರಾಣದೊಳಕ್ಕೆ ಹೋಗಿ ಎಲ್ಲಾ ಸಾಮಾನುಗಳನ್ನ ಮುಟ್ಟಿ ಮುಟ್ಟಿ ನೋಡಿದ. ಹಣವನ್ನೇನಾದರೂ ಅಡಗಿಸಿ ಇಟ್ಟಿರಬಹುದೇ ಎನ್ನುವ ಕುತೂಹಲ.

ಬಂದ ಸಾಗರ್ ಅವನ ತಲೆಯ ಮೇಲೊಂದು ಹಾಕಿ ಷರಟಿನ ಕಾಲರ್ ಹಿಡಿದು ಹೊರ ಕರೆತಂದ "ಏಯ್, ಈಡಿಯಟ್.... ಸರೋಜಮ್ಮ ಬಂದರೆ ಮಾತಿನ ರಭಸದಲ್ಲೇ ನಿನ್ನ ಊದ್ಬಿಟ್ಟರೇ, ಆರಾಮಾಗಿ ತೇಲುತ್ತ ಹೋಗಿ ಹೊಳೆಯಲ್ಲಿ ಬಿದ್ದುಬಿಡ್ತೀಯಾ. ಹೋಗಿ ಕೆಲ್ಸ ನೋಡು" ಬೈಯ್ದು ಕಳಿಸಿದ.

ಹಿಂದಿನ ನಡು ಮನೆಗೆ ಬಂದ ಸಾಗರ್ ಅವಾಕ್ಕಾಗಿ ನಿಂತ. ಸರ ಸರ ಹೆಚ್ಚಿ ಬಕೆಟ್‌ಗೆ ಹಾಕುತ್ತಿದ್ದ ನಿಂಬೆ ಹೋಳುಗಳನ್ನ ನೋಡಿದಾಗ ಬೆರಗಾದ. ಮಾಂತ್ರಿಕತೆಯೆನಿಸಿತು. ಅಷ್ಟು ಚುರುಕಾಗಿ ಕೆಲಸ ಮಾಡುತ್ತಿದ್ದವು ಅವಳ ಬೆರಳುಗಳು.

"ಗುಡ್, ನಿನ್ನ ಬೆರಳುಗಳು ಇಷ್ಟು ಚುರುಕಾಗಿ ಕೆಲ್ಸ ಮಾಡೋದ್ರಿಂದಾನೆ... ಸರೋಜಮ್ಮನ ಬಾಯಿ ಅಷ್ಟು ದೊಡ್ಡದಾಗಿರೋದು" ಕುಕ್ಕರುಗಾಲಿನಲ್ಲಿ ಕೂತು ಒಂದೊಂದು ನಿಂಬೆ ಹಣ್ಣನ್ನ ಮೇಲಕ್ಕೆಸೆದು ಹಿಡಿಯ ತೊಡಗಿದ.

ಸರಕ್ಕನೆ ಎದ್ದ ಅವಳು ಎರಡು ನಿಂಬೆ ಹಣ್ಣುಗಳನ್ನ ಒಯ್ದು ಜೊತೆಯಲ್ಲಿ ಕಲ್ಲೇಶಿಯನ್ನ ಕರೆದೊಯ್ದವಳು ಒಂದು ಪಾತ್ರೆಯಲ್ಲಿ ಪಾನಕ ಮಾಡಿ ತಂದಿಟ್ಟಳು, ಸಾಗರ್ ಮುಂದೆ.

ಅವಳ ಮುಖವನ್ನು ಮುಂದಿದ್ದ ಪಾತ್ರೆಯನ್ನ ಬದಲಿಸಿ ಬದಲಿಸಿ ನೋಡಿದವನು "ಇದಿಷ್ಟು ನಾನು ಕುಡೀಬೇಕಾ ?" ಹುಬ್ಬೆತ್ತಿ ಪ್ರಶ್ನಿಸಿದ. 'ಅಲ್ಲ' ಎಂದು ತಲೆಯಾಡಿಸಿದವಳು, ಕಲ್ಲೇಶಿ, ಗೌರಿ, ಅವನ ಕಡೆಗೆ ಬೆಟ್ಟು ತೋರಿ,

ಕೊನೆಗೆ ತನಗೂ ಬೇಕು ಎನ್ನುವಂತೆ ಹೇಳಿದಳು. ಮಾತಿಲ್ಲದ ಚಿತ್ರ, ಬರೀ ದೃಶ್ಯ ಮಾಧ್ಯಮ, ಮೂಕಾಭಿನಯ. ಅವನು ತಲೆಯ ಮೇಲೆ ಕೈಯಿಟ್ಟುಕೊಂಡ.

ಲೋಟಗಳನ್ನ ಹಿಡಿದು ಹಾಜರಾಗಿಬಿಟ್ಟ ಕಲ್ಲೇಶಿ.

"ಅಣ್ಣಾ, ನೀವೇ ಎಲ್ಲರಿಗೂ ಹಾಕಿ" ಎಂದ.

ಒಮ್ಮೆ ಅವನತ್ತ ನೋಡಿದ. ಮುಕ್ಕಣ್ಣ ಮೂರನೆ ಕಣ್ಣು ತೆರೆದಂತೆ ಹೆದರಿದ "ಪ್ಲೀಸ್, ನೀವು ಹಾಗೆಲ್ಲ ನೋಡ್ಬೇಡಿ. ನಾನು ಹೆದ್ರಿಕೊಂಡು ಮಲಗಿದ್ರೆ.... ಇಮಾಮ್ ಸಾಬರ ದರ್ಗಾಕ್ಕೆ ಮಂತ್ರ ಹಾಕಿಸೋಕ್ ಕರ್ಕೊಂಡ್ ಹೋಗ್ಬೇಕಾಗುತ್ತೆ. ಕುಂದಣಕ್ಕೆ ಬಸ್ಸಿನಲ್ಲೇ ಹೋಗ್ಬೇಕು" ಹೇಳಿದ ಕಲ್ಲೇಶಿ.

ಕೈಯೆತ್ತಿದಾಗ ಬಗ್ಗಿ ತಪ್ಪಿಸಿಕೊಂಡ. ಇಂದು ಅವನ ಕೈ ತಡೆಯಿತು. ತಮಾಷೆಗೂ ಕೂಡ ಒಂದು ಮೃದುವಾದ ಏಟನ್ನ ಹಾಕಲು ಅವನ ಮನ ಒಪ್ಪಲಿಲ್ಲ.

ಆರಾಮಾಗಿ ಪದ್ಮಾಸನ ಹಾಕಿಕೊಂಡು ನೆಲದ ಮೇಲೆ ಕೂತ ಸಾಗರ್, ಲೋಟಗಳಿಗೆ ಬಗ್ಗಿಸಿದ ನಿಂಬೆಹಣ್ಣಿನ ಪಾನಕ ತಾನು ಕುಡಿದ. ಸಿಹಿ ಸಿಹಿಯಾಗಿತ್ತು. ಬ್ರಾಂದಿ, ವಿಸ್ಕಿ, ರಮ್, ಜೀನ್, ಬಿಯರ್ ಎಲ್ಲಾ ಕುಡಿದಿದ್ದ. ಪ್ರತಿ ದಿನ ಟೆನ್‌ಷನ್ ತಡೆಯದೇ ಸೀತಾರಾಮ್ ಒಂದು ಪೆಗ್ ಹಾಕುತ್ತಿದ್ದರು. ಪಾರ್ಟಿಗಳಿಗೆ ಹೋದಾಗ ಗ್ಲಾಸ್ ಹಿಡಿಯುವ ಅಭ್ಯಾಸವಿತ್ತು ಕೆಲವೊಮ್ಮೆ ನೆನಪುಗಳು ಘಾಸಿಗೊಳಿಸಿದಾಗ ಹೆಚ್ಚು ಕುಡಿದು ಬೆಡ್‌ರೂಂನಲ್ಲಿ ಬಡಬಡಿಸಿದ್ದನ್ನ ಕಂಡಿದ್ದ.

"ಕುಡ್ಯೋ ಅಭ್ಯಾಸ ಒಳ್ಳೇದಲ್ಲ !" ಒಮ್ಮೆ ಸೀತಾರಾಮ್ ಬುದ್ಧಿ ಹೇಳಿದ್ದರು ನಾರ್ಮಲ್ಲಾಗಿದ್ದಾಗ 'ಯಾಕೆ ?' ಎಂದು ಪ್ರಶ್ನಿಸಬೇಕೆನಿಸಿದರೂ ಪ್ರಶ್ನಿಸಲಿಲ್ಲ. ಸಾಗರ್ ಸ್ವಲ್ಪ ನಿಧಾನವಾಗಿ "ಆ ಮಾತನ್ನ ನಾನು ನಿಮ್ಗೂ ಹೇಳಬಹುದಲ್ಲ."

ಮಗನ ಮಾತಿನಿಂದ ಸೀತಾರಾಮ್‌ಗೆ ಮೊದಲು ಗಾಬರಿಯಾದರು ಆಮೇಲೆ ಕೋಪೋದ್ರಿಕ್ತರಾಗಿ "ಯೂ ಸ್ಕೌಂಡ್ರಲ್, ನಾನು ಒದ್ದು ಹೊರ್ಗೇ ಹಾಕ್ಬೇಕಾಗುತ್ತೆ. ನೀನು ಯಾರು ನನ್ನ ಕೇಳೋಕೆ ? ಹೂ ಆರ್ ಯೂ" ಕೈಯನ್ನ ಗಾಳಿಯಲ್ಲಿ ಗುದ್ದಿದರು ಆವೇಶದಿಂದ.

"ನಾನು ಯಾರು ಅಲ್ಲಾಂತ...ಹೇಳ್ಬೇಡಿ" ಅಷ್ಟು ಅಂದು ರೂಮಿಗೆ ಹೋಗಿದ್ದ.

ಎಂಟು ದಿನ ಆ ಕಡೆ ತಲೆ ಹಾಕಿರಲಿಲ್ಲ. ಮೂರು ನಾಲ್ಕು ಸಲ ಫೋನ್ ಮಾಡಿ ಸಾಕಾಗಿ ನಂತರ ಕಾಲೇಜು ಬಳಿಗೆ ಹುಡುಕಿಕೊಂಡು ಬಂದಿದ್ದರು.

"ಯಾಕೆ ಮನೆಗೆ ಬಂದಿಲ್ಲ. ಸಂಜೆ...ಬಾ" ಅಷ್ಟು ಹೇಳುವ ವೇಳೆಗೆ ನಾಲ್ಕು ಸಲವಾದರೂ ಕರ್ಚಿಫ್‌ನ ಮುಖದ ಮೇಲಾಡಿಸಿದ್ದರು. ಅವನು 'ಹ್ಞೂ' ಅನ್ನಲಿಲ್ಲ 'ಊಹ್ಞೂ' ಅನ್ನಲಿಲ್ಲ. ಸಂಜೆ ನೂರು ಆಸೆಗಳನ್ನ ಇಟ್ಟುಕೊಂಡು ಧಾವಿಸಿ ಹೋದಾಗ ಸೀತಾರಾಮ್ ಫೋನ್‌ನಲ್ಲಿ ಮಾತಾಡುತ್ತಿದ್ದುದು ಅವನಿಗೆ ಕೇಳಿಸಿತು.

"ಅಮ್ಮ ಅಲ್ಲೇ ಉಳ್ದುಕೊಂಡು ಬಿಟ್ಟರೇ ನಾನೂ ಸೋಲು ಒಪ್ಪಿಕೊಂಡಂತಾಗುತ್ತೆ. ಐ ಕಾಂಟ್ ಬೇರ್ ಇಟ್."

ಆಗ ಸಾಗರ್‌ನ ಮುಖ ವಿಕಾರವಾಗಿ ಚೀರಬೇಕೆನಿಸಿತು. ಸ್ವರ ಹೊರಗೆ ಬರಲಿಲ್ಲ. ಗಂಟಲಲ್ಲಿ ಏನೋ ಸಿಕ್ಕಿ ಕೊಂಡಂತಾಯಿತು. ಪ್ರಯಾಸಪಟ್ಟರೂ ದನಿ ಹೊರಟಿರಲಿಲ್ಲ.

ಇವೆಲ್ಲ ಅವನ ಮನಸ್ಸನ್ನ ಘಾಸಿಗೊಳಿಸುವಂಥ ನೆನಪುಗಳೇ.

ಒಂದಲ್ಲ, ಎರಡಲ್ಲ ಮೂರು ಲೋಟ ಕುಡಿದು ಮೇಲಕ್ಕೆದ್ದ. ಕಲ್ಲೇಶಿ ಕಿಸಕ್ಕೆಂದ. ಮೆಲ್ಲಗೆ ಪಕ್ಕಕ್ಕೆ ಸರಿದು "ಇದೇನು ಕಿಕ್ ಕೊಡೋಲ್ಲ ಗುರು, ಬರೀ ಹೊಟ್ಟೆ ತಂಪು ಮಾಡುತ್ತೆ" ಅಂದವನೇ ಎಷ್ಟು ಬೇಗ ಅದೃಶ್ಯನಾದನೆಂದರೆ, ಅಲ್ಲಿ ಅವನು ಇದ್ದಿದ್ದಕ್ಕೆ ಯಾವುದೇ ಸುಳಿವು ಕೊಡದೇ ಲೋಟವನ್ನ ಒಯ್ದುಬಿಟ್ಟಿದ್ದ.

ಅವನಿಗೆ ಸಂಕೋಚ ಅಂಥದ್ದೇನು ಅನ್ನಿಸಲಿಲ್ಲ. ಮೇಲೆದ್ದ ಸಾಗರ್ ಹಿತ್ತಲ ಬಾಗಿಲು ತೆರೆದುಕೊಂಡು ಹೊರಗೆ ಹೋದ.

ಸಪ್ಪಗೆ ಮುಖ ಮಾಡಿದ ಗೌರಿ ಕೈ ಸನ್ನೆಯಿಂದ ಏನೋ ಹೇಳಿದಳು. ನಿಂಬೆ ಹಣ್ಣು ಹೆಚ್ಚುವ ಭರಾಟೆಯಲ್ಲಿ ಅದನ್ನು ಅವಳು ಮನಸ್ಸಿಗೆ ತಂದು ಕೊಳ್ಳಲಿಲ್ಲ.

ನಂತರ ಕಲ್ಲೇಶಿಯಿಂದ ವಿಷಯ ತಿಳಿದು ಬಂದ ತಿರುಮಲಾಂಬ ಬೆವತ ಶ್ರೀವಳ್ಳಿ ಮುಖ ನೋಡಿ ನೊಂದುಕೊಂಡರು.

"ಇದೊಂದು ದಿನನಾದ್ರೂ ಅವ್ನ ಕೈಗೆ ಪುರಸತ್ತು ಕೊಡ್ಬಾರ್ದಾ. ಇಷ್ಟೆಲ್ಲ ಕ್ಷೋಭೆ ಕೊಟ್ಟು ಯಾವ ನರ್ಕಕ್ಕೆ ಹೋಗ್ತಾಳೋ."

ತಲೆಯೆತ್ತಿ ಅವರತ್ತ ನೋಡಿದ ಶ್ರೀವಳ್ಳಿ ನಗೆ ಬೀರಿದಳು.

"ನಾನು ಸಹಾಯ ಮಾಡ್ಲಾ?" ಆಕೆ ಕೇಳಿದಾಗ ಎದ್ದು ಬಂದು ತಿರುಮಲಾಂಬ ಎರಡು ಕೈಗಳನ್ನ ಹಿಡಿದು ಕಣ್ಣಿಗೊತ್ತಿಕೊಂಡು 'ಬೇಡ, ನಮ್ಗೆಲ್ಲ ರಾತ್ರಿಗೆ ಊಟ

ಹಾಕಿ. ನಿಮ್ಮ ಕೈ ಅಡ್ಗೇ ಅಂದರೇ.... ನಂಗಿಷ್ಟ' ಎಂದು ಸೂಚಿಸಿದಾಗ ಅವರ ಕಣ್ಣಲ್ಲಿ ನೀರಾಡಿತು.

ಇಂಥ ಒಬ್ಬ ಮೊಮ್ಮಗ್ಳು ಇದ್ದಿದ್ದರೇ ! ಬಹುಶಃ ಇರಬಹುದೇನೋ ಈಗ ಮಗನ ವಯಸ್ಸು ನಲ್ವತ್ತು ದಾಟಿದೆ. ಬಹುಶಃ ಸರಿಯಾದ ವಯಸ್ಸಿನಲ್ಲಿ ಮದುವೆಯಾಗಿ ಅವನದೇ ಒಂದು ಸಂಸಾರವಾಗಿದ್ದರೇ ಮದುವೆಯ ವಯಸ್ಸಿನ ಮಗಳು ಇರುತ್ತಿದ್ದಳು.

ಏನೇನೋ ಯೋಚನೆಗಳು ಕಾಡಿದವು ಆಕೆಯನ್ನ ಕೆಲವು ನಿಮಿಷಗಳು.

"ಆಯ್ತು, ನಾನ್ಹೋಗಿ ಅಡಿಗೆಗೆ ಇಡ್ತೀನಿ. ಲಕ್ಷಣವಾಗಿ ಎಲ್ಲಾ ಕೂತು ಊಟ ಮಾಡುವಿರಂತೆ" ಕೈಯೂರಿ ಮೇಲಕ್ಕೆದ್ದ ಆಕೆ, ಶ್ರೀವಳ್ಳಿ ಕೊಡಲು ಹೊರಟ ಒಂದು ನಾಲ್ಕು ನಿಂಬೆ ಹಣ್ಣನ್ನ ಬೇಡವೆಂದರು. "ಬೇಡಮ್ಮ ಬೇಡ, ಇಷ್ಟು ನಿಂಬೆ ಹಣ್ಣಗೆ ಇಷ್ಟೇ ಹೋಳೂಂತ ಲೆಕ್ಕ ಹಾಕಿರ್ತಾಳೆ. ಸುಮ್ನೆ ನೀನ್ಯಾಕೆ ಅವ್ಳ ಬಾಯಿಗೆ ತುತ್ತಾಗ್ತೀಯಾ" ಹೊರಟರು.

ಮೌನವಾಗಿ ಉಯ್ಯಾಲೆ ಮೇಲೆ ಕೂತಿದ್ದ ಸಾಗರ್‌ನ ಕಂಡರು. ವೈಯಕ್ತಿಕ ಬದುಕಿನ ಸುಳಿವನ್ನ ಬಿಟ್ಟು ಕೊಡದ ಇವನು ಯಾರ ಮಗ ? ನಾವು ಶೀನಿಗಾಗಿ ಕನವರಿಸುವಂತೆ ಅವರೆಷ್ಟು ಕನವರಿಸುತ್ತಿದ್ದಾರೋ !

"ಅಮ್ಮೋರೇ, ಸಾಗರ್ ಹೊಳೆಗೆ ದುಮಿಕಿದ್ದ ನೋಡಿ ಎಲ್ಲಿ ಆತ್ಮಹತ್ಯೆ ಮಾಡ್ಕೊಂಡ್ರೋ, ಅಂದ್ಕೊಂಡೇ ! ನಾನು ಬಾಯಿ ಬಡಕೊಳ್ಳೋಕೆ ಸುರು ಹಚ್ಚಿದ್ದೆ. ಆಮೇಲೆ...ಬಂದ್ರು" ಇಂಥ ಒಂದು ವಿಚಾರವನ್ನು ಒಮ್ಮೆ ಆಕೆಯ ಕಿವಿಯ ಮೇಲೆ ಹಾಕಿದ್ದ ಕಲ್ಲೇಶಿ.

ಆಗಾಗ ಅಂಥ ಭಯ ತಿರುಮಲಾಂಬನ ಕಾಡುತ್ತಿತ್ತು.

"ಸಾಗರ್, ಇವತ್ತು ನಂಗೋಂದಿಷ್ಟು ಸಹಾಯ ಮಾಡ್ತೀಯಾ ?" ಬಾಯಿ ಬಿಟ್ಟು ಕೇಳಿದರು. ಎದ್ದು ಕೂತ ಸಾಗರ್ ಚಕಿತನಾದ "ನನ್ನ ತಮಾಷೆ ಮಾಡ್ತಾ ಇದ್ದೀರಾ ?"

"ಖಂಡಿತ ಇಲ್ಲ, ನೀನ್ಬಾ! ನಾನು ಹೇಳ್ತೀನಿ" ಎಂದು ಜೊತೆಯಲ್ಲಿ ಬಲವಂತದಿಂದ ಕರೆದೊಯ್ದರು.

ತರಕಾರಿಯ ಬುಟ್ಟಿ, ಈಳಿಗೆ ಮಣೆಯನ್ನ ತಂದು ಅವನ ಮುಂದಿಟ್ಟರು. "ಶ್ರೀವಳ್ಳಿ ನನ್ನ ಕೈಯಲ್ಲಿ ಊಟ ಮಾಡ್ಬೇಕಂತೆ. ಇದೊಂದಿಷ್ಟು ಹಚ್ಚಿ ಕೊಟ್ಟರೇ.... ಬೇಗ ಮಾಡ್ತೀನಿ" ಅಂದವರೇ ತರಕಾರಿ ಹಾಕಲು ಒಂದು ಡಬರಿಯನ್ನ ಕೂಡ ಅವನ ಮುಂದೆ ತಂದಿಟ್ಟರು.

"ನಂಗೆ ಇದೆಲ್ಲ ಬರೋಲ್ಲ" ಎಂದ ಆರಾಮಾಗಿ.

"ಯಾಕೆ ಬರೋಲ್ಲ ? ಬರೋಲ್ಲಾಂದ್ರೆ...ಅರ್ಥವೇನು ? ಅಮ್ಮಂದಿರು ಮಕ್ಳು ಕೈಯಲ್ಲಿ ಇಂಥ ಕೆಲ್ಸಗಳ್ನ ಮಾಡಿಸಿಯೇ ಮಾಡಿಸ್ತಾರೆ."

ಅವರ ಮಾತಿಗೆ ಅವನ ತಲೆ ಸಿಡಿಯತೊಡಗಿತು. ಬರೀ ಸೀತಾರಾಮ್, ಮೃಣಾಲಿನಿ ಪ್ರತಿಷ್ಟೆಗಾಗಿ ಹೋರಾಟ ನಡೆಸಿದಾಗ ಅಲ್ಲಿ ಅವನೊಬ್ಬ ಬರೀ ಪ್ರೇಕ್ಷಕನಾಗಿರುತ್ತಿದ್ದ. ಬರೀ ಮೂಕ ಪ್ರೇಕ್ಷಕ. ಪ್ರೀತಿ, ಅಭಿಮಾನ ಗಳಿಸಿಕೊಳ್ಳಲು ಅಸಮರ್ಥವಾದ ತಾಯ್ತಂದೆಯರು.

ಅರ್ಥ ಮಾಡಿಕೊಂಡ ಆಕೆ ತರಕಾರಿಯನ್ನು ಅಲ್ಲೇ ಬಿಟ್ಟು ಎದ್ದು ಹೋದರು. ಇಪ್ಪತ್ತು ನಿಮಿಷಗಳಷ್ಟು ಕಾಲ ಬಿಟ್ಟೇ ಬಂದಿದ್ದು ಈಚೆಗೆ. ಉರುಳಿಕಾಯನ್ನ ಅಳತೆ ಹಿಡಿದು ಹಿಡಿದು ಹಚ್ಚುತ್ತಿದ್ದ ಸಾಗರ್ ಬುದ್ಧಿ ತಿಳಿಯದ ಚಿಕ್ಕ ಮಗುವಿನಂತೆ ಕಂಡ.

"ಬ್ರಹ್ಮಾಂಡಾವಾಗಿ ಹಚ್ಚಿದ್ದೀಯಾ ! ಇಷ್ಟು ಕರಾರಾಗಿ ಯಾರು ಹಚ್ಚಿದ್ದಿಲ್ಲ" ನಗಾಡಿ ಅದನ್ನೆಲ್ಲ ಪಾತ್ರೆಗೆ ತುಂಬಿಕೊಂಡರು. ಅಂತು ಅವನ ಬಳಿ ಕೆಲಸ ತೆಗೆದ ಧೀರೆ. ತಾಯ್ತನ ಗರಿ ಗೆದರಿತೇನೋ, ಅವನ ಕೂದಲು ಕೆದರಿ ಅದನ್ನ ವ್ಯಕ್ತಪಡಿಸಿಯೇ ಬಿಟ್ಟರು.

ಸಾಗರ್ ಮಿದುಳು ಕೆಲ ಕಾಲ ಸ್ಥಬ್ಧವಾಯಿತು. ಅವನ ಮೈನ ರೋಮಗಳೆಲ್ಲ ಎದ್ದು ನಿಂತವು. ಸುಮ್ನೆ ತಲೆ ತಗ್ಗಿಸಿದ.

ಆಕೆ ಅಡಿಗೆಗೆ ಇಟ್ಟು ಹೊರ ಬಂದಾಗ ಅವನು ಇರಲಿಲ್ಲ.

ಪೂರ್ತಿ ಸಂಜೆಯಾಗಿ ಸೂರ್ಯ ಸಂಧ್ಯಾದೇವಿಯ ಮಡಿಲು ಸೇರಿದ ನಂತರವೇ ಸಾಗರ್ ಮನೆಗೆ ಬಂದಿದ್ದು. ಇನ್ನು ನಿಂಬೆ ಹಣ್ಣು ಹಚ್ಚುವ ಕೈಂಕರ್ಯ ನಡೆಯುತ್ತಿತ್ತು.

"ಅಣ್ಣಾ..." ಓಡಿ ಬಂದ ಕಲ್ಲೇಶಿ.

"ಏಯ್, ಹಾಗಂತ ಕೂಗ್ಬೇಡ" ಗದರಿದ.

"ನಿನ್ನತ್ರ ಏನಾದ್ರೂ ಔಷ್ಧಿ ಇದ್ಯಾ?" ಗಾಬರಿ ಇತ್ತು ಅವನ ದನಿಯಲ್ಲಿ "ಏನು ಔಷ್ಧಿ ?" ಹುಬ್ಬು ಗಂಟಿಕ್ಕಿಯೇ ಕೇಳಿದ್ದು. "ಶ್ರೀವಳ್ಳಿ ಅಕ್ಕ ಬೆಟ್ಟು ಹಚ್ಕೊಂಡ್ ಬಿಟ್ರು" ವಿಷಯ ಮುಟ್ಟಿಸಿದ ಏದುಸಿರು ಬಿಡುತ್ತ.

ಹಿತ್ತಲ ನಡುಮನೆಗೆ ನುಗ್ಗಿದ ಸಾಗರ್. ಗೌರಿ ಬೆಟ್ಟಿಗೆ ಹರಿಶಿನ ಪುಡಿ ಮೆತ್ತುತ್ತಿದ್ದಳು. ಕೆಂಪನೆಯ ಬೆರಳಿನಿಂದ ಇಳಿದ ರಕ್ತ ಅಂಗೈಯನ್ನ ಕೂಡ ತೋಯಿಸಿತ್ತು.

ಸಾಗರ್ ಗಟ್ಟಿಯಾಗಿ ಬೆಟ್ಟನ್ನ ಒತ್ತಿಡಿದು, ಇನ್ನಷ್ಟು ಅರಿಶಿನದ ಪುಡಿಯನ್ನ ಸುರಿದು ಕರ್ಚೀಫ್ ಕಟ್ಟಿದ "ಡಾಕ್ಟ್ರು, ಸಿಗೋಲ್ವಾ?" ಇಲ್ಲವೆಂದು ತಲೆಯಾಡಿಸಿದ ಕಲ್ಲೇಶಿ "ನರ್ಸು ಇರ್ತಾರೆ...ಕ್ವಾರ್ಟಸ್‌ನಲ್ಲಿ. ಕರ್ಕಂಡ್ ಬರ್ಲಾ ?" ಕೇಳಿದಷ್ಟೇ ಯಾರ ಪ್ರತಿಕ್ರಿಯೆಗೂ ಕಾಯದೇ ಓಡಿದ.

"ಸ್ವಲ್ಪನೇ ಹಚ್ಚಿಕೊಂಡಿರೋದು. ರಕ್ತ ಜಾಸ್ತಿ ಬಂತು"ಎಂದ ಶ್ರೀವಳ್ಳಿಯ ತಲೆಯ ಮೇಲೆ ಮೊಟಕಿದ "ಸ್ವಲ್ಪನಾದ್ರೂ ಜ್ಞಾನ ಬೇಡಾ ? ಇಷ್ಟು ನಿಂಬೆಕಾಯಿ ಇಡೀ ರಾತ್ರಿಯಲ್ಲಿ ಹಚ್ಚಿ ಮುಗ್ಸಬೇಕೂಂತ ಹರಕೆ ಹೊತ್ತಿದ್ದೀಯಾ?" ಮುಲಾಜಿಲ್ಲದೆ ಬೈಯ್ದ.

"ನರ್ಸಮ್ಮ ಹೆರಿಗೆ ಮಾಡ್ಸೋಕೆ ಹೋದ್ರು. ಬ್ಯಾಂಡೇಜ್ ಹತ್ತಿ, ಟಿಂಚರ್ ಎಲ್ಲಾ ಕೊಟ್ಟಿದ್ದಾರೆ" ಅಲ್ಲೇ ಮುಂದಿಟ್ಟುಕೊಂಡು ಕೂತ.

ಡೆಟಾಲ್‌ನಲ್ಲಿ ಚೆನ್ನಾಗಿ ಒರೆಸಿ, ಅದರ ಬೋರಿಕ್ ಪೌಡರ್ ಸುರಿದು ಬ್ಯಾಂಡೇಜ್ ಕಟ್ಟಿ "ಏಯ್ ಕಲ್ಲೇಶಿ, ಈ ನಿಂಬೆ ಕಾಯಿಗಳ್ನ ಎಲ್ಲಾ ಎತ್ತಿ ದಾನ ಮಾಡು, ಇಲ್ಲಾ ಆಚೆಗೆ ಸುರ್ದು ಬಿಡು. ಆ ಬಾಯಾಳಿ ಸರೋಜಮ್ಮನಿಗೆ ಒಳ್ಳೆ ಬೆಲೆ ಬಂತು ಮಾರಿ ಬಿಟ್ಟೆಂತ ಹೇಳಿ ಕಳ್ಸಿ. ಹಣನ ಅವ್ಳ ಹೆಣದ ಮೇಲೆ ಹಾಕ್ಕೊಂಡ್ಹೋಗ್ಲಿ" ಒಂದು ಮಡಿಕೆಯ ನೋಟುಗಳನ್ನ ತೆಗೆದು ಶ್ರೀವಳ್ಳಿಯ ಎಡಗೈ ತೆಗೆದು ಅದರಲ್ಲಿಟ್ಟು ಮುಚ್ಚಿ "ಇನ್ನ ನಿಂಬೆಕಾಯಿ ಹಚ್ಚೋಕೇ ಪರ್ಮಿಷನ್ ಇಲ್ಲ. ಹೆಚ್ಚಲೇ ಬೇಕೆಂದುಕೊಂಡರೇ... ಎಲ್ಲಾ ತಗೊಂಡ್ ಹೋಗ್ಬಿಡಿ. ನನ್ನ ಸುಮ್ನೆ ಹಿಂಸೆ ಮಾಡ್ಬೇಡಿ" ಕೈ ಮುಗಿದು ಬಿಟ್ಟ.

ಒಬ್ಬನೇ ಕೂತುಕೊಂಡು ಒಂದು ಹತ್ತು ನಿಮಿಷ ಗೊಣಗಿದ.

ಸರೋಜಮ್ಮ ಕಳಿಸಿದ್ದ ಆಳಿನ ನೆರಳು ಬಾಗಿಲಲ್ಲಿ ಆಡಿದಾಗ ಹೊರ ಬಂದವನು "ನಿಂಬೆ ಹಣ್ಣನ್ನೆಲ್ಲ ಕೊಂಡ್ಕೊಂಡ್ ಫಾರಿನ್‌ಗೆ ರಫ್ತು ಮಾಡ್ತೇಂತ ನಿನ್ನ ಯಜಮಾನಿಗೆ ಹೇಳು. ಬೆಳಗಿನವರ್ಗೂ ಇಲ್ಲೇನು ಮಾಡ್ತೀಯಾ ! ಸಧ್ಯಕ್ಕೆ ಒಂದು ಬಸ್ಸು ಇದೆ...ಹೋಗ್ಬಿಡು" ಎರಡು ಹತ್ತರ ನೋಟುಗಳನ್ನ ಅವನ ಕೈಯಲ್ಲಿಟ್ಟ.

ನೋಟುಗಳನ್ನ ಅವನ ಮುಖವನ್ನು ದಿಟ್ಟಿಸಿ ನೋಡಿದ.

"ಏಯ್, ಹೋಗ್ತೀಯೋ...ಇಲ್ವೋ ! ಇಲ್ಲದಿದ್ದರೇ ಅನಾಮತ್ತಾಗಿ ಎತ್ತಿ ಹೊಳೆಗೆ ಎಸ್ದು ಬಿಡ್ತೀನಿ. ಹೇಗೂ ಇವ್ರೆಲ್ಲ ಶ್ರೀವಳ್ಳಿ ಜಲಪಾತ ನೋಡೋಕೆ ನಾಳೆ ಬರ್ತಾರಂತೆ, ನೀನು ಅಡ್ವಾನ್ಸಾಗಿ ಹೋಗಿ ಅಲ್ಲಿ ಸೀಟುಗಳ್ನ ರಿಸರ್ವ್ ಮಾಡ್ತು" ಜೋರಾಗಿಯೇ ಹೇಳಿದ.

ಅವನು ಒಂದು ಹತ್ತು ನಿಮಿಷ ಚಲಿಸಲಿಲ್ಲ.

ಷರಟಿನ ತೋಳುಗಳನ್ನ ಮಡಚಿಕೊಂಡ ಸಾಗರ್ ನಾಲ್ಕು ಹೆಜ್ಜೆ ಮುಂದಕ್ಕೆ ಬಂದಾಗ, ಅರ್ಥವಾಗದವನಂತೆ ಹಿಂದಕ್ಕೆ ಸರಿಯುವ ಮುನ್ನ ಎರಡು ಹತ್ತರ ನೋಟುಗಳನ್ನ ಷರಟಿನ ಜೇಬಿನಲ್ಲಿಟ್ಟುಕೊಂಡ.

"ಈ ಕಡೆ...ಬಂದರೇ..." ಅವುಡುಗಳನ್ನ ಕಚ್ಚಿಡಿದ.

"ಹೊಳೆಗೆ ಎತ್ತಿ ಹಾಕ್ತೀರಾ" ದೂರದಿಂದಲೇ ಹೇಳಿದ.

ಅವನೇನು ಕುಂದಣದ ಬಸ್ಸು ಹತ್ತಲಿಲ್ಲ. ಪಕ್ಕದ ಊರಲ್ಲಿ ಬಭ್ರುವಾಹನ ಯಕ್ಷಗಾನ ಪ್ರಸಂಗವಿದ್ದುದ್ದರಿಂದ ಅತ್ತ ನಡೆದ ಆರಾಮಾಗಿ. ಇಡೀ ರಾತ್ರಿ ಅಲ್ಲಿ ಕಳೆದು ಬೆಳಿಗ್ಗೆ ಎದ್ದು ಬಸ್ಸು ಹತ್ತಿದರಾಯಿತು 'ಇಷ್ಟನ್ನ ಹೇಳಿ ಬಿಟ್ಟರೇ ಮುಗೀತು' ಹರ್ಷಿತನಾದ. ಉಪ್ಪಿನಕಾಯಿ ಹೋಳುಗಳ ಬಕೆಟ್ ಹೊರುವ ಶ್ರಮ ಕಮ್ಮಿಯಾಗಿದ್ದು ಕಡಿಮೆ ಸಂತೋಷವಲ್ಲ ಅವನ ಪಾಲಿಗೆ.

ಒಳಗೆ ಬಂದ ಸಾಗರ್ "ಇನ್ನ ಹತ್ತು ನಿಮಿಷದಲ್ಲಿ ನಿಂಬೆ ಹಣ್ಣೇನು, ನಿಂಬೆ ಹಣ್ಣಿನ ವಾಸ್ನೆ ಕೂಡ ಇರ್ಬಾರ್ದು." ಕೂಗಾಡಿದ.

ಮೂವರು ಬಾಚಿ ಬುಟ್ಟಿಗೆ ತುಂಬತೊಡಗಿದಾಗ ಶ್ರೀವಳ್ಳಿಯ ಕೈ ಹಿಡಿದು "ಅಮ್ಮ ರಾಜಕುಮಾರಿ, ಮತ್ತೆ ಕೈ ತಗುಲಿ ಬೆಟ್ಟಿನಿಂದ ರಕ್ತ ಬರೋಂಥ ಪ್ರಸಂಗ ಬೇಡ. ನಿನ್ನ ಬೆರಳಿಗೆ ಸುತ್ತೋಕೆ ಬ್ಯಾಂಡೇಜೇನು ಉಳ್ದಿಲ್ಲ. ನೀನು ತೆಪ್ಪಗೆ ಕೂತ್ಕೋ" ಒಳ ನಡುಮನೆಗೆ ಕಳಿಸಿದ.

ಗೌರಿ, ಕಲ್ಲೇಶಿ ಹಚ್ಚಿದ ಹೋಳುಗಳನ್ನ, ಉಳಿದ ನಿಂಬೆಹಣ್ಣನ್ನ ಒಯ್ದು ತಿರುಮಲಾಂಬ ಮುಂದಿಟ್ಟು ಸಲಹೆ ಕೇಳಿದರು.

"ಈಗೇನ್ಮಾಡೋದು....ಅಮ್ಮಾವರೇ ?" ಕಲ್ಲೇಶಿ ವಿವರಿಸಿ ತಲೆಯ ಮೇಲೆ ಕೈಯಿಟ್ಟುಕೊಂಡು ಕೂತ. ಆಕೆಗೆ ನಗು ಬಂತು, ಇದೇನು ಸಮಸ್ಯೆಯೆನಿಸಲಿಲ್ಲ "ಹೇಗೂ, ಸಾಗರ್ ನಿಂಬೆಕಾಯಿ ದುಡ್ಡು ಕೊಟ್ಟಿದ್ದಾನೆ. ಇನ್ನ ಸರೋಜಮ್ಮ ಬಾಯಿ ತೆರೆಯೋಲ್ಲ. ಅವ್ನು ಕೊಟ್ಟ ಕಾಸು ಮೇಲೆ ಒಂದಿಷ್ಟು ಲಾಭವಾಗಿದೆಯಲ್ಲ. ಹೋಳನ್ನೆಲ್ಲ ಜಾಡಿಗೆ ತುಂಬು ಉಪ್ಪು ಸೇರ್ಸಿ, ಇನ್ನ ಹಣ್ಣನ್ನ ಕಲ್ಲೇಶಿ ಮಾರ್ಕೊಂಡ್ಬರ್ತಾನೆ ನಾಳೆ. ಇಡೀ ರಾತ್ರಿ ಪೂರ ಮಾಡೋ ಕೆಲ್ಸ ತಪ್ಪಿತಲ್ಲ" ಎಂದರು. ಆಕೆಗೂ ಒಂದಿಷ್ಟು ಸಮಾಧಾನವೆ.

ಅಂತು ನಿಂಬೆಹಣ್ಣಿನ ಕತೆ ಮುಗಿಯಿತು. ಒಂದು ರೀತಿ ಇಡೀ ಪ್ರಕರಣಕ್ಕೆ ಮುಕ್ತಾಯವಾಡಿದಂತಾಯಿತು, ಸಾಗರ್‌ನ ಕೋಪ. ಇದರಿಂದ ಯಾರಿಗೂ

ಅಸಂತೋಷವಿಲ್ಲ. ಹೆಚ್ಚು ಲಾಭವಾದುದ್ದು ಕಲ್ಲೇಶಿಗೆ. ಮರಳಿನ ಮೇಲೆ ನೀರು ಚಿಮುಕಿಸಿ ಅವನ್ನೆಲ್ಲ ಹರಡಿದ. ಎರಡು ದಿನ ಬಿಟ್ಟರೂ ಹಣ್ಣು ಬಾಡದು.

ಶಾಸ್ತ್ರಿಗಳು, ಬಿಳಿಗಿರಿಯವರು ಯಕ್ಷಗಾನ ನೋಡಲು ಹೋದಾಗ ಉಳಿದ ಶ್ರೀವಳ್ಳಿ ತಿರುಮಲಾಂಬಗೆ ಸಹಾಯ ಮಾಡಿಕೊಂಡು ಅಲ್ಲೇ ಇದ್ದಳು. ಆಕೆಗೂ ಬಲ ಬಂದಂತಾಗಿತ್ತು, ಉತ್ಸಾಹದಿಂದ ಅಡಿಗೆ ಕೆಲಸ ಮುಗಿಸಿ ನಡುಮನೆಯಲ್ಲಿ ಬಂದು ಕೂತರು.

"ಏನಾಯ್ತು ಗಂಟಲಿಗೆ ?" ಹತ್ತಿರ ಕೂಡಿಸಿಕೊಂಡು ಕೇಳಿದಾಗ ಶ್ರೀವಳ್ಳಿಯ ಮುಖ ಸಪ್ಪಗಾಯಿತು. ಸರಿಯಾದ ಕಾರಣ ಕೊಡಲು ಅವಳಿಂದ ಸಾಧ್ಯವಿಲ್ಲ. ಕಣ್ಣಲ್ಲಿ ಧಾರೆಯಾಗಿ ಹರಿದಾಗ ತೊಡೆದ ತಿರುಮಲಾಂಬ "ಹೋಗ್ಲಿ ಬಿಡು, ಮಾತೊಂದು ಇಲ್ಲದಿದ್ದರೇನಾಯ್ತು ! ಇಷ್ಟು ಲಕ್ಷಣವಾಗಿರೋ ಹುಡ್ಗಿ ಹತ್ತು ಊರಿನಲ್ಲೇ ಇಲ್ಲ" ಅವಳ ಕೆನ್ನೆ ಸವರಿದರು.

ಕಣ್ಣೊರೆಸಿಕೊಂಡ ಶ್ರೀವಳ್ಳಿ ಉತ್ಸಾಹದಿಂದ ಕೈಗಳನ್ನ ತೋರಿಸಿ 'ಕೆಲ್ಸ ಮಾಡ್ತೀನಿ, ರಂಗೋಲಿ ಹಾಕ್ತೀನಿ' ಎನ್ನುವಂತೆ ತಿಳಿಸಿದ ಆ ಹುಡುಗಿಯನ್ನ ನೋಡಿ ಅಳಬೇಕೆನಿಸಿತು ಆಕೆಗೆ.

"ಗೌರಿ, ಸಾಗರ್‌ನ ಕರ್ದು ಬಾ ಹೋಗು.' ಎಲ್ಲಾ ಕೂತು ಮಾತಾಡುತ್ತ ಊಟ ಮಾಡ್ಬಹುದ್ದು" ಕಳಿಸಿದರು.

ಮುಂದೇನು ಶ್ರೀವಳ್ಳಿಯ ಬದುಕಿಗೆ ಒಂದು ತಿರುವು ಬೇಡವಾ ? ಜೀವನ ಪೂರ್ತಿ ಸರೋಜಮ್ಮನ ಸೇವೆ ಮಾಡಿಕೊಂಡು, ಉಪ್ಪಿನಕಾಯಿ ಸಿದ್ದಪಡಿಸುತ್ತ ಬದುಕಬೇಕಾ ? ಅಷ್ಟೆ, ಮತ್ತೇನು ಮಾಡಿಯಾಳು ಮುಗ್ಧ ಹುಡುಗಿ ?

ಅದನ್ನ ಬಾಯಿಬಿಟ್ಟು ಅಪ್ಪಯ್ಯ ಶಾಸ್ತ್ರಿಗಳ ಬಳಿ ಪ್ರಸ್ತಾಪಿಸಿದ್ದರು. "ಶ್ರೀವಳ್ಳಿ ಮದ್ವೆ ವಿಷ್ಯ ಏನ್ಮಾಡಿದ್ರಿ ?" ಈ ಪ್ರಶ್ನೆಗೆ ಆತನ ಮುಖದಲ್ಲಿ ರಕ್ತವೇ ಹಿಂಗಿ ಹೋಗಿತ್ತು.

"ಏನ್ಮಾಡ್ತೀರಾ, ದುರಾದೃಷ್ಟದ ಹುಡ್ಗಿ ! ಹೆತ್ತ ತಾಯಿ ಬದುಕಿದ್ರೆ... ಇಷ್ಟೆಲ್ಲ ಕಷ್ಟಪಡಬೇಕಿತ್ತಾ? ಈಗ ಬಾಯಲ್ಲಿ. ಅನುವಾದ ಗಂಡುಗಳು ಸಿಗೋಲ್ಲ. ಯಾವೋನೋ ಪಡಪೋಶಿಗೆ ಕೊಟ್ಟು ಕೈ ತೊಳ್ದುಕೊಂಡರೇ, ಅವ್ಳ ಬದ್ಕು... ಬೀಭತ್ಸವಾಗುತ್ತೆ. ಆ ನರ್ಕಕ್ಕಿಂತ ಕಣ್ಮುಂದೆ ಇದ್ಕೊಳ್ಳಿ" ಎಂದವರು ಕಣ್ಣೀರು ತೊಡೆದುಕೊಳ್ಳುತ್ತ ಎದ್ದು ಹೋಗಿದ್ದರು.

ಗೌರಿ, ಕಲ್ಲೇಶಿಯೇನೋ ಬಂದರು.

"ಸಾಗರಣ್ಣ ಬರೋಲ್ಲಾಂದ್ರು !" ಎಂದ ಮಂಕಾಗಿ ಕಲ್ಲೇಶಿ.

"ನಾನು ಕರ್ದ್ದೇಂತ ಹೇಳ್ಬ್ಯೋಗು" ತಿರುಮಲಾಂಬ ಮಾತಿಗೆ ಕಲ್ಲೇಶಿ ಫಕ ಫಕ ನಕ್ಕ "ಅಮ್ಮ ಯಾರ್ಮಾತ್ತಾದ್ರೂ...ಕೇಳಿದ್ದುಂಟಾ? ನಂಗೆ ಒಂದ್ಮಾತ್ರುಗೆ... ಒಂದೇಟು ಬೀಳುತ್ತೆ" ತಲೆ ಮುಟ್ಟಿ ನೋಡಿಕೊಂಡ.

"ಶ್ರೀವಳ್ಳಿ...ಎಲ್ಲಿ?" ಕೇಳಿದರು ಸ್ವಲ್ಪ ಬೇಸರದಿಂದಲೇ.

"ಬರ್ತ್ತಾ ತೋಟದ ಮನೆಯೋರು ಸಿಕ್ರು. ಅವ್ರ ಕೂಡ ಮಾತಾಡ್ತಾ ಇದ್ದಾರೆ. ಅಮ್ಮಾವ್ರೆ....ಸಾಗರಣ್ಣ ದಬಾವಣೆ ಮಾಡದಿದ್ದರೇ ಇಡೀ ರಾತ್ರಿ ನಿಂಬೆ ಹಣ್ಣು ಹಚ್ಕೊಂಡ್ ಕೂತ್ಕೋಬೇಕಿತ್ತು" ಘೊಳ್ಳೆಂದು ನಕ್ಕ. ಅವನಿಗಂತೂ ಅತ್ಯಂತ ಸಂತಸ.

ಎದುರಿಗೆ ಸಿಕ್ಕ ಶ್ರೀವಳ್ಳಿಯನ್ನ ಕೂಡ ಕರೆದುಕೊಂಡು ಸಾಗರ್‌ನ ಕರೆದುಕೊಂಡು ಬರಲು ಬಂದಾಗ, ಇಡೀ ಮನೆ ಸಿಗರೇಟಿನ ಹೊಗೆಯಿಂದ ತುಂಬಿಹೋಗಿತ್ತು.

ಒಂದೆ ಹೆಜ್ಜೆ ಎತ್ತಿಡುವುದು ತಿರುಮಲಾಂಬಯಿಂದ ಆಗಲಿಲ್ಲ. ಸಿಗರೇಟು ಸೇದಿ, ಕುಡಿದು ಒಂದು ದಿನ ಸವೆದು ಹೋಗಿ ಬಂಡೆಗಳ ಮಧ್ಯೆ ಹೆಣವಾಗಿ ಬಿಡ್ತಾನೆ. 'ಆ ಚಿತ್ರ ಕಲ್ಪಿಸಿಕೊಂಡ ಕೂಡಲೇ ಎದೆ ಭಾರವಾಗಿ ಗಂಟಲು ಒತ್ತರಿಸಿಕೊಂಡು ಬಂತು.'

ತಿರುಮಲಾಂಬ ಹಿಂದಿರುಗಿಬಿಟ್ಟರು.

ಆರಾಮಾಗಿ ಒಳಗಡೆ ಹೋದ ಶ್ರೀವಳ್ಳಿ ಇದ್ದ ಕಿಟಕಿಗಳನ್ನ ತೆರೆದಿಟ್ಟು, ಸ್ವಲ್ಪ ಕೂಡ ಹೆದರದೆ ಅವನ ಕೈಯಲ್ಲಿ ಉರಿಯುತ್ತಿದ್ದ ಸಿಗರೇಟನ್ನ ಕಿತ್ತು ಕಿಟಕಿಯಿಂದ ಹೊರಗೆ ಎಸೆದಳು.

ಸಾಗರ್ ಕೋಪದಿಂದ ಕಿಡಿಕಿಡಿಯಾದ. ಅವಳ ಕತ್ತು ಇಸುಕಿ ಸಾಯಿಸುವಷ್ಟು ಕೋಪ. ಮೇಲಕ್ಕೆ ಕೈಯೆತ್ತಿದವನು ಅವಳ ಬೆಟ್ಟಿನಿಂದ ಬ್ಯಾಂಡೇಜ್‌ನ ತೋಯಿಸಿಕೊಂಡು ಹೊರ ಚಿಮ್ಮುತ್ತಿದ್ದ ರಕ್ತವನ್ನ ನೋಡಿ ಅವನ ಕೈ ಇಳಿಯಿತು ನಿಧಾನವಾಗಿ.

"ಮತ್ತೆ ರಕ್ತ ಬಂದಿದೆ. ಎಲ್ಲಾದ್ರೂ ತಗುಲಿಸಿಕೊಂಡ್ಯಾ" ಎಂದು ಅಸಹನೆ ವ್ಯಕ್ತಪಡಿಸಿದಾಗಲೇ ಅವಳು ಬೆಟ್ಟು ಕಡೆ ನೋಡಿಕೊಂಡಿದ್ದು 'ಗೊತ್ತಿಲ್ಲವೆಂದು' ತಲೆಯಾಡಿಸಿದಳು.

ಕರ್ಚೀಫ್‌ನ ಅವಳ ಬೆಟ್ಟಿಗೆ ಸುತ್ತಿದ.

ತಿರುಮಲಾಂಬ ಬಂದಿದ್ದು, ಇವನು ಸಿಗರೇಟು ಸೇದುತ್ತಿದ್ದನ್ನ ನೋಡಿ ಕಣ್ಣಲ್ಲಿ

ನೀರು ತುಂಬಿಕೊಂಡು ಹಿಂದಿರುಗಿದ್ದು ಎಲ್ಲಾ ಮೂಕಾಭಿನಯದಲ್ಲಿಯೇ ತೋರಿಸಿ, ಸಿಗರೇಟು ಸೇದೋದು ತಪ್ಪು. ಆರೋಗ್ಯ ಹಾಳಾಗುತ್ತೆ ಅನ್ನೋದನ್ನ ಪೇಪರಲ್ಲಿ ಓದಿದೇಂತ ತಿಳಿಸಿ ಸಿಗರೇಟು ಸೇದಬಾರದೆಂದು ವಿನಂತಿ ಮಾಡಿಕೊಂಡಳು.

ಅವನಿಗೆ ಇದುವರೆಗೂ ಇಷ್ಟು ಒತ್ತಾಯದಿಂದ ಹೇಳಿದವರು ಯಾರಿಲ್ಲ. ಒಮ್ಮೆ ಮೃಣಾಲಿನಿ ಯಾವುದೋ ರೆಕಾರ್ಡ್ಸ್ ನೋಡುತ್ತಿದ್ದವಳು "ನೀನು ಸಿಗರೇಟು ಸೇದೋದು ಕಲಿತಿದ್ದೀಯಾ ?" ತಲೆಯೆತ್ತದೇ ಬಂದವನನ್ನ ಕೇಳಿದಾಗ ಎದುರಿನಲ್ಲೇ ಕೂತ.

"ನಿಮ್ಗೆ ಹೇಗೆ ಗೊತ್ತಾಯ್ತು ? ಇಷ್ಟು ತಡವಾಗಿ ನ್ಯೂಸ್ ಕೊಟ್ಟೋರು ಯಾರು ? ನಾನು ಸಿಗರೇಟು, ಬೀಡಿ ಅಂಥದ್ದನ್ನೆಲ್ಲ ಸೇದೋದು ಕಲಿತು ವರ್ಷಗಳೇ ಆಗಿ ಹೋಯ್ತು. ಅದ್ರಿಂದ ನಿಮ್ಗೇನು ತೊಂದರೆ ಆಗೋಲ್ಲ" ಎಂದು ಹೊರಟಿದ್ದ.

"ನಿಂತ್ಕೋ, ಸಾಗರ್....ಸೀತಾರಾಮ್ ಮಾತುಗಳ್ನ ಕೇಳ್ಬೇಡ. ಅವ್ರ ಅಭ್ಯಾಸಗಳು ನಿನ್ನಲ್ಲಿ ಬೆಳೆಯೋದು ನಂಗಿಷ್ಟವಾಗೋಲ್ಲ" ಎಂದು ಮುಖ ಸಿಂಡರಿಸಿ ಹೇಳಿದರು.

ಮತ್ತೆ ಕೂತ ಸಾಗರ್ ನಕ್ಕುಬಿಟ್ಟ.

"ಯಾವ ಸೀತಾರಾಮ್ ? ನಿಮ್ಮ ಮಾಜಿ ಪತಿಯವ್ರ ಬಗ್ಗೇನಾ ? ಇದ್ನೆಲ್ಲ ಅವ್ರು ನಂಗೆ ಅಭ್ಯಾಸ ಮಾಡಿಸ್ತಾ ಇದ್ದಾರೇಂತ ನಿಮ್ಗೇ ಹೇಳಿದೋರು ಯಾರು ?" ಅವನ ಪ್ರಶ್ನೆಗಳು ಎಷ್ಟು ತೀಕ್ಷ್ಣವಾಗಿದ್ದವೆಂದರೆ ಪಾರ್ಥನ ಬತ್ತಳಿಕೆಯಿಂದ ಕರ್ಣನ ಎದೆ ಸೀಳಲು ಹೊರಟ ಬಾಣಗಳಂತಿತ್ತು.

ಮೃಣಾಲಿನಿ ಸ್ವಲ್ಪ ವಿವೇಕಿಯಾಗಿದ್ದರೂ ಅವನ ಮಾತುಗಳಲ್ಲಿ ಒಳ ಅರ್ಥಗ್ರಹಿಸಿ, ದಂಡಿಸುವ ವಿಧಾನವನ್ನ ಬದಲಾಯಿಸಬಹುದಿತ್ತು. ಅಲ್ಲಿ ಪೂರ್ತಿ ಎಡವಿದರು.

"ಗೆಟ್ ಔಟ್..." ಅಬ್ಬರಿಸಿದ್ದರು ಆಕೆ.

ತನ್ನ ರೂಮಿಗೆ ಹೋಗಿ ಸಾಗರ್ ಸಿಗರೇಟು ಹಚ್ಚಿದ. ಅವನಿಗೆ ಹೆತ್ತವರ ಭಯ ಸ್ವಲ್ಪವು ಇಲ್ಲ. ಸ್ನೇಹ, ಸಲಿಗೆ ಬೆಳೆಯದ್ದರಿಂದ ಮಮಕಾರವು ಇರಲಿಲ್ಲ.

ಆದರೆ ಇಂದು ಅಪರಿಚಿತ ಮೂಗು ಮುಗ್ಧ ಹುಡುಗಿ ಮುಂದಿನ ಪ್ರತಿಭಟನೆ ಹೇಗಿರಬಹುದೆಂದು ಕೂಡ ಯೋಚಿಸದೇ ಸಿಗರೇಟು ಎಸೆಯುವ ಧೈರ್ಯ ಮಾಡಿದ್ದಳು.

ಸುಮ್ಮನೆ ನಿಂತವನ ಕೈ ಅಲುಗಿಸಿ 'ಊಟ ಮಾಡಲು ಬರುವಂತೆ ಬಲವಂತ ಮಾಡಿದಳು. ಬರದಿದ್ದರೇ ತಿರುಮಲಾಂಬ ಪೂರ್ತಿ ನೊಂದುಕೋತಾರೆ. ಕಣ್ಣೀರು ಸುರಿಸ್ತಾರೆ. ದಯವಿಟ್ಟು ಬನ್ನಿ' ವಿನಯದಿಂದ ಬೇಡಿಕೊಂಡಳು.

ಮಾತಿಗಿಂತ ಜೋರಾಗಿಯೇ ಕಣ್ಣಲ್ಲಿ ಬಲವಂತ ಮಾಡಿದಳು.

ಅಷ್ಟರಲ್ಲಿ ಕಲ್ಲೇಶಿ ಪ್ರತ್ಯಕ್ಷನಾದ.

"ಅಣ್ಣ, ಹೊಟ್ಟೆ ಹಸೀತಾ ಇದೆ. ಅಮ್ಮೋರು ಅಡಿಗೆ ಮಾಡಿಟ್ಟು ಕಾಯ್ತಾ ಇದ್ದಾರೆ. ನಮ್ಗೆಲ್ಲ ಉಪವಾಸ ಆಗ್ಬಿಡುತ್ತೆ. ಪ್ಲೀಸ್...ಬಂದ್ಬಿಡಿ. ಇಲ್ಲ, ನಾನು ಯಕ್ಷಗಾನ ನೋಡೋಕೆ ಹೋಗ್ಬಿಡ್ತೀನಿ" ದೈನ್ಯತೆಯ ಜೊತೆಗೆ ಒಂದು ಬೆದರಿಕೆ ಹಾಕಿದ. ಅಂಥದ್ದಕ್ಕೆ ಸಾಗರ್ ಜಗ್ಗುವುದಿಲ್ಲವೆಂದು ಕೂಡ ಅವನಿಗೆ ಗೊತ್ತು.

ಅಂತು ಇಬ್ಬರು ಬಹು ಪ್ರಯತ್ನದಿಂದ ಅವನನ್ನ ಎಳೆ ತಂದಾಗ ಸಪ್ಪಗಿದ್ದ ಗೌರಿ ಮುಖ ಅರಳಿತು. ಬಾಗಿಲಲ್ಲಿ ನಿಂತವಳು ಸಂಭ್ರಮದಿಂದ ಒಳ ಹೋದಳು ತಿರುಮಲಾಂಬಗೆ ವಿಷಯ ಮುಟ್ಟಿಸಲು.

ಇಂದೇಕೋ ತಿರುಮಲಾಂಬ ಮುಂದೆ ತಲೆಯೆತ್ತಲಾಗಲಿಲ್ಲ ಸಾಗರ್‌ಗೆ.

ಕಲ್ಲೇಶಿ ತೊಳೆದು ದೊಡ್ಡ ಸೈಜಿನ ಬಾಳೆಯೆಲೆಯನ್ನ ತಂದು ಹಾಸಿದ. ಗೌರಿ ನೀರಿಟ್ಟರೇ, ಮಾಡಿದ ಅಡಿಗೆ ಪಾತ್ರೆಗಳನ್ನೆಲ್ಲ ಹೊತ್ತು ತಂದ ಗೌರಿ ತಿರುಮಲಾಂಬನ ಒಂದೆ ಎಲೆಯ ಮುಂದೆ ಭುಜಗಳನ್ನಿಡಿದು ಬಲವಂತದಿಂದ ಕೂಡಿಸಿದಳು.

ಅಂತು ಎಲ್ಲಾ ಒಟ್ಟಿಗೆ ಕೂತು ನಗು ನಗುತ್ತಾ ಊಟ ಮಾಡಿದ್ದು ಎಲ್ಲರ ಜೀವನಗಳಲ್ಲು ಬಹುದಿನ ನೆನಪಿನಲ್ಲಿ ಇರುವಂಥದ್ದು. ಸಾಗರ್ ತನ್ನ ಮಾಮೂಲು ಧಾಟಿ ಬಿಟ್ಟು ನಕ್ಕಿದ್ದು ಕೂಡ ಒಂದು ವಿಶೇಷವೇ.

"ಬರ್ತೀನಮ್ಮ" ಮೊದಲ ಸಲ ಹೇಳಿದ ಸಾಗರ್.

'ಸಂಭೋದನೆ' ಅಂಥದ್ದೇನು ಇರಲಿಲ್ಲ ಇಷ್ಟು ದಿನ. ಇಂದು ಕೂಡ ಅರಿವಿನಿಂದೇನು ಹೇಳಿರಲಿಲ್ಲ. ಅವನ ಮನಸ್ಸು, ಮಿದುಳು, ಹೃದಯದ ಮೇಲೆ ತೆಳುವಾದ ಪರದೆಯೊಂದು ಕವಿದಿತ್ತು. ಬದುಕಿಗೆ ಒಂದು ನಿರ್ದಿಷ್ಟ ಗುರಿ ಇರಬೇಕೆಂದೇನು ದಿನಗಳನ್ನ ತಳ್ಳುತ್ತಿರಲಿಲ್ಲ.

ಬಂದವನೇ ಮಲಗಿಬಿಟ್ಟ. ತಾಯಿಯ ನೆನಪಾಯಿತು. ಈ ಸಮಯದಲ್ಲಿ ಏನು ಮಾಡುತ್ತಿರಬಹುದು. ಡಿನ್ನರ್ ಮುಗಿಸಿ ಟಿ.ವಿ.ಯ ಮುಂದೆ ಕೂತಿರುತ್ತಾರೆ. ಒಂದು ಗಂಟೆಯ ಪ್ರೋಗ್ರಾಂ ನೋಡುವುದು ಮೆಂಟಲ್

ರಿಲ್ಯಾಕ್‌ಸೇಕ್ಷನ್‌ಗೋಸ್ಕರ. ಅದರ ಮಧ್ಯೆ ಫೋನ್‌ಗಳು. ಇತ್ತೀಚಿನ ಅಮೇರಿಕನ್ ಬ್ಯಾಂಕ್ ತನ್ನ ಒಂದು ಬ್ರಾಂಚ್‌ನ ತೆಗೆದಾಗ ಆಕೆಗೆ ಆಫರ್ ಬಂದಿದೆಯೆನ್ನುವ ಸುದ್ದಿ.

ಕೈಯಲ್ಲಿ ದೊಡ್ಡ ಹುದ್ದೆ, ದೊಡ್ಡ ಸಂಬಳ. ಗೌರವ ಕೊಡುವಂಥ ಅಧಿಕಾರ. ದಿನವು ಹತ್ತಾರು ಜನ ಹುಡುಕಿಕೊಂಡು ಆಕೆಯ ಛೇಂಬರ್‌ಗೆ ಬರುತ್ತಿದ್ದರು. ಇದೆಲ್ಲ ಸಾಧಾರಣ ವಿಷಯವಲ್ಲ. ಇವೆಲ್ಲ ಮತ್ತಾಗಿ ಆಕೆಯನ್ನ ಆವರಿಸಿದ್ದರಿಂದ ಗಂಡ, ಮಗ ತೀರಾ ಸಾಧಾರಣ ವಿಷಯವಾಗಿ ಕಂಡಿರಬೇಕು.

ಒಂದು ದಿನ ರಾತ್ರಿ ಮೃಣಾಲಿನಿ ಡಿನ್ನರ್ ತಗೊಳ್ಳುತ್ತಿದ್ದಾಗ ಅವನು ಬಂದಿದ್ದ. ಮೃಣಾಲಿಯದು ಅರ್ಧ ಊಟ ಮುಗಿದಿರಬಹುದು. ಬಂದು ಕೂತ. ತಲೆಯೆತ್ತಿ ಒಮ್ಮೆ ನೋಡಿದರು.

"ಎಲ್ಲಿಂದ...ಬಂದೆ ?" ಪ್ರಶ್ನೆ ಚುರುಕಾಗಿತ್ತು.

ಇಂದು ತುಂಬ ಹಸಿದಿದ್ದ. ಬೇಗ ಊಟ ಮಾಡಬೇಕೆಂದು ಬಂದಿದ್ದ. ಈ ಪ್ರಶ್ನೆ ಅವನನ್ನ ನಖ ಶಿಖಾಂತ ಉರಿಯುವಂತೆ ಮಾಡಿತ್ತು. ಟೇಬಲ್ಲು ಮೇಲಿದ್ದದ್ದನ್ನೆಲ್ಲ ಎತ್ತಿ ನೆಲಕ್ಕೆ ಬಿಸಾಡಿದ್ದ.

"ಈಗ ತಿನ್ನಿ" ತ್ನನ್ನ ರೂಮಿಗೆ ಹೊರಟು ಹೋಗಿದ್ದ.

ಅಂದಿನಿಂದ ತಾಯಿ, ಮಗ ಎದುರು ಬದುರಾಗಿ ಡೈನಿಂಗ್ ಟೇಬಲ್‌ನ ಮುಂದೆ ಕೂತಿದ್ದೇ ಇಲ್ಲ. ಮಗನನ್ನು ಮಾತಾಡಿಸಲು ಆಕೆ ಹಿಂಜರಿಯ ತೊಡಗಿದಳು ಈ ಘಟನೆಯ ನಂತರ.

ಮಗನ ಉದ್ದಟತನಕ್ಕೆ ಗಂಡನ ಪ್ರೋತ್ಸಾಹ ಕಾರಣವೆಂದು ತಿಳಿದಳೇ ವಿನಃ ಬೇರೆ ರೀತಿಯಲ್ಲಿ ಯೋಚಿಸಿದ್ದರೇ ಚೆನ್ನಿತ್ತು. ಇಬ್ಬರ ಚದುರಂಗದಾಟದಲ್ಲಿ ದಾಳವಾಗಿ ಉಪಯೋಗಿಸಿಕೊಂಡಿದ್ದರು...ಆಕೆ ಮನಸ್ಸಿಗೆ ತಗೊಂಡಿರಲಿಲ್ಲ. ಗೆಲುವಿನ ಗುದ್ದಾಟದಲ್ಲಿ ಪುಟ್ಟು ವಯಸ್ಸಿನಲ್ಲಿಯೇ ಕ್ಷೋಭೆಗೆ ಒಳಗಾಗಿದ್ದ.

ಎಸ್. ಎಸ್. ಎಲ್. ಸಿ. ಯ ನಂತರ ಮನೆ ಬಿಟ್ಟು ಸಾಗರ್ ಹೋಗಿದ್ದರಿಂದ, ಅವನ ಒಂದು ವರ್ಷದ ವಿದ್ಯಾಭ್ಯಾಸ ಹಾಳಾಗಿತ್ತು. ಆ ಸಂದರ್ಭದಲ್ಲಿ ಬಂದಿದ್ದ ಸೀತಾರಾಮ್ ತಂದೆ ಮಗನಿಗೆ ಬುದ್ಧಿ ಹೇಳಿದ್ದರು.

"ಇದು ಏನೇನು ಸರಿಯಲ್ಲ. ನೀವಿಬ್ರೂ ಡೈವೋರ್ಸ್ ಪಡೆದು ಬೇರೆ ಬೇರೆಯಾಗಿರಬಹುದು. ಆದರೆ ನಿಮ್ಮಿಬ್ಬರಿಗೆ ಒಬ್ಬ ಮಗ ಇದ್ದಾನೆ. ಅವ್ನ ಭವಿಷ್ಯನ ನೀವಿಬ್ರೂ ಸೇರಿಯೇ ರೂಪಿಸ್ಬೇಕು. ದಯವಿಟ್ಟು ಇಬ್ಬರೂ ಫ್ರೀಯಾಗಿ

ಕೂತು ಸಾಗರ್ ಮನೆಯಿಂದ ಹೋಗಿದ್ದಕ್ಕೆ ಕಾರಣವೇನು ? ಇಲ್ಲೇನು ಕಡಿಮೆಯಾಗಿದೆ ? ಬರೀ ಹಣದ ಪೂರೈಕೆಯಿಂದಲೇ ಮಕ್ಕ ಜವಾಬ್ದಾರಿ ಕಳ್ದು ಕೊಳ್ಳೋಕ್ಕಾಗೋಲ್ಲ. ಇದೆಲ್ಲ ನಿಮ್ಮ ಮನಸ್ಸಿನಲ್ಲಿ ಇರ್ಲಿ."

"ಛಿ, ಅವ್ಳು ಒಬ್ಳು ಹೆಣ್ಣಾ ! ಧಿಮಾಕಿನ ಅಡಿಯಲ್ಲಿ ಬಿದ್ದು ಸೋತೋಗಿದ್ದೀನಿ. ನಂಗೆ ಅವ್ಳ ಮುಖ ನೋಡೋ ಇಷ್ಟಾನು ಇಲ್ಲ. ಇಷ್ಟಕ್ಕೆಲ್ಲ ಕಾರಣ ಅವ್ಳೇ." ಮಾಜಿ ಹೆಂಡತಿಯ ಕಡೆ ಕೈ ತೋರಿದ.

ಮಗನ ಮಾತಿಗೆ ಪಿತೃ ಮಹಾಶಯ ಹಣೆಯೊತ್ತಿಕೊಂಡ. ಇಂಥ ಅವಿವೇಕಿ ಮಗನನ್ನ ಹೆತ್ತು ಕೊಟ್ಟ ಪರಲೋಕವಾಸಿಯಾದ ಹೆಂಡತಿಯನ್ನ ಜ್ಞಾಪಿಸಿಕೊಂಡು, ಇದರಲ್ಲಿ ತಮ್ಮ ಪಾಲು ಕೂಡ ಇದೆಯೆಂದು ಒಪ್ಪಿಕೊಂಡರು.

"ಸಿನಿಮಾ ಲೋಕದ ಅತ್ಯಂತ ಪ್ರತಿಭಾಶಾಲಿ ಎಂದು ಬರ್ನಾಡ್ ಷಾನಿಂದ ಪ್ರಶಂಸೆಗೆ ಒಳಗಾದ ಚಾರ್ಲಿ ಚಾಪ್ಲಿನ್ ಬಗ್ಗಿನ ಕೆಲವು ವಿವರಗಳು 'ಚಾರ್ಲಿ ಚಾಪ್ಲಿನ್ ಅಂಡ್ ಹಿಸ್ ಟೈಮ್ಸ್' ನಲ್ಲಿದೆ. ಜಗತ್ತಿನ ದೇಶ ದೇಶಗಳ ಸೀಮಾರೇಖೆ ದಾಟಿ ಸಿನಿಮಾ ಜಗತ್ತಿನ 'ನಂಬರ್ ವನ್' ಎನ್ನಿಸಿದ್ದ ವ್ಯಕ್ತಿ, ಕಲ್ಲು ಮನಸ್ಸಿನವ, ಸ್ವಾರ್ಥ, ಕೋಪಿಷ್ಟ ಎಂದಿದೆ. ಇದ್ಕೆ ಕಾರಣ ಅವ್ನ ಬಾಲ್ಯ ಅನ್ನಿಸೋಲ್ವಾ ? ತಂದೆ ಕುಟುಕು ತಾಯಿ ನರ್ತಕಿ, ೧೪ನೇ ವಯಸ್ಸಿನಲ್ಲಿಯೇ ಅನಾಥನಾದ. ಇದೆಲ್ಲ ಅವನ ಒಳ ಮನಸ್ಸಿನ ಮೇಲೆ ಎಷ್ಟು ಪರಿಣಾಮ ಬೀರಿರಬೇಕು" ಮಗನಿಗೆ ಬುದ್ಧಿ ಹೇಳಲು ದೊಡ್ಡ ಪೀಠಿಕೆಯನ್ನ ಹಾಕಿದರು.

ಸೀತಾರಾಮ್ ಈ ವಿಷಯದಲ್ಲಿ ತೀರಾ ಅವಿವೇಕಿ.

"ಪ್ಲೀಸ್, ನಂಗೆ ಅದೆಲ್ಲ ಏನು ಹೇಳ್ಬೇಡಿ. ಸಾಗರ್ ನನ್ನ ಹತ್ತಿರಾನೇ ಇದ್ದು ಬಿಡ್ಲಿ. ಆಗ ನಾನು ಪೂರ್ತಿ ಜವಾಬ್ದಾರಿ ತಗೋತೀನಿ" ಅಂದು ಕೈ ತೊಳೆದುಕೊಂಡರು.

ಹಣೆ ಚಚ್ಚಿಕೊಂಡರು ಸೀತಾರಾಮ್ ಹಡೆದ ತಂದೆ.

"ಒಬ್ಬ ಮನುಷ್ಯನಿಗೆ ವಿವೇಕ ಬರಲು, ಪಕ್ವವಾಗಲು ನೂರು ವರ್ಷ ಸಾಲ್ದು, ಮೂರು ನೂರು ವರ್ಷಗಳಾದ್ರೂ ಬೇಕೂಂತ ಬರ್ನಾಡ್ ಷಾ ಅಂದರು. ನಿಂಗೆ ಅಷ್ಟು ಸಾಲ್ದೂಂತ ಅನ್ನಿಸುತ್ತೆ" ರೇಗಿದರು. ಅದನ್ನ ಕೇಳಿಸಿಕೊಳ್ಳಲು ಅಲ್ಲಿ ಸೀತಾರಾಮ್ ಇರಲಿಲ್ಲ.

ಅಂದು ಸೊಸೆಯನ್ನು ಅರಸಿಕೊಂಡು ಹೋದಾಗ ಸಂಜೆ ಏಳಾದರೂ ಆಕೆ ಮನೆಗೆ ಬರಲಿಲ್ಲ "ಮೀಟಿಂಗ್‌ನಲ್ಲಿದ್ದೀನಿ. ಬರೋದು ಇನ್ನ ಒಂದ್ಗಂಟೆ ತಡವಾಗುತ್ತೆ. ನಾನು, ಸೀತಾರಾಮ್ ಡೈವೋರ್ಸ್ ತಗೊಂಡಿದ್ದೀವಿ. ನೀವು

ಅವ್ರ ತಂದೇಂತ ನಾನೇನು ನೆಗ್ಲೆಟ್ ಮಾಡ್ತಾ ಇಲ್ಲ. ಡಿನ್ನರ್ ಮುಗ್ಸಿಕೊಳ್ಳಿ. ಆದಷ್ಟು ಬೇಗ ಬರ್ತೀನಿ" ಮಾಜಿ ಸೊಸೆ ಅಪ್ಪಣೆ ಕೊಡಿಸಿದಾಗ ಶಿರಸಾವಹಿಸಿ "ಆಯ್ತು ತಾಯಿ, ನಾಳೆಗೊಂದು ಅಪಾಯಿಂಟ್‌ಮೆಂಟ್ ಕೊಡು. ಜರೂರಾಗಿ ನಿನ್ನೊಂದಿಗೆ ಮಾತಾಡೋದಿದೆ. ನೀನು ಯಾವ ಟೈಮ್ ಫಿಕ್ಸ್ ಮಾಡಿದ್ರೆ... ಆ ಟೈಮ್‌ಗೆ ಬರೋಕೆ ರೆಡಿ" ಶಾಂತ ಸ್ವರದಲ್ಲಿ ಹೇಳಿದರು. ಮೊಮ್ಮಗನ ಭವಿಷ್ಯ ಹಾಳಾಗುವುದು ಆ ಹಿರಿಯ ಜೀವಕ್ಕೆ ಇಷ್ಟವಿಲ್ಲ.

"ನಾಳೆ ಇಡೀ ದಿನ ಬಿಜಿ. ಸಂಜೆ ಒಂದರ್ಧಗಂಟೆ ಪುರಸತ್ತು ಮಾಡ್ಕೋತೀನಿ. ಏಳರ ಸುಮಾರಿಗೆ ಬನ್ನಿ. ಏಳೂವರೆಗೆ ಒಂದು ಫಂಕ್ಷನ್‌ನಲ್ಲಿ ಭಾಗವಹಿಸೋದಿದೆ" ಎಂದರು ಮೃಣಾಲಿನಿ.

ಭಾರವಾದ ನಿಟ್ಟುಸಿರು ದಬ್ಬಿದರು. ಮಗ, ಸೊಸೆ ಇಬ್ಬರು ಏನೇನು ಅರ್ಥವಾಗಲಿಲ್ಲ. 'ಸಾಮರಸ್ಯ' ಅನ್ನೋ ಪದನೆ ಕೇಳಿಲ್ಲ ಎನ್ನುವ ತರಹ ವರ್ತಿಸುವ ಜನಕ್ಕೆ ಬುದ್ಧಿ ಹೇಳುವುದು ಕಷ್ಟವೆನಿಸಿತು.

"ಆಯ್ತು ತಾಯಿ, ಥ್ಯಾಂಕ್ಸ್ "

ತಂದೆ ಮಾತಾಡುವುದನ್ನ ಗಮನಿಸಿದ್ದ ಸೀತಾರಾಮ್ ಉರಿದು ಬಿದ್ದರು. "ನೀವ್ಯಾಕೆ ಫೋನ್ ಮಾಡಿದ್ರಿ? ಅಂಥ ಅಗತ್ಯ ತಾನೇ ಏನಿದೆ ? ಬೇಕೂಂದರೆ ನಿಮ್ಮ ಮೊಮ್ಮಗನಿಗೆ ನಾಲ್ಕು ಬುದ್ಧಿ ಮಾತು ಹೇಳಿ. ಅವ್ನು ಇನ್ನ ಮೃಣಾಲಿನಿ ಮನೆಗೆ ಹೋಗೋದ್ಬೇಡ."

ಮಗನ ಮಾತಿಗೆ ಶಭಾಷ್‌ಗಿರಿ ಕೊಡಬೇಕೆನಿಸಿತು.

"ಭೇಷ್ ಕಣೋ, ನೀನು ಹೇಗೆ ಬೇಕಾದ್ರೂ...ಅಂದ್ಕೋ. ವಿವಾಹಿತ ಸಂಬಂಧಗಳ್ನ ತೊಡೆದು ಹಾಕೋದು ಅಷ್ಟೊಂದು ಸುಲಭವಲ್ಲ. ಅದು ಮಕ್ಕಾದ್ಮೇಲೆ ಮತ್ತಷ್ಟು ಕಷ್ಟ. ತ್ಯಾಗಕ್ಕೂ ಸಿದ್ಧವಾಗ್ಬೇಕು. ಹೆತ್ತವ್ರು ತಮ್ಮ ವೈಯಕ್ತಿಕ ಪ್ರತಿಷ್ಠೆಗಳಿಗಿಂತ ಮಕ್ಕು ಭವಿಷ್ಯದ ವಿಷ್ಯದಲ್ಲಿ ಗಮನ ಕೊಡ್ಬೇಕು. ಇದೆಲ್ಲ ಯಾಕೆ ನಿಮ್ಗೆ ಅರ್ಥವಾಗೋಲ್ಲ" ಸ್ವಲ್ಪ ಅಧಿಕಾರದಿಂದ ಸ್ವರವೇರಿಸಿದರು.

"ಈ ವಿಷ್ಯದಲ್ಲಿ ಯಾರ ಇಂಟರ್‌ಫಿಯರೆನ್ಸ್ ನಾನು ಇಷ್ಟಪಡೋಲ್ಲ. ಅವ್ಳ ದುರಹಂಕಾರ ಜೊತೆ ದಿನ ನರಳ್ತಾ ನಾನು ಬದ್ಕಬೇಕಿತ್ತು. ಐ ಹೇಟ್ ಹರ್" ಭುಸುಗುಟ್ಟಿದರು ಸೀತಾರಾಮ್. ಅವರು ಈಗ ಕೂಡ ತನ್ನ ಮೃಣಾಲಿನಿಯ ಸಂಬಂಧದ ಬಗ್ಗೆ ಯೋಚಿಸಿದರೇ ವಿನಃ ಸಾಗರ್‌ನ ಮುಖ್ಯವಾಗಿ ತೆಗೆದುಕೊಳ್ಳಲಿಲ್ಲ.

ಭರದ್ವಾಜ್ ಒಂದು ಗಂಟೆ ಮುಂಚಿತವಾಗಿಯೇ ಹೋಗಿ ಸೊಸೆಗಾಗಿ ಕಾದು ಕೂತರು. ಅಲ್ಲಿ ಶಿಸ್ತಿತ್ತು. ಆಳುಕಾಳುಗಳಿದ್ದರು. ಯಾವುದಕ್ಕೂ ಕೊರತೆ ಇರಲಿಲ್ಲ. ತೀರಾ ನಿಶ್ಯಬ್ಧ ! ಎಲ್ಲೆಡೆ ಆವರಿಸಿದ್ದ ನಿಶ್ಯಬ್ಧವೇ ಕತೆ ಹೇಳಿದಂತಾಯಿತು.

ಹಾರ್ಲಿಕ್ಸ್ ಹಿಡಿದು ಬಂದ ಕುಕ್‌ನ ಕೇಳಿದರು "ಸಾಗರ್ ಮನೆಗೆ ಎಷ್ಟೊತ್ತಿಗೆ ಬರ್ತಾನೆ?" ಅವನು ಮೇಲೆ ಕೆಳಗೆ ನೋಡಿದ. ನಿರ್ದಿಷ್ಟವಾಗಿ ಇಂಥ ಸಮಯವೆಂದು ಹೇಳುವುದು ಕಷ್ಟವಾಗಿತ್ತು. "ಗೊತ್ತಿಲ್ಲ ಯಜಮಾನ್ರೆ, ಕೆಲವೊಮ್ಮೆ ಹಗಲು ಬರ್ತಾರೆ. ಒಂದೊಂದು ದಿನ ಸಂಜೆ ಬರ್ತಾರೆ. ರಾತ್ರಿ ಬರೋದುಂಟು. ಕೆಲವೊಮ್ಮೆ ಬರೋಲ್ಲ. ಅಲ್ಲಿ, ಇಲ್ಲಿ ಇರೋದ್ರಿಂದ... ಏನು ಹೇಳೋದು ಕಷ್ಟ" ತಲೆ ಕೆರೆದುಕೊಂಡ.

ಒಂದು ವಿಷಯ ಅವರಿಗೆ ಚೆನ್ನಾಗಿ ಅರ್ಥವಾಯಿತು. ಸಾಗರ್ ಕೆಡಲು ಒಂದು ಪ್ರಮುಖವಾದ ಕಾರಣ ಅಲ್ಲ, ಇಲ್ಲಿ ಇರುವುದು. ಇದು ಅವನಿಗೆ ಸಿಕ್ಕ ದೊಡ್ಡ ಸ್ವತಂತ್ರ. ಅದು ದುರುಪಯೋಗವಾದರೂ ಯಾರು ತಿದ್ದಲು ಸಮರ್ಥವಾಗಲಿಲ್ಲ.

ಅವನನ್ನು ಹೋಗುವಂತೆ ಹೇಳಿದ ಭರದ್ವಾಜ್ ಹಾರ್ಲಿಕ್ಸ್ ಕುಡಿದರು. ಅದು ರುಚಿಸಲಿಲ್ಲ. ಮೂರು ಜನ ಮೂರು ದಾರಿ ಹಿಡಿದಿದ್ದರು. ಹಿಂದಕ್ಕೆ ಬರಲು ಎಲ್ಲರದು ಕೆಟ್ಟ ಹಟ. ಅಣು ಬಾಂಬ್ ಬಿದ್ದ ನಂತರದ ಸ್ಥಿತಿಯಾಗಿ ಕಂಡಿತು. ಒಂದು ಸಲ ಅಣುಬಾಂಬ್ ಬಿದ್ದರೇ ಮುನ್ನೂರೈವತ್ತು ಮೈಲಿಗಳು ಸರ್ವನಾಶ. ಅಷ್ಟಕ್ಕೆ ಸುಮ್ಮನಾಗದು ರೆಡಿಯೇಷನ್. ನಿಷ್ಪಕ್ಷಪಾತವಾಗಿ ಎರಡು ದೇಶಗಳನ್ನ ದಹಿಸುತ್ತೆ. ಇಲ್ಲಿ ಇವರಿಬ್ಬರ ಅವಿವೇಕ ಅಣುಬಾಂಬ್ ನಂತೆ ಕೆಲಸ ಮಾಡಿತ್ತು.

ಏಳಕ್ಕೆ ಎರಡು ನಿಮಿಷ ಇರುವಾಗ ಬಂದ ಮೃಣಾಲಿನಿ ಸೋತು ಸೊರಗಿ ಸೊಪ್ಪಾಗಿ ಹೋದಂತೆ ಕಂಡರೂ, ಅದನ್ನ ತೋರ್ಪಡಿಸಿಕೊಳ್ಳದೆ ಗೆಲುವಿನಿಂದ "ಬಂದು ತುಂಬ ಹೊತ್ತಾಯ್ತಾ ? ನಾನು ಮೀಟಿಂಗ್‌ನಲ್ಲಿ ಭಾಗವಹಿಸೋದು ತೀರಾ ಅನಿವಾರ್ಯವಾಗಿತ್ತು. ಇದೇನು ಸ್ವಂತ ಇಂಡಸ್ಟ್ರಿಯಲ್ಲ, ಯಾರ್ದೋ ಮಿದುಳು ಕೆಲ್ಸ ಮಾಡುತ್ತೆ. ಎಂ. ಡಿ. ಅಂತ ಛೇರ್ ಮೇಲೆ ಕೂತುಕೊಳ್ಳೋದ ಸುಲಭ" ಒಂದಿಷ್ಟು ಕುಟುಕಿದರು ಪ್ರಾರಂಭಕ್ಕೆ. ಯಾರನ್ನ ಉದ್ದೇಶಿಸಿ ಈ ಮಾತುಗಳನ್ನ ಆಡುತ್ತಿದ್ದಾಳೆಂದು ಭರದ್ವಾಜ್‌ಗೆ ಗೊತ್ತು. ಒಬ್ಬರನ್ನೊಬ್ಬರು ತೇಜೋವಧೆ ಮಾಡುವುದು ಯಾವ ಪುರುಷಾರ್ಥಕ್ಕೆ?

"ಅಂತು ಡೈವೋರ್ಸ್ ಸಿಕ್ಕಿರೋದು ಮೇಲ್ಮಖಿಕ್ಕೆ. ಮಾನಸಿಕ ಇನ್ನ ನೀವಿಬ್ರೂ ಗುದ್ದಾಡ್ತಾನೆ ಇದ್ದೀರಿ. ಲೀವ್ ಇಟ್. ಹೇಗಿದ್ದೀಯಾ?" ವಿಚಾರಿಸಿದರು.

ಒಂದಿಷ್ಟು ಮೃಣಾಲಿನಿ ಹೇಳಿಕೊಂಡರು. 'ನಾನು' ಎನ್ನುವ ವೈಭವದ ಮೆರೆತವೆ ಪೂರ್ತಿಯಾಗಿ. ತೀರಾ ಬೇಸರವಾಯಿತು ಭರದ್ವಾಜ್‌ಗೆ. ಹೆಚ್ಚು ವೇಳೆ ವ್ಯರ್ಥ ಮಾಡದೆ ಬಂದ ಕೆಲಸ ಮುಗಿಸಬೇಕಿತ್ತು.

"ಹೇಗಿದ್ದಾನೆ ಸಾಗರ್?" ವಿಚಾರಿಸಿದರು.

"ನಾರ್ಮಲ್ ಅನ್ನಿಸುತ್ತೆ? ಏನಾದ್ರೂ ಕೇಳಿದ್ರೆ ಮಾತೆ ಆಡೋಲ್ಲ. ಡಾಕ್ಟ್ರ ಬಳಿ ಹೋಗಿ ಹೆಲ್ತ್ ಚೆಕ್ ಅಪ್ ಮಾಡ್ಸಿಕೊಂಡ್ಬಾಂತ ಹೇಳ್ದೇ. ಅವ್ನು ನಂಗೆ ಒಬಿಡಿಯಂಟ್ ಮಗ್ನೇ ಅಲ್ಲ. ಆ ಮನುಷ್ಯ ಅವ್ನ ಎಲ್ಲಿಗೋ ಕಳ್ಸಿ... ನನ್ನ ಚಿತ್ತಕ್ಷೋಭೆಗೆ ಈಡು ಮಾಡ್ದಾ" ಒಂದು ಭಯಂಕರದ ಅಪರಾಧವು ಸೀತಾರಾಮ್ ಮೇಲೂರೆಸಿ ಬಿಟ್ಟಳು ಮುಲಾಜಿಲ್ಲದೆ.

ಕೆನ್ನೆಗೆ ಬಾರಿಸಿ ಬಿಡಬೇಕೆನಿಸಿತು ಭರದ್ವಾಜ್‌ಗೆ.

"ಛೆ, ಮೃಣಾಲಿನಿ ನಿಂದೆ ಯಿಲ್ ಮೈಂಡ್. ನೀವಿಬ್ರೂ ಕಾದಾಡುವಾಗ ನೊಂದಿದ್ದ. ಡೈವೋರ್ಸ್ ತಗೊಂಡಾಗ ಕುಸಿದಿದ್ದ. ಇಂಥ ಮನಸ್ಸಿನ ಹೆಣ್ಣು ಜೊತೆ ನನ್ಮಗ ಇಷ್ಟು ದಿನ ಹೇಗೆ ಸಂಸಾರ ಮಾಡ್ದ ಈಗ ? ಈಗ ಅವೆಲ್ಲ ಬೇಡ. ಸೀತಾರಾಮ್‌ಗೂ, ನಿನ್ನ ಮಗ ಕಣ್ಮರೆಯಾದುದಕ್ಕೂ ಯಾವ್ದೇ ಸಂಬಂಧವಿಲ್ಲ. ಈಗ ಅವ್ನ ಬಗ್ಗೆ ಏನು ಯೋಚ್ನೆ ಮಾಡಿದ್ದೀಯಾ?" ಭರದ್ವಾಜ್ ಸೀರಿಯಸ್ಸಾದರು. ಹುಬ್ಬುಗಳು ಬಿಗಿದು ಮುಖದ ಶಾಂತತೆ ಹಾರಿ ಹೋಯಿತು.

"ಯೋಚ್ನೋಕೇನಿದೆ ? ಕಾಲೇಜುಗೆ ಹೋಗಿಕೊಳ್ಳಿ. ಹಣಕ್ಕೆ ಅವನೇನು ಪರದಾಡೋದ್ಬೇಡ. ನಿಮ್ಮ ಮಗನಿಗೆ ಒಂದ್ಮಾತು ಹೇಳಿ, ಅವ್ನು ನನ್ನ ಸುಪರ್ಧಿನಲ್ಲೇ ಇರ್‍ಲಿ."

ಮೃಣಾಲಿನಿಯ ಮಾತು ಕೇಳಿ ಭರದ್ವಾಜ್‌ಗೆ ತಲೆ ಚಿಟ್ಟಿಡಿದು ಹೋಯಿತು.

"ನೀನೊಂದು ಕೆಲ್ಸ ಮಾಡು. ಸೀತಾರಾಮ್‌ನ ನಾನು ಒಪ್ಪಿಸ್ತೀನಿ. ನೀವಿಬ್ರೂ ಕೂತು ಸಾಗರ್ ಭವಿಷ್ಯದ ಬಗ್ಗೆ ಸ್ವಲ್ಪ ನಿರಾಳವಾಗಿ ಯೋಚ್ಸಿ ಡೈವೋರ್ಸ್ ತಗೊಂಡ ದಂಪತಿಗಳು ಅನ್ನೋದು ಮರ್‍ತು, ಬರೀ ಸಾಗರ್‌ನ ಹೆತ್ತವರು ಅನ್ನೊದ್ನ ಮಾತ್ರ ಮನಸ್ಸಿನಲ್ಲಿ ಇಟ್ಕೊಂಡ್ ಮನಸ್ಸು ಬಿಚ್ಚಿ ಮಾತಾಡಿ" ಅತ್ಯುತ್ತಮವಾದ ಸಲಹೆ ಕೊಟ್ಟರು.

"ನಂಗೆ ಈ ಸಂಡೇ ಪುರಸತ್ತಿಲ್ಲ" ಬಿರುಸಾಗಿತ್ತು ಆಕೆಯ ಸ್ವರ "ಮತ್ತೆ

ಯಾವಾಗ ನಿಂಗೆ ಬಿಡುವು ಸಿಗುತ್ತೆ?" ಭರದ್ವಾಜ್ ಮತ್ತಷ್ಟು ಸಹನೆ ತಂದುಕೊಂಡರು.

"ನೋಡ್ಬೇಕು, ಟೋಟಲೀ ಈ ತಿಂಗ್ಳು ನಂಗೆ ಬಿಡುವಿಲ್ಲ."

ಸೊಸೆಯ ಮಾತಿಗೆ ಬೆಂಕಿಯ ಮೇಲೆ ಕೂತಂತೆ ಚಡಪಡಿಸಿದರು. ವಿದ್ಯಾವಂತೆ, ರೂಪವಂತೆ, ಬುದ್ಧಿಶಾಲಿಯೆಂದು ಸೀತಾರಾಮ್ ಮೃಣಾಲಿನಿಯನ್ನು ವಿವಾಹವಾದಾಗ ಸಂತೋಷಪಟ್ಟಿದ್ದರು. ಈಗ ಒಬ್ಬ ಹೃದಯಹೀನ ಹೆಣ್ಣು, ಮಾತೃವಾತ್ಸಲ್ಯ ಸೋಂಕಿಲ್ಲದ ನತದೃಷ್ಟೆಯೆಂದುಕೊಂಡಾಗ ಅನಂತ ಮಾನವ ಸಮುದಾಯದ ಬಗ್ಗೆಯೇ ರೋಷ ಉಕ್ಕಿ ಬಂತು.

"ಮೃಣಾಲಿನಿ, ನಿನ್ನ ಉದ್ದೇಶವೇನು ? ಸಾಗರ್ ಹುಟ್ಟಿದಾಗ ಸಂಭ್ರಮಿಸಿದ್ದೆ. ಈಗ ನಿಮ್ಗೇ ಸಂತಾನವಾಗದಿದ್ರೆ...ಚೆನ್ನಾಗಿತ್ತು ಅಂದುಕೋತಾ ಇದ್ದೀನಿ. ನಿಮಿಷ್ವ....ನಿಮ್ಮ ಹಣೆಬರಹ ! ನೀವಿಬ್ರೂ ಸೇರಿ ನನ್ನ ಮೊಮ್ಮಗ್ನ ಬಲಿ ಕೊಟ್ಟು ಬಿಟ್ರೆ" ಎಂದು ನಡೆದು ಬಿಟ್ಟರು.

ಎಚ್ಚೆತ್ತುಕೊಳ್ಳಲು ಇನ್ನೊಂದು ಅವಕಾಶ ಇತ್ತು. ಹಣ ಅಧಿಕಾರ, ಛಲ ಅದಕ್ಕೆ ಅವಕಾಶ ಕೊಡಲಿಲ್ಲ. ಮುಖ ತಿರುವಿಕೊಂಡು ಎದ್ದು ಹೋದರು ಮೃಣಾಲಿನಿ.

ಒಂದು ಅಂತಕ್ಕೆ ಪರದೆಯೆಳೆದಂತಾಯಿತು. ಭರದ್ವಾಜ್ ಇವರುಗಳ ವಿಷಯದಲ್ಲಿ ತಲೆ ಹಾಕುವುದನ್ನ ಬಿಟ್ಟು ಹೊರಟಿದ್ದವರು ಮೊಮ್ಮಗನಿಗಾಗಿ ಕಾದರೂ ಅವನು ಸಿಗಲಿಲ್ಲ.

* * *

ಅಂತು ಬೆಳಿಗ್ಗೆ ಬೇಗ ಬೇಗನೇ ಎಲ್ಲಾ ಸಿದ್ಧವಾದರು. ಬಿಸಿಬೇಳೆಬಾತ್, ಮೊಸರನ್ನ ಜೊತೆ ಆಂಬೋಡೆ, ಒಂದಿಷ್ಟು ಕಾಯಿರಸ ಮಾಡಿ ಕಟ್ಟಿಕೊಟ್ಟರು ತಿರುಮಲಾಂಬ. ಆಕೆಗಂತೂ ಪ್ರಾಯ ಮರಳಿದಂತಾಗಿತ್ತು.

ಸ್ವಲ್ಪ ಮೊಂಡು ಬಿದ್ದಿದ್ದು, ಪರಧ್ಯಾನದಿಂದಿದ್ದ ಸಾಗರ್‌ನ ಹೊರಡಿಸಲು ಎಲ್ಲರು ಶಕ್ತಿ ಮೀರಿ ಪ್ರಯತ್ನ ಮಾಡಿದ್ದು ಸ್ವಲ್ಪ ಸೋಜಿಗದ ವಿಷಯವೇ. ವಿನಯವಿಲ್ಲದ ಒರಟು ತನದ, ಹಿನ್ನೆಲೆ ತಿಳಿಯದ ಇವನ ಮೇಲೇಕೆ ಎಲ್ಲರಿಗೂ ಅಕ್ಕರೆ ? ಒಂದು ಕಡೆ ಸಿಗದವ್ನ ದೇವರು ಬೇರೆಯವರ ಮುಖಾಂತರ ಸಿಗುವಂತೆ ಮಾಡುತ್ತಾನಾ? ವಿಶ್ವದಲ್ಲಿರುವ ವಿಸ್ಮಯಗಳಂತೆ ಇದು ಕೂಡ ಗೂಢವೇ.

ಶ್ರೀವಳ್ಳಿ ಪುರಕ್ಕು, ಕುಂದಣಕ್ಕೂ ಮಧ್ಯೆ ಇರುವ ದುರ್ಗ ಎನ್ನುವ ಕಡೆ ಬಸ್ಸು

ನಿಂತಾಗ ಎಲ್ಲರೂ ಇಳಿದರು. ಸುತ್ತಲೂ ಕಣ್ಣು ಹಾಯಿಸಿದ ಸಾಗರ್ ಪುಲಕಿತನಾದ. ಹಸಿರಿನ ದಟ್ಟವಾದ ರಾಶಿ. ಅದರ ನಡುವೆ ತಾವು ಇದ್ದೀವಿ ಎನ್ನುವಂತೆ ವಿವಿಧ ಜಾತಿಯ ಪುಟ್ಟ ಪುಟ್ಟ ಗಿಡಗಳಲ್ಲಿ ಬಣ್ಣ ಬಣ್ಣದ ಹೂಗಳು. ಎಷ್ಟು ಚೇತೋಹಾರಿಯಾಗಿತ್ತೆಂದರೆ ಕುಣಿದು ಬಿಡಬೇಕೆನಿಸಿತು.

"ಇಲ್ಲಿಂದ ನಾಲ್ಕು ಕಿಲೋಮೀಟರ್. ಬಸ್ಸಿನ ಸೌಕರ್ಯವಿಲ್ಲ. ಹುಡುಗರಂಥವ್ರು ಎದ್ದು ಬಿದ್ದು ಸೈಕಲ್‌ಗಳಲ್ಲಿ ಹೋಗ್ತಾರೆ. ನಮ್ಮಂತವರಂತೂ ನಡೆದೇ ಹೋಗ್ಬೇಕು." ನುಡಿದ ಅಪ್ಪಯ್ಯ ಶಾಸ್ತ್ರಿಗಳು ತಮ್ಮ ಬಾಲ್ಯದ ದಿನಗಳನ್ನ ನೆನಪು ಮಾಡಿಕೊಂಡರು. "ನಾನು ವಿಪರೀತ ತುಂಟ. ನಮ್ಮಜ್ಜಿ ಹಾಕಿದ ಬರೆಗಳು ನೆನಪಿಗೇಂತ ಕಾಲು ಮೇಲೆ ಉಳ್ದುಕೊಂಡಿದೆ. ಅಂದು ನಮ್ಮ ತಾತ ದನ ಬಡಿದಂಗೆ ಬಡೆದರಂತೆ ನಮ್ಮಜ್ಜಿಗೆ" ಹೇಳಿಕೊಂಡರು.

"ಅದು ನಿಮ್ಮ ಪುಣ್ಯ. ಅಕಸ್ಮಾತ್ ಸರೋಜಮ್ಮ ಬರೆ ಹಾಕಿದ್ರೆ ಆಕೆಗೆ ಬಡಿಯೋರ್ನ ನೀವೇ ಗೊತ್ತು ಮಾಡ್ಕೋಬೇಕು" ಎಂದ ಸಾಗರ್ ಚುರುಕಾಗಿ.

ಎಲ್ಲಾ ಒಟ್ಟಿಗೆ 'ಓಹೋ' ಎಂದು ನಕ್ಕರು. ಶಾಸ್ತ್ರಿಗಳು ಕೂಡ ಅವರೊಂದಿಗೆ ಸೇರಿದರು. ಅದನ್ನ ಸೀರಿಯಸ್ಸಾಗಿ ತೆಗೆದುಕೊಳ್ಳಲಿಲ್ಲ. ಸತ್ಯವನ್ನ ಒಪ್ಪಿಕೊಳ್ಳಲು ಎಂದೂ ಹಿಂಜರಿಯರು.

"ಹಾಗೇನಾದ್ರೂ ಗೊತ್ತು ಮಾಡ್ಕೋಬೇಕಾದ್ರೆ....ನಿನ್ನನ್ನೇ ಗೊತ್ತು ಮಾಡ್ಬೇಕು. ಸಧ್ಯಕ್ಕೆ ನೀನೇ ಲಾಯಕ್ಕಾದ ಮನುಷ್ಯ" ನಗು ತುಂಬಿ ಕೊಂಡು ಶಾಸ್ತ್ರಿಗಳು ಹೇಳಿದಾಗ ಮತ್ತೊಮ್ಮೆ ನಗುವಿನ ಪ್ರವಾಹ "ಏನಂತೀಯಾ, ನಾನೇ ಅಗ್ರಿಮೆಂಟ್ ಮಾಡ್ಸಿಕೊಡ್ತೀನಿ" ಬಿಳಿಗಿರಿ ಬಾಯಿ ಹಾಕಿದರು.

"ಬೇಡ, ನಂಗೆ ಅಂಥ ಕೆಲ್ಸ ಹಿಡಿಸೋಲ್ಲ" ಎಂದ ಸಾಗರ್.

ಚಪ್ಪಾಳೆ ತಟ್ಟಿಕೊಂಡು ಕಿಲ ಕಿಲ ನಕ್ಕಳು ಶ್ರೀವಳ್ಳಿ.

ಮಗಳ ಮುಖ ನೋಡಿ ಮೈ ಮರೆತರು ಅಪ್ಪಯ್ಯಶಾಸ್ತ್ರಿಗಳು. "ಇಂಥ ನಗು ಅವ್ಳ ಮುಖದಲ್ಲಿ ಕಂಡು ಎಷ್ಟು ಕಾಲವಾಯಿತೋ" ಅಂದರು ಉದ್ವಿಗ್ನರಾಗಿ.

"ನೀವು ಆ ಉಪ್ಪಿನಕಾಯಿ ಸರೋಜಮ್ಮನ ಓಡ್ಸಿಬಿಡಿ. ಆಗ ಎಲ್ಲಾ ಸರಿ ಹೋಗುತ್ತೆ" ಎಂದ ದಾರಿಯಲ್ಲಿ ಸಿಕ್ಕ ಗಿಡದಿಂದ ಒಂದು ಕಡ್ಡಿಯನ್ನ ಮುರಿದುಕೊಳ್ಳುತ್ತ ಸಾಗರ್.

"ನಿನ್ನ ವಯಸ್ಸು ನಂಗೆ ಇದ್ದಿದ್ರೆ...ಹಾಗೇ ಮಾಡ್ಬಹುದಿತ್ತು. ಈಗ ನಾನೇ ಓಡಿ ಹೋಗ್ಬೇಕು. ಹೋಗೋಕೆ ಕಾಲುಗಳಲ್ಲಿ ತ್ರಾಣವಿಲ್ಲ. ಎಲ್ಲಿವರ್ಗೂ ಓಡ್ಲಿ.

ಆದ್ರೂ ಮೈಯಲ್ಲಿ ತ್ರಾಣವಿರಬೇಕಲ್ಲ. ಅದ್ಕೇ ತೆಪ್ಪಗೆ ಬಿದ್ದಿದ್ದೀನಿ" ತಾವು ರಾಜಿಯಾಗಿದಕ್ಕೆ ಕಾರಣ ಹೇಳಿಕೊಂಡರು.

"ಅಂತು.... ಕಿಲಾಡಿಗಳು" ಅಂದ ಸಾಗರ್.

ಸೂರ್ಯನ ಚುರುಕು ಮುಟ್ಟಿಸುವ ಬಿಸಿಲು. ಗೌರಿ, ಶ್ರೀವಳ್ಳಿ, ಕಲ್ಲೇಶಿಯಂತು ಬ್ಯಾಗುಗಳನ್ನ ಹೊತ್ತು ಮುಂದು ಮುಂದು ಹೋಗುತ್ತಿದ್ದರು. ಮೆಲ್ಲಗೆ ನಡೆಯುತ್ತಿದ್ದ ಇವರುಗಳ ಹಿಂದೆ ಬಿದ್ದಿದ್ದ ಸಾಗರ್.

ಹುಡುಗರು ಸ್ವರ ಮರೆಯಾದ ಕೂಡಲೇ ಕೂಗಿಕೊಂಡರು ತಿರುಮಲಾಂಬ "ಎಷ್ಟೋ ಸಲ ಕಳ್ಳತನಗಳಾಗಿವೆ. ಸಾಗರ್ ಸ್ವಲ್ಪ ಮುಂದೆ ಹೋಗಪ್ಪ, ವಯಸ್ಸಿಗೆ ಬಂದ ಹೆಣ್ಣು ಮಕ್ಳು" ಧಾವಂತ ಪಟ್ಟುಕೊಂಡರು.

ಅದು ತನಗೇ ಕೇಳಿಸಲೇ ಇಲ್ಲವೆನ್ನುವಂತೆ ನಡೆಯುತ್ತಿದ್ದ ಸಾಗರ್ ಒಮ್ಮೆಲೆ "ಕಲ್ಲೇಶಿ..." ಎಂದು ಕೂಗಿದ ಜೋರಾಗಿ. ಅವನ ಕೂಗಿನ ರಭಸಕ್ಕೆ ದನಿ ಎಲ್ಲೆಡೆ ಪ್ರತಿಫಲಿಸಿದಾಂತಾಯಿತು.

ಐದೇ ನಿಮಿಷ ಕಾಣದೇ ಸಾಗಿ ಹೋಗಿದ್ದವರು ಹಿಂದಕ್ಕೆ ಧಾವಿಸಿ ಬಂದರು. ಪೂರ್ತಿ ಬೆವತ ಅವರ ಮುಖಗಳಲ್ಲಿ ಆತಂಕ.

"ಮುಂದೆ...ಮುಂದೆ...ಹೋಗ್ಬೇಡೀಂತ ಎಷ್ಟು ಸಲ ಹೇಳಿಲ್ಲ ಕತ್ತೆಗಳು..." ಬೈಯ್ದರು ತಿರುಮಲಾಂಬ.

ಅದಕ್ಕೆ ಕಾರಣವಿತ್ತು. ಶ್ರೀವಳ್ಳಿ ಜಲಪಾತ ನೋಡಲು ಬಂದ ನಾಲ್ವರು ಕಾಲೇಜು ಹುಡುಗಿಯರಲ್ಲಿ ಇಬ್ಬರು ಹೆಣವಾಗಿದ್ದರು. ದರೋಡೆಗಳು ಆಗಾಗ ನಡೆಯುತ್ತಲೇ ಇತ್ತು.

ತೆಪ್ಪಗೆ ಆ ಕಡೆಯೊಬ್ಬರು ಈ ಕಡೆಯೊಬ್ಬರು ಹಿರಿಯರ ಮಧ್ಯದಲ್ಲಿ ಸೇರಿಕೊಂಡವರು ತುಟಿಕ್ ಪಿಟಿಕ್ ಅನ್ನಲಿಲ್ಲ ಕಲ್ಲೇಶಿ. ಮಧ್ಯೆ ಮಧ್ಯೆ ಒಂದು ಡೈಲಾಗ್ ಹೊಡೆಯುತ್ತಿದ್ದ.

"ಮದ್ವೆಯಾದ ಹೊಸದರಲ್ಲಿ ನಾನು, ಶ್ರೀವಳ್ಳಿ ತಾಯಿ ಒಮ್ಮೆ ಬಂದಿದ್ವಿ. ಆಗ ತುಂಬ ದಟ್ಟವಾದ ಕಾಡು. ಬೆಳಕೇ ಬೀಳ್ತಾ ಇರ್ಲಿಲ್ಲ. ವಿಷ್ಯ ತಿಳ್ದ ಹಿರಿಯರು ಹಿಂದು ಕಟ್ಕೊಂಡೇ...ಓಡ್ಬಂದ್ರು. ವಳ್ಳಿ ತಾಯಿ ಕೂಡ ಇವಳಷ್ಟೆ ಸುಗುಣೇ. ದಿನಕ್ಕೆ ಒಂದೋ...ಎರಡೋ...ಮಾತಾಡಿದ್ರೆ ಮುಗೀತು" ನೆನಪಿಸಿಕೊಂಡರು ಅಪ್ಪಯ್ಯ ಶಾಸ್ತ್ರಿಗಳು.

"ಒಂದ್ಸಲ, ಶೀನಿ ಹುಡ್ಗನಾಗಿದ್ದಾಗ...ಬಂದಿದ್ವಿ. ಆಗ ಇನ್ನ ನಮ್ಮ ಮಾವನವ್ರು

ಬದ್ಕಿದ್ದ ಕಾಲ. ಇವ್ನ ಹುಡುಗರ ಮಧ್ಯೆ ತಪ್ಪಿಸಿಕೊಂಡು, ಎಷ್ಟೊಂದು ಪಂಚಾಯ್ತಿ ಪಟ್ಟೆ. ಈಗ್ಲೂ ನಮ್ಮಿಂದ ತಪ್ಪಿಸಿಕೊಂಡೇ ಹೋಗ್ಬಿಟ್ಟ. ಮಕ್ಳ ಸುಖನು ಹಣೆಯಲ್ಲಿ ಬರೆದಿರ್ಬೇಕು" ತಿರುಮಲಾಂಬ ದನಿಯಲ್ಲಿ ಅಪಾರವಾದ ವ್ಯಥೆ ಇತ್ತು.

ನೋವು, ದುಃಖ ಈ ಸಂದರ್ಭದಲ್ಲಿ ಬೇಕಿರಲಿಲ್ಲ. ಹೆಂಡತಿಯ ಪಕ್ಕಕ್ಕೆ ಸರಿದ ಬಿಳಿಗಿರಿ ಕೈ ಮುಟ್ಟಿ ಕಣ್ಣಲ್ಲಿ ಆ ಮಾತುಗಳೆಲ್ಲ ಬೇಡವೆಂದರು.

ನಾಲ್ಕು ಕಿಲೋಮೀಟರ್ ನಲ್ವತ್ತು ಕಿಲೋಮೀಟರೆನಿಸಿತು ಸಾಗರ್‌ಗೆ. ಆದರೆ ಅಲ್ಲಿಗೆ ತಲುಪಿದ ಕೂಡಲೇ ಬೇಸರ, ನಲ್ವತ್ತು ಕಿಲೋಮೀಟರ್ ಆಚೆಗೆ ಓಡಿ ಹೋಯಿತು. ರಭಸದಿಂದ ಧುಮುಕುತ್ತಿದ್ದ ಶ್ರೀವಳ್ಳಿಯ ಪುಟ್ಟ ಜಲಪಾತ ಚೇತೋಹಾರಿಯಾಗಿತ್ತು. ಹಿಂದಿನ ದಿನಗಳಲ್ಲಿ ಹೆಚ್ಚು ಮಳೆ ಸುರಿದಿದ್ದರಿಂದ ನೀರು ರಭಸವಾಗಿ ಧುಮುಕುತ್ತಿತ್ತು. ಹೂಗಳಂತೆ ಎರಚಾಡಿ ಸನ್ನಿಹದಲ್ಲಿ ನಿಂತವರಿಗೆ ಕಚಗುಳಿ ಇಡುತ್ತಿತ್ತು.

ಸಾಗರ್‌ನ ನೋಟ ಅಲ್ಲಿಂದ ಒಂದಿಂಚು ಕೂಡ ಸರಿಯಲಿಲ್ಲ.

"ಬ್ಯೂಟಿಫುಲ್, ಕಲ್ಲೇಶಿ ಸ್ನಾನ ಮಾಡಿದರ್ಹೇಗೆ?" ಕೇಳಿದ ಅವನನ್ನ. ಅವನಾಗಲೇ ಸಿದ್ಧವಿದ್ದ. ಗೌರಿ ಕಣ್ಣಲ್ಲಿಯೇ ಗದರಿಸುತ್ತಿದ್ದಳು. ಹರಿಯುತ್ತಿದ್ದ ನೀರನ್ನು ತೋರಿಸಿ. ಶ್ರೀವಳ್ಳಿ ಪುರದಿಂದ ಹರಿದು ಬರುವ ಹೊಳೆ ಇಲ್ಲಿ ಜಲಪಾತವಾಗಿ ಧುಮುಕಿ ಶ್ರೀಮುಖಿ ನದಿಯೊಂದಿಗೆ ಬೆರತು ಮುಂದಕ್ಕೆ ಸಾಗುತ್ತದೆ. ಇಲ್ಲಿ ಬಂಡೆಯೊಳಗೆ ಕೊರೆದು ಮಾಡಿದ ಪುಟ್ಟ ದೇವಸ್ಥಾನವಿದೆ. ಒಳಗೆ ಕಲ್ಲಿನಲ್ಲಿ ಮಾಡಿಟ್ಟ ಶ್ರೀವಳ್ಳಿ ದೇವತೆ. ದೇವತೆ ಬಗ್ಗೆ, ದೇವಸ್ಥಾನದ ಬಗ್ಗೆ ಏನೇನೋ ಕತೆಗಳು ಇವೆ. ಅತ್ಯಂತ ರಮ್ಯವಾದ ಪ್ರದೇಶ.

ಪೂಜೆ, ಅರ್ಚನೆಗೆ ಯಾರು ಅರ್ಚಕರು ಬರುತ್ತಿರಲಿಲ್ಲ. ನಿತ್ಯ ಭಕ್ತರು ದಕ್ಷಿಣೆ ಅಂಥದ್ದೆಲ್ಲ ಇದಿದ್ದರೇ, ಯಾರಾದರೂ ಬಂದು ಇಲ್ಲಿ ಅರ್ಚಕರಾಗಿ ನಿಲ್ಲುತ್ತಿದ್ದರೇನೋ ! ದಿನ ಬರೋ ಭಕ್ತರ ಸಂಖ್ಯೆ ಕಡಿಮೆ. ಈ ರಮ್ಯ ತಾಣವನ್ನರಿಸಿ ಪಿಕ್‌ನಿಕ್‌ಗೆ ಬರುವ ಜನ ತಿಂಡಿ, ಬಾಟಲುಗಳನ್ನ ಹೊತ್ತು ದೊಡ್ಡ ದನಿಯಲ್ಲಿ ಸ್ಟೀರಿಯೋ ಹಾಕಿಕೊಂಡು ಕುಣಿಯುತ್ತಿದ್ದರು. ಅಂಥವರು ಈ ಪುಟ್ಟ ಗುಡಿಯ ಬಗ್ಗೆ ತಿರುಗಿ ನೋಡುತ್ತಿರಲಿಲ್ಲ, ಕೆಲವರು ಹೋಗುವಾಗಲೋ, ಬರುವಾಗಲೋ ಕೈ ಮುಗಿದು ಕೆನ್ನೆಗೆ ಹಾಕಿಕೊಂಡರೇ ಮುಗಿದು ಹೋಯಿತು.

ಇಂದು ಯಾರು ಇರಲಿಲ್ಲ. ಇಡೀ ಪ್ರದೇಶ ನಿರ್ಜನವಾಗಿತ್ತು.

ಸಾಗರ್ ಹರಿಯುವ ನೀರಿನಲ್ಲಿ ಕಾಲಿಟ್ಟುಕೊಂಡು ಕೂತ. ತಣ್ಣನೆಯ ಮೃದು ಸ್ಪರ್ಶ ಹಾಯೆನಿಸಿತು.

ಅಪ್ಪಯ್ಯ ಶಾಸ್ತ್ರಿಗಳು, ಬಿಳಿಗಿರಿಯವರು ಕೈಕಾಲು ತೊಳೆದುಕೊಂಡು ನೆರಳಲ್ಲಿ ಕೂತರು ಆಯಾಸ ಪರಿಹರಿಸಿಕೊಳ್ಳಲು. ತಿರುಮಲಾಂಬ ಕೈಕಾಲು ತೊಳೆದು ಪೂಜೆಯ ಸಾಮಾನು ಬಿಚ್ಚಿಟ್ಟರು.

"ಆ ಕಡೆ ಹೋಗಿ ಸ್ನಾನ ಮಾಡ್ಕೊಂಡ್ಬಾ....ಸಾಗರ್. ಪೂಜೆ ಆದ್ಮೇಲೆ ಈಜೋ ಕೆಲ್ಸ ಬೇಡ" ತಿರುಮಲಾಂಬ ಹೇಳಿದರು.

ಇದ್ದಕ್ಕಿದ್ದಂತೆ ಸಾಗರ್‌ನಲ್ಲಿ ಹುರುಪು ಕಮ್ಮಿಯಾಯಿತು. ಮಂಕು ಆವರಿಸಿತು. ಅದನ್ನೆಲ್ಲ ತಡೆಯಲು ಕುಡಿಯಬೇಕಿತ್ತು. ಜೇಬಿನೊಳಕ್ಕೆ ಮೆಲ್ಲಗೆ ಕೈ ಇಳಿಬಿಟ್ಟ. ಹೆಚ್ಚು ಆಯಾಸವೆನಿಸಿತು. ಹೋಗಿ ಮರದ ಕೆಳಗೆ ಅಂಗಾತ ಮಲಗಿದ. ಕಲ್ಲೇಶಿಗೆ ಅರ್ಥವಾಯಿತು ಅವನ ಸ್ಥಿತಿ. ಎಷ್ಟೋ ಸಲ ಕದ್ದು ಸಪ್ಲೈ ಮಾಡಿದ್ದ. ಆದ್ದರಿಂದಲೇ ಅವನು ಪ್ರಿಯ.

"ಅಣ್ಣ, ಅವ್ವಾನೋರು ಕರೀತಾರೆ" ಬಂದು ಕರೆದ ಮೃದುವಾದ ದನಿಯಲ್ಲಿ "ನೀನು ತುಂಬ ಒಳ್ಳೆಯೋನು. ಕುಡಿಯೋದು ಬಿಟ್ಟು ಬಿಡಣ್ಣ. ನಮ್ಮಪ್ಪ ಕುಡ್ದು ಕುಡ್ದು ಸತ್ತೋದ" ಕಣ್ಣೀರಿಟ್ಟ.

ಹೊಡೆಯಲು ಎತ್ತಿದ ಕೈ ಹಾಗೆಯೇ ನಿಂತಿತು. ಅವನಲ್ಲಿ ಹೃದಯವಿತ್ತು. ಅದರಲ್ಲಿ ಮಿಡಿತವು ಇತ್ತು. ಹಣೆಯೊತ್ತಿಕೊಂಡ ಅವನ ಕಣ್ಣಲ್ಲಿ ಘಳ ಘಳ ನೀರು ಉದುರಿದಾಗ ಪಕ್ಕಕ್ಕೆ ತಿರುಗಿ ಒರೆಸಿಕೊಂಡ. 'Tears are not public property' ಇಂಥದೊಂದು ಮಾತನ್ನ ಓದಿದ್ದ. ಬೇರೆಯವರ ಎದುರು ಕಣ್ಣೀರು ಹಾಕಬಾರದು, ಸಾರ್ವಜನಿಕರ ಎದುರಿನಲ್ಲಿ ಕಣ್ಣೀರು ಹಾಕಬಾರದು.

"ನಡಿ ಹೋಗೋಣ" ಅವನನ್ನ ಎಬ್ಬಿಸಿಕೊಂಡು ಬಂದ.

ಅಪ್ಪಯ್ಯ ಶಾಸ್ತ್ರಿಗಳು, ಬಿಳಿಗಿರಿಯವರು ಮೇಲಿನ ಷರಟುಗಳನ್ನ ಬಿಚ್ಚಿ ಶಲ್ಯಗಳನ್ನ ಹೊದ್ದು ಪೂಜೆಗೆ ಸಿದ್ಧರಾಗಿದ್ದರು. ಹರಿಶಿನ, ಕುಂಕುಮದ ಬಟ್ಟಲನ್ನ ತಟ್ಟೆಗೆ ತೆಗೆದಿಡುತ್ತಿದ್ದ ಶ್ರೀವಳ್ಳಿ ಅವನತ್ತ ನೋಟ ಹರಿಸಿ, ಕಣ್ಣಲ್ಲಿಯೇ ಈ ಪ್ರದೇಶ ಹೇಗಿದೆಯೆಂದು ಪ್ರಶ್ನಿಸಿದಳು.

ತಲೆ ಕೆರೆದುಕೊಂಡ ಸಾಗರ್ ಬೇರೆಡೆ ನೋಡಿದ. ಮಾತಿಲ್ಲದೆ ಇವಳು ಹೇಗೆ ಬದುಕಿದ್ದಾಳೆ. ಹುಟ್ಟು ಮೂಗಿಯಲ್ಲ, ಮೊದಲು ಮಾತನಾಡುತ್ತಿದ್ದು ಈ ಮೂಗಿಯಾಗಿರುವುದರಿಂದ ವ್ಯಸನವಿಲ್ಲವಾ? ಯಾವಾಗಲೂ

ಸಂತೋಷವಾಗಿಯೇ ಕಾಣುತ್ತಾಳೆ ? ಹೇಗೆ... ಸಾಧ್ಯ ? ಈ ಪ್ರಶ್ನೆಗೆ ಅವಳಿಂದಲೇ ಉತ್ತರ ಪಡೆಯಬೇಕೆಂದುಕೊಂಡ.

ಮಂತ್ರಗಳೊಂದಿಗೆ ಪೂಜೆ ಷುರುವಾಯಿತು.

ಶಾಸ್ತ್ರೋಕ್ತವಾಗಿ ಅಷ್ಟೋತ್ತರ ಪೂರೈಸಿ ಮಂಗಳಾರತಿ ಎಲ್ಲರಿಗೂ ಕೊಟ್ಟರು. ಅವರು ಶ್ರೀವಳ್ಳಿಗೆ ಅತ್ಯಂತ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಅದಕ್ಕಾಗಿ ಈ ದೇವತೆಯ ಹೆಸರನ್ನ ಮಗಳಿಗೆ ಇಟ್ಟುಕೊಂಡಿದ್ದರು.

ಆಮೇಲೆ ಒಂದು ಕಡೆ ನೆರಳುನಲ್ಲಿ ಕೂತು ಬುತ್ತಿಯ ಗಂಟು ಬಿಚ್ಚಿದರು, ತಿರುಮಲಾಂಬ. ಅಲ್ಲಿಂದಲೇ ಬಾಳೆಯೆಲೆಗಳನ್ನ ತಂದಿದ್ದರು. ಸಾಲಾಗಿ ಎಲೆ ಹಾಕಿದಾಗ ಶ್ರೀವಳ್ಳಿ ಎಲ್ಲರಿಗೂ ಬಡಿಸಿದಳು. ಎರೆದುಕೊಂಡ ಕೂದಲು ಸಡಿಲವಾಗಿ ಜಡೆಯಾಗಿ ಅದಕ್ಕೊಂದು ಕುಚ್ಚು ಹಾಕಿದ್ದರಿಂದ ಅವಳ ತುಂಬಿದ ನಿತಂಬಗಳ ಮೇಲೆ ಹರಿದಾಡುತ್ತಿತ್ತು. ಒನಪು, ವೈಯ್ಯಾರವಿಲ್ಲದ ಮುಗ್ಧ ಬಾಲೆ. ಆದರೆ ಎಲ್ಲರಿಗೂ ಇಷ್ಟವಾಗದು.

ತಿಂದುಂಡು ಎಲ್ಲರು ಎಲೆಗಳನ್ನು ಎಸೆಯುವ ವೇಳೆಗೆ ದೊಡ್ಡ ಗುಂಪೊಂದು ಬಂದಿತ್ತು. ಯುವಕರು, ಯುವತಿಯರು ಸಮ ಸಮವಾಗಿಯೇ ಇದ್ದರು. ನಗು, ಮಾತಿನಿಂದ ಇಡೀ ಪ್ರದೇಶವೆ ಮಲಿನವಾಗಿ ಹೋಯಿತು.

ದೊಡ್ಡದಾಗಿ ಸ್ಟೀರಿಯೋ ಹಚ್ಚಿದರು. ಮಾತೇ...ಮಾತು ! ಮಾತುಗಿಂತ ಮೌನ ಎಷ್ಟೊಂದು ಚೆನ್ನ ಅನ್ನಿಸಿತು ಅಪ್ಪಯ್ಯಶಾಸ್ತ್ರಿಗಳಿಗೆ. ಹರಿಯುವ ನೀರಿನಲ್ಲಿ ಕಾಲನ್ನ ಇಳಿ ಬಿಟ್ಟು ಕೂತ ಸಾಗರ್ ಆ ಕಡೆ ತಲೆ ಕೂಡ ತಿರುಗಿಸಲಿಲ್ಲ.

"ಆ ಜಾಕೆಟ್ ಪ್ಯಾಂಟ್‌ನಲ್ಲಿ ರ್‍ಯಾಂಬೋ ತರಹ ಕಾಣೋಲ್ಲ" ಒಬ್ಬಳ ಕಾಮೆಂಟ್ "ನೋ, ಇಂಡಿಯನ್ ಹೀರೋ ತರಹ ಇನ್ನೊಬ್ಬಳ ವಾದ."

ನಾಲ್ಕು ಯುವತಿಯರು ತಾವಾಗಿಯೇ 'ಹಲೋ' ಎಂದು ಬಂದು ಕೂತರು ಅವನ ಬಳಿಯಲ್ಲಿ. ಒಮ್ಮೆ ನೋಟ ಹರಿಸಿದ. ಅಸಹನೆ ಇತ್ತು ಅವನ ಕಣ್ಣುಗಳಲ್ಲಿ "ಹಾಯ್...ಹೀರೋ..." ಒಬ್ಬಳ ಮಧುರವಾದ ದನಿ.

"ಷಟಪ್..." ಎಂದವನು ಎದ್ದು ಹೋದ.

ಅವನನ್ನೆ ಹಿಂಬಾಲಿಸಿ ಹೊರಟ ಕಲ್ಲೇಶಿ "ಓದೋ ಹುಡ್ಗೀರಿಗೆ ಧೈರ್ಯ ಜಾಸ್ತಿ. ನಂಗೆ ನಿನ್ನ ಮಾತಾಡಿಸೋಕೆ ಭಯ. ಅಂಥದ್ದರಲ್ಲಿ ಅವ್ರು ಎಷ್ಟು ಚೆನ್ನಾಗಿ ಮಾತಾಡಿಸಿದ್ರು....ನೋಡಿದ್ಯಾ ?" ಅವನ ದನಿಯಲ್ಲಿದ್ದ ಹಾಸ್ಯನ ಗುರ್ತಿಸಿದ ಸಾಗರ್ ಹತ್ತಿರಕ್ಕೆಳೆದುಕೊಂಡ.

"ಪ್ಲೀಸ್...ಪ್ಲೀಸ್...ಇಲ್ಲಣ್ಣ ! ನನ್ನ ಬಿಟ್ಬಿಡು" ಕೈ ಮುಗಿದ. ಅವನ ಕುತ್ತಿಗೆಯ ಪಟ್ಟಿ ಹಿಡಿದು "ಪ್ಲೀಸ್... ಹಲಸಿನ ತೊಳೆ ಸೀಬೆಹಣ್ಣು ಮಾರೋಕೆ ಇಟ್ಕೋ. ಶುದ್ಧ ತಲೆಹರಟೆ ನೀನು" ಅತ್ಯಂತ ಮೃದುವಾಗಿ ಬೆನ್ನ ಮೇಲೆ ಒಂದು ಏಟು ಕೊಟ್ಟ.

ಇವರುಗಳನ್ನ ಹಿಂಬಾಲಿಸಿಕೊಂಡು ಬಂದ ಕೆಂಪು ನೀಲಿ ಚೌಕಳಿ ಷರಟಿನ ಯುವಕ "ಸಾರ್...." ಎಂದು ಮುಂದೆ ಬಂದು ನಿಂತ. 'ಏನು' ಎನ್ನುವಂತೆ ನೋಟ ಹರಿಸಿದ.

"ನೀವು ಇಂಡಸ್ಟ್ರಿಯಲಿಸ್ಟ್ ಸೀತಾರಾಮ್ ಅವ್ರ ಮಗ ಅಲ್ವಾ ?" ಅವನ ಪ್ರಶ್ನೆಗೆ ಮಾತೇ ಆಡಲಿಲ್ಲ ಸಾಗರ್ "ನಮ್ತಂದೆ; ನಿಮ್ಮ ಫರ್ಟಿಲೈಸರ್‌ನಲ್ಲಿ ಅಕೌಂಟೆಂಟ್. ಏನು ಸಾರ್ ಇಲ್ಲಿ ? ಪಿಕ್‌ನಿಕ್... ಬಂದಿದ್ರಾ?"

"ಹೌದು ! ಅದ್ರಿಂದ ನಿಮ್ಗೇನಾದ್ರೂ ತೊಂದರೇನಾ ?" ಕಟುವಾಗಿತ್ತು ಸಾಗರ್ ಭಾಷೆ. ಪೆಚ್ಚಾದ "ಖಂಡಿತ ಇಲ್ಲ. ಬರ್ತೀನಿ" ಹಿಂದೆ ಹಿಂದೆ ನೋಡಿಕೊಂಡು ಹೋದವನು ಸುಮ್ಮನಾಗಲಿಲ್ಲ.

ಸಾಗರ್ ಮನೆ ಬಿಟ್ಟು ಹೋಗಿರುವುದು ಅವನಿಗೆ ಗೊತ್ತಿತ್ತು. ಸೀತಾರಾಮ್, ಮೃಣಾಲಿನಿಯ ಡೈವೋರ್ಸ್ ಗುಟ್ಟಾಗಿ ಉಳಿದಿರಲಿಲ್ಲ. ಅವನಪ್ಪ ಆಗಾಗ ಅವನಮ್ಮನಲ್ಲಿ ಪ್ರಸ್ತಾಪಿಸಿದ್ದು ಕೇಳಿದ "ಗಂಡ, ಹೆಂಡತಿ ಮಧ್ಯೆ ಕೂಸು ಬಡವಾಯ್ತು, ಅನ್ನೋ ಹಂಗೆ... ಆ ಹುಡ್ಗನ ಭವಿಷ್ಯನ ಹಾಳು ಮಾಡಿದ್ರು. ರ್‍ಯಾಂಕ್ ಸ್ಟೂಡೆಂಟ್, ಏನು ಪ್ರಯೋಜನ ?" ಇಂಥ ಮಾತುಗಳು ಆಗಾಗ ನಡೆಯುತ್ತಿತ್ತು.

ಮತ್ತೆ ಸಾಗರ್ ಇಲ್ಲಿರೋ ಸಂಗತಿ ಸೀತಾರಾಮ್‌ಗೆ ಗೊತ್ತಿಲ್ಲವಾ ? ಅವನು ನೇರವಾಗಿ ಬಿಳಿಗಿರಿಯವರ ಬಳಿ ಬಂದು ಅವರನ್ನ ಒಂಟಿಯಾಗಿ ಪಕ್ಕಕ್ಕೆ ಕರೆದು ಪ್ರಸ್ತಾಪಿಸಿದ.

"ಆ ಯುವಕ ನಿಮ್ಗೆ ಪರಿಚಯವಾ ?"

ಅವರು ಮುಖ ಮುಖ ನೋಡಿದರು. ದಿನ ಬೆಳಗಾದರೇ ಭಯೋತ್ಪಾದಕರು, ನಕ್ಸಲೇಟ್ಸ್ ಬಗ್ಗೆ ಪೇಪರಿನಲ್ಲಿ ಓದಿದ್ದರು. ಅಂಥ ಒಬ್ಬ ವ್ಯಕ್ತಿಯಾ? ಭಯವೆನಿಸಿತು. ಪೊಲೀಸ್...ಕೋರ್ಟು ಎಂದರೆ ಅವರಿಗೆ ಕೆಟ್ಟ ಕನಸು.

"ಯಾಕೆ, ಏನ್ಹೇಳಿ?" ಉದ್ವಿಗ್ನಗೊಂಡರು.

"ಗಾಬ್ರಿಯಾಗೋಂಥದ್ದೇನಿಲ್ಲ. ಸಾಗರ್ ಒಬ್ಬ ದೊಡ್ಡ ಇಂಡಸ್ಟ್ರಿಯಲಿಸ್ಟ್

ಮಗ. ತುಂಬ ಅನ್ಕೂಲವಂತರು. ಅವ್ರ ತಾಯಿ ಕೂಡ ಒಬ್ಬ ದೊಡ್ಡ ಅಧಿಕಾರಿ. ಇವ್ನು ಕೂಡ ಎಸ್. ಎಸ್. ಎಲ್. ಸಿ. ಮತ್ತು ಪಿ. ಯು. ಸಿ. ಯಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿ. ಇಲ್ಲೆಲ್ಲಾದರೂ ನೆಂಟರ ಮನೆಗೆ ಬಂದಿದ್ದಾರೇನೋಂತ, ವಿಚಾರಿಸ್ದೇ. ನಮ್ತಂದೆ ಅಕೌಂಟೆಂಟ್ ಆಗಿ ಅವ್ರ ಫರ್ಟಿಲೈಸರ್‌ನಲ್ಲಿ ಕೆಲ್ಸ ಮಾಡೋದು. ದೊಡ್ಡವ್ರರ ಮಕ್ಳು. ನಾನು ಮಾತಾಡಿಸಿದ್ರೆ ಮಾತಾಡ್ತಾರೋ...ಇಲ್ವೋಂತ ಅಷ್ಟೆ" ಎಂದವನು ಶ್ರೀವಳ್ಳಿ ಪುರದ ಮಾಹಿತಿ ಸಂಗ್ರಹಿಸಿಕೊಂಡು "ದಯವಿಟ್ಟು ನಾನು ಕೇಳಿದ್ದು, ತಿಳಿಸಿದ್ದು ಏನು ಹೇಳ್ಬೇಡಿ" ರಿಕ್ವೆಸ್ಟ್ ಮಾಡಿಕೊಂಡ.

ಅವನು ತನ್ನ ಹಿಂಡಿನೊಂದಿಗೆ ಸೇರಿ ಹೋದ.

ಅಲ್ಪ ಸ್ವಲ್ಪ ಊಹಿಸಿದ್ದರು ಬಿಳಿಗಿರಿಯವರು. ಅವರ ಊಹೆಗಿಂತ ಮೇಲಿದ್ದ ಕುಟುಂಬದ ಸಂತಾನ ಅವನೆಂದು ತಿಳಿದು ಹರ್ಷದ ಜೊತೆ ನೋವು ಆಯಿತು. ಕೆಲವೊಮ್ಮೆ ತೀರಾ ಒರಟು, ಕೆಲವೊಮ್ಮೆ ಹಣ ವಿಷಯಕ್ಕೆ ಮಿಡಿಯುವುದರ ಜೊತೆಗೆ ಸಿರಿವಂತನ ಸೊಕ್ಕು ತೋರದೇ ಮೈ ಮುಖ ಮಣ್ಣು ಮಾಡಿಕೊಂಡು ಮಣ್ಣಿನ ಹೆಂಟೆಗಳನ್ನ ಎತ್ತಿ ಮನೆ ಕಟ್ಟಿದ್ದ ಕಲ್ಲೇಶಿ, ಗೌರಿಗೆ. ಜೊತೆಗೆ ರಾತ್ರಿಯ ನಿಂಬೆ ಹಣ್ಣಿನ ಪ್ರಸಂಗ ಇವು ಒಬ್ಬ ಹೃದಯವಂತನಲ್ಲಿ ಇರಬೇಕಾದ ಗುಣಗಳು.

ಇಷ್ಟು ವಿಷಯವನ್ನ ತಮ್ಮಲ್ಲಿಯೇ ಇರಿಸಿಕೊಂಡರು ಬಿಳಿಗಿರಿ.

ಗೌರಿ, ಶ್ರೀವಳ್ಳಿ ತಿರುಮಲಾಂಬ ಬಳಿ ಕೂತಿದ್ದು ಕಂಡು ಆ ಕಡೆ ಈಜುತ್ತಿದ್ದ ಕೆಲವು ಯುವಕರು ನೀರು ಎರಚಾಡುವುದು ಇವರುಗಳವರೆಗೂ ಬಂದು ಸಿಡಿಯುತ್ತಿತ್ತು.

ಮುಗ್ಧಳಾಗಿ ಕೂತಿದ್ದ ಶ್ರೀವಳ್ಳಿ ಕೈ ತಟ್ಟಿದ ಗೌರಿ "ಹೋ...ಗೋ...ಣ.." ಎಂದು ಆಕಾಶದ ಕಡೆ ತೋರಿಸಿದಳು. ತಿರುಮಲಾಂಬಗೂ ಸರಿಯೆನಿಸಿತು. "ನಾಲ್ಕು ಕಿಲೋಮೀಟರ್ ನಡೀಬೇಕಲ್ಲ. ಸ್ವಲ್ಪ ಬೇಗ ಹೋದರೇ ಬಸ್ಸು ಹಿಡೀಬಹುದ್ದು" ಎದ್ದೇ ಬಿಟ್ಟರು.

ಅಪ್ಪಯ್ಯ ಶಾಸ್ತ್ರಿಗಳು ವಿದ್ಯಾರ್ಥಿಗಳ ದಂಡು ನೋಡಿ ಮುಖ ಸಿಂಡರಿಸಿದರು. ಗಿಡದ ಕೊಂಬೆಗಳನ್ನ ಮುರಿದು ತಮಾಷೆಯಾಗಿ ಒಬ್ಬರಿಗೊಬ್ಬರು ಬಡಿದಾಡುವುದು ಜೋರಾಗಿ ಕೂಗುವುದು ತಲೆ ಕೆಟ್ಟಿತು ಸ್ಟೀರಿಯೋ ಸಂಗಿತದಿಂದ.

ಆ ಕಡೆಗೆ ನಿಂತವರು ಬಂದು ಬ್ಯಾಗನ್ನ ಎತ್ತಿಕೊಂಡು "ಹೋಗೋಣ, ಇದ್ಕಿಂತ ಮನೆಯಲ್ಲೇ ನೆಮ್ದಿಯಾಗಿ ಇರ್ಬಹುದ್ದು. ಕಲ್ಲೇಶಿ... ಸಾಗರ್‌ನ... ಕರೀರಿ" ಎಂದವರು "ಅಲ್ಲಿ ಮರದ ಕೆಳ್ಗೆ ಕೂತಿದ್ದಾರೆ" ತೋರಿಸಿದರು.

ಶ್ರೀವಳ್ಳಿ, ಗೌರಿ ಇಬ್ಬರು ಅತ್ತ ಬಂದಾಗ, ನೋಡಿದ ಸಾಗರ್ ಇವರ ಕರೆಗೂ ಕಾಯದೆ ಎದ್ದು ಬಂದರು. ಎಲ್ಲರೂ ಕೂಡಿಯೇ ಹಿಂದಕ್ಕೆ ಬಂದಿದ್ದು.

ಹರಿಯುತ್ತಿದ್ದ ಶ್ರೀಮುಖಿ ನದಿಗೆ ಮತ್ತೊಮ್ಮೆ ನಮಸ್ಕರಿಸಿದ ತಿರುಮಲಾಂಬ "ಇವರಿಬ್ರ ಕುತ್ತಿಗೆಗೆ ತಾಳಿ ಬೀಳ್ಲಿ" ಹರಸಿಕೊಂಡು ದೊಡ್ಡ ದನಿಯಲ್ಲಿ, ಬಗ್ಗಿ ಒಂದಿಷ್ಟು ನೀರು ತೆಗೆದು ಇವರುಗಳ ತಲೆಯ ಮೇಲೆ ಪ್ರೋಕ್ಷಿಸಿದರು.

ಸ್ವಲ್ಪ ಕಾಲ ಸದ್ದಡಗಿತು. ನಂತರ ಅದೇ ಮ್ಯೂಜಿಕ್ ಇವರನ್ನ ಬಹಳ ದೂರದವರೆಗೂ ಅಟ್ಟಿಸಿಕೊಂಡು ಬರುತ್ತಿತ್ತು.

ಬಸ್ಸಿನ ದಾರಿಗೆ ಬಂದವರು ಒಂದು ಮರದ ನೆರಳಲ್ಲಿ ನಿಂತರು. ಗೌರಿ, ಶ್ರೀವಳ್ಳಿ ಸೋತವರಂತೆ ತಿರುಮಲಾಂಬ ಜೊತೆ ಕೂತರು.

"ಎಷ್ಟು ಪ್ರಶಾಂತವಾಗಿದ್ದ ಜಾಗ, ಒಂದು ಘಳಿಗೆಯಲ್ಲಿ ಹೇಗೆ ಮಾರ್ಪಾಟಾಗಿ ಹೋಯ್ತು" ಶಾಸ್ತ್ರಿಗಳು ಬೇಸರ ವ್ಯಕ್ತಪಡಿಸಿದರು.

ಕಲ್ಲೇಶಿ ಒಂದು ಕಲ್ಪನಾ ಪ್ರಪಂಚದಲ್ಲಿ ಇದ್ದ. ತನಗೂ ಅವರಿಗೂ ನಡುವೆ ಇದ್ದ ವ್ಯತ್ಯಾಸವನ್ನ ಲೆಕ್ಕ ಮಾಡುತ್ತಿದ್ದ. ಅದು ಬರೀ ದುಡ್ಡಿನ ಲೆಕ್ಕಾಚಾರವಾಗಿ ಕಂಡಿತು. ತಾನು ಕಾಯ್ದಿಟ್ಟ ಕಲ್ಲುಗಳೆಲ್ಲ ಕೆಂಪು, ಪಚ್ಚೆಗಳಾಗಿ ಮಾರ್ಪಟ್ಟರೇ ಏನೇನೋ ಕಲ್ಪಿಸಿಕೊಂಡು ನಗತೊಡಗಿದ.

"ಏನೋ, ಅದು ?" ಕೇಳಿದರು ಶಾಸ್ತ್ರಿಗಳು.

"ಅಂಥದ್ದೇನಿಲ್ಲ, ಸರೋಜಮ್ಮನ ಕಿರಾಣಿ ಅಂಗಡಿಯ ಪಕ್ಕದಲ್ಲಿ ಒಂದು ಅಂಗ್ಡಿ ಇಟ್ಟರೇ ಹೇಗೇಂತ ಯೋಚಿಸ್ತಾ ಇದ್ದಾನೆ. ಅಲ್ಲಿ ಉಪ್ಪಿನಕಾಯಿ ಪೈಲೈಟ್ ಮಾಡ್ತಾನೆ" ಎಂದ ಸಹಜವಾಗಿ ಸಾಗರ್.

ಮೊದಲು ನಕ್ಕಿದ್ದು ಅಪ್ಪಯ್ಯಶಾಸ್ತ್ರಿಗಳೆ. ಮಿಕ್ಕವರು ಜೊತೆಗೂಡಿದರು.

"ನಂಗೆ ಅವ್ನ ಭಯ ಇಲ್ಲ. ಅವ್ನು ಅಂಗ್ಡಿ ಇಟ್ಟರೂ ಸರೋಜಗೆ ಮುಚ್ಚಿಸೋ ಛಾತಿ ಇದೆ. ನೀನು ಇಟ್ಟರೇ ಮಾತ್ರ ಕಷ್ಟ. ಸರೋಜ ಅಂಗ್ಡಿ ಮುಚ್ಚೋದೇನು, ಶ್ರೀವಳ್ಳಿ ಪುರಕ್ಕೆ ವಾಪ್ಸು ಬಂದ್ಬಿಡ್ತಾಳೆ" ಅಪ್ಪಯ್ಯ ಶಾಸ್ತ್ರಿಗಳು ಹೇಳಿಕೊಂಡು ಜೋರಾಗಿ ನಕ್ಕರು. ತಮ್ಮ ವ್ಯಕ್ತಿತ್ವವನ್ನ ತಾವೇ ಹಾಸ್ಯ ಮಾಡಿಕೊಳ್ಳುವಂಥ ಜನ ಅವರು. ಸರೋಜಮ್ಮನ ಬಗ್ಗೆ ಅವರಿಗೆ ಪೂರ್ತಿಯಾಗಿ ಗೊತ್ತಿತ್ತು.

"ನಂಗೆ ಇಂಟರೆಸ್ಟಿಲ್ಲ ಬಿಡಿ" ಎಂದ ಎತ್ತಲೋ ನೋಡುತ್ತ.

ನೇರವಾಗಿ ಸಾಗರ್ ನೋಡಿದರು. ಸಿರಿವಂತರ ಮನೆಯ ಹುಡುಗ. ರ್‍ಯಾಂಕ್ ಪಡೆಯುವಂಥ ವಿದ್ಯಾರ್ಥಿ. ಮನೆ ಬಿಟ್ಟು ಬರಲು ಕಾರಣವೇನು?

ಅವನು ಸಿಗರೇಟು ಸೇದುವುದು ಗೊತ್ತಿತ್ತು. ಕುಡಿಯುವುದು ಕೂಡ ಗೊತ್ತಿತ್ತು. ಒರಟು ಅವಿಧೇಯ - ಇವೆಲ್ಲದರ ಹಿಂದೆ ಏನೋ ಇದೆ. ತಾಯ್ತಂದೆಯರ ಏಕೈಕ ಸಂತಾನ, ಪ್ರೀತಿಯ ಪುತ್ಥಳಿ !

ಅಂತಮುರ್ಖಿಯಾಗಿ ಯೋಚಿಸುತ್ತಿದ್ದ ಗಂಡನನ್ನ ನೋಡಿದ ತಿರುಮಲಾಂಬ "ನಂಗೆ ಬೆಳಿಗ್ಗೆ ಹೇಳಿದ್ರಿ ! ಈಗ ನೀವೇ ವ್ಯಥೆ ಪಡ್ತಾ ಇದ್ದೀರಾ? ಈ ವಯಸ್ಸಿನಲ್ಲಿ ನಮ್ಗೆ ಒಂದಿಷ್ಟು ಧಾರಾಳತನ ಬೇಡ್ವಾ? ಆಕಾಶಕ್ಕೆ ಕೈ ಚಾಚೋ ಬದ್ಲು.... ಇವ್ರನ್ನ ನಮ್ಮ ಮಕ್ಕಳಂತೆ ಯಾಕೆ ಅನ್ಕೋಬಾರ್ದು" ಮೆಲ್ಲಗೆ ಪಿಸುಗುಟ್ಟಿದರು.

'ಹೌದೆಂದು' ತಲೆದೂಗಿದರು ಬಿಳಿಗಿರಿ.

ಧೂಳೆಬ್ಬಿಸುತ್ತ ಬಂದ ಬಸ್ಸು ತುಂಬ ಓವರ್‌ಲೋಡು. ಕಂಡಕ್ಟರ್ ಇಳಿದ ಮೊದಲು. ಒಮ್ಮೆ ಬಸ್ಸು ಕಡೆ ನೋಟ ಹರಿಸಿದವನು ಹುಡುಗರಂಥ ಕೆಲವರನ್ನ ಇಳಿಸಿದ. ಮೇಲಕ್ಕೆ ಒಮ್ಮೆ ನೋಟ ಹರಿಸಿದ. ವಿಪರೀತ ರಷ್ ಆದಾಗ ಪ್ರಯಾಣಿಕರು ಬಸ್ಸು ಟಾಪ್ ಮೇಲೆ ಹತ್ತಿ ಕೂಡುವುದು ಅಸಹಜವೇನಲ್ಲ. ರೋಡು ಕಿರಿದು. ಅಕ್ಕ ಪಕ್ಕಗಳಲ್ಲಿ ಸಾಲು ಮರಗಳು, ಪೊದೆಗಳು. ಬಹುಶಃ ಅಪ್ಪಿ ತಪ್ಪಿ ಎದುರಿಂದ ಬರುವ ವಾಹನಕ್ಕೆ ದಾರಿ ಬಿಡುವ ಸಲುವಾಗಿ ಸ್ವಲ್ಪ ಪಕ್ಕಕ್ಕೆ ಸರಿದಾಗ ಮೇಲಿದ್ದ ಪ್ರಯಾಣಿಕರು ಆಪತ್ತಿಗೆ ಒಳಗಾಗುವುದು ಸಹಜ. ಇಂಥ ಅವಗಢಗಳು ನಡೆಯಬಾರದು. ಹಾಗೆಂದು ಶ್ರೀವಳ್ಳಿಯ ಪುರದ ಪ್ರಾಮಾಣಿಕರನ್ನ ಬಿಡಲಾರದು.

"ನೀವೆಲ್ಲ ಮೇಲೆ ಹತ್ತಿಕೊಳ್ಳಿ. ಶ್ರೀವಳ್ಳಿ ಪುರ ಬಂದ ಕೂಡ್ಲೇ ಇಳ್ದು ಬಿಡ್ಬೇಕು. ಮೇಲೆ ಕೂತು ಹುಡ್ಗಾಟ ಆಡ್ಬೇಡಿ" ಎಚ್ಚರಿಕೆ ನೀಡಿದವನು, ಡ್ರೈವರ್ ಬಳಿಯಲ್ಲಿ ಮಾತಾಡಿ ಪರಿಸ್ಥಿತಿ ವಿವರಿಸಿದ. ಗೌರಿ, ಶ್ರೀವಳ್ಳಿ, ತಿರುಮಲಾಂಬ ಇಲ್ಲದಿದ್ದರೇ ಎಲ್ಲರನ್ನ ಮುಲಾಜಿಲ್ಲದೆ ಬಸ್ಸಿನಲ್ಲಿ ತುರುಕಿ ಬಿಡುತ್ತಿದ್ದ.

ಎಲ್ಲರನ್ನ ಮಾಮೂಲಿ ಕಂಡಕ್ಟರ್ ಮಾತಾಡಿಸಿದ ನಂತರವೇ ಟಿಕೆಟ್ ಹರಿದು ಕೊಟ್ಟಿದ್ದು.

* * *

ಶ್ರೀವಳ್ಳಿಪುರದೊಳಕ್ಕೆ ಬಂದ ಕಾರು ನೇರವಾಗಿ ಬಂದು ನಿಂತಿದ್ದು ಬಿಳಿಗಿರಿಯವರ ಮನೆಯ ಮುಂದೆ. ಊಟ ಮಾಡಿದ ಎಲೆಯನ್ನ ಎಸೆದು ಕೈ ಮೇಲೆ ನೀರು ಹಾಕಿಕೊಳ್ಳುತ್ತಿದ್ದ ತಿರುಮಲಾಂಬ ಬೆಚ್ಚಿ ಬಿದ್ದರು. ಕಾರಿನಲ್ಲಿ ಬರುವಂಥ ಶ್ರೀಮಂತ ಬಂಧು ಬಳಗ ಅವರಿಗೆ ಇರಲಿಲ್ಲ.

ಅವರ ಮಿದುಳಲ್ಲಿ ಮಿಂಚೊಡೆದಂತಾಯಿತು. ಮಗ ದೊಡ್ಡ ಶ್ರೀಮಂತನಾಗಿ ತಮ್ಮನ್ನ ನೋಡಲು ಕಾರಿನಲ್ಲಿ ಬಂದಿದ್ದಾನೆಂದುಕೊಂಡವರು ಒಂದೇ ಉಸುರಿಗೆ ಮಾಯಾವಾಗಿ ಒಳಗೆ ಬಿಳಿಗಿರಿಯವರ ಮುಂದೆ ಪ್ರತ್ಯಕ್ಷವಾದರು.

"ಏನೊಂದ್ರೆ, ಯಾರು ಬಂದಿದ್ದಾರೆ....ನೋಡಿ."

ಬಿಳಿಗಿರಿಯವರಿಗೆ ಗಾಬರಿ. ಅವರ ಮಿದುಳು ಕೂಡ ಇದ್ದಿದ್ದು ಮಗನ ಹಾದಿಯಲ್ಲೆ. ಹೆಂಡತಿಯಷ್ಟೆ ಸಂಭ್ರಮಿತರಾದರು.

"ಶೀನಿ...ಬಂದ್ನಾ ?" ಹರ್ಷದಿಂದ ತೊದಲಿದರು.

"ಹಾಗೇಂತ ಕಾಣಿಸುತ್ತೆ" ತಬ್ಬಿಬ್ಬಾಗಿದ್ದರು.

ಇಬ್ಬರು ಒಟ್ಟಿಗೆ ಬಂದಾಗ ಡ್ರೈವರ್ ಇಳಿದು ಯಜಮಾನನಿಗೆ ಹಿಂದಿನ ಡೋರ್ ತೆಗೆಯುತ್ತಿದ್ದ. ಅವರ ಕಣ್ಣುಗಳು ಕಾತರಿಸಿದವು. ಇಳಿದಿದ್ದು ಸೂಟು ಧರಿಸಿದ ಮಧ್ಯೆ ವಯಸ್ಸು, ನಡು ವಯಸ್ಸಿನ ಮಧ್ಯೆ ಇದ್ದ ವ್ಯಕ್ತಿ.

ಡ್ರೈವರ್ ಮುಂದಕ್ಕೆ ಬಂದವನೇ "ಅಪ್ಪಯ್ಯ ಶಾಸ್ತ್ರಿಗಳು ಯಾರು ?" ವಿಚಾರಿಸಿದ. ಗಂಡ, ಹೆಂಡತಿಗೆ ವಿಸ್ಮಯ "ಅವ್ರು, ಈಗ ಇಲ್ಲಿಲ್ಲ ; ಕುಂದಣದಲ್ಲಿದ್ದಾರೆ" ಹೋಗಿ ನಿಂತ ಯಜಮಾನನಿಗೆ ವಿಷಯ ಮುಟ್ಟಿಸಿದ. ಆ ಮನುಷ್ಯನೇ ಬಂದು "ನಾನು ಸಾಗರ್ ತಂದೆ ಅವ್ನು ಇಲ್ಲಿದ್ದಾನೇಂತ ತಿಳೀತು" ಪರಿಚಯಿಸಿಕೊಂಡರು.

"ಬನ್ನಿ....ಒಳ್ಗಡೆ" ಆಹ್ವಾನಿಸಿದರು.

"ನಿಮ್ಗೆ ಯಾಕೆ ತೊಂದರೆ? ಅವ್ನು ಈಗ ಇಲ್ಲಿದ್ದಾನಾ?" ನಿಂತಲ್ಲಿಂದ ಮುಂದಕ್ಕೆ ಬರದೆ ಕೇಳಿದಾಗ "ತೊಂದರೆ ಎಂಥದ್ದು ! ಸಾಗರ್ ಇದ್ದಾನೆ. ನಿಮ್ಮನ್ನ ನೋಡಿ ಸಂತೋಷವಾಯಿತು. ಹೊರ್ಗೆ ಯಾಕೆ ಒಳ್ಗಡೆ ಬನ್ನಿ" ಒತ್ತಾಯದಿಂದ ಆಹ್ವಾನಿಸಿದರು.

ಅರೆ ಮನಸ್ಸಿನಿಂದಲೇ ಬಂದ ಸೀತಾರಾಮ್, ಸುತ್ತಲು ನೋಟ ಹರಿಸಿ ಸ್ವಲ್ಪ ಮುಜುಗರ ಪಟ್ಟುಕೊಂಡರು. ಇಲ್ಲೆಲ್ಲ ಇರುವ ಹಣೆ ಬರಹ ಇವನಿಗೇಕೆ?

"ಕೂತ್ಕೊಳ್ಳಿ..." ಕುರ್ಚಿಯ ಕಡೆ ಕೈ ತೋರಿಸಿದರು ಬಿಳಿಗಿರಿ.

"ಸ್ವಲ್ಪ ಕಳ್ಸಿಬಿಡಿ. ನಿಮಿಷಗಳು ಕೂಡ ಪುರಸತ್ತು ಇಲ್ದ ಮನುಷ್ಯ ನಾನು" ಎಂದರು ಸೀತಾರಾಮ್. ಬಿಳಿಗಿರಿಯವರು ಪೆಚ್ಚಾದರು. ಅವರು ನಡೆದುಕೊಂಡ ರೀತಿ ಇಷ್ಟವಾಗಲಿಲ್ಲ. ಕಳವಳವಾಗಲೀ, ಕಾತರವಾಗಲಿ ಅವರಲ್ಲಿದ್ದಂಗೆ ಕಾಣಲಿಲ್ಲ.

"ಕರೆಯೋಕೆ ನಾವು ಯಾರು? ಅಪ್ಪಯ್ಯ ಶಾಸ್ತ್ರಿಗಳ ಮನೆಯಲ್ಲಿದ್ದಾನೆ, ಹೋಗಿ ನೋಡ್ಬಹುದು" ತಿಳಿಸಿ ಕೈ ತೊಳೆದುಕೊಂಡರು ಬಿಳಿಗಿರಿ.

ಈಗ ಸೀತಾರಾಮ್‌ಗೆ ತಮ್ಮ ತಪ್ಪಿನ ಅರಿವಾಯಿತು. ತಪ್ಪು ಮಾಡಿದಾಗಿತ್ತು. ಅದಕ್ಕಾಗಿ ತಗ್ಗುವುದಾಗಲೀ, ಕ್ಷಮೆ ಕೇಳುವುದಾಗಲೀ, ಪಶ್ಚಾತ್ತಾಪಡುವುದಾಗಲೀ ಅವರಿಂದಾಗದ ಕೆಲಸ.

"ಇಲ್ಲೇ ಪಕ್ಕದಲ್ಲಿ, ನೋಡಿ" ಅವರೇ ಮತ್ತೆ ಅಂದರು.

ಸೀತಾರಾಮ್‌ಗೆ ಮುಖದ ಮೇಲೊಡೆಸಿಕೊಂಡಂತಾಯಿತು. ಕೂಡುವುದು ಕಷ್ಟವೆನಿಸಿ ಮುಖದ ಮೇಲೆ ಕರ್ಚಿಫ್ ಆಡಿಸಿಕೊಂಡು ಎದ್ದು ಹೊರ ಬಂದವರ ಮುಖ ಚಿಕ್ಕದಾಗಿತ್ತು.

ಕಡೆಗೆ ಬಿಳಿಗಿರಿಯವರ ಬಳಿಗೆ ಡ್ರೈವರ್‌ನ ಕಳಿಸಿದರು. ತಿರುಮಲಾಂಬ ಹೊರಗೆ ಬಂದು ಮನೆ ತೋರಿಸಿದರಷ್ಟೆ. ಸೀತಾರಾಮ್ ಸ್ವಭಾವ ಇಷ್ಟವೆನಿಸಲಿಲ್ಲ.

"ಸಾಗರ್ ಮಾತು ಒರಟೆನಿಸಿದರೂ, ಮಾನವೀಯತೆ ಎಷ್ಟೊಂದು ಧಿಮಾಕ್. ಅವ್ರಿಗೆ ತಂದೆ ಅನ್ನೋಕ್ಕಿಂತ ತಾವೊಬ್ಬ ದೊಡ್ಡ ಶ್ರೀಮಂತ ಅನ್ನೋ 'ಅಹಂ'. ಇದ್ಕೊಳ್ಳಿ, ನಮ್ಗೇನು ! ಬಂದಿದ್ದು ಒಳ್ಳೆದೇ ಆಯ್ತು. ಈಚೆಗೆ ಆ ಹುಡ್ಗನದೊಂದು ಚಿಂತೆ ಹಚ್ಚಿಕೊಂಡಿತ್ತು" ಬಿಳಿಗಿರಿ ಹೆಂಡತಿಗೆ ಹೇಳಿದರು.

ಆ ಮನೆಯನ್ನ ತಮ್ಮ ಬಂಗ್ಲೆಗೆ ಕಂಪೇರ್ ಮಾಡಿಕೊಂಡು ಮುಖ ಸಿಂಗಳಿಸಿದರು ಸೀತಾರಾಮ್ 'ಛಿ, ದರ್ಟಿ ಫೆಲೋ' ಬೈಯ್ದುಕೊಂಡರು ಮನದಲ್ಲಿ. ಆದರೆ ಎದುರಿಗೆ ಬಯ್ಯುವಂಥ ಎದೆಗಾರಿಕೆಯನ್ನ ಕಳೆದುಕೊಂಡಿದ್ದರು ತಂದೆಯಾಗಿ ಕೂಡ.

ಒಳಗೆ ಪ್ರವೇಶಿಸಿದಾಗ ಎದೆಯ ಮೇಲೆ ಕೈ ಕಟ್ಟಿಕೊಂಡು ಉಯ್ಯಾಲೆಯ ಮೇಲೆ ಮಲಗಿದ್ದ ಸಾಗರ್ ಕಣ್ಣು ಮುಚ್ಚಿದ್ದ. ಇವರತ್ತ ತಿರುಗಿ ಕೂಡ ನೋಡಲಿಲ್ಲ.

"ಸಾಗರ್..." ಎಂದರು ಕನಲಿ.

ಆ ದನಿಗೇನು ಬೆಚ್ಚಿ ಬೀಳಲಿಲ್ಲ. ನಿಧಾನವಾಗಿ ಎದ್ದು ಕೂತ. ಹುಚ್ಚು ರಕ್ತದ ಸಂಚಾಲನ. ಸ್ವಲ್ಪ ಪ್ರಯತ್ನಪಟ್ಟಿದ್ದರೇ ಅವರೆದೆಯ ತಂದೆಯ ಪ್ರೇಮದಲ್ಲಿ ತೇಲಿ ಹೋಗುತ್ತಿದ್ದನೇನೋ, ಹಾಗಾಗಲಿಲ್ಲ.

"ಏನಿಲ್ಲ, ನಿನ್ನ ಎಷ್ಟು ಕಡೆ ಹುಡುಕಿಸೋದು. ಪೊಲೀಸ್‌ಗೆ ಕಂಪ್ಲೇಂಟ್ ಕೊಡೋಕೆ ನೀನು ಮಗುವಲ್ಲ. ಆ ಮೃಣಾಲಿನಿಯೇ ಈ ಪ್ರದೇಶವನ್ನು ಆಯ್ದು ಕಳಿಸಿರಬೇಕು. ಅಂತು ಸೂಪರ್ ಪ್ಲಾನ್ ಸೀತಾರಾಮ್ ಮುಂದೆ ಇದೆಲ್ಲ ನಡ್ಯೋಲ್ಲ. ನೀನು ನನ್ನ ಮೂಲಕವೇ ಚಲಾವಣೆ ಆಗ್ಬೇಕು" ದೃಢವಾಗಿ ನುಡಿದರು.

"ಏನು ಹಾಗೆಂದರೇ?" ಉಯ್ಯಾಲೆಯಿಂದ ಕೆಳಗಿಳಿದ.

"ನೀನೊಬ್ಬ ದೊಡ್ಡ ಇಂಡಸ್ಟ್ರಿಯಲಿಸ್ಟ್ ಮಗ. ನಿನ್ನದಾಗಿ ಫ್ಯಾಕ್ಟರಿಗಳು ಇವೆ, ಬಂಗ್ಲೆ ಇದೆ, ಬ್ಯಾಂಕ್ ಬ್ಯಾಲೆನ್ಸ್ ಇದೆ. ಇಲ್ಲಿ ಸಾಯೋ ಹಣೆಬರಹ ನಿನಗ್ಯಾಕೆ ?" ಅಸಹ್ಯಿಸಿಕೊಂಡು ಸ್ವರವೇರಿಸಿದರು.

ಸಾಗರ್ ಜೋರಾಗಿ ನಕ್ಕು ಬಿಟ್ಟ. ಆ ನಗೆ ಅಲೆ ಅಲೆಯಾಗಿ ಎಲ್ಲೆಡೆ ರಾಚಿತು.

ಏನು ಮಾಡಬೇಕೋ ಸೀತಾರಾಮ್‌ಗೆ ತೋಚಲಿಲ್ಲ. ಸ್ವಲ್ಪ ಮೃದುವಾಗಿ ಒಳ್ಳೆಯ ಮಾತುಗಳಿಂದ ಅವನನ್ನು ಕರೆದೊಯ್ಯಬೇಕೆಂದು ನಿಶ್ಚಯಿಸಿಕೊಂಡು ಬಂದಿದ್ದು ಸ್ವಲ್ಪ ತಿರುವು ಮುರುವಾಗಿತ್ತು. ಪ್ರತಿಯೊಬ್ಬ ಮನುಷ್ಯ ಒಂದಲ್ಲ ಒಂದು ಸಂದರ್ಭದಲ್ಲಿ ಇಂಥ ಇಕ್ಕಟ್ಟಿಗೆ ಸಿಕ್ಕಿಕೊಳ್ಳುತ್ತಾನೆ. ಇದೇ ರೀತಿ ವರ್ತಿಸಬೇಕೆಂದು ಅಂದುಕೊಂಡರೂ, ಅನಗತ್ಯವಾಗಿ ಎಚ್ಚರ ತಪ್ಪಿ ಏನೇನೋ ಕ್ರಿಯೇಟ್ ಆಗಿ ಬಿಡುತ್ತೆ. ಇದಕ್ಕೆ ಸಂದರ್ಭ ಸನ್ನಿವೇಶಗಳು ಹೊಣೆಯೋ, ಅಥವಾ ಎದುರಿಗಿನ ವ್ಯಕ್ತಿಯನ್ನ ಹೊಣೆಯಾಗಿಸುವುದು, ಅಂತು ನಮ್ಮ ಕೈ ಮೀರಿ ನಡೆದು ಹೋಗುತ್ತೆ.

"ನಾನೇನಾದ್ರೂ ತಪ್ಪಾಗಿ ಮಾತಾಡಿದ್ನಾ?" ಅಂದರು. ಅವರಿಗೆ ಈಚೆಗೆ ಸ್ವಲ್ಪ ಬಿ.ಪಿ. ಇತ್ತು. ಟೆನ್‌ಷನ್ ಬೇಡವೆಂದು ಎಚ್ಚರಿಸಿದ್ದರು ಡಾಕ್ಟರ್. ಮುಖದ ಬೆವರೊತ್ತಿಕೊಂಡಾಗ, ಸಾಗರ್ ಅವರ ಕೈ ಹಿಡಿದು ಉಯ್ಯಾಲೆಯ ಮೇಲೆ ಕೂಡಿಸಿ ಒಂದು ಲೋಟ ನೀರು ತಂದು ಕೊಟ್ಟ "ಸ್ವಲ್ಪ ಕುಡ್ದು...ರಿಲ್ಯಾಕ್ಸ್ ಮಾಡ್ಕೊಳ್ಳಿ" ಎಂದವನು ಹಿಂದಿನ ಬಾಗಿಲಿನಿಂದ ಹೊರಗೆ ಹೋಗಿ ನಿಂತ.

ಇಲ್ಲಿಂದ ಹೊರಡುವ ನಿಶ್ಚಯ ಮಾಡಿಕೊಂಡು ತನ್ನ ಬಟ್ಟೆಗಳನ್ನ ಬ್ಯಾಗ್‌ನೊಳಕ್ಕೆ ತುರುಕಿಕೊಂಡಿದ್ದ. ಎಲ್ಲಿಗೆಂದೇನು ನಿಶ್ಚಯಿಸಿರಲಿಲ್ಲ. ಈಗ ತಲೆಯಲ್ಲಿ ಆಂದೋಲನ.

"ಸಾಗರ್....." ಕೂಗಿಗೆ ಒಳ ಬಂದ.

ಕೈ ಕಟ್ಟಿ ತಲೆ ಬಗ್ಗಿಸಿಕೊಂಡು ನಿಂತ. ಸೀತಾರಾಮ್, ಮೃಣಾಲಿನಿಯ ಅಭಿಪ್ರಾಯಗಳನ್ನ ಗಾಳಿಗೆ ತೂರಿ ಆರ್ಟ್ಸ್ ತಗೊಂಡು ಡಿಗ್ರಿಗೆ ಜಾಯಿನ್ ಆಗಿದ್ದ. ಈಗ ಡಿಗ್ರಿಯಲ್ಲಿ ಎರಡನೇ ವರ್ಷದ ಸ್ಟೂಡೆಂಟ್. ಎರಡು ವರ್ಷ ವಿದ್ಯಾಭ್ಯಾಸವನ್ನು ಡಿಸ್‌ಕಂಟಿನ್ಯೂ ಮಾಡಿದ್ದ.

ಸೀತಾರಾಮ್ ಗಂಟಲು ಸರಿಪಡಿಸಿಕೊಂಡರು ಕೆಮ್ಮಿ. ಮಗ ಕೊಟ್ಟ ನೀರು ಹಾಗೆಯೇ ಇತ್ತು. ಅವರು ಕುಡಿಯುವುದು ಮಿನರಲ್ ವಾಟರ್.

ಅತ್ತ ನೋಟ ಹರಿಸಿದವನು ಅರ್ಥ ಮಾಡಿಕೊಂಡು ಕಾರು ಬಳಿ ನಿಂತ ಡ್ರೈವರ್‌ಗೆ ಚಪ್ಪಾಳೆ ತಟ್ಟಿ ಕುಡಿಯಲು ನೀರು ತರುವಂತೆ ಸನ್ನೆ ಮಾಡಿದ.

ಬಾಟಲ್ ಹಿಡಿದು ಬಂದ ಡ್ರೈವರ್ ಅಪರಿಚಿತನೇನಲ್ಲ "ಸಲಾಂ ಸಾಬ್" ಎಂದ ವಿನಯದಿಂದ. ತಲೆದೂಗಿ ಒಳಗೆ ಬಂದವನು ಬಾಟಲ್‌ನ ಮುಚ್ಚಳ ಓಪನ್ ಮಾಡಿ ಅವರ ಮುಂದಿಡಿದ. ಕುಡಿದು ಅವನಿಗೆ ಹಿಂದಿರುಗಿಸಿದರು.

"ನೀನು ಪದೇ ಪದೇ ಮನೆ ಬಿಟ್ಟು ಹೋಗೋದ್ರಿಂದ ನಿನ್ನ ಭವಿಷ್ಯ ಹಾಳಾಗುತ್ತೆ. ಅವಳೊಬ್ಬ ಕಾಮನ್‌ಸೆನ್ಸ್ ಇಲ್ಲ ಲೇಡಿ" ಮತ್ತೆ ಮೃಣಾಲಿನಿಯನ್ನ ಬಯ್ಯುವ ತಪ್ಪು ಮಾಡಿದರು ಸೀತಾರಾಮ್. ಸಾರ್ವಜನಿಕ ಕ್ಷೇತ್ರದಲ್ಲಿ ದೊಡ್ಡ ಹೆಸರು ಮಾಡಿರುವ ವೈಯಕ್ತಿಕ ಕ್ಷೇತ್ರದಲ್ಲಿ ಯಾಕೆ ಇಂಥ ತಪ್ಪು ಮಾಡುತ್ತಾರೆ? ಈ ಪ್ರಶ್ನೆಗೆ ಸ್ವತಹ ಸೀತಾರಾಮ್ ಕೂಡ ಉತ್ತರಿಸಲಾರರು.

"ಭವಿಷ್ಯ ಅಂದರೇನು? ಯಾವ ಲೇಡಿ ಬಗ್ಗೆ ನೀವು ಮಾತಾಡೋದು? ನಿಮಿಷ್ಟಕ್ಕೆ ಸಮಾಜದಲ್ಲಿ ಹೆಸರು ಮಾಡಿರುವ ತನ್ನ ಕ್ಷೇತ್ರದಲ್ಲಿ ಅತ್ಯಂತ ಪ್ರತಿಭಾಶಾಲಿಯೆನಿಸಿರುವ, ಸಂಬಂಧಪಡದ ಒಬ್ಬ ಹೆಣ್ಣಿನ ಕಾಮನ್‌ಸೆನ್ಸ್‌ನ ಬಗ್ಗೆ ಮಾತಾಡ್ಬೇಡಿ." ಅವನ ಕಂಠ ನಡುಗುತ್ತಿತ್ತು. ಮೃಣಾಲಿನಿ ಪ್ರೀತಿ, ಸ್ನೇಹ ಏನು ತೋರದೇ ಇರಬಹುದು. ಆದರೆ ಅವನನ್ನ ಹೆತ್ತ ತಾಯಿ !

ಸೀತಾರಾಮ್ ಮೇಲೆದ್ದುಬಿಟ್ಟರು. ಸಾಗರ್ ತಾಯಿಯನ್ನ ವಹಿಸಿಕೊಂಡು ಮಾತಾಡಿದ್ದು ಅವರಿಗೆ ಸರಿ ಬೀಳಲಿಲ್ಲ.

"ಗೋ ಟು ಹೆಲ್, ಎಲ್ಲಾದ್ರೂ ಹಾಳಾಗಿ ಹೋಗು. ನಂಗೇನಾಗ್ಬೇಕಾಗಿದೆ. ಅವ್ವಿಗೆ ಸರ್‍ಯಾದ ಮಗ" ಸಿಡಿದುಬಿದ್ದರು. ಬಾಗಿಲವರೆಗೂ ಹೋಗಿ ಮತ್ತೆ ಹಿಂದಕ್ಕೆ ಬಂದರು.

"ನಿಂಗೆ ಲಾಸ್ಟ್ ಛಾನ್ಸ್ ! ನನ್ನ ಜೊತೆ ಬಂದ್ಬಿಡು. ಮುಂದೊಂದು ದಿನ ತಪ್ಪು ಮಾಡ್ದೆಂತ ಅಂದ್ಕೊತೀಯಾ. ನೀನು ಈಗ ನನ್ನ ಜೊತೆ ಇರೋದು

ಕ್ಷೇಮ. ನಿನ್ನ ಭವಿಷ್ಯಕ್ಕೂ ಒಳ್ಳೇದು. ನಡೀ...." ಅಧಿಕಾರದಿಂದ ಮಾತಾಡಿದರೂ, ಅವರ ದನಿ ತತ್ತರಿಸುತ್ತಿತ್ತು.

"ಟೆನ್‌ಷನ್ ಒಳ್ಳೇದಲ್ಲ. ಬೇಗ ಡಾಕ್ಟು ಸಿಕ್ಕೋಲ್ಲ. ತಾವು ಆದಷ್ಟು ಬೇಗ ಹಿಂದಿರುಗಿ." ಇಷ್ಟೇ ಹೇಳಿದ್ದು ಸಾಗರ್. ಆದಷ್ಟು ಬೇಗ ಇಲ್ಲಿಂದ ಹೋಗುವುದು ಅವರ ಆರೋಗ್ಯಕ್ಕೆ ಹೆಚ್ಚು ಒಳ್ಳೆಯದೆಂದು ಅವನ ಅಭಿಪ್ರಾಯ.

ಸೀತಾರಾಮ್ ದಢ ದಢ ಹೋದರು. ಕಾರು ಬಳಿಯಲ್ಲಿ ನಿಂತ ಡ್ರೈವರ್‌ನ ಚಪ್ಪಾಳೆ ತಟ್ಟಿ ಕರೆದು "ಹುಷಾರಾಗಿ ಕರ್ಕೊಂಡ್ಹೋಗು ಡ್ಯಾಡಿನಾ. ಹಾಗೇ ಒಂದ್ಸಲ ಡಾಕ್ಟು ಅಂಕಲ್‌ಗೆ ಫೋನ್ ಮಾಡು" ಸೂಚಿಸಿದವನು ಒಳಗೆ ಬಂದು ಬಾಗಿಲು ಮುಚ್ಚಿಕೊಂಡ.

ಮಗುವಿನಂತೆ ಒಂದು ಮೂಲೆಯಲ್ಲಿ ಕೂತುಕೊಂಡು ರೋಧಿಸಿದ. ಇಡೀ ರಾತ್ರಿಗಳು ಜಗಳವಾಡಿ ಆ ಪ್ರಕರಣಗಳನ್ನ ಅವನ ಮಸ್ತಿಷ್ಕದಲ್ಲಿ ನಿಲ್ಲಿಸಿಬಿಟ್ಟಿದ್ದರು. ಒಂಟಿಯಾಗಿ ರೂಮಿನಲ್ಲಿ ಕೂತು ಅತ್ತಿದ್ದ. ತಂದೆ, ತಾಯಿ ಇಬ್ಬರು ಇದ್ದರು ಯಾರು ಕಣ್ಣೀರು ತೊಡೆದು ಸಂತೈಯಿಸಿ ಪ್ರೀತಿ ತೋರುವ ಕಷ್ಟ ತೆಗೆದುಕೊಂಡಿರಲಿಲ್ಲ.

ಮುಂದಕ್ಕೆ ಹೋದ ಕಾರು ಊರ ಬಾಗಿಲ ಅಂಚಿನಲ್ಲಿ ನಿಂತಿತು, ಸೀತಾರಾಮ್ ಮಾತಿನಂತೆ.

"ಕ್ಯಾ ಸಾಬ್, ಕಾರು ಹಿಂದಕ್ಕೆ ತಿರುಗಿಸ್ಲಾ ?" ಕೇಳಿದ.

ಅವರ ಎದೆಯಲ್ಲಿ ಒಂದು ರೀತಿಯ ಘರ್ಷಣೆ. ಮಗ ತಮ್ಮನ್ನೆ ಬೇಕೆಂದು ಅವಮಾನಿಸಿದ್ದಾನೆ ಎನ್ನುವ ಕ್ಷೋಭೆ. ಇದಕ್ಕೆ ಪರೋಕ್ಷವಾಗಿ ಮೃಣಾಲಿನಿಯೇ ಕಾರಣ. ಸಿಟ್ಟು, ಈ ಎರಡು ಅವರ ವಿವೇಕವನ್ನ ಕೆಲವು ಕ್ಷಣಗಳು ಧ್ವಂಸ ಮಾಡಿತು.

"ನೋ, ನಡೀ...." ಎಂದು ಹಿಂದಕ್ಕೆ ಒರಗಿದರು.

ಕುಂದಣ ತಲುಪಿತು. ಆಗ ಅವರಿಗೆ ಬಿಳಿಗಿರಿಯ ನೆನಪಾಯಿತು. ಸ್ವಲ್ಪ ಅವರ ಸಹಾಯ ತೆಗೆದುಕೊಂಡಿದ್ದರೇ ಚೆನ್ನಾಗಿತ್ತು ಅಂತ ಅನ್ನಿಸಿತು. ಕಾರನ್ನ ಹಿಂದಕ್ಕೆ ತಿರುಗಿಸುವಂತೆ ಡ್ರೈವರ್‌ಗೆ ಹೇಳಿದರು. ಅವನು ಡ್ರೈವರ್ ಕಮ್ ಬಾಡಿಗಾರ್ಡ್.

ನೇರವಾಗಿ ಬಂದು ಕಾರು ಬಿಳಿಗಿರಿಯವರ ಮನೆಯ ಬಳಿ ನಿಂತಿತು. ಸ್ವಾಭಿಮಾನ ಅವರನ್ನ ಹಿಂದಕ್ಕೆಳೆಯುತ್ತಿತ್ತು. ಮಗ ತಮ್ಮವನು, ಅವನಿಗಾಗಿ

ಬೇರೆಯವರ ಸಹಾಯ ಅಪೇಕ್ಷಿಸುವುದು ತೀರಾ ಅವಮಾನವೆನಿಸಿದರು, ಬೇರೆ ದಾರಿ ಇರಲಿಲ್ಲ.

ಕೆಳಗಿಳಿದವರು ಅತ್ತಿತ್ತ ನೋಟ ಹರಿಸಿದರು. ಸಾಲು ಮನೆಗಳು ಇರಲಿಲ್ಲ. ಅಷ್ಟಿಷ್ಟು ದೂರಕ್ಕೆ ಒಂದೊಂದು ಮನೆ ಇತ್ತು. ಕೆಲವು ಮನೆಗಳಂತು ತೀರಾ ದೂರ ದೂರವೇ ಇತ್ತು. ಮನೆಗಳ ಮುಂದೆ ಆವರಿಸಿಕೊಂಡಿರುವ ಗಿಡಗಳ ಸಮೂಹ. ಒಂದೊಂದು ಮನೆಯ ಮುಂದೆ ಕಬ್ಬಿಣದ ಫೆನ್ಸಿಂಗ್ ಹಾಕಿದ್ದರೇ, ಕೆಲವರು ತಮ್ಮ ಮನೆಯ ಅಂಗಳದಲ್ಲಿನ ಗಿಡಗಳನ್ನ ಕಾಯ್ದುಕೊಳ್ಳಲು ಬಿದಿರಿನ ಕಡ್ಡಿಗಳನ್ನ ಹೂಳಿ ತಂತಿಗಳನ್ನ ಕಟ್ಟಿಕೊಂಡಿದ್ದರು. ಇನ್ನ ಕೆಲವರು ಕಾಂಪೌಂಡ್‌ನ ಕಳ್ಳಿಯಿಂದಲೇ ಸಿದ್ಧ ಪಡಿಸಿಕೊಂಡಿದ್ದರು.

ಅಂತು ಇಂಥ ಊರನ್ನ ನೋಡುತ್ತಿರುವುದು ಸೀತಾರಾಮ್‌ಗೆ ಹೊಸದೆನಿಸಿತು. ದೆಹಲಿ, ಹೈದರಬಾದ್‌ನಲ್ಲಿ ಅವರ ವಿದ್ಯಾಭ್ಯಾಸ ಸಾಗಿದ್ದು. ಪಟ್ಟಣದ ಬದುಕು ಅವರಲ್ಲಿ ಭಾಗವಾಗಿ ಹೋಗಿತ್ತು.

"ಹೋಗಿ....ವಿಚಾರ್‍ಸಿ" ತಾವು ಕಾರಿನಲ್ಲಿ ಕೂತು ಡ್ರೈವರ್‌ನ ಬಿಳಿಗಿರಿಯ ಮನೆಗೆ ಕಳಿಸಿದರು. ಹೋದವನು ಬೇಗ ಹಿಂದಿರುಗಿ "ಯಾರು, ಬೇಕೂಂತ...ಕೇಳಿದ್ರು" ವಿಷಯ ಮುಟ್ಟಿಸಿದ ವಿನಯದಿಂದ.

ಷೂ ಕಾಲನ್ನ ಅಪ್ಪಳಿಸುತ್ತಲೇ ಕೆಳಗಿಳಿದು ಬಂದರು. ತಾನು ಇಷ್ಟು ದಿನ ಗಳಿಸಿಕೊಂಡ ಮಾನ, ಮರ್ಯಾದೆ, ಅಂತಸ್ತನ್ನ ಹಿಡಿಯಲ್ಲಿಟ್ಟುಕೊಂಡು ಹೆಜ್ಜೆ ಹಾಕಿದರು.

ಮೊದಲು ದರ್ಶನವಾದದ್ದು ತಿರುಮಲಾಂಬ. ಸೌಜನ್ಯದ ಹೆಣ್ಣು ಮಗಳು "ಬನ್ನಿ, ಯಾರು ಬೇಕಿತ್ತು ?" ವಿಚಾರಿಸಿದರು.

ಹೆಸರನ್ನ ಕೂಡ ವಿಚಾರಿಸಿಕೊಳ್ಳದ್ದು ಮೂರ್ಖತನವೆನಿಸಿತು.

"ಮನೆ ಯಜಮಾನ್ರುನ ನೋಡ್ಬೇಕಿತ್ತು" ಎಂದರು ಉಗುಳು ನುಂಗುತ್ತ. ಸೊಪ್ಪು ಬಿಡಿಸುತ್ತಿದ್ದ ಆಕೆ "ಕೂತ್ಕೊಳ್ಳಿ, ಹಿತ್ತಲಲ್ಲಿ ಇದ್ದಾರೆ, ಕರ್‍ದು ಬರ್‍ತೀನಿ" ಒಳ ಹೋದರು.

ಬಿಗಿದ ಮುಖವನ್ನ ಸಡಲಿಸಿಕೊಂಡೇ ಬಂದ ಬಿಳಿಗಿರಿ ಮುಖದಲ್ಲಿ ನಗುವನ್ನ ತುಳುಕಿಸಿ "ನನ್ನಿಂದ ಏನಾಗ್ಬೇಕಿತ್ತು ? ಕುಡ್ಯೋಕೆ ಏನಾದ್ರೂ... ತಗೋತೀರಾ?" ವಿಚಾರಿಸುತ್ತ ಅವರ ಎದುರಿನಲ್ಲಿಯೇ ಇದ್ದ ಇನ್ನೊಂದು ಕುರ್ಚಿಯ ಮೇಲೆ ಕೂತರು.

"ಏನು ಬೇಡ, ಸಾಗರ್ ಬಗ್ಗೆ ಒಂದಿಷ್ಟು ಮಾತಾಡ್ಬೇಕಿತ್ತು" ಬಹಳ

ಮುಜುಗರದಿಂದಲೇ ಹೇಳಿದರು "ಹೇಳಿ, ಸಾಗರ್‌ನ... ಕಂಡರಾ ?" ಇವರ ಪ್ರಶ್ನೆಗೆ ಸೀತಾರಾಮ್ ಮುಖ ಚಿಕ್ಕದಾಯಿತು. ಇಂಥ ಪರಿಸ್ಥಿತಿ ತಂದಿಟ್ಟ ಮೃಣಾಲಿನಿ, ಸಾಗರ್‌ಗೆ ಬುದ್ಧಿ ಕಲಿಸಬೇಕೆನಿಸಿತು ಸೀತಾರಾಮ್‌ಗೆ 'ಕಂಡೆ' ಎನ್ನುವಂತೆ ತಲೆದೂಗಿದರು.

"ಇಲ್ಲೇನಿದೆ, ಅವ್ನಿಗೆ ? ಯಾಕೆ ಬಂದು ಇಲ್ಲಿದ್ದಾನೆ?" ಅರಿವಾಗದಂತೆ ಸೀತಾರಾಮ್ ಸ್ವರಕ್ಕೆ ರಭಸ ಬಂತು. "ಸ್ವಿಮ್ಮಿಂಗ್ ಪೂಲ್ ಇರೋಂಥ ಅರವತ್ತು ಚದರದ ಬಂಗ್ಲೆ ಇಟ್ಕೊಂಡ್... ಇಂಥ ದರ್ಟಿ ಕೊಂಪೆಗಳಲ್ಲಿ ಬಂದು ಇರೋದು, ಎಂಥ ಹಣೆ ಬರಹ."

ಯಾಕೋ ಸೀತಾರಾಮ್‌ಗೆ ಅವರ ಮಾತಿನ ರೀತಿ ಹಿಡಿಸಲಿಲ್ಲ. ತಮ್ಮ ಬಂಗ್ಲೆನ ಬೇರೆಯವರ ಮನೆಗಳಿಗೆ ಕಂಪೇರ್ ಮಾಡಿ 'ಡರ್ಟಿ' ಎನ್ನುವುದು ನಾಗರಿಕತೆಯಂತೆ ಕಾಣಲಿಲ್ಲ.

"ನನ್ಮುಂದೆ ಇದೆಲ್ಲ ಹೇಳೋದ್ರಿಂದ ಪ್ರಯೋಜನವಿಲ್ಲ. ನೇರವಾಗಿ ನಿಮ್ಮ ಮಗನಲ್ಲಿ ಮಾತಾಡಿ. ಅಲ್ಲಿ ನಿಮ್ಮ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಸಿಗುತ್ತೆ" ಸಮಾಧಾನವಾಗಿಯೇ ಹೇಳಿದರು ಬಿಳಿಗಿರಿ.

ಸ್ವಲ್ಪ ತಗ್ಗಿದರು ಸೀತಾರಾಮ್. ಅವರಿಗೆ ತಮ್ಮ ತಪ್ಪಿನ ಅರಿವಾಯಿತು.

"ಎಕ್ಸ್‌ಕ್ಯೂಜ್ ಮಿ, ನನ್ನಿಂದ ತಪ್ಪಾಯ್ತು. ಸಾಗರ್ ಇಲ್ಲಿ ಎಷ್ಟು ದಿನದಿಂದ ಇದ್ದಾನೆ ? ಅವ್ನ ಜೊತೆಯಲ್ಲಿ ಯಾರಾದ್ರೂ ಬಂದಿದ್ರಾ ? ಅವ್ನಿಗೆ ಇಲ್ಲಿ ಹೆಚ್ಚು ಪರಿಚಿತರು ಯಾರು ?" ವಿಷಯಕ್ಕೆ ಬಂದರು.

"ಮೊದಲ ಪ್ರಶ್ನೆಗೆ ನಿಮ್ಗೆ ನಿಖರವಾಗಿ ಉತ್ತರ ಸಿಗೋಲ್ಲ. ಒಂದು ದಿನ ಬಂಡೆ ಮೇಲೆ ಒಂಟಿಯಾಗಿ ಕೂತಿದ್ದ ಸಾಗರ್‌ನ ನೋಡ್ದೇ, ಆ ದಿನ ಎಂದು, ಅಂದು ತಾರೀಖು ಏನೂಂತ ನಂಬ್ಕೇ ಇಲ್ಲ. ಇನ್ನ ಎರಡನೇ ಪ್ರಶ್ನೆಗೆ ಉತ್ತರ ಗೊತ್ತಿಲ್ಲ, ಇನ್ನ ಮೂರನೇ ಪ್ರಶ್ನೆ ಹೆಚ್ಚು ಇಲ್ಲಿ ಪರಿಚಿತರು ನಾವೇ."

ಸೀತಾರಾಮ್ ಸುಮ್ಮನೇ ಕೂತರು. ಮೊದಲ ಎರಡು ಪ್ರಶ್ನೆಗಳಿಗೆ ಉತ್ತರ ಸಿಕ್ಕಿದ್ದರೇ, ಒಂದು ದೃಢವಾದ ನಿಲುವಿಗೆ ಬರುತ್ತಿದ್ದರು. ಆ ಬಗ್ಗೆ ಇನ್ನ ಪ್ರಶ್ನೆ ಹಾಕುವುದು ಬೇಡವೆನಿಸಿತು. ಸಧ್ಯಕ್ಕೆ ಈ ಊರಿನಲ್ಲಿ ಇವರುಗಳು ಮಾತ್ರ ಹೆಚ್ಚು ಪರಿಚಿತರು. ಇದು ಸಮಾಧಾನಕರವಾದ ಅಂಶವೆನಿಸಿತು.

"ಈಗ ಸಾಗರ್ ಇರೋ ಮನೆ ಯಾರ್ದು ?"

"ಅಪ್ಪಯ್ಯ ಶಾಸ್ತ್ರಿಗಳದ್ದು. ಅವ್ರು ಈಗ ಕುಂದಣದಲ್ಲಿ ಅಂಗ್ಡಿ ಇಟ್ಕೊಂಡಿದ್ದಾರೆ. ಅವ್ರಿಗೆ ಏನು ಗೊತ್ತಿಲ್ಲ. ನಾನೇ ಹೋಗಿ ಖಾಲಿಯಾಗಿದ್ದ ಮನೆನ ಕೊಡ್ಸಿದ್ದು.

ಸಾಗರ್ ನಮ್ಮೊಂದಿಗೆ ಎಂದೂ ತನ್ನ ವೈಯಕ್ತಿಕ ವಿಷ್ಯಗಳ್ನ ಮಾತಾಡಿಲ್ಲ. ಅವ್ನ ಬಗ್ಗೆ ಯಾರ್ಗೂ ಏನು ಗೊತ್ತಿಲ್ಲ. ಇದಿಷ್ಟನ್ನ ನೀವು ನಂಬಹುದ್ದು." ತಿಳಿದಿದ್ದನ್ನ ಪ್ರಾಮಾಣಿಕವಾಗಿ ಹೇಳಿದರು ಬಿಳಿಗಿರಿ. ಅವರಿಗೂ ಸಾಗರ್ ಕ್ಷೇಮವಾಗಿ ಊರಿಗೆ ಹಿಂದಿರುಗುವುದು ಬೇಕಿತ್ತು.

ಕಾಫಿ ಹಿಡಿದು ಬಂದ ತಿರುಮಲಾಂಬ ಲೋಟ ಅವರ ಎದುರಿನಲ್ಲಿಟ್ಟು "ನಮ್ಮ ಮಗನು ಎಲ್ಲೋ ಹೋದ. ಇಂದಿನವರ್ಗೂ ಹಿಂದಿರುಗಿ ಬಂದಿಲ್ಲ. ಅದು ಎಂಥ ನೋವೂಂತ ಗೊತ್ತು. ಏನೇ ಇರಲೀ, ಏನೋ ಬೇಜಾರು ಮಾಡ್ಕೊಂಡ್ ಬಂದಿರಬೇಕು. ದಯವಿಟ್ಟು ಒಳ್ಳೆ ಮಾತುನಿಂದ ಕರ್ಕೊಂಡ್ಹೋಗಿ" ಹೇಳಿದರು.

"ನಂಗೇನ್ಬೇಡ ! ನಾನು ಹೊರ್ಗಡೆ ಏನು ತಗೊಳ್ಳೋದಿಲ್ಲ" ನಿರಾಕರಿಸಿದರು ಸೀತಾರಾಮ್. "ಸ್ವಲ್ಪ ತಗೊಳ್ಳಿ. ಸಕ್ಕರೆ ಬೇಡಾಂದ್ರೆ... ಬೇರೆ ತರ್ತೀನಿ" ಎಂದರು ತಿರುಮಲಾಂಬ.

"ಬೇಡ, ತೆಗ್ದು ಬಿಡಿ" ನಿರಾಕರಿಸಿದರು ಸೀತಾರಾಮ್.

ಆರೋಗ್ಯದ ಬಗ್ಗೆ ಕಟ್ಟೆಚ್ಚರ ಸೀತಾರಾಮ್‌ದು. ಅಲ್ಲಿ ಇಲ್ಲಿ ತಿನ್ನಲಾರರು. ಅವರು ಉಪಯೋಗಿಸುವ ಸ್ಪೂನ್, ಫೋರ್ಕ್‌ಗಳು ಕೂಡ ಸ್ಟರ್‌ಲೈಜ್ ಆಗಿರುತ್ತಿದ್ದ. ಯಾವುದೇ ಆಹಾರ ಪದಾರ್ಥಗಳನ್ನ ಕೈಯಲ್ಲಿ ಮುಟ್ಟುವುದನ್ನ ನಿಷೇಧಿಸಿದ್ದರು. ಬಂಗ್ಲೆಯಲ್ಲಿ ಬಡಿಸುವವರು, ಅಡಿಗೆ ಮಾಡುವವರು ಫುಲ್ ಯೂನಿಫಾರಂನಲ್ಲಿರಬೇಕು.

ಅದೇ ಕಾಫಿ ಲೋಟವನ್ನ ಬಿಳಿಗಿರಿಯವರು ಎತ್ತಿಕೊಂಡರು. ಸೀತಾರಾಮ್ ವ್ಯಕ್ತಿತ್ವ ಅವರಿಗೆ ಹಿಡಿಸಲಿಲ್ಲ. ಈ ಮನುಷ್ಯನ ಅಹಂಕಾರ ಮಗನ ಮೇಲಿನ ಪ್ರೀತಿಯ ಮೇಲೆ ಕವಿದ ಪರದೆಯೆನಿಸಿತು.

"ಈಗ ನಮ್ಮಿಂದ ಏನಾಗ್ಬೇಕು?" ಕೇಳಿದರು ಬಿಳಿಗಿರಿ.

ಅವರಿಗೆ ಹೆಚ್ಚು ಹೊತ್ತು ಆ ಮನುಷ್ಯನ ಮುಂದೆ ಕೂಡುವುದು ಇಷ್ಟವಾಗಲಿಲ್ಲ. ಇಂಥ ತಂದೆಯ ಕೈಯಲ್ಲಿ ಸಾಗರ್ ಭವಿಷ್ಯ ಹಸನಾಗುವುದರ ಬಗ್ಗೆ ಭರವಸೆ ಇರಲಿಲ್ಲ.

"ನೀವು ಸಾಗರ್‌ನ ನನ್ನ ಜೊತೆ ಕಳ್ಸಿಕೊಡ್ಬೇಕು."

ಸೀತಾರಾಮ್ ಕೇಳಿಕೆಗೆ ಬೆಚ್ಚಿಬಿದ್ದರು. ಆಶ್ಚರ್ಯ ಕೂಡ. ತಾವು ಸಾಗರ್‌ನ ಅವರ ಜೊತೆ ಕಳಿಸುವುದು? ಕಣ್ ಕಣ್ ಬಿಟ್ಟರು.

"ನಂಗೆ ನೀವು ಹೇಳೋದು ಅರ್ಥವಾಗಲಿಲ್ಲ."

"ಸಧ್ಯಕ್ಕೆ ಅವ್ನಿಗೆ ಹೆಚ್ಚು ಪರಿಚಯಉದವ್ರು ನೀವ್ಗೊಬ್ರೆ. ನಿಮ್ಮ ಬೆಂಬಲವಿಲ್ಲದಿದ್ದರೇ ಇಲ್ಲಿ ಉಳಿಯಲಾರ. ಅದು ಅವ್ನಿಗೆ ಮನದಟ್ಟು ಮಾಡಿಕೊಡಿ" ಸೀತಾರಾಮ್ ಒಬ್ಬ ಇಂಡಸ್ಟ್ರಿಯಲಿಸ್ಟ್ ದರ್ಪದಲ್ಲಿ ಮಾತಾಡಿದರು. ಇಂಥ ಸಂದರ್ಭದಲ್ಲಿ ಅವರು ಬೆಳೆಸಿಕೊಂಡ ಅಹಂಕಾರ ಅವರನ್ನ ಮುಲಾಜಿಲ್ಲದೆ ಕೆಡವಿ ತಮಾಷೆ ನೋಡುತ್ತಿತ್ತು.

ಬಿಳಿಗಿರಿ ನೊಂದುಕೊಂಡರು. ಶ್ರೀಮಂತ, ವಿದ್ಯಾವಂತ ವ್ಯಕ್ತಿ ಸರಿಯಾದ ದಾರಿಯಲ್ಲಿ ಯಾಕೆ ಯೋಚಿಸಬಾರದು? 'ಯಿಲ್ ಮ್ಯೆಂಡ್' ರೋಗಗ್ರಸ್ತ ಮನಸ್ಸು ಸೀತಾರಾಮ್ ಬಗ್ಗೆ ಸಹಾನುಭೂತಿಯುಂಟಾಯಿತು.

"ದಯವಿಟ್ಟು ಸಲ್ಲದು, ನಿಮ್ಮ ಯೋಚ್ನೆ ಸರ್ರ್ಯಾದ ದಿಕ್ಕಿನಲ್ಲಿಲ್ಲ. ಇಲ್ಲಿ ನಾವಿದ್ದೀವೀಂತ ಸಾಗರ್ ಬಂದಿಲ್ಲ. ನಮಗೋಸ್ಕರ ಇಲ್ಲಿಲ್ಲ. ಹೆತ್ತವರಿಗೆ ಅವ್ನ ಮನಸ್ಥಿತಿ ಗೊತ್ತಾಗ್ಬೇಕು. ಸ್ವಲ್ಪ ಸಮಾಧಾನದಿಂದ ಕರೆದೊಯ್ಯಿರಿ. ನೀವೊಬ್ರು.... ಬಂದಿದ್ದು ತಪ್ಪು. ಅವ್ನ ತಾಯಿನ ಕರ್ಕಂಡ್ ಬರಬೇಕಿತ್ತು. ತಾಯಿ, ಮಗುವಿನದು ಅನನ್ಯ ಸಂಬಂಧ. ಅದು ಕರುಳು ಬಳ್ಳಿಯದು. ಆರಾಮಾಗಿ ಅಮ್ಮನ ಕಣ್ಣೀರಿಗೆ ಕರ್ಗ್ಗಿ ಕಾರು ಹತ್ತುತ್ತಿದ್ದ. ಈಗ್ಲೂ ಒಲಿಸ್ಕೊಂಡ್ ಕರೆದೊಯ್ಯಿರಿ. ಸದಾ ಹೊಳೆಯ ಬಳಿ, ಬಂಡೆಗಳ ಮೇಲೆ ಹೋಗಿ ಕೂತ್ಕೋತಾನೆ. ಇದು ಕ್ಷೇಮವಲ್ಲ." ಅಭದ್ರತೆಯಂತೆ ಹೇಳಿದರು. ಸಾಗರ್ ಕ್ಷೇಮವಾಗಿ ಇಲ್ಲಿಂದ ಹೋಗುವುದು ಅವರಿಗೆ ಬೇಕಿತ್ತು.

"ನೀವೊಂದು ಪ್ರಯತ್ನ ಮಾಡಿ" ಸೀತಾರಾಮ್ ನುಡಿದರು.

ಗಂಡ, ಹೆಂಡತಿ ಮುಖ ಮುಖ ನೋಡಿಕೊಂಡರು. ತಮ್ಮ ಪ್ರಯತ್ನಕ್ಕೆ ಬಗ್ಗುತ್ತಾನೆಂಬ ನಂಬಿಕೆ ಅವರಿಗೆ ಇರಲಿಲ್ಲ.

"ಪ್ರಯೋಜನವಿಲ್ಲ. ಸಾಗರ್‌ನಲ್ಲಿ ಅವಿಧೇಯತೆ ಸ್ವಲ್ಪ ಹೆಚ್ಚು. ಬೆಳೆಸಿದ ನಿಮ್ಗೆ ಅವ್ನ ಬಗ್ಗೆ ಗೊತ್ತಿರುತ್ತೆ. ನಾವು ಮಗನನ್ನ ಕಳ್ದುಕೊಂಡಿದ್ದೀವಿ. ಅವ್ನ ಸಂಗ್ತಿ ಯಾರಾದ್ರೂ ನಮ್ಗೆ ಮುಟ್ಟಿಸಿದ್ರೆ.... ಅವ್ರ ಪಾದಗಳ್ನ ತೊಳ್ದು ತೀರ್ಥ ಅಂತ ತಗೊಂಡ್ ಬಿಡ್ತೀವಿ. ಅಕಸ್ಮಾತ್ ಕಾಣ ಸಿಕ್ಕರೆ, ನಮ್ಮ ಸ್ಥಾನಗಳನ್ನ ಮರ್ತು ಕಾಲಿಗೆ ಬೀಳೋಕೆ ಸಿದ್ಧ. ಇಲ್ಲಿ ಎಲ್ಲೋ ಸುಖವಾಗಿದ್ದಾನೆ, ಅವ್ನಿಗೆ ನಾವು ಬೇಡಾಂತ ಅನ್ನಿಸಿದ್ದರೇ ದೂರದಲ್ಲಿ ನಿಂತು ಶುಭ ಹಾರೈಸ್ತೀವಿ" ಕಣ್ಣೀರು ಹಾಕಿಬಿಟ್ಟರು ಬಿಳಿಗಿರಿ ಉದ್ವಿಗ್ನರಾಗಿ. ತಿರುಮಲಾಂಬ ರೆಪ್ಪೆ ಮಿಟುಕಿಸಲಿಲ್ಲ. ಮಗನನ್ನ ಗಂಡ ಎಷ್ಟು ಪ್ರೀತಿಸುತ್ತಾನೆಂದು ಅವರಿಗೆ ಇಂದೇ ತಿಳಿದಿದ್ದು.

"ಏನೀ ವೇ...ನಿಮ್ಮ ಹೆಲ್ಪ್ ಅಗತ್ಯ. ಸ್ವಲ್ಪ ತಿಳಿವಳಿಕೆ ಹೇಳಿ ನನ್ನೊತೆ ಕಳ್ಸಿ ಕೊಡಿ" ಸ್ವಲ್ಪ ತಗ್ಗಿದರು ಸೀತಾರಾಮ್.

ಗಂಡ, ಹೆಂಡತಿ ಮುಖ ಮುಖ ನೋಡಿಕೊಂಡರು. ಭರವಸೆ ಇಲ್ಲದಿದ್ದರೂ ಮನುಷ್ಯರಾಗಿ ಒಂದು ಪ್ರಯತ್ನ ಮಾಡುವುದು ತಪ್ಪಲ್ಲವೆನಿಸಿತು.

"ನಾನ್ಹೋಗಿ ಬರ್ತೀನಿ. ನೀವುಗಳು ಮಾತಾಡ್ತಾ ಇರಿ" ತಿರುಮಲಾಂಬ ಸೆರಗನ್ನ ಸರಿಯಾಗಿ ಹೊದ್ದು ಹೊಸ್ತಲಿನಿಂದ ಹೊರ ನಡೆದರು. ನೋವು ಕೂಡ. ಸಾಗರ್ ಸ್ವಭಾವ ಹೇಗೆಯೇ ಇರಲೀ, ತಾಯ್ತನ ಮಗನಾಗಿ ಅವನ ಮೈ ದಡವಲು ಸಿದ್ಧವಾಗಿತ್ತು.

ಈಕೆ ಹೋದಾಗ ಸಾಗರ್ ಎರಡು ಕೈಯಲ್ಲು ತಲೆ ಹಿಡಿದು ಕೂತಿದ್ದ. ಸ್ವಲ್ಪ ಉದ್ವಿಗ್ನನಾಗಿ ಕಂಡ.

"ಸಾಗರ್..." ಕೂಗಿದರು ಹೊಸಲು ಬಳಿ ನಿಂತು.

ಅವರತ್ತ ನೋಟ ಹರಿಸಿದ. ಕೆಲವೇ ದಿನಗಳಲ್ಲಿ ಹೆಣ್ಣಿನಲ್ಲಿರುವ ತಾಯ್ತನ ಮಧುರತೆ ಸವಿಯನ್ನ ಹೇಗಿರುತ್ತದೆಯೆಂದು ತಿಳಿದಿದ್ದ. ಸದಾ ಮಗನಿಗಾಗಿ ಕೊರಗುವ, ಕಣ್ಣೀರಿಡುವ ಕಾಯುವ ಈಕೆ ಒಂದು ಅದ್ಭುತವಾಗಿ ಕಂಡಿದ್ದಳು.

"ಯಾಕೆ ಬರ್ಲಿಲ್ಲ ! ಕಲ್ಲೇಶಿ ಒಂದಿಷ್ಟು ತರಕ್ಕಾರಿ ತಂದ್ಕೊಟ್ಟು ಹೋಗಿದ್ದಾನೆ. ಕೂಟ್ ಮಾಡೋಣಾಂತ ಅಂದ್ಕೊಂಡೆ" ಬೇರೆ ರೀತಿಯಲ್ಲಿ ಮಾತು ಪ್ರಾರಂಭಿಸಿದರು. ಈ ಮಾತುಗಳಿಗೂ ತನಗೂ ಸಂಬಂಧವಿಲ್ಲವೆನ್ನುವಂತೆ ಕೂತಿದ್ದ. ಮನಸ್ಥಿತಿ ಸರಿಯಾಗಿಲ್ಲವೆಂದು ಅರ್ಥಮಾಡಿಕೊಂಡರು.

ಪಕ್ಕದಲ್ಲಿ ಹೋಗಿ ಕೂತು ಅವನ ಕೂದಲಲ್ಲಿ ಕೈಯಾಡಿಸಿ "ಸಾಗರ್, ನಿಮ್ತಂದೆ ಬಂದಿದ್ದಾರೆ. ನೀನು ಯಾಕೆ ಅವ್ರ ಜೊತೆ ಹೋಗ್ಬಾರ್ದು ?" ಎಂದರಷ್ಟೆ. ವ್ಯಾಘ್ರನಂತೆ ಸಿಡಿದುಬಿದ್ದ "ನಿಮಗ್ಯಾಕೆ ? ಏನು ತಂದೆ ಅಂದರೇ, ಅವ್ರು ದೊಡ್ಡ ಇಂಡಸ್ಟ್ರಿಯಲಿಸ್ಟ್ ಸೀತಾರಾಮ್. ನಂಗೆ ಅವ್ರ ಬಗ್ಗೆ ಮಾತಾಡೋಕೆ ಇಷ್ಟವಿಲ್ಲ" ಮುಖ ಮುಚ್ಚಿಕೊಂಡು ಅರಚಿದ.

ಆಕೆ ಸದ್ದಿಲ್ಲದಂತೆ ನಿಂತರು.

"ಹೋಗಿ...ಹೊರಟ್ಹೋಗಿ ! ನಂಗೆ ಯಾರು ಇಷ್ಟ ಇಲ್ಲ. ರೆಕಮಂಡ್ ಮಾಡೋಕೆ ನೀವ್ಯಾರು ? ಇದು ನನ್ನ ಮನೆ. ಅಡ್ವಾನ್ಸ್ ಕೊಟ್ಟಿದ್ದೀನಿ, ಬಾಡ್ಗೆ ಕೊಡ್ತಾ ಇದ್ದೀನಿ. ಬೇಕಾದ್ರೆ ನೀವುಗಳೆಲ್ಲ ಕೋರ್ಟ್‌ಗೆ ಹೋಗಿ" ಅಸಂಬದ್ಧವಾಗಿ ಮಾತಾಡಿದ.

ತಿರುಮಲಾಂಬಗೆ ತಾನು ಬಂದಿದ್ದೇ ತಪ್ಪೆನಿಸಿತು. ಕಾಲೆಳೆದುಕೊಂಡು ಮನೆಗೆ ಬಂದರು. ಒಂಟಿಯಾಗಿ ಬಂದ ಹೆಂಡತಿಯನ್ನ ನೋಡಿ ಬಿಳಿಗಿರಿಯವರಿಗೆ ಆಶ್ಚರ್ಯವಿಲ್ಲ.

ಸ್ವಲ್ಪ ಉತ್ಸಾಹದಿಂದಿದ್ದ ಸೀತಾರಾಮ್ ಹೌಹಾರಿದರು.

"ಅವ್ನು ಮಾತಾಡೋಕೆ ಇಷ್ಟಪಡ್ಲಿಲ್ಲ. ಒಂದೆರಡು ದಿನ ಬಿಟ್ಟು ಮತ್ತೊಮ್ಮೆ ಎನ್ನಿ. ಸಮಯ ನೋಡಿ ಏನು ಹೇಳೋಕೆ ಸಾಧ್ಯವೋ ಅದ್ನ ಹೇಳ್ತೀವಿ. ಆಮೇಲೆ ದೇವರಿಗೆ ಬಿಟ್ಟಿದ್ದು. ಈ ಸಲ ಬರೋವಾಗ ಸಾಗರ್ ತಾಯಿನ ಕರ್ಕೊಂಡ್ ಬನ್ನಿ" ಎಂದ ತಿರುಮಲಾಂಬ ಆಯಾಸದ ನಿಟ್ಟುಸಿರು ದಬ್ಬಿ ಅಡಿಗೆ ಮನೆಗೆ ಹೋದವರೇ ಒಂದು ಕಡೆ ಕೂತುಬಿಟ್ಟರು.

ಸಾಗರ್‌ನ ಈ ಸ್ಥಿತಿಗೆ ಅವನೊಬ್ಬನೇ ಕಾರಣನಲ್ಲ, ಅಪ್ಪ, ಅಮ್ಮ ಅನ್ನಿಸಿಕೊಂಡ ಜನ ಕೂಡ ಜವಾಬ್ದಾರರು ಎಂದುಕೊಂಡರು.

"ನಾನು ತುಂಬ ಬಿಜಿ ಮನುಷ್ಯ. ಅನಗತ್ಯವಾಗಿ ಬರೋದು ಕಷ್ಟವಾಗುತ್ತೆ. ಈ ಕಾರ್ಡ್‌ನಲ್ಲಿ ನನ್ನ ವಿಳಾಸ ಇದೆ. ನೀವೇ ಜೊತೆಯಲ್ಲಿ ಕರ್ಕಂಡ್ ಬನ್ನಿ..... ಒಂದಿಷ್ಟು ಅಮೌಂಟ್‌ನ ಕೃತಜ್ಞತೆಯಿಂದ ಕೊಡ್ತೀನಿ" ಧಾರಾಳ ಮನಸ್ಸಿನಿಂದ ನುಡಿದರು ಸೀತಾರಾಮ್.

"ಎಷ್ಟು ಕೊಡ್ತೀರಾ ಸ್ವಾಮಿ ? ಹಣದಾಸೆಯಿಂದಲಾದ್ರೂ ಕರ್ಕಂಡ್ ಬರ್ತೀನಿ" ಎಂದರು. ಅವರ ಸ್ವರ ನಡುಗುತ್ತಿದ್ದುದ್ದು ಸೀತಾರಾಮ್ ಗಮನಕ್ಕೆ ಬರಲಿಲ್ಲ. "ಐದು ಸಾವಿರ ಕೊಡೋಣ."

ಅವರ ಕೊಡುಗೈಗೆ ಧನ್ಯವಾದ ಅರ್ಪಿಸಬೇಕೆನಿಸಿತು.

"ಎಷ್ಟು ಜನ ನಿಮ್ಗೆ ಮಕ್ಳು ?" ಕೇಳಿದರು ತೀಕ್ಷ್ಣವಾಗಿ.

"ಯಾಕೆ, ಸಾಗರ್ ಒಬ್ನೇ" ಎಂದರು.

"ನಿಮ್ಗೆ ಆಸ್ತಿ ಎಷ್ಟಿದೆ? ಅದ್ನ ಜೋಪಾನ ಮಾಡೋಕೋಸ್ಕರ ಹಗ್ಲು ರಾತ್ರಿ ದುಡೀತೀರಾ. ನಿಮ್ಮ ಎಲ್ಲಾ ಸಮಯವನ್ನು ಅದಕ್ಕಾಗಿ ಮುಡುಪಾಗಿ ಇಟ್ಟಿದ್ದೀರಾ. ಮಗನ ಸಲುವಾಗಿ ನಿಮ್ಗೆ ಇನ್ನೊಮ್ಮೆ ಬರೋಕ್ಕಾಗೋಲ್ಲ. ಅವ್ನ ಕರ್ಕಂಡ್ ಬಂದರೇ ನಂಗೆ ಐದು ಸಾವಿರ ಇನಾಮು" ಬಿಳಿಗಿರಿಯ ಸ್ವರದಲ್ಲಿ ಆಕ್ರೋಶವೇ ಇತ್ತು. ಬಹುಶಃ ಅರ್ಥವಾಗಲಿಲ್ಲ ಸೀತಾರಾಮ್‌ಗೆ.

"ಇನ್ನೈದು ಬೇಕಾದ್ರೆ ಕೊಡೋಣ. ಇಲ್ಲಿಂದ ಎಷ್ಟು ಮಹಾ ದೂರ? ಟ್ಯಾಕ್ಸಿ ಮಾಡ್ಕೊಂಡ್ಬಂದ್ರು..... ಒಂದೆರಡು ಸಾವಿರದಲ್ಲಿ ಮುಗೀಬಹ್ದು. ನಾನು

ಮಾಮೂಲಿಯ ಟ್ಯಾಕ್ಸಿಯ ವಿಷ್ಯವಲ್ಲ, ಲಕ್ಷುರಿ ಟ್ಯಾಕ್ಸಿನೇ ಮಾಡ್ಕೊಂಡ್ಬನ್ನಿ. ಅದ್ರ ಛಾರ್ಜ್‌ನ ಸಪರೇಟಾಗಿ ಪೇ ಮಾಡ್ತೀನಿ" ಎಂದರು ಮಾಮೂಲಾಗಿ.

"ಎಂಥ ಮಹನೀಯರನ್ನ ಕಂಡಂತಾಯ್ತು ! ವಿಪರೀತ ಶ್ರೀಮಂತಿಕೆ ಇಲ್ಲದಿದ್ರೂ ಊಟ, ತಿಂಡಿಗೆ ಬರವಿಲ್ಲ. ನಾಲ್ಕು ಜನ ಬಂದರೂ ಊಟ ಹಾಕೋಷ್ಟು ಚೈತನ್ಯ ಕೊಟ್ಟಿದ್ದಾನೆ ದೇವರು ನಮ್ಗೆ. ಇಂಥದ್ದರಲ್ಲಿ ನಿಮ್ಮ ಹಣ ನಮಗ್ಯಾಕೆ ? ಸಾಗರ್ ಕ್ಷೇಮವಾಗಿ ನಿಮ್ಮ ಮಡಿಲು ಸೇರಲಿ ಅನ್ನೋದೇ ವಿನಃ ನಿಮ್ಮ ದುಡ್ಡು ಕಾಸು ನಮ್ಗೆ ಅಗತ್ಯವಿಲ್ಲ. ಈ ವಿಳಾಸದ ಕಾರ್ಡು ನಿಮ್ಮಲ್ಲೇ ಇರ್ಲಿ" ಕಾರ್ಡನ್ನ ಅವರಿಗೆ ಕೊಟ್ಟು ಕೈ ಮುಗಿದರು.

ಸೀತಾರಾಮ್‌ಗೆ ಮುಖದ ಮೇಲೊಡೆಸಿಕೊಂಡಂತಾಯಿತು.

ಒಂದೆರಡು ನಿಮಿಷ ಎಲ್ಲರಿಗೂ ಕಷ್ಟವೆನಿಸಿತು. ಸೀತಾರಾಮ್ ಸೌಜನ್ಯಕ್ಕಾಗಿಯಾಗಲೀ ಹೇಳದೇ ತಮ್ಮ ಪಾಡಿಗೆ ತಾವು ಹೋಗಿ ಕೂತರು. ಕಾರು ಜೀವ ತುಂಬಿಕೊಂಡು ಮುಂದಕ್ಕೆ ಉರುಳಿತು.

ಇಷ್ಟು ದೊಡ್ಡ ಇಂಡಸ್ಟ್ರಿಯಲಿಸ್ಟ್ ಸೀತಾರಾಮ್ ಏಕೈಕ ಪುತ್ರನಾದ ಸಾಗರ್ ಬಗ್ಗೆ ಅಭಿಮಾನ ಮೂಡುವ ಬದಲು ಸಂತಾಪವುಂಟಾಯಿತು. 'ಅಯ್ಯೋ ದುರಾದೃಷ್ಟದ ಹುಡುಗ' ಎಂದುಕೊಂಡರು.

* * *

ಎರಡು ದಿನ ಸಾಗರ್ ಇದ್ದ ಮನೆ ಕಡೆ ತಲೆ ಹಾಕಲಿಲ್ಲ. ಅಲ್ಲಿನ ನ್ಯೂಸ್ ತಂದು ಹಾಕುತ್ತಿದ್ದವನು ಕಲ್ಲೇಶಿ. ತಿರುಮಲಾಂಬ ತಾಯಿ ಕರುಳು ತಡೆಯದು.

"ಸಾಗರ್ ಹುಷಾರಾಗಿದ್ದಾನಾ? ಊಟ ಮಾಡಿದ್ದಾನಾ? ಇದ್ನ ತಗೊಂಡ್ಹೋಗಿ ಕೊಡು" ಅವನ ಕೈಯಲ್ಲಿ ತಿಂಡಿ, ಕಾಫಿ ಕಳುಹಿಸಿಕೊಡು ತ್ತಿದ್ದರು.

ಸಂಜೆ ಆರರ ಸುಮಾರಿಗೆ ಕಳ್ಳೆಕಾಯಿ ಬುಟ್ಟಿ ಹಿಡಿದು ಬಂದ ಕಲ್ಲೇಶಿ.

"ಅಣ್ಣ, ಬಟ್ಟೆಗಳ್ನ ಬ್ಯಾಗ್‌ಗೆ ತುರುಕಿಕೊಂಡಿದ್ದಾರೆ. ರಾತ್ರಿ ಬಸ್ಸಿಗೆ ಹೋಗಿ ಬಿಡ್ತಾರೇನೋ ! ಬೈಯ್ದರು...ಮನಸ್ಸು ಮಾತ್ರ ಒಳ್ಳೇದು" ಕಣ್ಣುಜ್ಜಿಕೊಂಡು ಕೂತಾಗ, ತಿರುಮಲಾಂಬ ಹೃದಯ ಕಿತ್ತು ಬಾಯಿಗೆ ಬಂದಂತಾಯಿತು. "ಅದ್ಕೇನು, ಮಾಡೋಕ್ಕಾಗುತ್ತೆ ! ಅವ್ರ ಊರಿಗೆ ಹೋಗೋದ್ಬೇಡ್ವ. ಹೋಗಿಕೊಳ್ಳಿ.... ಸುಮ್ಮನಿರು" ಮುಂದಿನ ಜಗುಲಿಯ ಮೇಲೆ ಕೂತಿದ್ದ ಆಕೆ ಎದ್ದು ಹೋದರು ಕಣ್ಣೀರು ತಡೆದುಕೊಳ್ಳಲು.

ಎರಡು ದಿನದಿಂದ ಅವನನ್ನ ನೋಡಿರಲಿಲ್ಲ. ತಾನಾದರೂ ಬರಬಾರದಿತ್ತಾ?

ಅವರ ಮನಸ್ಸು ಹಂಬಲಿಸುತ್ತಿತ್ತು. ಕಡೆಗೆ ಹೋಗುವಾಗಲಾದರೂ ತಿಳಿಸಿ ಹೋಗುತ್ತಾನೋ ಇಲ್ಲವೋ ! ಅವನ ತಂದೆಯ ನೆನಪಾ ಯಿತು. ಅದೇ ಸ್ವಭಾವವಿರುತ್ತೆ.

ಎಲ್ಲೋ ಹೋಗಿದ್ದ ಬಿಳಿಗಿರಿಯವರು ಬಂದಾಗ ಹುರಿದ ಕಳ್ಳೆಕಾಯಿ ಬುಟ್ಟಿ ಹಿಡಿದುಕೊಂಡು ಕೂತಿದ್ದ ಕಲ್ಲೇಶಿ ಅಳುತ್ತಿದ್ದ.

"ಯಾಕೋ, ಏನಾಯ್ತೋ ?" ಗಾಬರಿಯಾದರು ಅವರು.

"ಅಣ್ಣಾ, ಊರಿಗೆ ಹೋಗ್ತಿಪ್ಪದ್ದು" ಎಂದ ಬಿಕ್ಕುತ್ತಲೇ.

ತಲೆಯ ಮೇಲೊಂದು ಮೊಟಕಿದರು. "ಎಲ್ಲಿಂದಲೋ ಬಂದ ಜನ ಇಲ್ಲೇ ಉಳ್ಕೋತಾರಾ ? ಹೋಗ್ಲಿ ಬಿಡು, ಅದಕ್ಯಾಕೆ ಅಳ್ತೀಯಾ ?" ಸಂತೈಯಿಸಿದರು. ಅವನು ಆದಷ್ಟು ಬೇಗ ಇಲ್ಲಿಂದ ಹೋಗುವುದು ಅವರಿಗೆ ಕ್ಷೇಮವೆನಿಸಿತು.

ರಂಗಯ್ಯಶೆಟ್ಟಿ ಎದುರು ಸಿಕ್ಕಾಗ ಗುಟ್ಟಾಗಿ "ನೆನ್ನೆ ರಾತ್ರಿ ಹೊಳೆಯ ದಂಡೆಯಲ್ಲಿ ನಾಲ್ಕು ಜನ ಕೂತಿದ್ದಾ ನಮ್ಮ ಗೋಪಾಲ ನೋಡಿದ್ನಂತೆ. ಮತ್ತೇನೋ ಷುರುವಾಗಿದೆ. ಇನ್ನೆಷ್ಟು ಹೆಣ ಬೀಳುತ್ತೋ !! ಅಪ್ಪಯ್ಯ ಶಾಸ್ತ್ರಿಗಳ ಮನೆಯಲ್ಲಿ ಬಾಡ್ಗೆಗೆ ಇರೋ ಯುವಕನ್ನ ಕಂಡಾಗ ಒಂದು ತರಹ ದಿಗಿಲಾಯ್ತು. ಆ ಪೈಕಿನೇ ಅಂದ್ಕೊಂಡೇ. ಕೆಂಪು, ಪಚ್ಚೆ ಎಲ್ಲಿದ್ಯೋ, ನಾ ಕಾಣೆ. ಆ ಆಸೆಯಿಂದ ಬರೋ ಜನವೇನು ಕಮ್ಮಿಯಾಗಿಲ್ಲ" ಇಂಥದೊಂದು ಸುದ್ದಿ ಅವರ ಕಿವಿಯ ಮೇಲೆ ಹಾಕಿ ಪುಣ್ಯ ಕೊಟ್ಟಿಕೊಂಡಿದ್ದರು. ಅದರಿಂದ ಸಾಗರ್ ಇಲ್ಲಿಂದ ಎಷ್ಟು ಬೇಗ ಹೋದರೇ ಅಷ್ಟು ಒಳಿತು.

ಅವನು ಮಾತಾಡದೆ ಬರೀ ಕಣ್ಣು ಉಜ್ಜಿದ.

"ಹೋಗಿ ಕಳ್ಳೆಕಾಯಿ ಮಾರೋಗು. ದೇವಸ್ಥಾನಕ್ಕೆ ಬೇಕಾದಷ್ಟು ಜನ ಬಂದಿದ್ದಾರೆ" ಭುಜ ತಟ್ಟಿ ಅವನನ್ನ ಕಳಿಸಿ ಒಳ ಬಂದವರು "ಸಾಗರ್ ಬಂದಿದ್ನಾ? ಊರಿಗೆ ಹೊರಟಿದ್ದಾನಂತಲ್ಲ. ರಾತ್ರಿಗಾದ್ರೂ ಒಪ್ಪತ್ತು ನಮ್ಮ ಮನೆಯಲ್ಲಿ ಬಂದು ಊಟ ಮಾಡ್ಲಿ. ನಾನೇ ಹೋಗಿ ಕರೆಯಲಾ? ಆ ಹುಡ್ಗನ ಮೇಲೆ ನಮಗೆಂಥ ಹಟ?" ಪೂರ್ತಿ ರಾಜಿಯಾದರು. ಮಾನಾಪಮಾನಗಳು ಅವರುಗಳು ಗ್ರಹಿಸಿದಂತೆ. ದುಡ್ಡೇ ಜಗತ್ತು ಎಂದು ತಿಳಿದಿದ್ದ ಸೀತಾರಾಮ್ ಹಾಗೇ ಮಾತಾಡಿದ್ದು ಈಗ ತಪ್ಪೆನಿಸಲಿಲ್ಲ.

"ಹಾಗೇ....ಮಾಡಿ !" ಎಂದರು ತಿರುಮಲಾಂಬ.

ತಕ್ಷಣವೇ ಹೊರಟರು ಬಿಳಿಗಿರಿ. ಸುಮ್ಮನೆ ಮುಚ್ಚಿದ್ದ ಬಾಗಿಲು ದೂಡಿದರು.

ಅವನ ಬ್ಯಾಗು ತೆರೆದೆ ಬಿದ್ದಿತ್ತು. ಎಲ್ಲೆಡೆ ನೋಡಿ ಹೊಳೆಯ ಕಡೆ ಹೊರಟರು. ಅಂದಿನಂತೆ ಇಂದು ಕೂಡ ಅದೇ ಬಂಡೆಯ ಮೇಲೆ ಕೂತ ಸಾಗರ್ ಹರಿಯುತ್ತಿದ್ದ ಹೊಳೆಯ ಕಡೆ ನೋಡುತ್ತಿದ್ದ. ಬೆಳೆದ ಕ್ರಾಪ್, ಗಡ್ಡ, ಮೀಸೆ, ಯಥಾ ಪ್ರಕಾರ.

ಫುಲ್ ಸೂಟು ಧರಿಸಿ ಶಿಸ್ತಿನ ಸಿಪಾಯಿಯಂತೆ ಬಂದಿದ್ದ ಸೀತಾರಾಮ್ ಕಾಲಿನ ಷೂನಂತೆ ಕಾರು ಕೂಡ ಫಳಫಳ ಹೊಳೆಯುತ್ತಿತ್ತು. ಇವನ ಕಾಲುಗಳಿಗೆ ಒರಟು ಷೂಗಳ ಅಲಂಕಾರ. ಬಂದಾಗಿನಿಂದ ಆತ್ಮೀಯ ಗೆಳೆಯನಂತೆ ಕೆಲವು ವೇಳೆಗಳನ್ನು ಬಿಟ್ಟು ಎಲ್ಲಾ ವೇಳೆಗಳಲ್ಲೂ ಅವನ ಕಾಲುಗಳನ್ನು ಅಲಂಕರಿಸಿತ್ತು.

"ಸಾಗರ್...." ಕೂಗಿದರು. ಅವರ ದನಿಯು ಕ್ಷೀಣವಾಗಿತ್ತು.

ಒಂದಲ್ಲ ನಾಲ್ಕು ಸಲ ಕರೆದ ಮೇಲೆಯೇ ಇತ್ತ ನೋಡಿದ್ದು. ಧುಮುಕಿ ಬಂದಿದ್ದು. ಅಂದಿನ ಮಾತುಗಳು ನೆನಪಾಯಿತು ಅವನಿಗೆ. ಕಸಿವಿಸಿಗೊಂಡ ತೀರಾ.

"ನೀವು ಬಂದಾಗ ನನ್ನ ಮನಸ್ಸು ಸರಿ ಇರ್ಲಿಲ್ಲ" ಎಂದ.

"ಅದೆಲ್ಲ ಬಿಡು, ಈಗ ನಿನ್ನ ಮನಸ್ಸು ಸರಿ ಇದ್ಯಾ ? ಒಂದೆರಡು ಮಾತು ಆಡಬಹುದಾ?" ಕೇಳಿಕೆಗೆ ಮೌನ ವಹಿಸಿದ.

ಅವನನ್ನು ರೆಟ್ಟೆ ಹಿಡಿದು ಕರೆದೊಯ್ದು ಹೊಳೆಯ ದಂಡೆಯ ಮೇಲೆ ಕೂತರು. ಹೇಗೆ ಪ್ರಾರಂಭಿಸುವುದೆಂದು ಯೋಚಿಸಿದರು. ತಮ್ಮ ಬುದ್ಧಿವಾದ ಕೇಳಬಹುದೇ? ಆ ಬಗ್ಗೆ ಗ್ಯಾರಂಟಿಯೇನು ಇರಲಿಲ್ಲ. ಆದರೂ ಮನಸ್ಸು ತಡೆಯದು. ಅವನು ಮನೆಯ ಬದಲು ಬೇರೆಲ್ಲಾದರೂ ಹೋದರೇ ? ಆ ಬಗ್ಗೆ ಭಯ.

"ಕಲ್ಲೇಶಿ ಹೇಳ್ದಾ....ನೀನು ಊರಿಗೆ ಹೋಗ್ಬಹ್ದುಂತ."

ಬಿಳಿಗಿರಿಯವರ ಮಾತಿಗೆ ಪ್ರತಿಕ್ರಿಯಿಸಲೇ ಇಲ್ಲ. ಅವರ ಅನುಮಾನ ಮತ್ತಷ್ಟು ಬಲವಾಯಿತು.

"ಸಾಗರ್, ಈ ಮಾತು ನಿಜನಾ ?" ಮತ್ತೆ ಕೇಳಿದರು.

ಮರಳಿನಲ್ಲಿ ಕೈ ತೂರಿಸಿ ಎತ್ತುತ್ತಿದ್ದವನು ಕೆಳ ತುಟಿಯನ್ನು ಹಲ್ಲಿನಡಿಯಲ್ಲಿ ಕಚ್ಚಿ "ಗೊತ್ತಿಲ್ಲ !" ತಲೆಯಾಡಿಸಿದಾಗ ಅವನ ಮುಖದಲ್ಲಿ ಯಾವುದೇ ಭಾವನೆಗಳು ಇರಲಿಲ್ಲ.

ಆತ ಮತ್ತಷ್ಟು ಗಾಬರಿಯಾದರು. ಸೀತಾರಾಮ್ ಬಂದು ಹೋಗಿ ಎರಡು ದಿನ ಆಗಿ ಹೋಗಿತ್ತು. ಇಂದಾದರೂ ಬರಬಹುದೆಂದುಕೊಂಡಿದ್ದರು. ಸಾಗರ್ ಮತ್ತೆಲ್ಲಾದರೂ ಹೋದರೇ, ಎಲ್ಲಿ ಹುಡುಕಿಯಾರು ?

ಅವನ ಹೆಗಲ ಮೇಲೆ ಆತ್ಮೀಯವಾಗಿ ಕೈ ಇಟ್ಟರು.

"ಈ ವಯಸ್ಸಿನಲ್ಲಿ ಮನಸ್ಸು ಹುಚ್ಚಿಡಿದ ಕುದುರೆಯಂತೆ. ಸರ್‍ಯಾಗಿ ಲಗಾಮು ಹಾಕದಿದ್ದರೇ, ಎಲ್ಲೆಲ್ಲಿಗೋ. ನಿಮ್ಮ ತಂದೆ ತುಂಬ ನೊಂದ್ಕೊಂಡ್ರು. ನಿನ್ನಂಥ ಪ್ರತಿಭಾಶಾಲಿ ವಿದ್ಯಾರ್ಥಿಗಳು ಸಮಾಜಕ್ಕೂ, ಸಾಂಸತಿಕ ರಂಗಕ್ಕೂ ಅಗತ್ಯ. ಆರಾಮವಾಗಿ ಮನೆಗೆ ಹೋಗು. ನಿನ್ತಾಯಿ ಎಲ್ಲಿ ಮಂಚ ಹಿಡಿದು ಮಲಗಿದ್ದಾರೋ" ಎಂದ ಕೂಡಲೇ ಹುಚ್ಚಿಡಿದವನಂತೆ ನಗತೊಡಗಿದ ಸಾಗರ್.

ಮಗನಿಗಾಗಿ ಹುಚ್ಚಿಡಿಸಿಕೊಳ್ಳಲು ಆಕೆ ಅವಿದ್ಯಾವಂತೆಯೇ? ಅಲ್ಲ, ಮಗ ಎಂದೂ ಮುಖ್ಯವಾಗಿರಲಿಲ್ಲ.

"ಯಾಕಪ್ಪ, ನಗ್ತೀಯಾ?" ಕೇಳಿದರು ಶಾಂತವಾಗಿಯೇ.

ಅವನ ನಗು ನಿಂತಿತು. ಆದರೆ ಉತ್ತರಿಸಲಿಲ್ಲ. ಉತ್ತರಿಸಲು ಪದಗಳನ್ನು ಹುಡುಕಲು ಕಷ್ಟವೋ, ಅಥವಾ ಯಾರ ಮುಂದು ಹೇಳಿಕೊಳ್ಳಲು ಇಷ್ಟವಿಲ್ಲವೋ, ಅಂತು ತುಟಿಗಳನ್ನು ಬಿಚ್ಚಲಿಲ್ಲ.

ಬಿಳಿಗಿರಿಯವರಲ್ಲು ಬುದ್ಧಿ ಹೇಳುವ ಹುಮ್ಮಸ್ಸು ತಗ್ಗಿತು. ಮೌನವಾಗಿ ಕೂತರು. ಅವನು ಮಾತಾಡಲಿಲ್ಲ. ಮಾತೇ ಬೇಡವೆನಿಸಿತ್ತು ಸಾಗರ್‌ಗೆ. ಆಗ ನೆನಪಾದದ್ದು ಬಿಕ್ಕಲು ಗೌರಿ, ಮಾತು ಕಳೆದುಕೊಂಡ ಶ್ರೀವಳ್ಳಿ. ಅವರಿಬ್ಬರು ಮಾತಾಡದಿದ್ದರಿಂದ ಯಾರಿಗೆ ನಷ್ಟ ? ಬಹುಶಃ ಅವರಿಗೆ ಮಾತ್ರ ನಷ್ಟವೇನೋ! ಕೆಲವೊಮ್ಮೆ ಮಾತು ಬರದೇ ಇರುವುದು ಕೂಡ ಲಾಭವೆ.

"ಅಮ್ಮಾವ್ರು...ಕರೀತಾರೇ !" ಕಲ್ಲೇಶಿ ಬಂದು ನಿಂತ. ಅವನ ಬುಟ್ಟಿಯಲ್ಲಿ ಇನ್ನ ಕಳ್ಳೆಕಾಯಿ ಉಳಿದಿತ್ತು. "ಇವತ್ತು ವ್ಯಾಪಾರ ಬೋ ಡಲ್. ಎಲ್ಲಾ ಸಾಲ ಹಾಕಿದ್ದೇ ಆಯ್ತು. ಅದರಲ್ಲಿ ಎಷ್ಟು ಜನ ಕಾಸು ಕೊಡ್ತಾರೋ, ಇಲ್ವೋ" ಚಿಂತಿತನಾದ.

ಜೇಬಿನಲ್ಲಿದ್ದ ಐವತ್ತರ ಒಂದು ನೋಟನ್ನು ಅವನ ಷರಟಿನ ಜೇಬಿಗೆ ತುರುಕಿ "ಈ ಕಳ್ಳೆಕಾಯೆಲ್ಲ ನಂಗಿರ್‍ಲಿ ಬಿಡು" ಬುಟ್ಟಿಯನ್ನು ಕಸಿದುಕೊಂಡ. ಅವನೇನು ಕಣ್ ಕಣ್ ಬಿಡಲಿಲ್ಲ. ಅವನ ಪ್ರಕಾರ 'ಸಾಗರ್ ಅಣ್ಣ ತುಂಬ ಒಳ್ಳೆಯವ.'

"ಇಷ್ಟೆಲ್ಲ ಏನು ಮಾಡ್ಕೋತೀಯಾ ?"

"ಆರಾಮಾಗಿ ಕೂತು ತಿಂತೀನಿ. ಬೇಕಾದ್ರೆ ನೀನೊಂದು ಕೈ ಹಾಕು" ಎಂದ ಸಾಗರ್ ಸ್ವಲ್ಪ ಮಾಮೂಲಿಗೆ ಮರಳಿದಂತೆ ಕಂಡ.

ಮೂವರು ಮನೆಯ ಕಡೆ ಹೊರಟರು. ಬುಟ್ಟಿ ಮಾತ್ರ ಕಲ್ಲೇಶಿ ಕೈಯಲ್ಲಿತ್ತು.

ಸಿಕ್ಕ ಹುಡುಗರಿಗೆಲ್ಲ ಒಂದೊಂದು ಹಿಡಿ ಕೊಡುತ್ತಿದ್ದ ಸಾಗರ್ ಅದನ್ನೇನು 'ದಾನ' ಎಂದು ತಿಳಿದಿರಲಿಲ್ಲ. ತಾನು ಕೊಡುತ್ತಿರುವುದರಿಂದ 'ಮಹಾನ್ ಒಳ್ಳೆ ಕೆಲಸ' ಮಾಡುತ್ತಿದ್ದನೆಂಬ ಭಾವವು ಇರಲಿಲ್ಲ. ತಾನು ಕಳ್ಳೆಕಾಯಿಯ ತಿಂದು ಬಾಯಿಗೆ ಹಾಕಿಕೊಂಡದಕ್ಕಿಂತ ಇದು ಬಹಳ ಸುಲಭವಾದ ಕೆಲಸವಾಗಿ ಕಂಡಿತು.

ಮನೆಯ ಕಡೆ ಹೊರಟ ಅವನನ್ನ ಕೈ ಹಿಡಿದು ನಿಲ್ಲಿಸಿದ ಬಿಳಿಗಿರಿ "ಅಲ್ಲಿಗೆ ಹೋಗೋಣ ಅವ್ವ ಕಾಯ್ತಾ ಇರ್ತಾಳೆ" ತಿರುಮಲಾಂಬನ ನೆನಪಿಸಿದಾಗ ಯಾಕೋ ಏನೋ...ಅವನ ಗುಂಡಿಗೆಯಲ್ಲಿ ದೊಡ್ಡ ತಳಮಳ ಭಯಂಕರ ಅಪರಾಧ ಮಾಡಿದಂತೆ ನರಳಿದ.

"ಪರ್ವಾಗಿಲ್ಲ, ಬಾ ! ಅವ್ವೇ ಕರ್ಕೊಂಡ್ಬರೋಕ್ಹೇಳಿದ್ದಾಳೆ. ಹೆಣ್ತನ ಮಾತೃ ಸ್ವರೂಪದ್ದು. ಧಾರಾಳವಾಗಿ ಕ್ಷಮ್ಸಿ ಬಿಡ್ತಾಳೆ" ಬಲವಂತ ಮಾಡಿ ಕರೆದೊಯ್ದರು.

ಜಗುಲಿಯ ಮೇಲೆ ಕೂತ ಕಲ್ಲೇಶಿ ಬುಟ್ಟಿಯಲ್ಲಿ ಉಳಿದ ಕಳ್ಳೆಕಾಯಿಯನ್ನ ಹೆಗಲ ಮೇಲಿನ ಟವಲ್‌ಗೆ ಸುರಿದು ಕಟ್ಟಿಟ್ಟ, ನಂತರ ಜೇಬಿನಲ್ಲಿದ್ದ ದುಡ್ಡನ್ನೆಲ್ಲ ಎಣಿಸಿದ. ಸಾಲ ಲಾಭವಾಗಿ ಉಳಿದಿತ್ತು. ಅಸಲು ಅವನ ಕೈ ಸೇರಿದ್ದು ದೊಡ್ಡ ತೃಪ್ತಿಯೇ. ಕಳ್ಳೆಕಾಯಿ ತಿಂದು ಎರಡು ಹೊತ್ತು ಅಕ್ಕ, ತಮ್ಮ ಕಳೆಯಬಹುದಿತ್ತು.

ಮುಖ ಎತ್ತಿ ತಿರುಮಲಾಂಬ ನೋಟವನ್ನೆದುರಿಸಲಾಗಲಿಲ್ಲ ಸಾಗರ್‌ಗೆ. ಮೊದಲ ಸಲ ಪಶ್ಚಾತ್ತಾಪಗೊಂಡಿದ್ದ.

"ಏನಾದ್ರೂ ಕುಡಿಯಲಿಕ್ಕೆ ಕೊಡ್ಲಾ, ಸಾಗರ್" ಕೇಳಿದರು.

ಬೇಡವೆಂದು ತಲೆಯಾಡಿಸಿದರೂ ಕೇಳದೆ ಒಂದು ಲೋಟ ಕಾಫಿಯನ್ನು ತಂದು ಅವನ ಮುಂದಿಟ್ಟರು. ಸೀತಾರಾಮ್ ಲೋಟದ ಬಳಿ ಕೈ ಚಾಚಲಿಲ್ಲ. ಸಾಗರ್ ಆರಾಮಾಗಿ ಕುಡಿದಿಟ್ಟ. ಮಣ್ಣಿನ ಪಾತ್ರೆಯಲ್ಲಿ ಕೂಡ ಕುಡಿದ ಅನುಭವವಿತ್ತು. ಅಂಥ ಅನುಭವಗಳು ಅವನ ತಂದೆಗಿಲ್ಲ. ಅವರು ಒಂದೇ ರೀತಿಯ ಬದುಕಿಗೆ ಅಂಟಿಕೊಂಡ ಜನ. ಶ್ರೀಮಂತ ಜನರೊಂದಿಗೆ ಮಾತ್ರ ಅವರ ಒಡನಾಟ.

ತಿರುಮಲಾಂಬ ಅವನ ಬಳಿಯಲ್ಲೇ ಕೂತರು.

"ಸಾಗರ್ ಊರಿಗೆ ಹೋಗ್ತಾ ಇದ್ದೀಯಾ ?" ಕೇಳಿದರು.

ಅವನು ಬಾಗಿಲಲ್ಲಿ ಕೂತಿದ್ದ ಕಲ್ಲೇಶಿಯ ಕಡೆ ನೋಡಿದ. ಈ ಪ್ರಸಾರಕ್ಕೆ ಅವನೇ ಕಾರಣವೆಂದು ಗೊತ್ತು. ನೇರವಾಗಿ ಹೇಳಿರಲಿಲ್ಲ. ತನ್ನ ಬಟ್ಟೆಗಳನ್ನ ಬ್ಯಾಗಿಗೆ ತುರುಕಿಕೊಂಡಿದ್ದ ನೋಡಿದ್ದ. ಈಗ ಕಿತ್ತೆಸೆದಿದ್ದ.

"ಇನ್ನು ಗೊತ್ತಿಲ್ಲ" ಎಂದ ಬೇರೆಡೆ ನೋಡುತ್ತ.

"ಈ ವಯಸ್ಸಿನಲ್ಲಿ ದೃಢತೆ ಇರ್ಬೇಕು. ಜೊತೆಯಲ್ಲಿ ಕರೆದೊಯ್ಯಲು ಬಂದ ನಿಮ್ತಂದೆ ನೊಂದ್ಕೊಂಡ್ರು. ನಿನ್ನ ಅಗತ್ಯ ಇರೋ ವಯಸ್ಸು ಅವ್ರಿಗೆ. ಹೆತ್ತವರ ಬಗ್ಗೆ ಬೇಸರ ಬೇಡ. ನಿನ್ನ ತಾಯಿನ ಜ್ಞಾಪ್ಕ ಮಾಡ್ಕೋ" ಬುದ್ಧಿ ಹೇಳಿದರು. ಅವನಿಗೆ ಕೇಳಲು ಇಷ್ಟವಿರಲೀ, ಬಿಡಲೀ, ಹೇಳುವುದು ಅವರ ಕರ್ತವ್ಯವಾಗಿ ಕಂಡಿತ್ತು.

ಬರೀ ಮೌನವಹಿಸಿದ ಸಾಗರ್. ಮೂಕತನವು ಕೆಲವೊಮ್ಮೆ ವರವಾಗಿ ಪರಿಣಮಿಸುತ್ತೆ ಎನಿಸಿತು ಅವನಿಗೆ. ಆದರೆ ಹೆತ್ತವರ ಬಗ್ಗೆ ಅವನು ಕಂಡಿತ ತಲೆ ಕೆಡಿಸಿಕೊಳ್ಳಲಿಲ್ಲ.

"ಎಂಟರ ಬಸ್ಸಿಗಾ ಹೊರಡೋದು ?" ಕೇಳಿದರು ಬಿಳಿಗಿರಿ.

'ಹೌದೆಂದು' ತಲೆದೂಗುವುದು ಅನಿವಾರ್ಯವೆನಿಸಿತು ಅವನಿಗೆ. ತಿರುಮಲಾಂಬ ಇವನ ಜೊತೆಯಲ್ಲಿ ಕಲ್ಲೇಶಿಗೂ ಬಡಿಸಿದರು. ಪಾಯಸದ ಊಟ, ಒಂದು ರೀತಿಯಲ್ಲಿ ಬೀಳ್ಕೊಡುವ ಸಮಾರಂಭ.

ತಕ್ಷಣ ಹಿಂದಿರುಗಿದ ಸಾಗರ್, ಸಿಗರೇಟ್ ಪ್ಯಾಕ್‌ನಲ್ಲಿದ್ದ ಎಲ್ಲಾ ಸಿಗರೇಟುಗಳನ್ನು ಸೇದಿ ಸೇದಿ ಎಸೆದು, ಜೊತೆಗೆ ಸಿಗರೇಟು ಪ್ಯಾಕನ್ನ ಬಿಸಾಟ.

ಗೌರಿ ಬಂದು ಸಪ್ಪಗೆ ನಿಂತಳು. ಒಮ್ಮೆ ತಲೆಯೆತ್ತಿ ನೋಡಿದ. ಸಂಕಟವಾಯಿತು. ಪ್ರತಿಯೊಂದು ದಿನದ ಬದುಕಿಗಾಗಿಯು ಪರದಾಟ, ಪಡಿ ಪಾಟಲು ಪಡುವ ಲಕ್ಷಾಂತರ ಜೀವಗಳ ಒಂದು ರೂಪವಾಗಿ ಕಂಡಳು.

ಹತ್ತಿರಕ್ಕೆ ಬಂದವಳೇ ಹಿಡಿಯಲ್ಲಿದ್ದ ಎರಡು ಪುಟ್ಟ ಕಲ್ಲುಗಳನ್ನ ಅವನ ಮುಂದೆ ಚಾಚಿದಳು. ಅವಳ ಕಣ್ಣಲ್ಲಿ ತುಂತುರು ಇತ್ತು. ಅದು ಯಾವ ಸಮಯಕ್ಕಾದರೂ ಧಾರೆಯಾಗಿ ಕೆನ್ನೆಯ ಮೇಲೆ ಇಳಿಯಬಹುದು. ಆದರೆ ಕೂಡದು.

"ಗೌರಿ, ಅಳ್ಬೇಡ" ಅಬ್ಬರಿಸಿದವನು ತಲೆಗೆ ಕೈ ಒತ್ತಿ "ನೀನೇನು ಮೂಕಿಯಲ್ಲ. ಆದ್ರೂ ಯಾಕೆ ಈ ಸನ್ನೆಯ ಪಡಿಪಾಟಲು. ಮೂಕಿ ಚಿತ್ರಗಳು ಒಂದು ಕಾಲದಲ್ಲಿ ಇತ್ತಂದು ಮಾತ್ರ ನಂಗೆ ಗೊತ್ತು. ನಿಂಗೆ ಕಷ್ಟವೆನಿಸಿದ್ರೂ ಪರ್ವಾಗಿಲ್ಲ ಮಾತಾಡು" ಕೋಪದಿಂದ ಹೇಳಿದ.

ಅವಳ ಮೌನ ಮತ್ತಷ್ಟು ದಟ್ಟವಾಯಿತು. ಮುಖದಲ್ಲಿ ವಿಷಾದದ ಲೇಪನ. ಎಲ್ಲಿಂದಲೋ ಚಿಮ್ಮಿಕೊಂಡ ನೋವು ಇಡೀ ಮೈಯಲ್ಲಿ ಆವರಿಸಿದಂತಾಯಿತು.

ಕುಸಿದು ಕೂತು ಬಿಕ್ಕ ತೊಡಗಿದಾಗ ಇಡೀ ಜಗತ್ತಿನ ನೋವೆಲ್ಲ ಒಬ್ಬಳೇ ಅನುಭವಿಸಿದಂತೆ ಕಂಡಳು.

ಮುಖ ಮುಚ್ಚಿಕೊಂಡ ಅವಳ ಕೈಗಳನ್ನ ಬಿಚ್ಚಿದ. "ಯಾಕೆ ಅಳ್ತೀಯಾ? ಈ ಪ್ರಶ್ನೆಗೆ ನೀನು ಸ್ಪಷ್ಟವಾಗಿ ಉತ್ತರಿಸ್ಲಾರೆ. ಜನರನ್ನ ಕಟ್ಟಿಕೊಂಡು ನಿಂಗೆ ಆಗ್ಬೇಕಾದ್ದು ಏನಿದೆ ? ನಗೋರು...ನಗ್ಲೀ, ಅಳೋರು...ಅಳ್ಲಿ. ನೀನು ಮಾತ್ರ ಮಾತಾಡ್ಬೇಕು" ಉದ್ವೇಗದಿಂದ ಹೇಳಿ ಅವಳ ಕಣ್ಣೀರು ತೊಡೆದ.

ಬ್ಯಾಗು ತೆಗೆದು ತಂದಿದ್ದ ನೋಟುನ ಬಂಡಲ್‌ಗಳಲ್ಲಿ ಇನ್ನೆರಡು ಇತ್ತು. ಒಂದನ್ನ ಅವಳ ಕೈಯಲ್ಲಿಟ್ಟ.

"ಇಟ್ಕೋ, ಎಂದಾದ್ರೂ ಮೀಟಾದಾಗ ನೀನು ಮಾತಾಡೋದನ್ನ ನಾನು ಕೇಳ್ಬೇಕು" ಎಂದ. ಒರಟು ಒರಟಾದ ಅವಿಧೇಯತೆ ಪ್ರತೀಕದಂತಿರುವ ಸಾಗರ್‌ನ ಹೃದಯದಲ್ಲಿ ಎಷ್ಟೊಂದು ಮಾನವೀಯತೆ ಇದೆ.

"ಹೋಗು, ಮನೆಗೆ ಹೋಗು" ಎಂದವನು ತಿರುಮಲಾಂಬನ ಅರಸಿಕೊಂಡು ಅವರ ಮನೆಗೆ ಬಂದ "ಎಂದೋ ಹೋದ, ಎಲ್ಲೋ ಹೋದ ಮಗ್ನಿಗಾಗಿ ನಿಮ್ಮ ಯಜಮಾನ್ರು ಪ್ರಾಣ ತ್ಯಾಗ ಮಾಡೋಕು ರೆಡಿಯಾಗಿದ್ದಾರೆ. ಇವ್ನ ನೋಡಿ... ಯಾರಿದ್ದಾರೆ ? ನಿಮ್ಗೇ ಏನು ಅನ್ನಿಸೋಲ್ವಾ ? ಇವ್ನ ಮಗ್ನೂಂತ ಮನೆಯಲ್ಲಿ ಇಟ್ಕೊಳ್ಳಿ. ಇದೆಲ್ಲ ನಿಮ್ಮ ಕೈಯಿಂದ ಯಾಕೆ ಮಾಡೋಕ್ಕಾಗೋಲ್ಲ. ನಂಗೆ ಅನ್ನ ಹಾಕಿದ್ರಿ. ಆತ್ಮೀಯತೆ ತೋರಿದ್ರಿ. ಅದ್ಕೇ ರಕ್ತ ಸಂಬಂಧನೇ ಬೇಕಿರ್ಲಿಲ್ಲ. ಈಗ್ಲೂ ಅಷ್ಟೆ. ಗೌರಿನ ನೀವು ಇಟ್ಕಳ್ಳಿ" ಎಂದು ಹೇಳಿದವನೇ ದಢ ದಢನೇ ಹಿಂದಕ್ಕೆ ಬಂದ.

ತಕ್ಷಣ ತನ್ನ ಬ್ಯಾಗು ತಗೊಂಡು ಬಾಗಿಲನ್ನ ಮುಂದಕ್ಕೆಳೆದುಕೊಂಡು ಹೊರ ಬಂದ. ಒಂಬತ್ತು ಗಂಟೆಗೆ ಕುಂದಣಕ್ಕೆ ಒಂದು ಬಸ್ಸು ಇತ್ತು. ಅದರಲ್ಲಿ ಹತ್ತಿ ಕೂತರಾಯಿತು.

ಬಸ್ಸಿನ ಹಾದಿ ತಲುಪುವ ಮುನ್ನವೇ ಬಂದು ಕೂಡಿಕೊಂಡ ಕಲ್ಲೇಶಿ ಏದುಸಿರು ಬಿಡುತ್ತಿದ್ದ. "ಅಣ್ಣ, ಓಡೋಡಿ ಬಂದೆ."

ಕತ್ತಲ ಸಮಯದಲ್ಲಿ ತಲೆಯ ಮೇಲೆ ಒಂದು ಹಾಕಬೇಕೆನಿಸಿತು. ಮನುಷ್ಯನ ಮಾತಿಲ್ಲದ ವಾತಾವರಣದಲ್ಲಿ ಪಕ್ಷಿಯ ಸಮೂಹದಲ್ಲಿದ್ದ ಸಂಭಾಷಣೆ ವಿಚಿತ್ರವೆನಿಸಿದರೂ ಇಂಪಾಗಿತ್ತು. ಗಾಳಿಯ ಸದ್ದು, ಗಿಡ, ಮರಗಳು ಕೂಗುವ ಸದ್ದು.

ಗೌರಿಯ ನೆನಪಾಯಿತು ಸಾಗರ್‌ಗೆ.

"ಕಲ್ಲೇಶಿ, ನನ್ಮಾತು ಕೇಳ್ತೀಯಾ ?" ಎಂದ ಕತ್ತಲೆಯ ನಡುವೆ ದೂರದಲ್ಲಿ ಕಾಣುವ ಬೆಳಕನ್ನ ನೋಡುತ್ತ ಸಾಗರ್.

"ಖಂಡಿತ ಅಣ್ಣ, ನಿಮ್ಜೊತೆ ಬಾ ಅಂದರೇ...ಬಂದ್ಬಿಡ್ತೀನಿ" ಉದ್ವಿಗ್ನನಾಗಿ ಕಲ್ಲೇಶಿ ಕೇಳಿದಾಗ, ಒಂದು ಬಲವಾದ ಏಟೇ ಬಿತ್ತು. "ಯೂ ಈಡಿಯಟ್. ಗೌರಿ ಗತಿ ಏನಾಗ್ಬೇಕು. ನೀನು ಪಚ್ಚೆ, ಕೆಂಪು ಕಲ್ಲುಗಳ ಆಸೆ ಬಿಟ್ಬಿಡು. ಅವೆಲ್ಲ ಬರೀ ಬೊಗಳೆ. ಯಾರಿಗಾದ್ರೂ ಸಿಕ್ಕಿದ್ದು ನೋಡಿದ್ಯಾ? ಬರೀ ಅಂತೆ, ಕಂತೆಗಳ್ನ ನಂಬ್ಕೋಬೇಡ" ಮನಸ್ಸಿಟ್ಟು ಹೇಳಿದ.

"ಅಣ್ಣ, ನನ್ನ ಸಂಪಾದ್ನೆಯಲ್ಲಿ ನಮ್ಮಕ್ಕನಿಗೆ ಮದ್ವೆ ಮಾಡೋಕ್ಯಾಗುತ್ತ? ಮುಂದೆ ಅವ್ಳ ಗತಿಯೇನು ? ನಮ್ಮಪ್ಪನಂಥ ಕುಡುಕನ್ನ ಕೈ ಹಿಡ್ದು ಸಾಯ್ಬೇಕಾಗುತ್ತೆ ಮದ್ವೆ ಬೇಡ, ಅವ್ಳಿಗೊಂದು ಕೆಲ್ಸ ಕೊಡೋರು ಯಾರು" ಅತ್ತುಕೊಂಡು ನುಡಿದ

ಕತ್ತಲಲ್ಲಿ ಅವನ ಮುಖವನ್ನೆ ನೋಡಿದ ಸಾಗರ್. ಬಣ್ಣಗೆಟ್ಟ ಮುಖ ವಯಸ್ಸಿಗೆ ಮೀರಿದ ಬಲ ಹೊತ್ತು ಸೋತು ಹೋದಂಥ ಶರೀರ.

"ಹಾಗಂತ, ಮೂರ್ಹೊತ್ತು ಕಲ್ಲುಗಳ ನಡ್ವೇ ಹುಡ್ಕಿಕೊಂಡು ತಿರುಗ್ತೀಯಾ ಎಂದೋ, ಯಾರೋ ನಿನ್ನ ಹೆಣ ಮಾಡ್ಬಿಡ್ತಾರೆ. ಗೌರಿಗೆ ಒಳ್ಳೆ ನೆಲೆ ಸಿಕ್ಕರೇ, ಕಲ್ಲು ಆರಿಸೋ ಕೆಲ್ಸ ಬಿಟ್ಟು ಬಿಡ್ತೀಯಾ" ಕೇಳಿದ ಸಾಗರ್.

ತಲೆಯ ಮೇಲೆ ಕೈಯಿಟ್ಟುಕೊಂಡ ಕಲ್ಲೇಶಿ "ನನ್ನಾಣೆ, ನಿನ್ನಾಣೆ...ಖಂಡಿತ ಆ ಕೆಲ್ಸ ಬಿಟ್ಟುಬಿಡ್ತೀನಿ" ಎಂದು ಭರವಸೆ. ದೂರದಲ್ಲಿ ಬರುತ್ತಿದ್ದ ಬಸ್ಸಿನ ಹೆಡ್ ಲೈಟುಗಳು ಕಾಣಿಸಿದವು.

* * *

ಮೃಣಾಲಿನಿ ಸಾಕಷ್ಟು ದಿನ ಕಾದರು. ಹತ್ತಾರು ಸಲ ಸೀತಾರಾಮ್‌ಗೆ ಬಂಗ್ಲೆಗೆ ಫೋನ್ ಮಾಡಿ ಕೆಲಸದವರನ್ನ ವಿಚಾರಿಸಿಕೊಂಡರು. ಪ್ರತಿ ಸಲವು ಒಂದೇ ಉತ್ತರ "ಇಲ್ಲಿಗೆ ಚಿಕ್ಕಜಮಾನ್ರು ಬಂದಿಲ್ಲ" ಆಕೆಯ ಮೈ ಬೆಂಕಿಯಾಗುತ್ತಿತ್ತು ಕೆಲವು ಸಂದರ್ಭಗಳಲ್ಲಿ.

ಇದೆಲ್ಲ ಸೀತಾರಾಮ್ ಪ್ಲಾನ್. ಮಗನನ್ನು ಇಲ್ಲಿಗೆ ಬರದಂತೆ ಬಂಧಿಸಿಟ್ಟಿರಬೇಕು. ವಕೀಲರನ್ನ ಅರಸಿಕೊಂಡು ಅವರ ಆಫೀಸ್‌ಗೆ ಹೋದರು.

"ಒಂದು ಪಿಟಿಷನ್ ಫೈಲು ಮಾಡ್ಬೇಕು."

ವಕೀಲರು ಹಾಕಿದ್ದ ಕನ್ನಡಕ ತೆಗೆದು ಹಾಕಿಕೊಂಡರು. ಈಕೆಗೆ ಡೈವರ್ಸ್

ಕೊಡಿಸಿದ್ದು ಅವರೇ, ಆದ್ದರಿಂದ ಎಲ್ಲಾ ವಿಷಯನು ಗೊತ್ತಿತ್ತು. ಬಂಗ್ಲೆಯ ಬಗ್ಗೆ ಕಾಂಪ್ರಮೈಸ್ ಮಾಡಿಸಿದ್ದು ಹೆಚ್ಚು ಪ್ರಯಾಸದಿಂದಲೇ.

"ಯಾರ್ಮೇಲೆ? ಯಾಕೆ? ಆಫೀಸ್ ಮ್ಯಾಟರಾ ?" ಟೇಬಲ್ಲು ಮೇಲೆ ಕೈಯೂರಿ ಕೇಳಿದರು. ಮೃಣಾಲಿನಿ ಮುಖ ಗಂಭೀರವಾಯಿತು. ಸಂಕಟ, ನೋವು, ಕೋಪ, ನಿಸ್ಸಹಾಯಕತೆ - ಕೆಲವೊಮ್ಮೆ ಆಕೆಯ ವಿವೇಕವನ್ನು ಪೂರ್ತಿಯಾಗಿ ಭಸ್ಮ ಮಾಡಿಬಿಡುತ್ತಿತ್ತು.

"ಸೀತಾರಾಮ್ ನನ್ನ ಮಗ್ನ ಬಚ್ಚಿಟ್ಟಿದ್ದಾರೆ."

ವಕೀಲರು ಜೋರಾಗಿ ನಕ್ಕರು. ಶಿಸ್ತಾಗಿ, ಒಳ್ಳೆ ಪೊಸಿಷನ್‌ನಲ್ಲಿರುವ ಹೆಣ್ಣು ಮೂರ್ಖಳಾಗಿ ಕಂಡಳು. "ಸಾಗರ್ ಅಪ್ರಿಗೂ ಕೂಡ ಮಗ. ಅವನದು ಬಚ್ಚಿಡುವ ವಯಸ್ಸಾ ? ಮನಸ್ಸು ಮಾಡಿದ್ರೇ ನಿಮ್ಮಿಬ್ಬರನ್ನ ಹರಾಜು ಹಾಕಬಲ್ಲ. ಅದೆಲ್ಲ...ಬೇಡ ! ಏನು ವಿಷ್ಯ?" ಶಾಂತಚಿತ್ತರಾದರು.

ಸಧ್ಯದ ಸ್ಥಿತಿಯನ್ನ ವಿವರಿಸಿದ ಮೃಣಾಲಿನಿ 'ಸಾಗರ್ ಕಾಣೆಯಾಗಿರುವುದಕ್ಕೆ ಸೀತಾರಾಮ್ ಕಾರಣ' ಎಂದು ಆಪಾದನೆ ಹೊರೆಸಿದರು ಮತ್ತೊಮ್ಮೆ.

"ಅದ್ಕೇ ಸಾಕ್ಷಿ, ಆಧಾರಗಳು ಬೇಕು. ಅಂಥದ್ದೇನಾದ್ರೂ ಇದ್ದರೇ ಕಲೆಕ್ಟ್ ಮಾಡಿಕೊಂಡ್ಬನ್ನಿ. ನೇರವಾಗಿ ಸೀತಾರಾಮ್‌ನ ಕೇಳಿ. ಅದ್ರಲ್ಲಿ ತಪ್ಪೇನಿದೆ ? ನಿಮ್ಮ ಮಗ ನಿಮ್ಗೇ ಮುಖ್ಯ ಅನ್ನಿಸಿದ್ದರೇ ಇಬ್ರೂ ಕೂತು ಅವ್ನ ಭವಿಷ್ಯದ ಬಗ್ಗೆ ಒಂದು ತೀರ್ಮಾನಕ್ಕೆ ಬನ್ನಿ. ಇಲ್ಲಿ ಕೋರ್ಟು ಕಛೇರಿ ಅಂತ ಸಮಯ ಹಾಳು ಮಾಡ್ಕೋಬೇಡಿ. ನಾಳೆ ಸಾಗರ್ ನಿಮ್ಮಿಬ್ಬರ ವಿರುದ್ಧ ಕೋರ್ಟಿಗೆ ಹೋಗ್ಬಹುದ್ದು. ಅಂದಿನ ಸಂದರ್ಭನ ನೆನಸಿಕೊಳ್ಳಿ" ವಕೀಲರ ಮಾತಿಗೆ ಆಕೆ ತಬ್ಬಿಬ್ಬಾದರು.

ಸೀತಾರಾಮ್ ವಿನಯ ಸಾಗರ್ ತಾಯ್ತಂದೆಯರಿಂದ ಬಿಡುಗಡೆ ಕೇಳಿದ್ದ.

ಪೂರ್ತಿ ನರ್ವಸ್ ಆದರು ಮೃಣಾಲಿನಿ. ಮುಂದೇನು? ಏನು ತೋಚಲಿಲ್ಲ. ಛಲದಿಂದ ಸೀತಾರಾಮ್‌ಗೆ ಬುದ್ಧಿ ಕಲಿಸಲು ವಕೀಲರಲ್ಲಿಗೆ ಬಂದಿದ್ದರು. ತಪ್ಪಿನ ಅರಿವಾಗಿತ್ತು. ಸಾಗರ್‌ನ ತಂದೆಯಲ್ಲಿಗೆ ಕಳುಹಿಸಿರಬಹುದೇ?

ಮೃಣಾಲಿನಿ ಎದ್ದಾಗ ವಕೀಲರು ಬುದ್ಧಿ ಹೇಳಿದರು.

"ಸ್ವಲ್ಪ ಅರ್ಥಮಾಡ್ಕೊಳ್ಳಿ. ನಿಮ್ಗೂ ಸೀತಾರಾಮ್‌ಗೂ ಯಾವ್ದೇ ಸಂಬಂಧ ಇಲ್ದೇ ಇರ್ಬಹುದ್ದು. ಕಾನೂನಿನ ರೀತಿ ಬೇರೆಯಾಗಿದ್ದೀರಿ. ಹಿಂದೆ ನೀವುಗಳು ಒಟ್ಟಿಗೆ ಇದ್ದೀರಿ, ಎನ್ನುವುದಕ್ಕೆ ಸಾಕ್ಷಿಯಾಗಿ ಸಾಗರ್ ಇದ್ದಾನೆ. ಅವ್ನ ಭವಿಷ್ಯ ಇಬ್ರಿಗೂ ಸೇರಿದ್ದು. ಸೀತಾರಾಮ್ ಅವ್ರಲ್ಲಿ ಮಾತಾಡಿ. ನಾನು ಒಬ್ಬ ಲಾಯರ್ ಆಗಿಯಲ್ಲ, ಒಬ್ಬ ವೆಲ್‌ವಿಷರ್ ಆಗಿ ಬುದ್ಧಿ ಹೇಳ್ತಾ ಇದ್ದೀನಿ."

ಸ್ವಲ್ಪ ಚುರುಕು ಮುಟ್ಟಿತು.

"ಥ್ಯಾಂಕ್ಸ್, ಥ್ಯಾಂಕ್ಯೂ ವೆರಿ ಮಚ್ ಫಾರ್ ಯುವರ್ ಕೈಂಡ್ ಸಜೆಷನ್" ಎಂದು ಫೀಜು ಕೊಡಲು ಪರ್ಸ್‌ಗೆ ಕೈ ಹಾಕಿದಾಗ ನಿರಾಕರಿಸಿದರು. "ನೋ, ಹಣ ಅಗತ್ಯ ಸಂಪಾದನೆಗೂ ಒಂದು ದಾರಿ ಇದೆ."

ಬಂದ ಮೃಣಾಲಿನಿ ಫೋನ್ ಮಾಡಿದರು. ಕಿಚನ್ ಇನ್‌ಛಾರ್ಜ್ ಹೇಳಿದ್ದು ಮಾಮೂಲಿ ರಾಗವೆ "ಅವ್ರು ಬಂದಿಲ್ಲ. ಈ ಪ್ರಶ್ನೆಗೆ ಉತ್ತರ ಹೇಳಿ ಹೇಳಿ ಸಾಕಾಗಿದೆ, ಮೇಡಮ್. ಯಜಮಾನ್ರು ಕೂಡ ಬೆಳಗ್ನಿಂದ ನಾಲ್ಕು ಸಲ ಫೋನ್ ಮಾಡಿ ವಿಚಾರಿಸಿದ್ರು" ಎಂದು ಹೇಳಿ ಫೋನಿಟ್ಟ.

ಆದರೆ ಮಧ್ಯಾಹ್ನ ಡ್ರೈವರ್ ಒಂದು ತಾಜಾ ಸುದ್ದಿ ತಂದ.

"ಮೇಡಮ್, ಯಜಮಾನ್ರು ಚಿಕ್ಕಜಮಾನ್ರುನ ಭೇಟಿಯಾಗಿದ್ರಂತೆ" ಎಂದವ ತಾನು ಕೇಳಿ ತಿಳಿದಿದ್ದಕ್ಕೆ ಇನ್ನಷ್ಟು ಸೇರಿಸಿ ಸ್ವಾರಸ್ಯವಾಗಿಸಿ ಒದರಿದ. ಅಂತು ಸಾಗರ್ ಶ್ರೀವಳ್ಳಿಪುರದಲ್ಲಿರುವ ವಿಷಯ ತಿಳಿದ ಕೂಡಲೇ ಆಕೆ ಕಾರ್ಯೋನ್ಮುಖರಾದರು. ಫೋನ್‌ನಲ್ಲಿಯೇ ಇಲ್ಲಿಂದ ಎಷ್ಟು ಕಿಲೋ ಮೀಟರ್......ಎಲ್ಲಾ ಹತ್ತು ನಿಮಿಷದಲ್ಲಿ ಕಲೆಕ್ಟ್ ಮಾಡಿಕೊಂಡರು.

ಕಾರು ಹತ್ತಿಯೇ ಬಿಟ್ಟರು. ಕಣ್ಣಿಂದ ಕಂಬನಿ ರಭಸದಿಂದ ಸುರಿಯಿತು. ಎದೆಯಲ್ಲಿ ಮಾತ್ರ ಬೆಂಕಿ. ಸೀತಾರಾಮ್ ತನಗೆ ಏಕೆ ವಿಷಯ ತಿಳಿಸಲಿಲ್ಲ. ತನ್ನಿಂದ ಮುಚ್ಚಿಡುವುದಕ್ಕೆ ಬೇರೇನೋ ಕಾರಣ ಇರಬಹುದು.

ಸುಮ್ಮನೆ ತಲೆ ಕೆಡಿಸಿಕೊಂಡರು. ಭಯಂಕರ ತಲೆ ಸಿಡಿತ ಷುರುವಾಯಿತು. ಒಂದು ನೋವಾಲ್‌ಜಿನ್ ನುಂಗಿ ನೀರು ಕುಡಿದರು. ದುಃಖ ಉಕ್ಕುಕ್ಕಿ ಬರುತ್ತಿತ್ತು. ತನ್ನ ಈ ಕ್ಷೋಭೆಗೆ ಸೀತಾರಾಮ್ ಕಾರಣ. ಇಡೀ ಮೃಣಾಲಿನಿಯ ವ್ಯಕ್ತಿತ್ವ ತುಳಿಯಲು ಹೊರಟ ಆತ ನೀಚನಾಗಿ ಕಂಡಿದ್ದ.

ಅಪ್ಪಯ್ಯ ಶಾಸ್ತ್ರಿಗಳ ಮನೆಯ ಮುಂದೆ ಕಾರು ನಿಂತಿತು. ಹೋಗುವ ಬರುವ ಕೆಲವರು ಇಂಟರೆಸ್ಟ್ ತೆಗೆದುಕೊಳ್ಳದಿದ್ದರೂ ಒಬ್ಬರು ಡ್ರೈವರ್‌ನ ಪ್ರಶ್ನಿಸಿದ.

"ಯಾರು, ಏನು...ಬೇಕಿತ್ತು ?"

ಯಜಮಾನಿತಿಯ ಮುಖಿತ ಪ್ರತಿಕ್ರಿಯೆ ಗಮನಿಸಿದ ನಂತರವೇ ಸಾಗರ್ ಬಗ್ಗೆ ವಿಚಾರಿಸಿದ್ದು. ಮುಚ್ಚಿದ್ದ ಬಾಗಿಲ ಕಡೆ ಕೈ ತೋರಿಸಿ ಹೋದರು ತಮ್ಮ ಪಾಡಿಗೆ.

ಡ್ರೈವರ್, ಮೃಣಾಲಿನಿ ಇಬ್ಬರು ಹೊರಟರು. ದಿಬ್ಬದಂತಿದ್ದ ಕಡೆ ಕಟ್ಟಿದ

ಮನೆ ಸ್ವಲ್ಪ ಎತ್ತರದ ಪ್ರದೇಶದಲ್ಲಿತ್ತು. ಮಣ್ಣನ್ನ ಕೊರೆದು ಕಲ್ಲುಗಳನ್ನ ಸೇರಿಸಿ ಮೆಟ್ಟಲು ಮಾಡಿದ್ದು ತುಂಬ ಅನುಕೂಲಕರವೆನಿಸಿತು.

ಮೃಣಾಲಿನಿ ತುಂಬ ಕಂಗೆಟ್ಟರು. "ಯೂಸ್‌ಲೆಸ್ ಫೆಲೋ ಅಂಥ ಬಂಗ್ಲೆಯಲ್ಲಿರೋದು ಬಿಟ್ಟು ಇಲ್ಲಿರೋ ಹಣೆ ಬರಹ ಇವ್ನಿಗೆ ಯಾಕೆ ?" ಮನದಲ್ಲಿಯೇ ಬೈದುಕೊಂಡರು ತಮ್ಮ ಸಮಾಧಾನಕ್ಕೆ.

ಮುಂದಿನ ಜಗುಲಿಯನ್ನೇರಿ ಬಾಗಿಲ ಮೇಲೆ ಕೈಯಿಟ್ಟರು. ತುಂಬ ದಪ್ಪ ಮರದಿಂದ ಮಾಡಿದ ಬಾಗಿಲು ಅಂಗೈ ಅಗಲಕ್ಕಿಂತ ದಪ್ಪಗಿತ್ತು. ತಳ್ಳಲು, ಹಾಕಲು ಕೂಡ ಬಲ ಪ್ರಯೋಗಿಸುವ ಅಗತ್ಯವಿತ್ತು. ಜೈಲಿನಲ್ಲಿ ಕ್ರೂರಿ ಅಪರಾಧಿಗಳ ಕಾಲಿಗೆ ಹಾಕುವ ದಪ್ಪ ಚೈನ್ ಇಲ್ಲಿ ಚಿಲಕವಾಗಿತ್ತು. ಬೀಗ ಅಂಥದ್ದೇನು ಇರಲಿಲ್ಲ. ಡ್ರೈವರ್ ತೆಗೆದು ಹಿಂದಕ್ಕೆ ದೂಡಿದ. ಇಡೀ ನಡುಮನೆಗೆ ಇದ್ದಿದ್ದು ಒಂದು ಉಯ್ಯಾಲೆ ಮಾತ್ರ. ನಾಲ್ವರೂ ಒಟ್ಟಿಗೆ ಕೂತು ತೂಗಿಕೊಳ್ಳಬಹುದಿತ್ತು. ಭದ್ರವಾದ ಗಟ್ಟಿ ಮುಟ್ಟಾದ ಹಳೆಯ ಮನೆಯೆನಿಸಿತು.

ಕೋಣೆಗಳನ್ನೆಲ್ಲ ನೋಡಿದರು. ಎರಡು ರೂಮಿನಲ್ಲಿ ಮಂಚಗಳು ಇತ್ತು. ಹಿಂದೆ ಇದ್ದ ಒಂದು ಸಣ್ಣ ಉಗ್ರಾಣದಂಥ ರೂಮಿಗೆ ಹಳೆಯ ಕಾಲದ ಕಬ್ಬಿಣದ ಬೀಗ ಹಾಕಿದ್ದು ಕಂಡು ಬಂತು.

"ಯಾರು, ಇಲ್ಲ ಮೇಡಮ್" ಎಂದ ಡ್ರೈವರ್ ಸ್ವಲ್ಪ ಅಳುಕಿದ ಅವನೇ ವಿಷಯ ತಂದು ಮುಟ್ಟಿಸಿ ಮೃಣಾಲಿನಿ ಇಲ್ಲಿಗೆ ಬರಲು ಪ್ರೇರಕನಾಗಿದ್ದು, ಹೆದರಿದ. ಮೃಣಾಲಿನಿ ತುಂಬ ಸ್ಟ್ರಿಕ್ಟ್ ಎಂದು ಗೊತ್ತು. ಗಂಡನಿಗೆ ಡೈವರ್ಸ್ ಕೊಟ್ಟು ಛಾಲೆಂಜಾಗಿ ಬದುಕುತ್ತಿರುವ ಹೆಣ್ಣು, ತನ್ನನ್ನು ಕೆಲಸದಿಂದ ತೆಗೆದು ಹಾಕಲು ಹಿಂಜರಿಯಲಾರರು.

"ಮೇಡಮ್, ಖಂಡಿತ ಸುಳ್ಳಲ್ಲ. ಶುಕ್ರವಾರ ಯಜಮಾನ್ರು ಬಂದು ಹೋಗಿದ್ನ ಅವ್ನ ಮಕ್ಳು ಮೇಲೆ ಪ್ರಮಾಣ ಮಾಡಿ ಹೇಳ್ದ. ಬೇಕಾದ್ರೆ... ನಿಮ್ಮ ಮುಂದೆ ತಂದು ನಿಲ್ಲಿಸ್ತೀನಿ" ವಿನಯದಿಂದ ವಿನಂತಿಸಿಕೊಂಡ.

ಸೀರಿಯಸ್ಸಾಗಿ ಅವನ ಮುಖ ನೋಡಿದ ಮೃಣಾಲಿನಿ "ನಾನು ಇಲ್ಲೇ ಇರ್ತೀನಿ. ಸ್ವಲ್ಪ ಹೋಗಿ ವಿಚಾರ್ಸಿಕೊಂಡ್ಬಾ. ಆ ಉಯ್ಯಾಲೆ ಮೇಲೆ ಒರಸು. ಕೂತುಕೊಳ್ಳೋಕೆ ಬೇರೆಲ್ಲು ಜಾಗವಿಲ್ಲ" ಆಜ್ಞಾಪಿಸಿದರು.

ಡ್ರೈವರ್ ತನ್ನ ಕರ್ಚಿಫ್‌ನಿಂದಲೇ ಉಯ್ಯಾಲೆ ಮಣೆಯನ್ನು ಸ್ವಚ್ಛ ಮಾಡಿ ಅದನ್ನ ಜೇಬಿನಲ್ಲಿ ತುರುಕಿಕೊಂಡು ಓಡಿದ. ಅವನಿಗೆ ಕೆಲಸ ಮುಖ್ಯವಾಗಿತ್ತು. ಎಷ್ಟೋ ಕಡೆ ಕೆಲಸ ಮಾಡಿದ್ದ. ತಿಂಗಳ ಪಗಾರ ಸರಿಯಾಗಿ ಸಿಕ್ಕುತ್ತಿರಲಿಲ್ಲ.

ಅದರಲ್ಲಿ ಈ ಮೇಡಮ್ ತುಂಬ ಕರೆಕ್ಟ್. ಒಂದನೇ ತಾರೀಖು ಸಂಬಳದ ಚೆಕ್ ಅವನ ಕೈ ಸೇರುತ್ತಿತ್ತು. ಊಟ, ತಿಂಡಿನು ನಡೆದು ಹೋಗುತ್ತಿತ್ತು. ಮಗಳ ಮದುವೆಗೆ ಅಂದಾಗ ಬ್ಯಾಂಕ್‌ನಲ್ಲಿ ಇಪ್ಪತ್ತೈದು ಸಾವಿರ ಲೋನ್ ಕೊಡಿಸಿದ್ದರು. ಇದೆಲ್ಲ ಬೇರೆಯ ಕಡೆ ಸಿಕ್ಕುವಂತಿರಲಿಲ್ಲ.

ಅವನು ಅತ್ತಿತ್ತ ನೋಡಿ ನೇರವಾಗಿ ಹೋಗಿದ್ದು ಬಿಳಿಗಿರಿಯವರ ಮನೇಗೇನೇ. ಬಾಗಿಲಲ್ಲಿ ನಿಂತವನು ತಲೆಯನ್ನು ಬಗ್ಗಿ ಒಳಕ್ಕೆ ಹಾಕಿ "ಅಮ್ಮ...ಅಮ್ಮ...." ಕೂಗಿದ. ಸೌಟು ಹಿಡಿದೇ ಬಂದರು ತಿರುಮಲಾಂಬ.

"ಇಲ್ಲಿ ಸಾಗರ್...ಅಂತ" ಮೊದಲಿಟ್ಟ ವಿಷಯವನ್ನು. ಆಕೆಯ ಎದೆಯ ಮೇಲಿನ ದೊಡ್ಡ ಭಾರ ಇಳಿಸಿದಂತಾಯಿತು. "ಅವ್ನ ತಂದೆ ಬಂದಿದ್ದಾರ?" ಇಲ್ಲಿಗೇನೇ...ಕರೀ ಎಂದರು ಸಂಭ್ರಮದಿಂದ.

"ಇಲ್ಲ, ಸಾಗರ್ ತಾಯಿ ಬಂದಿರೋದು" ಎಂದ ಸ್ವಲ್ಪ ಗೆಲುವಾಗಿ.

"ಮತ್ತೆ ಒಳ್ಳೆದಾಯ್ತು ! ಆಕೇನಾ ಇಲ್ಲೇ ಕರೀ. ಎಷ್ಟೋ ಹೇಳೋದು ಇದೆ" ಎಂದು ಅವನನ್ನು ಅಟ್ಟಿ ಬಾಗಿಲಲ್ಲಿಯೇ ನಿಂತರು. ಅವನನ್ನು ಅವರ ಕೈಗೆ ಒಪ್ಪಿಸಿದರೇ ಸಾಗಿತ್ತು.

ಸ್ವಲ್ಪ ಬೇಸರ, ಕಸಿವಿಸಿಯೊಂದಿಗೆ ಬಂದಿದ್ದು ಮೃಣಾಲಿನಿ. ಅರೆ ನರೆತ ಕೂದಲನ್ನ ತೆಳ್ಳಗೆ ಗಂಟು ಹಾಕಿಕೊಂಡು, ಅದರಲ್ಲಿ ಹೂ ಸಿಕ್ಕಿಸಿಕೊಂಡು ಹತ್ತಿಯ ಚೌಕಳಿಯ ಹಸಿರು ಸೀರೆಯುಟ್ಟ ಆಕೆ ತುಂಬ... ತುಂಬ ಲಕ್ಷಣವಾಗಿ ಕಂಡರು ತಿರುಮಲಾಂಬ.

"ಬನ್ನಿ....ಬನ್ನಿ.... ಶ್ರೀವಳ್ಳಿಯಮ್ಮನಿಗೆ ಹರಿಕೆ ಹೊತ್ಕೊಂಡಿದ್ದು ಇಷ್ಟು ಬೇಗ ನೇರವೇರಿತಲ್ಲ. ಪ್ರಯಾಸದಿಂದ ಏನು ಆಯಾಸವಾಗಲಿಲ್ಲ ತಾನೇ" ತೀರಾ ಪರಿಚಿತರನ್ನು ಆಹ್ವಾನಿಸಿದಂತೆ ಬರ ಮಾಡಿಕೊಂಡರು.

ಉಟ್ಟ ಸೀರೆ ನಲುಗಬಾರದಲ್ಲ, ಛೇರ್‌ನ ಮೇಲೆ ಕೂತರು ಮೃಣಾಲಿನಿ ನಾಜೂಕಾಗಿ.

"ಕುಡಿಯಲಿಕ್ಕೆ, ಏನು ಕೊಡ್ಲಿ? ಕಾಫಿ ಆದೀತೇ. ಬೇಡಾಂದರೆ ಹಾಲು ಕೊಡ್ತೀನಿ" ಆತ್ಮೀಯತೆ ತೋರಿದರು ತಿರುಮಲಾಂಬ.

"ಅದೆಲ್ಲ ಏನ್ಬೇಡ ! ಸಾಗರ್ ಇಲ್ಲಿದ್ದಾನಾ? ಮನೆಯಲ್ಲೆಲ್ಲಾ ನೋಡ್ದೆ, ಯಾರು ಇರ್‍ಲಿಲ್ಲ." ಮೃಣಾಲಿನಿ ಸ್ವರ ಮಾಮೂಲಾಗಿತ್ತು. ಆರ್ದ್ರತೆಯೇನು ಇರಲಿಲ್ಲ.

ಅಲ್ಲೇ ಇದ್ದ ಕನ್ನಡಕವನ್ನ ಸೀರೆಯ ಸೆರಗಿನಿಂದೊರೆಸಿ ಹಾಕಿಕೊಂಡ ಆಕೆ, ಸರಿಯಾಗಿ ನೋಡಿದರು ಮೃಣಾಲಿನಿಯನ್ನ ಲಕ್ಷಣವಾದ ಹೆಂಗಸು. ಉಟ್ಟಿದ್ದ ರೋಜ್ ಬಾರ್ಡರಿನ ಸೀರೆ ಆಕೆಯ ಮೈ ಬಣ್ಣಕ್ಕೆ ಒಪ್ಪುವಂತಿತ್ತು. ಒಳ್ಳೆಯ ಬಣ್ಣ, ನಿಲುವು ಒತ್ತಾದ ಕೂದಲು ಕುತ್ತಿಗೆಯವರೆಗೆ ಮಾತ್ರ ಇತ್ತು. ಬೆಳ್ಳಗಾದ ಕೂದಲಿಗೆ ಬ್ಯೂಟಿ ಪಾರ್ಲರ್‌ಗೆ ಹೋಗಿ ಡೈ ಮಾಡಿಸಿ ಕೊಂಡಿದ್ದರಿಂದ ದಟ್ಟವಾದ ಕಪ್ಪು ಬಣ್ಣದಾಗಿತ್ತು.

"ಎರಡು ದಿನದ ಹಿಂದೆ ಹೊರಟಿದ್ದ. ಬಸ್ಸು ಬರ್‍ದೇ ಇದ್ದಿದ್ದರ ಜೊತೆಗೆ ಕಲ್ಲೇಶಿಗೆ ಕಾಲು ಉಳುಕಿದ್ದರಿಂದ ಉಳ್ದುಕೊಂಡಿದ್ದ. ಏನು ಹೇಳಲಿಕ್ಕೆ ಬರೋಲ್ಲ. ಇದ್ದರೇ ಸಂಜೆಯ ಸುಮಾರಿಗೆ ಬರ್ತಾನೆ. ಇಲ್ಲಾಂದರೇ ಹೊರಟು ಬಿಟ್ಟಿದ್ದಾನೆಂದೇ ಲೆಕ್ಕ." ಆಕೆ ಸಪ್ಪಗಾದರು. ಸಾಗರ್ ಮನೆಯಲ್ಲಿ ಇರಬಹುದೆಂದುಕೊಂಡಿದ್ದರು. ಬಹುಶಃ ಮೃಣಾಲಿನಿಗಿಂತ ಆಕೆಯೇ ಹೆಚ್ಚು ನೊಂದರು.

"ಈಗೇನು....ಮಾಡೋದು?" ಎಂದರು ಮೃಣಾಲಿನಿ.

"ನೀವು, ನಿಮ್ಮ ಯಜಮಾನ್ರ ಜೊತೆಯಲ್ಲಿ ಬರ್ಬೇಕಿತ್ತು. ಎಂಥ ಶುದ್ಧ ಒರಟನಾದ್ರೂ ತಾಯಿಯ ಕಣ್ಣೀರಿಗೆ ಕರ್‍ಗಿ ಬಿಡ್ತಾನೆ." ಹೇಗೂ ಬಂದಿದ್ದೀರಿ, ಸಂಜೆಯವರ್‍ಗೂ ನೋಡೋಣ. ಅಕಸ್ಮಾತ್ ಕುಂದಣಕ್ಕೆ ಹೋಗಿದ್ರೆ ಹಿಂದಿರುಗ್ಬಹ್ದು. ಅಥ್ವಾ ಹೊಳೆ ದಂಡೆಯಲ್ಲಿ, ಅಲ್ಲಿರುವ ಕಲ್ಲುಗಳ ಮೇಲೆ ಕೂತಿರ್ತಾನೆ. ಒಂದ್ಸಲ ಹೋಗಿ ನೋಡ್ಬನ್ನಿ" ಸೂಚಿಸಿದರು ತಿರುಮಲಾಂಬ. ಆಕೆ ಊಹಿಸಿದ್ದ ಸಾಗರ್‌ನ ತಾಯಿಯ ಸ್ವರೂಪ ಬೇರೆಯದಾಗಿತ್ತು. ಇಲ್ಲಿ ಕಂಡ ಮೃಣಾಲಿನಿಯ ರೂಪವೆ ಬೇರೆ. ಅತ್ತು ಅತ್ತು ಮಗನಿಗಾಗಿ ಕರಗಿ ಹೋಗಿರಲಿಲ್ಲ. ಅತ್ತ ಗುರುತೇನು, ಮುಖದ ಮೇಕಪ್ ಕೂಡ ಕೆಟ್ಟಿರಲಿಲ್ಲ.

ಬಗ್ಗಿ ನೆರಿಗೆ ಸರಿ ಮಾಡಿಕೊಂಡ ಮೃಣಾಲಿನಿ "ಹೊಳೆ ಬಂಡೆಗಳು ಅಂದರೇ ಎಲ್ಲಿ?" ಕೇಳಿದರು. ಮಗನ ಬಗ್ಗೆ ಆಕೆಯ ಮನದಲ್ಲಿ ಭಯ ಮೂಡದು. ಬರೀ ಸೀತಾರಾಮ್ ಎಳೆತಂದು ಅಪರಾಧಿಯನ್ನಾಗಿಸುವಲ್ಲಿ ಪೂರ್ತಿ ಮಗ್ನಳಾಗಿದ್ದರಿಂದ, ಅಲ್ಲಿ ಮಮತಾಮಯಿ ಮೂರ್ತಿಯಾದ ತಾಯಿ ಸ್ಥಾನಕ್ಕೆಡೆಯಿಲ್ಲ?

"ಒಂದಿಷ್ಟು ಕೂತ್ಕೊಳ್ಳಿ, ನಮ್ಮ ಮನೆಯೋರಿಲ್ಲ. ಗೌರಿ ಇದ್ದರೇ ಕರ್‍ದು ಬರ್ತೀನಿ. ಹೊಳೆ ದಂಡೆ, ಬಂಡೆಗಳು ಎಲ್ಲಾ ಅವ್ಳಿಗೆ ಗೊತ್ತು" ಎಂದ ತಿರುಮಲಾಂಬ ಮನೆಯಿಂದ ಹೊರಗೆ ಹೋದರು.

ಮೃಣಾಲಿನಿ ಮಲತಾಯಿಯ? ಇದನ್ನು ಯಾರು ಹೇಳಬೇಕು? ಸಾಗರ್

ಏನು ಹೇಳಿಲ್ಲ. ಹೇಳೋದು ಇಲ್ಲ. ಆದರೆ ಹಾಗೇಂತ ಅನ್ನಿಸಲಿಲ್ಲ. ತಾಯಿಯ ಪಡಿಯಚ್ಚು ಸಾಗರ್. ಅದೇ ಬಣ್ಣ, ಮೂಗು, ಮುಖ. ಯಾರಾದರೂ ಹೇಳಬಹುದಿತ್ತು ಸಾಗರ್‌ನ ತಾಯಿಯೆಂದು ಇನ್ನ ಮುಂದಕ್ಕೆ ಯೋಚಿಸಲಿಲ್ಲ ಆಕೆ.

ಸಾಗರ್ ಕಟ್ಟಿಕೊಟ್ಟ ಗೌರಿಯ ಮನೆಯ ಮುಂದೆ ನಿಂತು ಕೂಗಿದರು. ಬಾಗಿಲು ತೆಗೆದು ಇಣಕಿದರು. ಮನೆಯನ್ನು ಬಳಸಿ ಹಿತ್ತಲಿಗೆ ಬಂದಾಗ ಸ್ಪಟಿಕದ ಗಿಡಗಳ ಸಮೂಹದಲ್ಲಿ ನಿಂತು ಹೂ ಬಿಡಿಸುತ್ತಿದ್ದಳು. ಎಳೆಯ ಗಿಡಗಳಾದರೂ ಎಲೆಗಳಿಗಿಂತ ನೀಲಿ, ಗುಲಾಬಿ, ಬಿಳಿಯ ಬಣ್ಣದ ಹೂಗಳು ಪೈಪೋಟಿ ನಡೆಸಿದಂತೆ ಕಂಡಿತು.

"ಗೌರಿ, ಬಾ ಇಲ್ಲಿ" ಕೂಗಿದರು.

ಅರ್ಧ ಬುಟ್ಟಿಯ ತುಂಬ ಹೂ ತುಂಬಿ ಕೊಂಡಿದ್ದ ಆ ಲಂಗ ದಾವಣಿಯ ಹುಡುಗಿ ಗಿಡಗಳಿಗೆ ನೋವಾಗದಂತೆ ಎಚ್ಚರದಿಂದ ಪಾದಗಳನ್ನೂರುತ್ತ ಬಂದಳು.

"ಅಮ್ಮಾ...ಮ್ಮ ! ಎಷ್ಟೊ...ಂದು ಹೂ" ಸನ್ನೆ ಬಿಟ್ಟು ನಾಲಿಗೆಯನ್ನು ಆಶ್ರಯಿಸಿದ್ದಳು "ಈಗ ಅಕ್ಕ ಮಾತಾಡ್ತಾಳೆ. ಅಣ್ಣ ಬೈದು ಬುದ್ಧಿ ಹೇಳಿದ್ದಾರೆ" ಕಲ್ಲೇಶಿ ಹೇಳಿದ್ದು ನೆನಪಾಯಿತು.

"ಇನ್ನು ಬಿಡಿಸೋದು, ಇದ್ಯಾ ? ಇದ್ಕಳ್ಳಿ...ನಡೀ. ಸಾಗರ್ ಅಮ್ಮ ಬಂದಿದ್ದಾಳೆ. ಮನೆ ಖಾಲಿ ಬಿದ್ದಿದೆಯಂತೆ. ಆ ಹುಡ್ಗ ಬಸ್ಸು ಹತ್ತಿಬಿಟ್ಟನೇನೋ!" ವ್ಯಸನದಿಂದ ನುಡಿದರು.

ಬುಟ್ಟಿ ಮನೆಯೊಳಕ್ಕೆ ಇಡಲು ಹೋದವಳನ್ನು ತಡೆದರು. "ಬೇಡ, ಅಲ್ಲೇ ದಾರ ಕೊಡ್ತೀನಿ, ಕಟ್ಟಿಕೋಬಹ್ದು. ಹೇಗೂ ಸಾಗರ್ ಕೂಡ್ತಾ ಇದ್ದ ಜಾಗಗಳು ನಿಂಗೆ ಗೊತ್ತಲ್ಲ. ಹೋಗಿ ತೋರ್ಸು. ನಂಗೇನು ಅರ್ಥವಾಗೋಲ್ಲ" ಕೊನೆಯಲ್ಲಿ ಗೊಣಗಿದರು.

ತಿರುಮಲಾಂಬ, ಗೌರಿ ಬಂದಾಗ ಆಕೆ ಹೋಗಿ ಕಾರಿನಲ್ಲಿ ಕೂತಿದ್ದರು. ಕಾರಣ ಕೆದಕುವುದು ಪ್ರಯೋಜನವಿಲ್ಲ. ಸಾಗರ್ ಸಿಗದಿದ್ದರೇ ಎನ್ನುವುದಕ್ಕಿಂತ, ಅವನನ್ನು ಹೇಗೆ ಕರೆದೊಯ್ಯುವುದು ಎನ್ನುವುದನ್ನು ಮಾತ್ರ ಯೋಚಿಸುತ್ತಿದ್ದರು ಆಕೆ.

ಹೆಚ್ಚು ಮುಜುಗರವೆನಿಸಿತು ತಿರುಮಲಾಂಬೆಗೆ. ಆಕೆ ಒಂದತ್ತು ನಿಮಿಷ ಕೂಡಲಾರದಷ್ಟು ಬಡತನವಿದೆಯೇ ತಮ್ಮಲ್ಲಿ? ಅಭಿಮಾನ ಭುಸುಗುಟ್ಟಿತು.

ಗೌರಿಗೆ ಹೇಳಿದರು "ಬುಟ್ಟಿಯನ್ನು ಮನೆಯಲ್ಲಿಟ್ಟು, ಕಾರುನಲ್ಲಿ ಕೂತಿರೋ ಸಾಗರ್‌ನ ಅಮ್ಮನನ್ನ ಕರ್ಕಂಡ್ಹೋಗಿ ಹೇಳಿದಂತೆ, ಅವನು ಕೂಡುತಿದ್ದ ಬಂಡೆಗಳ್ನ ತೋರ್ಸು. ಸಿಕ್ಕರೇ ಅವ್ರ...ಪುಣ್ಯ. ಇಲ್ಲದಿದ್ದರೇ ನಾವೇನು ಮಾಡೋಕ್ಕಾಗುತ್ತೆ? ನಿನ್ನ ಪಾಡಿಗೆ ನೀನ್ಬಾ."

ಬುಟ್ಟಿಯನ್ನಿಟ್ಟು ಬಂದ ಗೌರಿ ಕಾರಿನ ಬಳಿಗೆ ಹೋಗಿ ಬಿಕ್ಕಲು ಮಾತುಗಳಿಂದಲೇ ಆಕೆಯನ್ನು ಕರೆದೊಯ್ದಳು. ಅವನು ಕೂಡುತಿದ್ದ ಬಂಡೆಗಳು, ಕೆಲವೊಮ್ಮೆ ಮಲಗುತ್ತಿದ್ದ ಬೃಹತ್ತಾದ ಎರಡು ಬಂಡೆಗಳ ಮಧ್ಯದ ಸ್ಥಳ, ಮರಗಳ ನೆರಳು ಎಲ್ಲವನ್ನು ತೋರಿಸಿದಳು. ಅವಳಿಗೂ ಕೂಡ ನಿರಾಸೆ.

"ನಿಂಗೆ ಚೆನ್ನಾಗಿ ಗೊತ್ತಾ ಸಾಗರ್ ?" ಆಕೆ ಕೇಳಿದರು.

ಆ ಪ್ರಶ್ನೆಗೆ ಉತ್ತರಿಸುವುದು ಅವಳಿಗೆ ಕಷ್ಟವೆನಿಸಿತು. ಪೆಚ್ಚು ಮುಖ ಮಾಡಿದಳಷ್ಟೆ. ಕಲ್ಲೇಶಿಯನ್ನು ಕೂಡ ಅವಳು ಬೆಳಗಿನಿಂದ ನೋಡಿರಲಿಲ್ಲ. ಒಮ್ಮೆ ಬೆಳಿಗ್ಗೆ ಮನೆ ಬಿಟ್ಟರೇ ನಾಲ್ಕು ಕಾಸುನೊಂದಿಗೆ ಸಂಜೆಯೆ ಹಿಂದಿರುಗುತ್ತಿದ್ದುದು.

"ಎಲ್ಹೋದ ?" ಮತ್ತೊಂದು ಪ್ರಶ್ನೆ.

ಗೊತ್ತಿಲ್ಲವೆಂದು ತಲೆ ಅಡ್ಡಡ್ಡ ಆಡಿಸಿದಳು. ಮೃಣಾಲಿನಿಯ ಕಾಲುಗಳಿಗೆ ಬಗ್ಗಿ ನಮಸ್ಕರಿಸಿ "ನ....ಮ್ಗೇ...ತುಂ....ಬ ತುಂ....ಬ ಸಹಾಯ ಮಾಡಿದ್ದಾರೆ" ಎಂದಳು ಪ್ರಯಾಸದಿಂದಲೇ.

ಅವಳ ಮಾತುಗಳನ್ನು ಉತ್ಪ್ರೇಕ್ಷಿಸಿ ಬಿಟ್ಟರು ಆಕೆ.

ಮೃಣಾಲಿನಿಯ ಯೋಚನೆ ಎತ್ತೆತ್ತಲೋ ಹರಿದಾಡತೊಡಗಿತು. ತಾನು ಇಲ್ಲಿಗೆ ಹೋಗುವ ವಿಷಯ ಮೊದಲೇ ತಿಳಿದುಕೊಂಡು ಸೀತಾರಾಮ್ ಸಾಗರ್‌ನ ಬೇರೆ ಎಲ್ಲಾದರೂ ಸಾಗಿಸಿದ್ದಾರ? ಆ ಅನುಮಾನ ತೀರಾ ಬಲವಾಯಿತು. ಮಗನ ಮೇಲೆ ಕೂಡ ಕೋಪ ಬಂತು. ಕೇಳದೆಯೇ ಅವನ ಪರ್ಸನಲ್ ಖರ್ಚುಗಳಿಗೆಂದು ಧಾರಾಳವಾಗಿ ಹಣ ಕೊಡುತ್ತಿದ್ದರು. ಅವನಿಗೆ ಬೇಕಾದ ತಿಂಡಿ, ಅಡಿಗೆ ಮಾಡಿ ಬಡಿಸುವಂತೆ ತಾಕೀತು ಮಾಡಿದ್ದರು ಅಡಿಗೆಯವನಿಗೆ. ಇಷ್ಟೆಲ್ಲ ಸೌಕರ್ಯ ಒದಗಿಸಿದ ಆಕೆಗೆ ತನ್ನ ಬಗ್ಗೆ ವಿಪರೀತ ಹೆಮ್ಮೆ. ತಾನೊಬ್ಬ ಉತ್ತಮ ಕರ್ತವ್ಯಪರ ತಾಯಿ ಎನ್ನುವ ಅಹಂಕಾರದ ಜೊತೆ ಸಾಗರ್ ಅವಿಧೇಯ ಮಗನೆಂಬ ದೂರು. ಅದಕ್ಕೆ ಬೆಟ್ಟು ಮಾಡುವುದು ಸೀತಾರಾಮ್ ಅತ್ತ.

ಗೌರಿ ಕೈಯಾಡಿಸಿದಳು.

"ಮತ್ತೆ ಅವ್ನ ಬಗ್ಗೆ ಯಾರಿಗಾದ್ರೂ....ಏನಾದ್ರೂ ಗೊತ್ತಾ?" ಇದು ಕೂಡ ಕ್ಲಿಷ್ಟ ಪ್ರಶ್ನೆಯೆ ಅವಳಿಗೆ. ಹೆಚ್ಚು ಒಡನಾಡಿ ಕಲ್ಲೇಶಿಯೇ. ತೀರಾ ರಿಸರ್ವ್ಡ್ ಆಗಿರುವ ಆಕೆಗೆ ಅದನ್ನ ಹೇಳಲು ಹಿಂಜರಿದಿದ್ದು ಸಹಜವೇ.

ದಿಕ್ಕು ತೋಚದಂತಾಯಿತು ಮೃಣಾಲಿನಿಗೆ. ಸಾಗರ್ ಎಲ್ಲಿಗೆ ಹೋಗಿರ ಬಹುದು? ನಿಧಾನವಾಗಿ ಕಾರಿನತ್ತ ಹೆಜ್ಜೆ ಹಾಕಿದವರು ಒಂದು ಹತ್ತರ ನೋಟು ತನ್ನ ಪರ್ಸ್‌ನಿಂದ ತೆಗೆದು ಅವಳಿಗೆ ಕೊಡಲು ಹೋದಾಗ ಬೇಡವೆಂದು ನಿರಾಕರಿಸಿದಳು.

"ಇಟ್ಕೋ ಯಾವತ್ತಾದ್ರೂ ಬೇಕಾಗುತ್ತೆ? ಏನ್ಮಾಡ್ತಾರೆ ನಿನ್ತಂದೆ?" ವಿಚಾರಿಸಿದರು ಮೃಣಾಲಿನಿ "ಇ...ಲ್ಲ..." ಕೈಯಾಡಿಸಿದಾಗ ಹನಿಗಣ್ಣಾದಳು. ತಂದೆ ಎಂದೂ ಅವನ ಸ್ಥಾನವನ್ನ ಅಲಂಕರಿಸಿ ಮಕ್ಕಳನ್ನ ನೋಡಿಕೊಂಡಿದ್ದೇ ಇಲ್ಲ. ಅವನ ಪ್ರಪಂಚವೇ ಬೇರೆ.

ಮತ್ತೆ ಕೊಡಲು ಹೋದಾಗ ಬೇಡವೆಂದಳು ಗೌರಿ. ಒಂದು ನೋಟಿನ ಕಂತೆಯನ್ನ ಕೊಟ್ಟಿದ್ದ, ಹಿಂದಿರುಗಿಸಲು ಪ್ರಯತ್ನಿಸಿ ಬೈಯಿಸಿಕೊಂಡಿದ್ದೆ ಲಾಭ ಅಂಥ ಸಾಗರ್‌ನ ತಾಯಿಯೆಂದರೆ ಅವಳಿಗೆ ಅಪಾರವಾದ ಗೌರವ.

"ಸಾಗರ್, ಇಲ್ಲಿಗೆ ಬಂದು ಎಷ್ಟು ದಿನವಾಯ್ತು?" ಅವಳಿಂದ ಮಾಹಿತಿ ಸಂಗ್ರಹಿಸಲು ಷುರು ಮಾಡಿದರು. ನಿಖರವಾಗಿ ಹೇಳಲು ಗೌರಿಯಿಂದ ಸಾಧ್ಯವಿಲ್ಲ. 'ಗೊತ್ತಿಲ್ಲ' ಎಂದು ತಲೆಯಾಡಿಸಿದಳಷ್ಟೆ.

ಹಿಂದಿರುಗಿದ ಮೇಲೆ ಗೌರಿ ಹೋಗಿ ತಿರುಮಲಾಂಬಗೆ ಸಪ್ಪಗೆ ಸುದ್ದಿ ಮುಟ್ಟಿಸಿದಳು.

"ಆಕೇನಾ....ಕರೀ" ಗೌರಿಗೆ ಒಪ್ಪಿಸಿದರು ಆ ಕೆಲಸ.

ಸಂಕೋಚದಿಂದ ಇಳಿದರು ಮತ್ತೆ ಕಾರಿನಿಂದ. ಈಗ ಸಾಗರ್ ಎಲ್ಲಿಗೆ ಹೋಗಿರಬಹುದು? ಬಹುಶಃ ಬೆಂಗಳೂರಿಗೆ ಹಿಂದಿರುಗಿದ್ದಾನಾ? ನೇರವಾಗಿ ಎಲ್ಲಿಗೆ ಹೋಗಬಹುದು? ಸೀತಾರಾಮ್ ಮನೆಗೆ ಹೋಗ ಬಹುದು. ಅವಮಾನದಿಂದ ಕುದಿದರು ಮೃಣಾಲಿನಿ.

ಫೋನ್‌ನಲ್ಲಿ ತಮ್ಮ ನಿವಾಸಕ್ಕೆ ಸಂಪರ್ಕಿಸಿದರು. ಒಬ್ಬರಲ್ಲ, ಅಡಿಗೆಯವನಿಂದ ಮಾಲೀಯವರೆಗೂ ವಿಚಾರಿಸಿದರು. 'ಬಂದಿಲ್ಲ, ನೋಡಿಲ್ಲ' ಇಷ್ಟೇ ತಿಳಿದಿದ್ದು.

ಆಫೀಸ್‌ನಲ್ಲಿದ್ದ ಸೀತಾರಾಮ್‌ನ ಸಂಪರ್ಕಿಸಿದರು.

"ಎಲ್ಲಿ..... ಸಾಗರ್ ?" ಗಡುಸಿತ್ತು ಮೃಣಾಲಿನಿ ಸ್ವರದಲ್ಲಿ.

"ಐ ಡೋಂಟ್ ನೋ, ಈ ಆಟಗಳೆಲ್ಲ ನನ್ಹತ್ರ ಬೇಡ. ಇನ್ನೆರಡು ದಿನದಲ್ಲಿ ನನ್ಮಗ ಬರದಿದ್ದರೇ ಪೋಲೀಸ್‌ಗೆ ಕಂಪ್ಲೇಂಟ್ ಕೊಡ್ತೀನಿ" ಉರಿದು ಬಿದ್ದರು ಅವರು.

ಮೃಣಾಲಿನಿ ಅವುಡುಗಳು ಬಿಗಿದುಕೊಂಡವು. ಹಲ್ಲುಗಳನ್ನ ಕಚ್ಚಿಡಿದರು. ಮಗನನ್ನು ಬಚ್ಚಿಡುವುದರ ಮೂಲಕ ತನ್ನ ಮೇಲೆ ರಿವೇಂಜ್ ತೆಗೆದುಕೊಳ್ಳು ತ್ತಿದ್ದಾನೆ. 'ನೋಡ್ತೀನಿ' ಎಸೆದರು ಸವಾಲ್ ಮನದಲ್ಲಿಯೇ.

ತಮ್ಮೆಲ್ಲ 'ಅಹಂ' ನ ತೆಗೆದು ಪರ್ಸ್‌ನಲ್ಲಿ ಹಾಕ್ಕೊಂಡು ಗೌರಿಯ ಜೊತೆಯಲ್ಲಿ ಹೋದರು ಬಿಳಿಗಿರಿಯವರ ಮನೆಗೆ. ಮೊದಲಿನ ಆತ್ಮೀಯತೆ ಆಕೆಯ ಕಣ್ಣುಗಳಲ್ಲಿ ಕಾಣದಿದ್ದರೂ ನಗು ಮುಖದಿಂದಲೇ ಸ್ವಾಗತಿಸಿದರು.

"ಬಂದು....ಕೂತ್ಕೊಳ್ಳಿ ! ಈಗಿನ ಕಾಲ್ದ ಹುಡುಗರ ಬಗ್ಗೆ ಹೇಳೋಕ್ಕಾಗೋಲ್ಲ. ನನ್ಮಗ ಮನೆ ಬಿಟ್ಹೋಗಿ ವರ್ಷಗಳೆ ಕಳ್ದು ಹೋಯ್ತು. ಇಂದಿಗೂ ನಾವು ಅವ್ನಿಗೋಸ್ಕರ ಕಾಯ್ತ ಇದ್ದೀವಿ" ಹೇಳಿಕೊಂಡರು ತಮ್ಮ ಮನದ ಅಳಲನ್ನು.

ಸುಮ್ಮನೆ ಕೂತರು ಮೃಣಾಲಿನಿ. ಈಗೇನು ಮಾಡಬೇಕು ? ಎನ್ನುವ ಪ್ರಶ್ನೆ ಆಕೆಯದು. ಸುಮ್ಮನೆ ಹಿಂದಿರುಗಿ ಬಿಡುವುದೇ? ಆಕೆಯ ಮನಸ್ಸು ಒಪ್ಪಲಿಲ್ಲ.

"ಇಲ್ಲೆಲ್ಲಾದ್ರೂ ಲಾಡ್ಜ್ ಇದ್ಯಾ ? ಇಂದು ಇಲ್ಲೇ ಉಳ್ದು ಅವ್ನಿಗಾಗಿ ಕಾಯ್ತೀನಿ" ಎಂದರು ಮೃಣಾಲಿನಿ.

ಒಂದು ಲೋಟ ಹಾಲು ಬಿಸಿ ಮಾಡಿ ತಂದು ಕೊಟ್ಟ ತಿರುಮಲಾಂಬ ನೆಲದ ಮೇಲೆಯೇ ಗೋಡೆಗೊರಗಿ ಕೂತರು. ಅವರ ಎರಡು ಕೈಗಳಲ್ಲು ಡಜನ್ ಡಜನ್ ಅಚ್ಚ ಕೆಂಪು ಬಳೆಗಳು ಅತ್ಯಂತ ಕಳೆಕಳೆ ಕಂಡಿದ್ದು ಕೈಗಳು. ಮೃಣಾಲಿನಿಯ ನೋಟ ಅಲ್ಲಿಂದ ಸರಿಯಲು ನಿರಾಕರಿಸಿತು.

"ಇಲ್ಲಿ ಅಂಥದ್ದೆಲ್ಲ ಏನಿಲ್ಲ. ಸಣ್ಣ ಊರು, ವಿರಳವಾಗಿ ಅಲ್ಲಲ್ಲಿ ಮನೆಗಳು. ಇಲ್ಲಿ ಬಂದು ಉಳ್ಳುಕೊಳ್ಳೋರು ಕಡ್ಮೆ. ಇನ್ನ ಬಂದ ಜನಕ್ಕೆ ನೆಂಟರಿಷ್ಟರ ಮನೆಗಳು ಇರುತ್ತೆ. ಒಂದೆರಡು ಸಣ್ಣ ಹೊಟಲ್‌ಗಳಿವೆ. ನೀವುಗಳು ಹೋಗೋಕೆ ಕೂಡ ಇಷ್ಟಪಡೋಲ್ಲ. ನಿಮ್ಗೆ ಅನಾನ್ಕೂಲವಲ್ಲದಿದ್ದರೇ ನಮ್ಮಲ್ಲೇ ಉಳ್ದು ಕೊಳ್ಳಿ. ಇಲ್ಲ ಅಪ್ಪಯ್ಯ ಶಾಸ್ತ್ರಿಗಳ ಮನೆ ಖಾಲಿ ಬಿದ್ದಿದೆ. ಅದು ನಿಮ್ಮ ಮಗನ ಸುಪರ್ದಿನಲ್ಲಿದೆ. ಬೇಕೂನಿಸಿದ್ದರೇ, ರಾತ್ರಿ ಅಲ್ಲಿರಬಹ್ದು. ಇಲ್ಲ ಕುಂದಣಕ್ಕೆ ಹೋದರೇ ಪ್ರಯಾಣಿಕರು ಉಳ್ಳುಕೊಳ್ಳೋಂಥ ಹೋಟಲ್‌ಗಳು ಇವೆ" ತಿಳಿಸಿದರು ತಿರುಮಲಾಂಬ.

ಮೂರು ಅವಕಾಶಗಳು ಇತ್ತು. ಇವಿಷ್ಟನ್ನ ಬಿಟ್ಟು ಬೇಕೆನಿಸಿದರೇ ಬೆಂಗಳೂರಿಗೆ ಹೋಗಿ ನಾಳೆ ಬರಬಹುದು. ಇದು ಹೆಚ್ಚು ಉಪಯುಕ್ತ.

"ಕುಂದಣಕ್ಕೆ ಹೋಗ್ತೀನಿ. ಸಾಗರ್ ಬಂದರೇ ತಿಳ್ಸಿ" ಕಾರು ಹತ್ತಿಯೇ ಬಿಟ್ಟರು ಮೃಣಾಲಿನಿ. ಮೂಗಿನ ಮೇಲೆ ಬೆರಳಿಟ್ಟರು ತಿರುಮಲಾಂಬ. ಇಲ್ಲೇ ಉಳಿದು ಮಗನಿಗಾಗಿ ಒಂದಿಷ್ಟು ಅನುಸರಿಸಿಕೊಳ್ಳಬೇಕಿತ್ತು ಎಂದು ಕೊಂಡರಷ್ಟೆ.

ಗೌರಿ ತನ್ನ ಪಾಡಿಗೆ ತಾನು ಕೂತು ಹೂ ಕಟ್ಟುತ್ತಿದ್ದಳು. ಅದನ್ನೆಲ್ಲ ಬೇಗ ಬೇಗ ಕಟ್ಟಿ ಮುಗಿಸಿ ಸಾಗರ್‌ನ ಅಮ್ಮನಿಗೆ ಕೊಡುವ ತರಾತುರಿ.

"ಅವ್ರು ಕುಂದಣಕ್ಕೆ ಹೋದ್ರು. ನಿಧಾನವಾಗಿ ಕಟ್ಟು. ಅವ್ರಿಗೆ ಜಡೆ, ಗಂಟು ಅಂಥದೇನಿಲ್ಲ. ನೀನು ಕೊಡೋ ಹೂವಿನಿಂದ ಏನು ಉಪಯೋಗ? ಆರಾಮಾಗಿ ಕಲ್ಲೇಶಿಗೆ ಕೊಟ್ಟು ಬಸ್ ಸ್ಟಾಪ್‌ನಲ್ಲಿ ಮಾರ್ಸಿಬಿಡು" ಎಂದು ಉಸುರಿದವರು ಅಲ್ಲೇ ಕೂತರು.

"ಯಾಕೆ ?" ಗೌರಿ ಕೇಳಿದಳು.

"ನಿನ್ತಲೆ ಸುಮ್ನೆ ಕಟ್ಟು. ಹೇಗೂ ಕುಂದಣಕ್ಕೆ ಹೋದ್ರು. ಶ್ರೀವಳ್ಳಿಗಾದ್ರೂ ಒಂದಿಷ್ಟು ಹೂ ಕಳ್ಸಿ ಕೊಡಬಹುದಿತ್ತು." ಅಪ್ಪಯ್ಯ ಶಾಸ್ತ್ರಿಗಳ ಮಗಳನ್ನ ನೆನಪಿಸಿಕೊಂಡರು. "ಅವರ್‍ಯಾಕೆ ಅಲ್ಲಿಗೆ ಹೋಗ್ತಾರೆ ? ಸಾಗರ್‌ನ ತಾಯಿ ಕೂಡ ಎಲ್ಲೋ ದೊಡ್ಡ ಕೆಲ್ಸದಲ್ಲಿ ಇರ್ಬೇಕು. ತುಂಬ ಓದಿದಂಗೆ ಕಾಣ್ತಾರೆ."

ಅವರು ಹೇಳಿದನ್ನ ಕಣ್ಣಗಲಿಸಿಕೊಂಡು ಕೇಳಿದ್ದು ಗೌರಿ. ಸಾಗರ್ ತುಂಬ....ತುಂಬ ಓದಿದವರ, ಶ್ರೀಮಂತರ ಮನೆಗೆ ಮಗ. ಆದರೂ ಎಂದೂ ಹಾಗೆ ತೋರ್ಪಡಿಸಿಕೊಳ್ಳಲಿಲ್ಲ. ಸಂಕೋಚದಿಂದ ತಿನ್ನಲು ರೊಟ್ಟಿ ಕೊಟ್ಟಾಗ ಕಲ್ಲೇಶಿಯಂಗೆ ಕೂತು ತಿಂದಿದ್ದ.

ಆ ನೆನಪುಗಳು ಎಷ್ಟು ಬಾಧಿಸಿತೆಂದರೆ ಅಳಲು ಷುರು ಮಾಡಿದಳು.

"ಅಳೋದು ಯಾಕೆ ? ಇನ್ನ ಸಾಗರ್ ಬಗ್ಗೆ ನಿಶ್ಚಿಂತೆ. ಸಧ್ಯ ವಾಪಸ್ಸು ಬಂದರೇ ಸಾಕು. ಆಕೆ ಕರ್ಕೊಂಡ್ಹೋಗ್ತಾರೆ."

ತಿರುಮಲಾಂಬ ಮಾತುಗಳು ಸರಿಯೆನಿಸಿತು ಅವಳಿಗೆ. ಹೊಳೆ ದಂಡೆ, ಬಂಡೆಗಳು ಎಷ್ಟೋ ಜನರನ್ನ ಬಲಿ ತೆಗೆದುಕೊಂಡಿತ್ತು. ಆಡಿಕೆಯ ಮಾತುಗಳೇ ವಿನಃ ಸ್ಪಷ್ಟವಾಗಿ ಕಾರಣ ಗೊತ್ತಿರಲಿಲ್ಲ. ಅವಳಪ್ಪನ ಭ್ರಮೆ ಕಲ್ಲೇಶಿಯಲ್ಲಿ ಮುಂದುವರಿದಿದ್ದು ಮಾತ್ರ ಭಯವೆನಿಸುತ್ತಿತ್ತು.

ಇವಳು ಹೂ ಕಟ್ಟಿ ಮುಗಿಸುವ ವೇಳೆಗೆ ಕಲ್ಲೇಶಿ ಬಂದ.

"ಮನೆಗೆ ಹೋಗ್ಬಂದೆ" ಅವಳ ಬಳಿಯಲ್ಲಿ ಕೂತ.

ಗೌರಿ ತಲೆಯೆತ್ತಿ ನೋಡಿದಳು. ನಿಂತುಕೊಳ್ಳುವಂತೆ ಸನ್ನೆ ಮಾಡಿದಾಗ ಫಕಫಕ ನಕ್ಕ. "ನನ್ನ ಕಾಲು ಸರ್ಯಾಗಿಯೇ ಇದೆ. ನಾನು ಆ ತರಹ ಆ್ಯಕ್ಟಿಂಗ್ ಮಾಡದಿದ್ದರೇ ಸಾಗರಣ್ಣ ಕತ್ತಲಲ್ಲೇ ನಡಕೊಂಡು ಹೋಗಿಬಿಡ್ತಾ ಇದ್ರು. ಅಮಾವಾಸೆಯ ಹಿಂದಿನ ದಿನ, ನಂಗೆ ಭಯವಾಯ್ತು. ಅದ್ಕೇ ಬಿದ್ದು ಬಾಯಿ ಬಡಕೊಂಡೇ, ಎತ್ತಿಕೊಂಡ್ಬಂದ್ರು. ಇಲ್ಲದಿದ್ದರೇ ಕತ್ತಲಲ್ಲೆ ಎಲ್ಲಿ ಕರ್‍ಗಿ ಹೋಗ್ತಾ ಇದ್ದರೋ, ಅವ್ರಿಗಂತು ಹಿಂದಿರುಗುವ ಯೋಚ್ನೆ ಇರ್‍ಲಿಲ್ಲ. ನನ್ನ ಕಾಲು ಸರೋಗವರ್‍ಗೂ ಅಣ್ಣ ಎಲ್ಲಿಗೂ ಹೋಗೋಲ್ಲ" ಖುಷಿಯಿಂದ ಪ್ರಸ್ತುತಪಡಿಸಿದ.

"ಗೊತ್ತಾಗ್ಲಿ, ನಾಲ್ಕು ಏಟು ಬೀಳುತ್ತೆ" ಎಂದರು ಆಕೆ ಜೊತೆಯಲ್ಲೇ "ಈಗ ಸಾಗರ್ ಎಲ್ಲಿ? ಅವನಮ್ಮ ಬಂದಿದ್ದಾರೆ" ಅವರ ಮಾತಿಗೆ ಕೂತಿದ್ದ ಕಲ್ಲೇಶಿ ಎದ್ದು ಹೊರ ಹೋಗಿ ನೋಡಿ ಬಂದ "ಎಲ್ಲಿ ? ಎಲ್ಲಿ ?" ಎರಡು ಸಲ ಕೇಳಿದ.

"ಕಾದು ಕಾದು ಕುಂದಣಕ್ಕೆ ಹೋದ್ರು. ಲಾಡ್ಜ್‌ನಲ್ಲಿ ಉಳ್ಕೊಳ್ಳೋಕೆ ನಾಳೆ ಬೆಳಿಗ್ಗೆ ಬರ್ತಾರೆ. ಈಗ ಸಾಗರ್ ಇದ್ದಾನಾ?" ತಿರುಮಲಾಂಬ ಕೇಳಿಕೆಗೆ ತಲೆ ಕೆರೆದುಕೊಂಡ.

"ಶಾಸ್ತ್ರಿಗಳು ಉಗ್ರಾಣದ ಬೀಗ ಕೊಟ್ಹೋಗಿದ್ರು, ಏನಾದ್ರೂ ಬೇಕಾದ್ರೆ ತಗೊಳ್ಳೀಂತ. ನಂಗೆ ಹಾಸಿಕೊಳ್ಳೋಕೆ ಗೋಣಿ ತಾಟು ಬೇಕೂಂತ ನಾನೇ ಬೀಗ ತೆಗ್ದೇ. ಏನೇನೋ ಪುಸ್ತಕಗಳು ಬಿದ್ದಿತ್ತು. ಅದ್ನೆಲ್ಲ ತಂದು ಸಾಗರಣ್ಣನಿಗೆ ಕೊಟ್ಟೆ. ರಾತ್ರಿಯೆಲ್ಲ ಓದ್ಕೋತಾ ಇದ್ರು. ಬೆಳಿಗ್ಗೆ ಏಳೋ ವೇಳೆಗೆ ಇರ್‍ಲಿಲ್ಲ. ಬ್ಯಾಗು ಇತ್ತು. ಬರ್ತಾರೆ ಅಂದ್ಕೊಂಡ್ ಉಗ್ರಾಣದಲ್ಲಿಟ್ಟು ಬೀಗ ಹಾಕ್ಕೊಂಡ್....ಬಂದೆ" ಬೀಗದ ಕೈ ತೋರಿಸಿದ.

ಗೌರಿ ಅಂತು ಚಪ್ಪಾಳೆ ತಟ್ಟಿ ತನ್ನ ಸಂತೋಷ ವ್ಯಕ್ತಪಡಿಸಿದಳು. ತಿರುಮಲಾಂಬ ಕೂಡ ಹರ್ಷಿತರಾದರು. ಅವನ ನಡವಳಿಕೆಯಿಂದ ಸಾಗರ್ ಸ್ವಭಾವ ಹೀಗೆಂದು ಗುರುತಿಸಲು ಸಾಧ್ಯವಿರಲಿಲ್ಲ.

"ಎಂಥ ಕೆಲ್ಸವಾಯ್ತು ! ಏಯ್ ಕಲ್ಲೇಶಿ...ನೀನು ಕುಂದಣಕ್ಕೆ ಹೋಗಿ, ಆಕೆ ಯಾವ್ದೇ ಲಾಡ್ಜ್‌ನಲ್ಲಿ ಉಳ್ಕೊಂಡಿರ್ತಾರೆ. ವಿಷ್ಯ ಮುಟ್ಸಿ ಕರ್ಕಂಡ್ ಬಾ. ಮಗ ಇದ್ದಾನೇಂತ ಗೊತ್ತಾದ್ರೆ...ತಕ್ಷಣ ಬರ್ತಾರೆ" ಎಂದ ತಿರುಮಲಾಂಬ ಬಲವಂತವಾಗಿಯಾದರೂ ಅಟ್ಟಿದರು.

ಕಲ್ಲೇಶಿಗೆ ಬಸ್ಸು ಸಿಕ್ಕಿದ್ದು ಏಳರದು. ಅವನು ಹೋಗಿ ತಲುಪಿದಾಗ

ಎಂಟ್ಹೂವರೆ. ಕುಂದಣ ಅಪರಿಚಿತವಲ್ಲ. ಗಲ್ಲಿ ಗಲ್ಲಿಯು ಅವನಿಗೆ ಪರಿಚಿತವೆ. ಕೆಲಷ್ಟೇಮ್ಮ ಹಲಸಿನ ತೊಳೆ, ಬೇರೆ ಬೇರೆ ಹಣ್ಣುಗಳನ್ನು ಒಯ್ದು ಮಾರಿಕೊಂಡು ಬರುತ್ತಿದ್ದ. ಈ ಕಡೆ ಓಡಾಡುವ ಯಾವ ಬಸ್ಸಿನ ಕಂಡಕ್ಟರ್ ಅವನಿಗಾಗಿ ಟಿಕೆಟ್ ಹರಿದಿದ್ದೇ ಇಲ್ಲ. ಹೆಚ್ಚು ಕಡಿಮೆ ಅವನ ಕತೆ ಎಲ್ಲರಿಗೂ ಗೊತ್ತಿತ್ತು.

ಬಸ್ಸು ನಿಲ್ದಾಣದ ಬಳಿ ಇದ್ದ ಲಾಡ್ಜ್ ಬಳಿಗೆ ಬಂದ. 'ಸಾಗರ್‌ನ ಅಮ್ಮ' ಅಂತ ಮಾತ್ರ ಗೊತ್ತಿತ್ತೇ ವಿನಃ ಹೆಸರು ಕೂಡ ಗೊತ್ತಿರಲಿಲ್ಲ. ಹೇಗೆಂದು ವಿಚಾರಿಸುವುದು? ತಲೆ ಕೆರೆದುಕೊಂಡು ಒಂದು ಕಡೆ ನಿಂತವನಿಗೆ ನೆನಪಾಗಿದ್ದು ಅಪ್ಪಯ್ಯ ಶಾಸ್ತ್ರಿಗಳು. ಒಂಬತ್ತರವರೆಗೂ ಅವರ ಅಂಗಡಿ ತೆರೆದಿರುತ್ತಿತ್ತು. ಅತ್ತ ಹೆಜ್ಜೆ ಹಾಕಿದ. ನಿಶ್ಶಬ್ಧವಾಗಿ, ದೂರದಲ್ಲಿಯೇ ನಿಂತು ನೋಡಿ ಬೀರಿದ. ಸರೋಜಮ್ಮ ಇದ್ದರು. ಆಕೆಯ ಜೋರು ದನಿ ಇಲ್ಲಿವರೆಗೂ ಬಂದು ಅಪ್ಪಳಿಸುತ್ತಿತ್ತು. ಪೂರ್ತಿ ಹಿಂಜರಿದ. ಬಹುಶಃ ಆಕೆಯ ಪ್ರಶ್ನೆಗಳಿಗೆ ಉತ್ತರಿಸುವ ವೇಳೆಗೆ ಮಧ್ಯ ರಾತ್ರಿ ಆಗಬಹುದು. ಆಮೇಲೆ ಏನು ಮಾಡುವುದು ?

ದಿಕ್ಕು ಬದಲಾಯಿಸಿ ಅವರ ಮನೆಯ ಕಡೆ ಹೆಜ್ಜೆ ಹಾಕಿದ.

ಇವನ ಪುಣ್ಯವೋ, ಮೃಣಾಲಿನಿಯ ಅದೃಷ್ಟವೋ, ಅಪ್ಪಯ್ಯ ಶಾಸ್ತ್ರಿ ಹೊರಗಡೆಯೇ ಅಡ್ಡಾಡುತ್ತಿದ್ದರು. ಆಗಾಗ ಅವರ ಕೈ ಹೊಟ್ಟೆಯ ಮೇಲೆ ಹೋಗುತ್ತಿತ್ತು. ನಡೆಯುವ ರೀತಿ ನೋಡಿದರೇನೇ ಹುಷಾರಿಲ್ಲವೆನಿಸಿತು. ಆದರೂ ದಾಪುಗಾಲು ಹಾಕಿದ.

ಸದ್ದಿಗೆ ಅವನತ್ತ ತಿರುಗಿದ ಶಾಸ್ತ್ರಿಗಳು "ಏನೋ, ಇದು ಇಷ್ಟೊತ್ತಿನಲ್ಲಿ?" ಇವನತ್ತ ಬಂದರು. ಎರಡೇ ವಾಕ್ಯದಲ್ಲಿ ವಿವರಿಸಿದ ಕಲ್ಲೇಶಿ "ಇಲ್ಲೆಲ್ಲೋ ಹೋಟಲುನಲ್ಲಿ ಉಳ್ಕೊಂಡಿದ್ದಾರಂತೆ. ಅವ್ರಿಗೆ ವಿಷ್ಯ ಮುಟ್ಟಿಸ್ಬೇಕು."

ಅವರ ಮಿದುಳು ಕೆಲವು ನಿಮಿಷಗಳಷ್ಟು ಕಾಲ ಸ್ಥಬ್ಧತೆಯನ್ನು ಅನುಭವಿಸಿತು.

"ಈಗೇನ್ಮಾಡ್ಬೇಕೂಂತ ಇದ್ದೀಯಾ?" ವಿಚಾರಿಸಿದರು. ಅವರಿಗೆ ಎರಡು ದಿನದಿಂದ ಹೊಟ್ಟೆ ನೋವು. ಶಾಸ್ತ್ರಿಗಳ ಕೈ ಹೊಟ್ಟೆಯ ಮೇಲೆಯೇ ಇತ್ತು.

"ನೀವೇ ಏನಾದ್ರೂ ಮಾಡ್ಬೇಕು. ಇಷ್ಟೊತ್ತುನಲ್ಲಿ ಹುಡುಕಾಟ ಕಷ್ಟ" ತೋಡಿಕೊಂಡ. ಶಾಸ್ತ್ರಿಗಳು ಅತ್ತಿತ್ತ ನೋಡಿದರು. ಅಂಗಡಿಯಲ್ಲಿ ಆಳು ಇದ್ದ. ಅವನ ಬುದ್ಧಿಯ ಚುರುಕು ಅಷ್ಟಕಷ್ಟೆ. ಹಿಂದಕ್ಕೆ ತಿರುಗಿ ಮನೆಯ ಕಡೆ ನೋಡಿದರು. ಉಪ್ಪಿನ ಕಾಯಿಗೆ ಬೆರೆಸೋ ಕಾರದ ಪುಡಿಯನ್ನು ಕುಟ್ಟುತ್ತಿದ್ದಳು ಶ್ರೀವಳ್ಳಿ ಬೆಳಿಗ್ಗೆಯಿಂದ ಒಂದೇ ಸಮನೆ.

"ನಿಮ್ಮ ಆಳುನ ನನ್ಜೊತೆ ಕಳ್ಸಿ" ಎಂದ ಕಲ್ಲೇಶಿ.

ಅವರ ಪರಿಸ್ಥಿತಿ ಅವನಿಗೆ ಗೊತ್ತು. ಅಲ್ಲಿಗಿಂತ ಇಲ್ಲೇನು ವಿಭಿನ್ನವಾಗಿ ರೋಲ್ಲ ಅಂತ ಗೊತ್ತು. ಶಾಸ್ತ್ರಿ ಹಿಂದೆ ನೋಟ ಹರಿಸಿದ ನಡುಮನೆಯವರೆಗೂ ಸೀದಾ. ಉಪ್ಪಿನ ಕಾಯಿಗೆ ಬೆರಸುವ ಮಸಾಲೆಯ ಘಾಟು ಅವನವರೆಗೂ ಬರುತ್ತಿತ್ತು.

ಇರುವಂತೆ ಸನ್ನೆ ಮಾಡಿದ ಶಾಸ್ತ್ರಿಗಳು ಒಳಗಿದ್ದ ಸೈಕಲ್‌ನ ತಳ್ಳಿಕೊಂಡು ಬಂದು ಹತ್ತಿದವರು "ಬೇಗ ಹತ್ಕೋ, ಇನ್ನೇನು ಅಂಗ್ಡಿ ಬಾಗಿಲು ಹಾಕ್ಕೊಂಡ್ ಬರ್‍ತಾ ಇರ್ತಾಳೆ" ಅವಸರಿಸಿದರು.

ಇದ್ದ ಎರಡು ಲಾಡ್ಜ್‌ನಲ್ಲಿ ಇಲ್ಲ. ಮೂರನೆಯ ಹೋಟಲ್ ರೆಸ್ಟೊರೆಂಟ್ ಕಮ್ - ಲಾಡ್ಜ್ ಊರಿನ ಆಚೆ ಅಂದರೇ, ಐದು ಕಿಲೋ ಮೀಟರ್ ದೂರದಲ್ಲಿ ಈಚೆಗೆ ಪ್ರಾರಂಭವಾಗಿತ್ತು. ಸ್ವಲ್ಪ ಬೆಲೆ ಹೆಚ್ಚು ಎನ್ನುವ ಮಾತಿತ್ತು. ದೂರ ದೂರದಿಂದ ಕಾರುಗಳಲ್ಲಿ ಬರುವ ಶ್ರೀಮಂತ ಪ್ರವಾಸಿಗರು ಮಾತ್ರ ತಂಗುತ್ತಿದ್ದರು.

"ಕಲ್ಲೇಶಿ ನೀನು ತುಳಿ. ನಾನು ಕೂತ್ಕೋತೀನಿ. ಹೊಟ್ಟೆಯಲ್ಲಿ ವಿಪರೀತ ಬಾಧೆ" ಅಪ್ಪಯ್ಯ ಶಾಸ್ತ್ರಿಗಳು ಇಳಿದು ಸುಧಾರಿಸಿಕೊಂಡರು ಮೇಲುಸಿರು ಬಿಡುತ್ತ.

ಕಲ್ಲೇಶಿ ಅದರಲ್ಲೆಲ್ಲ ನಿಸ್ಸೀಮ.

ಬ್ರಹ್ಮಾಂಡ ಕತ್ತಲು ಊರಿನ ಆಚೆ. ಆ ಕಡೆ ಈ ಕಡೆ ಇನ್ನು ಉಳಿದು ಕೊಂಡ ಮರಗಿಡಗಳು. ಜೀರುಂಡೆಗಳ ಸದ್ದು. ಕಲ್ಲೇಶಿ ಸೈಕಲ್‌ನ ಬಿರುಗಾಳಿ ಯೋಪಾದಿಯಲ್ಲಿ ತುಳಿದವನು ಒಂದು ಕಡೆ ಕಲ್ಲುಗೆ ಗುದ್ದಿ ಬಿದ್ದ. ಅಪ್ಪಯ್ಯ ಶಾಸ್ತ್ರಿಗಳು ತಗ್ಗು ಇದ್ದುದ್ದರಿಂದ ಅಷ್ಟು ದೂರ ಉರುಳಿ ಬಿದ್ದರು.

ಎದ್ದ ಕಲ್ಲೇಶಿ ಅವರ ಬಳಿಗೆ ಓಡಿದ ಗಾಬರಿಯಿಂದ. ತ್ರಾಣವೇ ಇಲ್ಲ ದಂತೆ ಬಿದ್ದುಕೊಂಡಿದ್ದ ಅಪ್ಪಯ್ಯ ಶಾಸ್ತ್ರಿಗಳು ಮುಲುಗಿದರು. "ನಿನ್ನನೆ ಹಾಳಾಗ! ಅನ್ಯಾಯವಾಗಿ ಎತ್ತಿ ಹಾಕಿ ಕೈ ಕಾಲು ಡ್ಯಾಮೇಜ್ ಮಾಡ್ಬಿಟ್ಟೆಯಲ್ಲೋ."

"ಕಲ್ಲು ಇರೋದು ಕಾಣಲೇ ಇಲ್ಲ" ಅವರನ್ನು ಎಬ್ಬಿಸಿ ಕೂಡಿಸಿದ. ಅಲ್ಲಿ ಹುಲ್ಲು ಬೆಳೆದುಕೊಂಡಿದ್ದರಿಂದ ಅಂಥ ಗಾಯವೇನು ಆಗಲಿಲ್ಲ. ಮೂಟೆಯನ್ನು ಎಸೆಯುವಂತೆ ಬಿದ್ದಿದ್ದರಿಂದ ಮೈ ಕೈ ಹಣ್ಣಾಗಿತ್ತು. ಸರಿಯಾಗಿ ನೋವು ಕಾಣಿಸಿಕೊಳ್ಳಲು ಒಂದಿಷ್ಟು ಸಮಯ ಬೇಕಿತ್ತು. "ಕಲ್ಲೇನೋ, ಮನುಷ್ಯರೇ ಕಾಣದಂಥ ಕತ್ತಲು. ಅಂತು ನಂಗೊಂದು ಗತಿ ಕಾಣಿಸ್ತಾ ಇದ್ದೆ. ಸಾಯೋಕೆ ಭಯವಿಲ್ಲ. ಈಗ್ಲೇ ಶ್ರೀವಳ್ಳಿ ಸ್ಥಿತಿ...." ಮಗಳನ್ನ ನೆನಸಿಕೊಂಡು ಕಣ್ಣೀರಿಟ್ಟರು. ತಮ್ಮೆಲ್ಲ ನೋವುಗಳಿಗಿಂತ ಅವಳ ಭವಿಷ್ಯದ ಚಿಂತೆ ಅವರನ್ನು ಸದಾ ಕಾಡುತ್ತಿತ್ತು.

ಅಂತು ಅವರನ್ನ ಎಬ್ಬಿಸಿ ನಿಲ್ಲಿಸಿದ. ಸೈಕಲ್ ಏನಾಗಿದೆಯೆಂದು ನೋಡಲು ಸಾಧ್ಯವಿರಲಿಲ್ಲ. ಅಂತು ಮುಂದಕ್ಕೆ ಚಕ್ರಗಳು ಉರುಳಿದ್ದು ಏಳು ಜನ್ಮದ ಪುಣ್ಯ.

ದೊಡ್ಡ ಕಾಂಪೌಂಡ್‌ನಲ್ಲಿದ್ದ ಹೋಟಲ್ ಮೇಲೆ ಪೂರ್ತಿ ಲಾಡ್ಜಿಂಗ್‌ಗೆ ಉಪಯೋಗಿಸಿ, ಕೆಳಗಡೆ ರೆಸ್ಟೋರೆಂಟ್ ಮಾಡಿಕೊಂಡಿದ್ದರು. ಕಾರುಗಳ ಪಾರ್ಕಿಂಗ್‌ಗೆ ಸ್ಥಳವಿತ್ತು. ಸುತ್ತ ಮುತ್ತಲು ಇಂಥ ಹೋಟಲ್ ಇಲ್ಲದಿದ್ದರಿಂದ ಹೊರಗಿನವರೇ ತುಂಬಿಕೊಂಡಿರುತ್ತಿದ್ದರು.

ಅಪ್ಪಯ್ಯ ಶಾಸ್ತ್ರಿ ಆ ಪ್ರದೇಶಕ್ಕೆ ಹೆಚ್ಚು ಪರಿಚಿತರಾದುದ್ದರಿಂದ ಮೃಣಾಲಿನಿಯನ್ನು ಮೀಟ್ ಆಗಲು ಕಷ್ಟವಾಗಲಿಲ್ಲ. ಆಕೆ ಮೊದಲು ಅವರಿಬ್ಬರ ಇತಿಹಾಸ ಜಾಲಾಡಿದರು.

"ಗೌರಿ....ತಮ್ಮ" ಎಂದ ಕಲ್ಲೇಶಿ.

"ಆ ಮೂಗ ಹುಡ್ಗಿ" ಅಂದರು ಆಕೆ ತಟ್ಟನೆ. ಈ ತರಹ ಪ್ರತಿಕ್ರಿಯಿಸುವುದು ಅಭ್ಯಾಸವಾಗಿ ಹೋಗಿತ್ತು. ಕಲ್ಲೇಶಿ ಮೈನ ರಕ್ತವೆಲ್ಲ ಮುಖಕ್ಕೆ ನುಗ್ಗಿತು. "ಅವ್ಳೇನು ಮೂಗಿ ಅಲ್ಲ. ಸ್ವಲ್ಪ ಬಿಕ್ಕಲು ಅಷ್ಟೆ. ಅವ್ಳಿಗೆ ಕಿವಿ ಕೇಳಿಸೋಷ್ಟು ಚೆನ್ನಾಗಿ ಯಾರ್ಗೂ ಕೇಳಿಸೋಲ್ಲ!" ಸವಾಲ್ ಹಾಕಿದಂತೆ ನುಡಿದ.

"ಸ್ಟಾಪ್ ಇಟ್, ಸಾಗರ್ ಎಲ್ಲಿಗೆ ಹೋಗಿದ್ದ?" ಹುಬ್ಬು ಗಂಟಿಕ್ಕಿದರು ಮೃಣಾಲಿನಿ. ಸರಿಯಾಗಿ ಹೇಳಲಾರ. 'ಏಯ್ ಆ ಪಟ್ಟಣದ ಧಣಿ ಕುಂದಣಕ್ಕೆ ಬಸ್ಸು ಹತ್ತಿದ' ಇದನ್ನು ವಿರೂಪಾಕ್ಷಿ ಹೇಳಿದ್ದ. ಅವನೊಬ್ಬ ಬಿಡಾಡಿ, ಅರೆ ತಿಕ್ಕಲು ಇದನ್ನ ಕೆಲವರು ಆಡಿಕೊಳ್ಳುತ್ತಿದ್ದರು.

"ರಾತ್ರಿ ಅವ್ರ ಜೊತೆಗೆ ಮಲಗಿದ್ದೆ. ನಾನು ಬೇಗ ಎದ್ದೆ. ಆಮೇಲೆ ಎಲ್ಹೋದ್ರೋ ಗೊತ್ತಿಲ್ಲ" ಎಂದ ಬಿಡಿ ಬಿಡಿಯಾಗಿ. ಆಕೆ ಸಹನೆ ಸತ್ತು ಹೋಯಿತು. "ವಾಟ್ ಈಸ್ ದಿಸ್, ನಾನ್ಸೆನ್ಸ್. ಕತೆ ಕಟ್ಟಿ ದುಡ್ಡು ಮಾಡ್ಬೇಕೂಂತ ಇದ್ದೀರಾ, ಇಬ್ರೂ" ಕನಲಿದರು.

ಎರಡು ದಿನದಿಂದ ಹೊಟ್ಟೆ ನೋವಲ್ಲಿ ನರಳಿದ ಶಾಸ್ತ್ರಿಗಳು ಉಟ್ಟ ಬಟ್ಟೆಯಲ್ಲಿಯೇ ಬಂದವರು ಬಿದ್ದು ಹೈರಾಣವಾಗಿ ಹೋಗಿದ್ದರಿಂದ, ಮೃಣಾಲಿನಿಗೆ ಒಬ್ಬ ಬೀದಿಯ ಮನುಷ್ಯನಾಗಿ ಕಂಡಿರಬೇಕು.

"ಮೈಂಡ್ ಯುವರ್ ಟಂಗ್, ನಿಮ್ಮ ಕಾರು, ದೊಡ್ಡಸ್ತಿಕೆ ನೋಡಿ ಇಲ್ಲಿವರ್ಗೂ ಬಂದಿಲ್ಲ. ಸಾಗರ್ ಮುಖ ನೋಡ್ಕೊಂಡ್ ಬಂದಿದ್ದು. ನಡ್ಯೋ....ಕಲ್ಲೇಶಿ" ಅವನನ್ನು ಎಬ್ಬಿಸಿಕೊಂಡು ಹೊರ ಬಂದೇ ಬಿಟ್ಟರು.

ಹೋದ ಇವರನ್ನು ನಿಲ್ಲಿಸಿ ಇನ್‌ವೆಸ್ಟಿಗೇಷನ್ ಮಾಡಿದ್ದಳು.

ಅಪ್ಪಯ್ಯ ಶಾಸ್ತ್ರಿಗಳ ಮನೆಯ ಮುಂದೆ ಸೈಕಲ್ ನಿಲ್ಲಿಸಿದಾಗ ಇಳಿದ ಶಾಸ್ತ್ರಿಗಳು "ಈಗ ಹೋಗೋದ್ಬೇಡ. ಸೈಕಲ್‌ನ ಒಳಗಡೆ ತಳ್ಳಿ...ಬಾ" ಕುಂಟುತ್ತ ಕಾಲೆಳೆದುಕೊಂಡು ಒಳಗೆ ಹೋದರು.

ಕಲ್ಲೇಶಿಗೆ ಕೂಡ ಹೊಟ್ಟೆ ಹಸಿದಿತ್ತು. ಈಗ ಶ್ರೀವಳ್ಳಿ ಪುರದ ಕಡೆಗೆ ಬಸ್ಸುಗಳು ಇರಲಿಲ್ಲ. ಇಂಥ ಕತ್ತಲಲ್ಲಿ ನಡೆದು ಹೋಗುವುದು ಅವನಿಂದ ಸಾಧ್ಯವಿಲ್ಲ.

ಒಳಗೆ ಹೋಗಿ ಶ್ರೀವಳ್ಳಿಗೆ ವಿಷಯ ಮುಟ್ಟಿಸಿರಬೇಕು. ಮಸಿಗಟ್ಟಿದ ಲಂಗ, ದಾವಣಿ, ಅಸ್ತವ್ಯಸ್ತವಾದ ಕೂದಲು. ಒಂದೇ ಸಮ ಒನಕೆಯಲ್ಲಿ ಮೆಣಸಿನಕಾಯಿ ಕುಟ್ಟಿ ಸೊರಗಿ ದಣಿದ ದೇಹ.

ಆದರೂ ಇವನ ಮುಖ ನೋಡಿದ ಕೂಡಲೇ ಅರಳಿತು.

ಕಲ್ಲೇಶಿಗೆ ಸಂಕೋಚವಿಲ್ಲ. ಹೊಟ್ಟೆಯ ಕಡೆಗೆ ತೋರಿಸಿದ ಹಸಿದಿದ್ದೀನಿ ಎಂದು. ಇರುವಂತೆ ಹೇಳಿ ಅತ್ತಿತ್ತ ನೋಡಿ ಅಡಿಗೆಯ ಮನೆಗೆ ಹೋದಳು. ಅಂದಿನ ಲೆಕ್ಕಪತ್ರಗಳನ್ನು ನೋಡುತ್ತಿದ್ದ ಸರೋಜಮ್ಮನ ಊಟ ಮುಗಿದ್ದರಿಂದ ಹೊರ ಬಂದಳು.

ಉಳಿದ ಅನ್ನ, ಬದನೆಕಾಯಿ ಹುಳಿಯನ್ನ ಕಲೆಸಿ ಒಂದು ಊಟದ ಎಲೆಯಲ್ಲಿ ತುಂಬಿಕೊಂಡು ಬಂದು ಅವನ ಮುಂದಿಟ್ಟು ಇರುವಂತೆ ಸನ್ನೆ ಮಾಡಿ, ಒಂದು ಜೊಂಬು ನೀರು ತಂದು ಅವನ ಮುಂದಿಟ್ಟಳು.

ಎಲೆ ತುಂಬಿದ ಕಲೆಸಿದ ಅನ್ನವನ್ನ ನೋಡಿಯೇ ಅವನಿಗೆ ಊಟ ಮಾಡಿದಷ್ಟು ತೃಪ್ತಿ ಆಯಿತು. ಎದುರಿಗೆ ಶ್ರೀವಳ್ಳಿಯ ಪ್ರೀತಿ ತುಂಬಿದ ಕಂಗಳು. ಗೌರಿಯ ಬಗ್ಗೆ ಇರುವಷ್ಟೇ ಅಭಿಮಾನ ಶ್ರೀವಳ್ಳಿಯ ವಿಷಯದಲ್ಲಿ.

"ನಿಮ್ದು ಊಟ ಆಯ್ತ?" ವಿಚಾರಿಸಿದ ಕೈ ತೊಳೆದು ಬಂದು.

ನೆನಪಿಸಿಕೊಂಡಳು. ಅವಳದು ಇನ್ನ ಊಟ ಆಗಿರಲಿಲ್ಲ. ಆ ಬಗ್ಗೆ ಎಂದಾದರೂ ಸರಿ ಇದ್ದಾಗ ವಿಚಾರಿಸುತ್ತಿದ್ದರು ಸರೋಜಮ್ಮ 'ಊಟ ಆಯ್ತ, ಇಲ್ಲದಿದ್ರೆ ಬೇಗ ಮಾಡ್ಬಿಡು' ಅಂದು. ಅವಳ ಅದೃಷ್ಟದಲ್ಲಿ ಶುಭವಾಗಲಿ ಎಂದು ಬರೆದಿರಬೇಕಿತ್ತು.

'ಆಯ್ತು, ನೀನು ಮಾಡು' ಎಂದು ಸನ್ನೆ ಮಾಡಿ ಅವನ ಎದುರಿನಲ್ಲಿಯೇ ಕೂತಳು. ಅನ್ನ ಪೂರ್ತಿ ತಿಂದು ಮುಗಿಸುವ ವೇಳೆಗೆ ಅರ್ಧಂಬರ್ಧವೇನು ಪೂರ್ತಿ ವಿಷಯವನ್ನ ಬಿಡಿಸಿಟ್ಟ.

"ನಂಗೆ ಸಾಗರಣ್ಣನ ಅಮ್ಮ ಇಷ್ಟ ಆಗ್ಲಿಲ್ಲ. ತುಂಬಾನೆ ಜೋರು. ಶಾಸ್ತ್ರಿಗಳು ಕೂಡ ಜೋರಾಗಿ ರೋಪ್ ಹಾಕಿದ್ರು" ಆಮೇಲೆ ಶಾಸ್ತ್ರಿಗಳು ಬಿದ್ದಿದ್ದನ್ನ ತಿಳಿಸಿದಾಗ ಗಾಬರಿಯಾಗಿ ಅವರ ರೂಮಿಗೆ ಓಡಿದಳು.

ಬಟ್ಟೆ ಬದಲಾಯಿಸಿ ಶಾಸ್ತ್ರಿಗಳು ಮಲಗಿ ನರಳುತ್ತಿದ್ದರು. ಅವಳ ಕಂಬನಿ ತುಂಬಿ ಕಣ್ಣುಗಳಲ್ಲಿಯೇ ನೂರು ಪ್ರಶ್ನೆಗಳು. ಅವರ ಮಾತಿನಂತೆ ಮಾತ್ರ, ಬಿಸಿ ನೀರು ಕೊಟ್ಟು ಅಲ್ಲೇ ಕೂತಳು ತಂದೆಯ ಪಕ್ಕ.

ಕೆನ್ನೆ ಸವರಿದರು ಶಾಸ್ತ್ರಿಗಳು "ನಿಂಗೆ ಬಿಡುಗಡೆ ಯಾವಾಗ?" ಅವಳು ಮಾತೇ ಆಡಲಿಲ್ಲ. "ಕಲ್ಲೇಶಿ ಮಲಗ್ಲೀ. ಹಾಸಿಕೊಳ್ಳೋಕೆ ಏನಾದ್ರೂ ಕೊಡು" ಕಳಿಸಿ ಸೂರನ್ನು ದಿಟ್ಟಿಸಿದರು.

ಶ್ರೀವಳ್ಳಿ ಪುರದಲ್ಲಿದ್ದ ಎಲೆ ತೋಟ, ಮನೆಯೊಂದನ್ನ ಬಿಟ್ಟು ಮಿಕ್ಕಿದ್ದೆಲ್ಲ ಮಾರಿಸಿ ಗಂಟು ಮಾಡಿಕೊಂಡ ಸರೋಜಮ್ಮ ಬೆಂಗಳೂರಿನಲ್ಲಿ ಅಣ್ಣನ ಮನೆಯಲ್ಲಿ ಓದುತ್ತಿದ್ದ ತನ್ನ ಮಕ್ಕಳ ಹೆಸರುಗಳಲ್ಲಿ ಬ್ಯಾಂಕ್‌ನಲ್ಲಿ ಫಿಕ್ಸೆಡ್ ಡಿಪಾಜಿಟ್‌ನಲ್ಲಿಟ್ಟು ಜೋಪಾನ ಮಾಡಿದರು. ಸ್ವಂತ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳ ಬಗೆಗಿನ ಕಾಳಜಿಯ ನೂರರಲ್ಲಿ ಕನಿಷ್ಟ ಹತ್ತು ಪಾಲಾದರೂ ಶ್ರೀವಳ್ಳಿ ಮೇಲೆ ಇರಕೂಡದೇ? ಅವಳು ಮಾಡಿದ ಪಾಪವೇನು? ಮೊದಲು ಹೆಂಡತಿಯನ್ನು ನೆನಸಿಕೊಂಡು ಗಳಗಳ ಅತ್ತರು. ಆ ಅಳುವಿನಲ್ಲಿ ಅನಂತ ವಿಸ್ಮಯ ದುಗುಢವೆಲ್ಲ ಇದೆಯೆನಿಸಿತು.

ನಡುಮನೆಯಲ್ಲಿದ್ದ ಫೋನ್ ಸದ್ದು ಮಾಡಿದಾಗ, ಶ್ರೀವಳ್ಳಿ ಹೋಗುವ ವೇಳೆಗೆ ಸರೋಜಮ್ಮ ಬಂದಿದ್ದರು. "ನೀನು ಫೋನ್ ತಗೊಂಡ್ ಏನ್ಮಾಡ್ತೀಯಾ? ನಿನ್ನ ಪುಣ್ಯ ಕಿವಿಗಳಿಗೆ ಏನಾಗಲಿಲ್ಲ" ವ್ಯಂಗ್ಯವಾಗಿ ಅಂದರು. ಇಂಥ ಮಾತುಗಳು ಮನ ಸ್ಥೈರ್ಯ ಕುಗ್ಗಿಸಿ ಮೂಲೆಗುಂಪಾಗು ವಂತೆ ಮಾಡುತ್ತದೆಯೆನ್ನುವ ಮನೋ ವೈಜ್ಞಾನಿಕ ಸತ್ಯ ಆಕೆಗೆ ಗೊತ್ತಿರ ಬಹುದೇನೋ !

ಅಲ್ಲೇ ನಡುಮನೆಯ ಮೂಲೆಯಲ್ಲಿ ಮಲಗಿದ್ದ ಕಲ್ಲೇಶಿಯ ಕಿವಿಗೆ ಆ ಮಾತುಗಳು ಬಿದ್ದವು. ಅವನ ಮುಷ್ಟಿ ಬಿಗಿಯಾಯಿತು. ಹೋಗಿ ಗುದ್ದಿ ಬಿಡಬೇಕೆನಿಸಿತು.

ತೆಪ್ಪಗೆ ರೂಮಿಗೆ ಹೋದಳು ಶ್ರೀವಳ್ಳಿ. ಎರಡು ಸಾವಿರ ನಿಂಬೆಕಾಯಿ ಉಪ್ಪಿನಕಾಯಿಗೆ ಹಾಕುವಷ್ಟು ಮೆಣಸಿನ ಕಾಯಿ ಸಾಸುವೆ, ಮೆಂತ್ಯ ಕುಟ್ಟಿಸಿದ್ದಳು. ಒಂದೇ ಘಾಟು. ಸುರಿದು ಮರದ ಕೈಯಲ್ಲಿ ಕಲೆಸುವ ವೇಳೆಗೆ ಮೈ ಕೈ ನೋವು ಷುರುವಾಗಿತ್ತು. ಯಾರಿಗೆ ಹೇಳುವುದು? ತಂದೆ ನಿಸ್ಸಹಾಯಕರು. ಆದರೂ ಅವಳ ಮುಖದ ನಗೆ ಮಾಸದು.

ಇಡೀ ರಾತ್ರಿ ಕಲ್ಲೇಶಿಗೆ ನಿದ್ದೆ ಬರಲಿಲ್ಲ. ಇಂಥದ್ದು ಅಪರೂಪವೇ. ಚಾಪೆ ಮೇಲೆ ಉರುಳಿಕೊಂಡ ಕೂಡಲೇ ಅವನಿಗೆ ನಿದ್ದೆ ಹತ್ತುತ್ತಿತ್ತು. ಇಂದು ಮಾತ್ರ ಕಣ್ಣು ಮುಚ್ಚಲಾಗಲಿಲ್ಲ. ಸೂರ್ಯನ ಉದಯಕ್ಕಾಗಿ ಇಡೀ ರಾತ್ರಿ ಕಾದ.

"ಯಾರೋ ಮೃಣಾಲಿನಿಯಂತೆ. ನಾನು ಮಲಗಿದ್ದಾರೇಂತ ಫೋನಿಟ್ಟೆ. ಯಾರು ...ಅವ್ರು ?" ಸರೋಜಮ್ಮ ಗಂಡನನ್ನು ಕೇಳುತ್ತಿರುವುದು ಅವನಿಗೆ ಕೇಳಿಸಿತು.

ಕಲ್ಲೇಶಿಗೆ ನಿಜವಾಗಿಯೂ ಖುಷಿಯಾಯಿತು. ಏಟಿಗೆ ಪ್ರತಿ ಏಟು. ಸರೋಜಮ್ಮನಂಥವರಿಂದ ಮಾತ್ರ ಸಾಧ್ಯವೆಂದುಕೊಂಡ. ಮತ್ತಷ್ಟು ಅವಚಿಕೊಂಡು ಮಲಗಿದ.

ಏಳೂವರೆಯ ಸುಮಾರಿಗೆ ಮೃಣಾಲಿನಿಯ ಕಾರು ಅಪ್ಪಯ್ಯ ಶಾಸ್ತ್ರಿಗಳ ಮನೆಯ ಬಾಗಿಲಲ್ಲಿ ಬಂದು ನಿಂತಿತು. ರಂಗೋಲಿ ಬಿಡುತ್ತಿದ್ದ ಶ್ರೀವಳ್ಳಿ ತನ್ನ ದಪ್ಪವಾದ ಉದ್ದ ಜಡೆಯನ್ನ ಹಿಂದಕ್ಕೆಸೆದುಕೊಂಡು ನೋಡಿದಳು.

"ಅಪ್ಪಯ್ಯ ಶಾಸ್ತ್ರಿಗಳು ಇದ್ದಾರ?" ಇಳಿದು ಬಂದ ಡ್ರೈವರ್ ಕೇಳಿದ. "ಇದ್ದಾರೆ, ನೀವು ಯಾರು?" ಕೇಳುವ ವೇಳೆಗೆ "ಶ್ರೀವಳ್ಳಿ ಬೇಗ್ಬಾರೇ" ಕೂಗು ಕೇಳಿದ ಕೂಡಲೇ ಅದೃಶ್ಯಳಾದಳು. ಅವಳ ಪ್ರಶ್ನೆ ಅವನಿಗೆ ಅರ್ಥವಾಗಿರಲಿಕ್ಕಿಲ್ಲ. ಜಿಂಕೆಯಂತೆ ಹಾರಿ ಹೋದ ಹುಡುಗಿಯ ಬಗ್ಗೆ ಯೋಚಿಸಿದ ಡ್ರೈವರ್ ಹಿಂದಕ್ಕೆ ಬಂದು ವಿಷಯ ಮುಟ್ಟಿಸಿದ. "ಹೊರ್ಗಡೆ... ಯಾರಿಲ್ಲ. ರಂಗೋಲಿ ಹಾಕ್ತ ಇದ್ದ ಹುಡ್ಗೀನ ಕೇಳ್ದೆ, ಹಾರಿ ಹೋದ್ಳು ಒಳಗಡೆಗೆ."

"ಯಾಕೆ ನಿಂಗೆ ಬಾಯಿ ಇಲ್ವಾ ?" ಕಣ್ಣು ಬಿಟ್ಟರು.

ಆದರೂ ಅವನಿಗೆ ಯಜಮಾನಿ ಹೋಗಿ ವಿಚಾರಿಸುವುದರಿಂದ ಪ್ರಯೋಜನವಾಗಿ ಕಂಡಿತು. ಹಾಗೆಂದು ಆಕೆಯ ಆಜ್ಞೆ ದಿಕ್ಕರಿಸಲು ಸಾಧ್ಯವೇ?

ಬಾಗಿಲ ಬಳಿ ಹೋಗಿ ನಿಂತು ಸದ್ದು ಮಾಡಿದ. ಬಂದಿದ್ದು ಆಳು ಮಗ "ಯಾವ ಕಡೆಯೋರು ? ಕಾಲಿಂಗ್ ಬೆಲ್ ಕಾಣಲಿಲ್ವಾ?" ದಬಾಯಿಸುವವನಂತೆ ಕಂಡ. ತಲೆಯ ಮೇಲೆ ಮೊಟಕಿಗೊಂಡ ಡ್ರೈವರ್ ಹೆಸರಿಟ್ಟು ಕೇಳುವುದು ಅಪಾಯವೆಂದುಕೊಂಡು "ಯಜಮಾನ್ರು ಇಲ್ವಾ?" ಉತ್ತರ ಸಿಗುವ ಮುನ್ನವೇ ತಲೆಗೆ ಕಟ್ಟಿದ ಒದ್ದೆಯ ಟವಲನ್ನ ಕೊಡವುತ್ತ ಬಂದ ಸರೋಜಮ್ಮ "ಪಾಂಡುರಂಗಯ್ಯನ ಕಡೆಯೋನಾ? ಮುಲಾಜಿಲ್ಲದೆ ಉಪ್ಪಿನ ಕಾಯಿ ಇಲ್ಲಾಂತ ಹೇಳ್ಬೋಗು. ಕೊಟ್ಟು ಕಾಸಿಗೆ ನಿಮ್ಮ ಮನೆ ಬಾಗಿಲಿಗೆ ತಿರುಗಬೇಕೇ? ಸಾವುಕಾರಿಕೆ ಇದ್ದರೇ, ಅವ್ರಿಗೆ ಇದ್ಕೊಳ್ಳಿ. ಉಪ್ಪಿನ ಕಾಯಿ ಇಲ್ಲಾಂತ ಹೇಳ್ಬೋಗು" ಮುಖದ

ಮೇಲೊಡೆದಂತೆ ಬಂದವು ಮಾತುಗಳು, ಡ್ರೈವರ್‌ಗೆ. ತಲೆ ಚಚ್ಚಿಕೊಳ್ಳಬೇಕೆನಿಸಿತು.

"ಅಮ್ಮ...ಅಮ್ಮ...." ಕೂಗಿಕೊಂಡ ಜೋರಾಗಿ.

ಒದ್ದೆ ಕೂದಲನ್ನ ಕೊಡವುತ್ತ ಬಂದ ಸರೋಜಮ್ಮ ಸೊಂಟದ ಮೇಲೆ ಕೈಯಿಟ್ಟುಕೊಂಡು ನಿಂತರು. ತಮ್ಮ ಮೇಡಮ್ ಮಹಾನ್ ಸ್ಟ್ರಿಕ್ಟ್ ಅಂದುಕೊಂಡಿದ್ದ. ಆದರೆ ಈ ಹೆಣ್ಣಿನ ಮುಂದೆ ಆಕೆ ಕೆಲಸಕ್ಕೆ ಬರರೆಂದು ಕೊಂಡ.

"ಯಜಮಾನ್ರು...ಅಪ್ಪಯ್ಯ ಶಾಸ್ತ್ರಿಗಳ್ನ ನೋಡ್ಬೇಕಿತ್ತು" ಎಂದ ಕತ್ತು ತೂರಿಸುತ್ತ. ವ್ಯವಹಾರಗಳೆಲ್ಲ ಈಯಮ್ಮನ ಕೈಯಲ್ಲೇ ಇದ್ದುದ್ದರಿಂದ ಇನ್ನ ಅಪ್ಪಯ್ಯ ಶಾಸ್ತ್ರಿಗಳಲ್ಲಿ ಕೆಲಸವೇನು? "ಅದೇನು, ನನ್ನ ಹತ್ತಿರಾನೇ ಹೇಳು" ಕಂಚು ಕಂಠದಿಂದ ನುಡಿದಾಗ ಅವನ ಪರ್ಸನಾಲಿಟಿ ಗಾಳಿಯಲ್ಲಿ ಹಾರಿ ಹೋಗುವ ಹಳೆಯ ಬಟ್ಟೆಯಂತಾಯಿತು.

ಸುಮ್ಮನೆ ಹಿಂದಿರುಗಿ ಮೃಣಾಲಿನಿಗೆ ವಿಷಯ ಮುಟ್ಟಿಸಿದ. "ಯಜಮಾನರೊಂದಿಗೆ ಭೇಟಿ ಮಾಡೋದು ಕಷ್ಟ. ಪೂರ್ತಿ ವಿಷ್ಯ ಗೊತ್ತಾಗ್ದೇ ಆಕೆ..." ನಿಲ್ಲಿಸಿದ. ಸರೋಜಮ್ಮ ಬಾಗಿಲಿನಿಂದ ಹೊರಗೆ ಬಂದು ನಿಂತಿದ್ದರು.

ಮೃಣಾಲಿನಿ ಇಳಿಯ ಬೇಕಿತ್ತು. ಹೆಚ್ಚು ಓದದ ಸಾಮಾನ್ಯ ಹೆಣ್ಣಾಗಿ ಕಾಣುತ್ತಿದ್ದ ಸರೋಜಮ್ಮ ತನಗೇ ಸೊಪ್ಪು ಹಾಕಳೆಂದು ಅರ್ಥವಾಗಿತ್ತು.

"ಅಪ್ಪಯ್ಯ ಶಾಸ್ತ್ರಿಗಳು....ಇದ್ದಾರ?" ಈಕೆಯೇ ಸರೋಜಮ್ಮನ ಬಳಿಗೆ ಹೋಗಬೇಕಾಯಿತು "ಇನ್ನ ಎದ್ದಿಲ್ಲ. ಅವ್ರಿಗೆ ಹುಷಾರಿಲ್ಲ" ಕತ್ತೆಗೆ ಜಾಡಿಸಿದಂತೆ ನುಡಿದಳು.

ತಿರುಮಲಾಂಬ ಗೌರವ, ಆತ್ಮೀಯತೆ ತೋರಿದಾಗ 'ಅಹಂ' ಪ್ರದರ್ಶಿಸಿದ ಈ ಹೆಣ್ಣು ಇಲ್ಲಿ ಸಪ್ಪಗಾಗಿದ್ದು ಅತಿಶಯವೇನಲ್ಲ.

"ಭೇಟಿ ಮಾಡೋ ಅಗತ್ಯವಿತ್ತು" ಎಂದರು ಮೃಣಾಲಿನಿ ದನಿ ತಗ್ಗಿಸಿ. "ಆಗೋಲ್ಲ, ಸಂಜೆ ಬನ್ನಿ. ಎದ್ದಿದ್ದರೇ ಮಾತಾಡ್ಬಹುದು" ಅಲ್ಲಿ ನಿಲ್ಲಲೇ ಇಲ್ಲ ಸರೋಜಮ್ಮ.

ಬಾಗಿಲಲ್ಲಿ ನಿಂತು ತಮಾಷೆ ನೋಡುತ್ತಿದ್ದ ಕಲ್ಲೇಶಿ ಪಕ್ಕಕ್ಕೆ ಸರಿದಿದ್ದು ಮೃಣಾಲಿನಿ ನೋಡಿದರು.

"ಹುಡ್ಗನಂಥ ಸರ್ವೆಂಟ್‌ನ ಕರ್ದು ಬಾ" ಡ್ರೈವರ್‌ನ ಕಳಿಸಿದರು ಮತ್ತೆ.

ಅವನು ಬಂದು ಬಾಗಿಲಲ್ಲಿ ನಿಂತಾಗ, ರೂಮಿನಿಂದ ಅಡಿಗೆ ಮನೆಯತ್ತ ಹೊರಟ ಸರೋಜಮ್ಮ ಆ ಕಡೆ ಬಂದವರೇ 'ಏನು' ಎನ್ನುವಂತೆ ನೋಡಿ ಬಾಯಿ ತೆರೆಯುವ ಮುನ್ನವೇ "ಒಂದ್ಸಲ ಹೇಳಿದ್ದು ಅರ್ಥವಾಗೋಲ್ವಾ! ಅವ್ರು ಮಲಗಿದ್ದಾರೆ. ಮಾತಾಡಲೇ ಬೇಕೂಂತಿದ್ದರೆ ಸಂಜೆ ಫೋನ್‌ನಲ್ಲಿ ಮಾತಾಡಿ. ಕಾರುನಲ್ಲಿ ಬಂದಿದ್ದೀರಾಂತ ಇಲ್ಲಿ ಯಾರು ಮಣೆ ಹಾಕ್ಕೋರಿಲ್ಲ. ಸುಮ್ನೆ ಹೋಗು" ಕತ್ತೆಯನ್ನು ಅಟ್ಟುವಂತೆ ಮಾತಿನಲ್ಲಿಯೇ ಅಟ್ಟಿದ್ದಳು.

ಕಲ್ಲೇಶಿ ಬಾಯಿ ಮುಚ್ಚಿಕೊಂಡು ನಗುತ್ತಿದ್ದ. 'ಇನ್ನಷ್ಟು ಶಾಸ್ತಿಯಾಗ್ಲಿ' ಅನ್ನೋದು ಅವನ ಅಭಿಮತ. ಆದರೆ ಕಾರು ಹೊರಟುಬಿಟ್ಟರೇ ಹಿತ್ತಲಲ್ಲಿರುವ ಶ್ರೀವಳ್ಳಿಗೆ ವಿಷಯ ವಿವರಿಸಿ ಕರೆ ತಂದ. ಅವಳ ಮುಖ ಮತ್ತಷ್ಟು ನಗುವಿನ ಸಿಂಚನ.

ಚಿಗುರೆಯಂತೆ ಓಡಿ ಕಾರಿನ ಬಳಿ ತಲುಪಿದ ಶ್ರೀವಳ್ಳಿ 'ಒಳಗೆ ಬರುವಂತೆ ಸನ್ನೆ ಮಾಡಿದಳು' ಮೃಣಾಲಿನಿ ಹಣೆಗೆ ಕೈಯೊತ್ತಿ ಒಂದು ತರಹ ನೋಟ ಬೀರಿ "ಮಾತು ಬರೋಲ್ವಾ ?" ಎಂದು ಕೇಳಿದಾಗ, ಅವಳ ಮುಖ ಸಪ್ಪಗಾಯಿತು. ಏನು ಹೇಳಬೇಕೋ ಗೊತ್ತಾಗಲಿಲ್ಲ.

"ಅಕ್ಕ....ಬನ್ನಿ" ಕಲ್ಲೇಶಿ ಹೀರೋನಂತೆ ಬಂದು ನಿಂತ.

ಮೃಣಾಲಿನಿ ಕಾರಿನ ವಿಂಡ್‌ನ ಪೂರ್ತಿಯಾಗಿ ಇಳಿಸಿ "ಬಾ....ಇಲ್ಲಿ" ಕರೆದರು. ಅಸಡ್ಡೆಯಿಂದ ಬಂದು ನಿಂತ. ಐವತ್ತರ ಒಂದು ನೋಟನ್ನ ಅವನ ಮುಂದಿಡಿದು "ಸಾಗರ್ ಎಲ್ಲಿದ್ದಾನೆ ? ಅವ್ನ ಹತ್ರ ಕರ್ಕಂಡ್ ಹೋಗು. ಇನ್ನ ನೂರು ರೂಪಾಯಿ ಕೊಡ್ತೀನಿ" ಆಸೆ ತೋರಿಸಿದರು.

ಆಕೆಯ ಮುಖ, ನೋಟನ್ನ ಬದಲಿಸಿ ಬದಲಿಸಿ ನೋಡಿದ ಈ ದುರಹಂಕಾರ, ಹಣದ ಮದ ಸಾಮಾನ್ಯ ಜನರಿಂದ ಕೆಲವು ಶ್ರೀಮಂತರನ್ನ ದೂರವೆ ಇರಿಸುತ್ತೆ. ಇಲ್ಲು ಕೂಡ ಹಾಗೆಯೇ ಆಗಿದ್ದು.

"ನಂಗೇನು ನಿಮ್ಮ ಹಣ ಬೇಡ. ಅಮ್ಮೋರು ಕಳ್ಸಿದ್ರು. ಸಾಗರಣ್ಣ ಬ್ಯಾಗ್ ಅಲ್ಲೇ ಇದೆ. ರಾತ್ರಿ ಬಂದಿದ್ದರೇ...ಬಂದಿರ್ಬಹ್ದು. ಹೋಗಿ ನೋಡ್ಕೊಳ್ಳಿ" ಹಿಂದಕ್ಕೆ ಹೋಗಿಬಿಟ್ಟ.

ಅಲ್ಲೇ ನಿಂತಿದ್ದ ಶ್ರೀವಳ್ಳಿ 'ಇಳಿದು ಬಂದು ಕುಂಕುಮ ಹಚ್ಚಿಕೊಂಡು ಹೋಗಲು ತಿಳಿಸಿದಳು.' ಅವಮಾನ, ವ್ಯಂಗ್ಯ ಮಾತುಗಳನ್ನು ನುಂಗುವುದು ಅವಳಿಗೆ ಅಭ್ಯಾಸವಾಗಿತ್ತು.

ಮೃಣಾಲಿನಿ ಮುಖ ತಿರುಗಿಸಿಕೊಂಡು ಹೊರಡಲು ಡ್ರೈವರ್‌ಗೆ ಸೂಚನೆ ಕೊಟ್ಟರು. "ಮೇಡಮ್, ಆ ಹುಡ್ಗನ್ನ ಜೊತೆಯಲ್ಲಿ ಕರ್ಕಂಡ್ ಇದ್ದಿದ್ರೆ ಚೆನ್ನಿತ್ತು" ಅದು ಸರಿಯೆನಿಸಿತು.

"ಹರಕಲು ಷರಟು ಹಾಕ್ಕೊಂಡಿದ್ದಾನೆ. ಎಷ್ಟೊಂದು ದುರಹಂಕಾರ ನೋಡು. ದುಡ್ಡಿನ ಬೆಲೆ ಗೊತ್ತಿಲ್ಲದ...ಇವ್ರ ಜೀವನ ಹೀಗೆಯೇ ಕಳ್ದು ಹೋಗುತ್ತೆ" ಅಸಹ್ಯಿಸಿಕೊಂಡರು.

ಕಾರು ಶ್ರೀವಳ್ಳಿಪುರದ ಹಾದಿ ಹಿಡಿಯಿತು. ಅಲ್ಲೇ ನಿಂತಿದ್ದಳು ಶ್ರೀವಳ್ಳಿ. ಸಾಗರ್‌ನ ತಾಯಿ ಒಳಗೆ ಬಂದು ಹೋಗಿದ್ದರೆ ಸಂತೋಷವಾಗುತ್ತಿತ್ತು. ತನಗೇ ಮಾತು ಬರದೆಂಬ ತಿರಸ್ಕಾರವೇ ?

"ಅಕ್ಕ, ಕರೀತಾರೆ" ಕೂಗಿದ ಕಲ್ಲೇಶಿ.

"ಹೋಗ್ಲಿ ಬಿಡಕ್ಕ, ಇವ್ರ ಹತ್ರ ಹಣ ಇದ್ದ ಮಾತ್ರಕ್ಕೆ ನಾವೆಲ್ಲ ಭಿಕ್ಷುಕ್ರಾ? ಸಾಗರಣ್ಣ ಇವ್ರ ಮಗ ಅಂದರೇ ನಬೋಕ್ಕಾಗೋಲ್ಲ. ನಾನು ಊರಿಗೆ ಹೋಗ್ತೀನಿ" ಎಂದ ಬೇಸರದಿಂದ.

ಅವನ ಬೆನ್ನ ಮುಟ್ಟಿ ಬರುವಂತೆ ಸನ್ನೆ ಮಾಡಿ ಕರೆದೊಯ್ದು ಅತ್ತಿತ್ತ ನೋಡಿ ಅಡಿಗೆ ಮನೆಗೆ ಹೋದವಳು ಒಂದಾರು ಬಿಸಿ ಇಡ್ಲಿಗಳ ಜೊತೆ, ಚಟ್ನಿಯನ್ನು ಹಾಕಿಕೊಂಡು ಬಂದ ಎಲೆಯನ್ನು ಅವನಿಗೆ ಕೊಟ್ಟು ತಿಂದು ಹೋಗುವಂತೆ ಸೂಚಿಸಿದಳು.

ಕಣ್ಣೊರೆಸಿಕೊಳ್ಳುತ್ತ ಹಿತ್ತಲಿಗೆ ಹೋದವನು ಬಾವಿಯ ಪಕ್ಕ ಕೂತು ತಿಂದು ಎಲೆಯನ್ನು ಬಿಸಾಕಿ ಬರುವ ವೇಳೆಗೆ ಸರೋಜಮ್ಮ ಜೋರು ದನಿಯಲ್ಲಿ ದೇವರ ಮನೆಯಲ್ಲಿ ಕೂತು ಅಷ್ಟೋತ್ತರ ಮಾಡುತ್ತಿದ್ದಳು.

ನಡುಮನೆಯಲ್ಲಿದ್ದ ನಾಲ್ಕು ಪ್ಲಾಸ್ಟಿಕ್ ಬಕೆಟ್‌ಗಳ ತುಂಬ ಉಪ್ಪಿನಕಾಯಿ ರೆಡಿಯಾಗಿತ್ತು. ಇಂದು ಪೂರ್ತಿ ತೂಕ ಮಾಡಿ ಪ್ಯಾಕೆಟ್‌ಗಳಿಗೆ ತುಂಬುವ ಕೆಲಸ ಶ್ರೀವಳ್ಳಿಯದು. ಅಂಗಡಿಯ ಹುಡುಗನ ನೆರವಿನ ಜೊತೆ ಅಪ್ಪಯ್ಯಶಾಸ್ತ್ರಿಗಳು ಕೈ ಹಾಕಬೇಕಾಗುತ್ತಿತ್ತು. ಆದರೆ ಸರೋಜಮ್ಮ ಮಾತ್ರ ಇತ್ತ ಬರಲಾರರು.

ಎಂದಿಗೆ ಶ್ರೀವಳ್ಳಿಯಮ್ಮನಿಗೆ ಇದರಿಂದ ಬಿಡುಗಡೆ ? ಕಲ್ಲೇಶಿಗೆ ಅಳು ಬಂತಷ್ಟೆ. ಬಾಗಿಲ ಕಡೆ ಹೊರಟವನನ್ನ ಸರೋಜಮ್ಮನ ದನಿ ಹಿಡಿದು ನಿಲ್ಲಿಸಿತು.

"ಏನೋ ಬಂದಿದ್ದು?" ಬಹುಶಃ ಅಷ್ಟೋತ್ತರ ಮುಗಿದಿತ್ತೇನೋ ಇಲ್ಲಿ ಪ್ರತ್ಯಕ್ಷವಾದರು "ಹೀಗೇ ಬಂದಿದ್ದೆ" ಎಂದ ಅಷ್ಟೆ. ರಾತ್ರಿಯ ಹಗರಣ ವನ್ನ ಮಾತ್ರ ಹೇಳಲಾರ.

"ಸಾಗರ್‌ನ ಅಮ್ಮನ, ಬಂದಿದ್ದು ? ಇಳ್ದು ಬರೋಕೆ ಮೈ ಭಾರಾಂತ ಡ್ರೈವರ್‌ನ ಕಳಿಸ್ತಾಳೆ. ಇವ್ಳ ಮಗ ನಮ್ಮ ಮನೆಯಲ್ಲಿ ಬಾಡಿಗೆಗೆ ಇರೋದು.

ಅಷ್ಟನ್ನ ತಿಳ್ದುಕೊಂಡಿದ್ರೆ...ಸಾಕಿತ್ತು" ಸರೋಜಮ್ಮ ತನ್ನದೇ ಧಾಟಿಯಲ್ಲಿ ಬಡಬಡಿಸಿದಾಗ, ಈಗ ಮಾತ್ರ ಶಭಾಷ್‌ಗಿರಿ ಕೊಟ್ಟ.

"ಅಕಸ್ಮಾತ್ ಬಂದರೇ...ಜಾಸ್ತಿ ಬಿಡಿ, ಅಮ್ಮ. ನೀವು ಮನಸ್ಸು ಮಾಡಿದ್ರೆ ಕಾರಿನದೇನು, ಮಹಾ" ಉಬ್ಬಿಸಿದ. ಸ್ವಲ್ಪ ಫಾಕಡಾ ಆಸಾಮಿಯೇ. ಅಂದಂದಿನ ಅನ್ನಕ್ಕೆ ಪರದಾಡುವ ಅವನು ನಾನಾ ಸಮಸ್ಯೆಗಳನ್ನೆದುರಿಸ ಬೇಕಿತ್ತು.

ಬಸ್ಸು ಸ್ಟಾಂಡ್ ಕಡೆ ಹೆಜ್ಜೆ ಹಾಕಿದ. ಜೇಬಿನಲ್ಲಿ ಕೈಯಿಟ್ಟ. ಇಪ್ಪತ್ತೈದು ಪೈಸಾಗಳ ಎರಡು ನಾಣ್ಯ ಮಾತ್ರ ಇತ್ತು. ರೂಟ್ ಬಸ್ಸುಗಳ ಡ್ರೈವರ್, ಕಂಡಕ್ಟರ್‌ಗಳ ಪರಿಚಯವಿತ್ತು. ಅವರು ಯಾರು ಇವನಲ್ಲಿ ಹಣ ಕೇಳುತ್ತಿರಲಿಲ್ಲ. ಸರ್ಕಾರಿ ಬಸ್ಸಾದರೇ ಹಣ ಬೇಕಿತ್ತು.

ಬಂದ ಕಾರು ಅವನ ಪಕ್ಕದಲ್ಲಿ ನಿಂತಿತು. ಅದೇ ಕೆಂಪು ಬಣ್ಣದ ಮಾರುತಿ. ಮೃಣಾಲಿನಿಯವರ ಕಾರು. ಮುಖ ತಿರುಗಿಸಿಕೊಂಡು ತನ್ನ ಪಾಡಿಗೆ ತಾನು ನಡೆದಾಗ, ಡ್ರೈವರ್ ಇಳಿದು ಬಂದು ಅವನ ಕೈ ಹಿಡಿದುಕೊಂಡ.

"ಮೇಡಮ್...ಕರೀತಾರೆ."

ತಲೆ ತಿರುಗಿಸಿ ಡ್ರೈವರ್‌ನತ್ತ ನೋಡಿದವನು "ನಂಗೆ ಬೇರೆ ಕೆಲ್ಸವಿದೆ. ಶ್ರೀವಳ್ಳಿ ಪುರಕ್ಕೆ ದಾರಿ ಗೊತ್ತಿಲ್ಲ" ಜೋರು ಮಾಡಿದ.

"ಏಯ್ ಹುಡ್ಗಾಟ ಆಡ್ಬೇಡ. ಪೊಲೀಸ್‌ಗೆ ಕಂಪ್ಲೇಂಟ್ ಕೊಟ್ಟು ಕಂಬಿಗಳ ಒಳಕ್ಕೆ ತಳ್ಳಿ ಬಿಡ್ತೀನಿ. ಏನಂದ್ಕೊಂಡಿದ್ದೀಯಾ, ನಮ್ಮ ಮೇಡಮ್‌ನ" ರಟ್ಟೆ ಹಿಡಿದು ಎಳೆದೊಯ್ದು ಹತ್ತಿಸಿದ ಕಾರಿನ ಮುಂಭಾಗದ ಸೀಟಿನ ಮೇಲೆ "ಕೇಳಿದಷ್ಟು ಹೇಳು. ಪೊಗರು ಮಾಡ್ಬೇಡ" ಎಚ್ಚರಿಕೆ ನೀಡಿದ. ಪೋಲೀಸ್ ಅಂದ ಕೂಡಲೇ ಕಲ್ಲೇಶಿ ಬಿರುಗಾಳಿಗೆ ಹೆದರಿದ ಗುಬ್ಬಚ್ಚಿಯಾದ. ಅವನ ಮೈ ಗಡ ಗಡ ಎಂದು ನಡುಗುತ್ತಿತ್ತು. ಬೆನ್ನಿನಲ್ಲಿ ಚಳಿ. ರಾತ್ರಿ ಬಿದ್ದಾಗ ಪೆಟ್ಟಾದ ಮಂಡೀ ಈಗ ನೋವುತ್ತಿತ್ತು. ಅಂತು ನಾಲ್ಕರ ಚಳಿ ಷುರುವಾಗಿತ್ತು.

ಹಿಂದಕ್ಕೆ ಮೇಡಮ್ ಕಡೆ ನೋಟವರಿಸಲೇ ಇಲ್ಲ.

"ಸಾಗರ್...ಎಲ್ಲಿದ್ದಾನೆ ?" ಮೃಣಾಲಿನಿ ಕೇಳಿದಳು.

"ನಂಗೆ ನಿಜವಾಗ್ಲೂ ಗೊತ್ತಿಲ್ಲ" ಅಂದವನು ತಿಳಿದಿದ್ದು ಉಸುರಿದ.

ಇದೆಲ್ಲ ಸೀತಾರಾಮ್ ಪ್ಲಾನಿಂಗ್ ಇರಬಹುದು ? ಇವರುಗಳೆಲ್ಲ ಅದರಲ್ಲಿ ಶಾಮೀಲು ಇರಬಹುದು. ಈಗ ಕೂಡ ಅತ್ತಲೇ ಹರಿದಿದ್ದು ಆಕೆಯ ಯೋಚನಾಲಹರಿ. ಮಾಜಿ ಗಂಡನನ್ನ ಬಿಟ್ಟು ಚಿಂತಿಸಲು ಮೃಣಾಲಿನಿಗೆ ಗೊತ್ತೇ

ಇರಲಿಲ್ಲ. ಇದು ಅವಿವೇಕದ ಪರಮಾರಧಿಯೆಂದು ಯಾರು ಬುದ್ಧಿ ಹೇಳರು. ಅಂಥ ಪ್ರಯತ್ನ ಯಾರಾದರೂ ಮಾಡಿದರೂ ವಿರೋಧಿಸಿಯಾರಷ್ಟೆ. ಖಂಡಿತ ಒಪ್ಪಲಾರರು.

"ಈಚೆಗೆ ಸಾಗರ್‌ನ ನೋಡೋಕೆ ಯಾರಾದ್ರೂ ಬಂದಿದ್ರಾ ?" ಇದೊಂದು ಮುಖ್ಯವಾದ ಪ್ರಶ್ನೆ. 'ಹ್ಞೂ' ಗುಟ್ಟಿದ ಕಲ್ಲೇಶಿ. ಡ್ರೈವರ್ ಬಲವಾಗಿಯೇ ತಲೆಯ ಮೇಲೊಂದು ಹಾಕಿದ. "ಬಾಯ್ಬಿಟ್ಟು ಬಗುಳು, ಇಲ್ಲಾಂದರೆ ನಿನ್ನ ಸಮಾಧಿ ಮಾಡ್ಬಿಡ್ತೀನಿ" ಮತ್ತಷ್ಟು ಹೆದರಿಸಿದ.

ಕಲ್ಲೇಶಿ ಜೋರಾಗಿಯೇ ಅಳತೊಡಗಿದ. 'ನಂಗೇನು ಗೊತ್ತಿಲ್ಲ ಇಳಿಸಿ ಬಿಡು' ಎನ್ನುವ ಗೋಳಾಟ ಷುರು ಮಾಡಿದಾಗ ಮೃಣಾಲಿನಿ ಕಿವಿಗಳನ್ನು ಮುಚ್ಚಿಕೊಂಡಳು.

"ಏಯ್, ತೆಪ್ಪಗಿರೋ...ನಿನ್ನೇನು ಮಾಡೋಲ್ಲ. ಕಾರು ನಿಲ್ಸು" ಎಂದ ಮೃಣಾಲಿನಿ "ಈಗ್ಹೇಳು, ಈಚೆಗೆ ಯಾರಾದ್ರೂ ಬಂದಿದ್ರಾ, ಸಾಗರ್‌ನ ನೋಡೋಕೆ."

ಕಾರು ಒಂದು ಪಕ್ಕಕ್ಕೆ ಸರಿದು ನಿಂತಿತು.

"ಸ್ವಲ್ಪ ಅಳು ನಿಲ್ಸಿ, ಮೇಡಮ್ ಪ್ರಶ್ನೆಗೆ ಉತ್ತರ ಕೊಡು" ಡ್ರೈವರ್ ಹೇಳಿದ. ಇಂಥ ಸಂದರ್ಭಗಳನ್ನ ಉಪಯೋಗಿಸಿಕೊಂಡು ಮೇಡಮ್ ಅಭಿಮಾನ ಗಿಟ್ಟಿಸಿಕೊಳ್ಳಬೇಕು ಎನ್ನುವುದು ಅವನಿಗೆ ಗೊತ್ತಿತ್ತು.

ಕಲ್ಲೇಶಿ ಕಣ್ಣುಜ್ಜುತ್ತಲೇ "ಅವ್ರ ತಂದೆ ಬಂದಿದ್ರು. ಅಷ್ಟೆ ನಂಗೆ ಗೊತ್ತಿರೋದು. ಬೇಗ ಹೋಗದಿದ್ರೆ ಸಾಗರಣ್ಣ ಹೊರಟು ಹೋಗ್ಬಹುದ್ದು" ಎಂದ ಮೆಲ್ಲಗೆ. ಸಧ್ಯಕ್ಕೆ ಇವರಿಂದ ತಪ್ಪಿಸಿಕೊಂಡರೇ ಅವನಿಗೆ ಸಾಕಿತ್ತು.

ಕಾರು ಸ್ಟಾರ್ಟಾಗಿ ಇಮ್ಮಡಿ ವೇಗದಿಂದ ಚಲಿಸತೊಡಗಿತು.

ಶ್ರೀವಳ್ಳಿಪುರದ ಹೊಳೆ, ಬಂಡೆಗಳು ಕಂಡ ಕೂಡಲೇ ಅವನಿಗೆ ಜೀವ ಬಂದಂತಾಯಿತು. ಕಾರು ನೇರವಾಗಿ ಹೋಗಿ ಅಪ್ಪಯ್ಯ ಶಾಸ್ತ್ರಿಗಳ ಮನೆ ಮುಂದೆ ನಿಂತಿತು. ತಕ್ಷಣ ಇಳಿದ ಕಲ್ಲೇಶಿ ಅಷ್ಟು ದೂರ ಓಡಿ ಹೋಗಿ ಒಂದು ಕಲ್ಲು ಆಯ್ದು ರಪ್ಪನೆ ಕಾರಿನತ್ತ ಎಸೆದು ಓಡಿಬಿಟ್ಟ. ಡ್ರೈವರ್ ಇಳಿದು ಅವನನ್ನ ಹಿಡಿಯಲು ಹೋದರೂ ಸಿಕ್ಕಲಿಲ್ಲ. ಎರಡು ನಿಮಿಷದಲ್ಲಿ ಅದೃಶ್ಯವಾಗಿಬಿಟ್ಟ.

ಕಲ್ಲು ಬಡಿದ ಜಾಗವನ್ನ ಮುಟ್ಟಿ ನೋಡಿದ ಡ್ರೈವರ್.

"ಈ ಕಲ್ಲು ಕಾರಿಗೆ ಬಡಿಯೋ ಬದ್ಲು ನನ್ನ ತಲೆಗೆ ಬಡಿದಿದ್ರೆ....ಬುರುಡೆ ಎರಡು ಸೀಳಾಗಿ ಬಿಡ್ತಾ ಇತ್ತು" ಹಣೆ ಮುಟ್ಟಿ ನೋಡಿಕೊಂಡ.

ಮೃಣಾಲಿನಿ ಎದೆಗೆ ಬಡಿದಷ್ಟು ನೋವಾಗಿತ್ತು. ಆಕೆಗೆ ತಾನು ಗಳಿಸಿದ ಪ್ರತಿಯೊಂದು ವಸ್ತುವಿನ ಮೇಲೂ ಅಪಾರ ಅಭಿಮಾನ. ಕಾರು ಸದಾ ಫಳಫಳ ಹೊಳೆಯಬೇಕು.

"ಹೋಗಿ ನೋಡ್ಕೋಗು. ಇವ್ನಿಂದ ನಾನಾ ಅವಸ್ಥೆಗಳು. ಇಲ್ಲದಿದ್ದರೇ ಈ ಹಾಳು ಕೊಂಪೆಗೆ ಬರೋ ಅಗತ್ಯವೇನಿತ್ತು" ಸಿಡಿಮಿಡಿ ಗುಟ್ಟಿದರು.

ಮೆಟ್ಟಿಲುಗಳನ್ನೇರಿ ಮೇಲೆ ಹೋದ ಡ್ರೈವರ್ ಹತ್ತು ನಿಮಿಷದ ನಂತರ ಕಾಣಿಸಿಕೊಂಡು "ಇದ್ದಾರೆ...ಇದ್ದಾರೆ" ಹರ್ಷೋದ್ಗಾರ ಮಾಡಿದ. ಆದರೆ ಆ ಪೂರ್ತಿ ಸಂತೋಷ ಅನುಭವಿಸಲಾಗಲಿಲ್ಲ ಆಕೆಗೆ. ಕಲ್ಲು ಬಡಿದ ಜಾಗವನ್ನ ನೋಡಿದರು. ಬಹುಶಃ ಕಲ್ಲೇಶಿ ಈ ಸಂದರ್ಭದಲ್ಲಿ ಅವರ ಕೈಗೆ ಸಿಕ್ಕರೇ ನಾಲ್ಕು ಬಡಿದು ಬಿಟ್ಟಾರು.

ಅರ್ಥಮಾಡಿಕೊಂಡವನಂತೆ ಕೆಳಗೆ ಬಂದ ಡ್ರೈವರ್ ಕೈಕಟ್ಟಿ ನಿಂತ. "ಮಲಗಿದ್ರು, ಎಬ್ಬಿಸ್ದೆ. ಪೂರ್ತಿ ಎಚ್ಚರವಾಗಿರಲಿಕ್ಕಿಲ್ಲ" ಅಷ್ಟೇ ಹೇಳಿದ್ದು.

"ಸ್ವಲ್ಪ ಕರೀ ಹೋಗು" ಆಜ್ಞಾಪಿಸಿದರು.

ಅದು ಸಾಧ್ಯವಿಲ್ಲವೆಂದು ಅವನಿಗೆ ಗೊತ್ತು. ಬೆಳಗಿನ ಸಮಯ ಹಾಲು, ನೀರು, ತರಕ್ಕಾರಿ, ತೋಟ, ಗದ್ದೇಂತ ಓಡಾಡೋ ಜನರಿದ್ದರು. ಅವರಲ್ಲಿ ಕೆಲವರಾದರೂ ನಿಂತು ತಮಾಷೆ ನೋಡಬಹುದು.

"ಬಹುಶಃ ಬರೋಲ್ಲಮ್ಮ" ಅತ್ಯಂತ ಮೆತ್ತಗೆ ಹೇಳಿದ.

ಅದು ಮೃಣಾಲಿನಿಗೂ ಗೊತ್ತಿತ್ತು. ಅವನ ಲೆಕ್ಕದಲ್ಲಿ ಈಕೆ ದೊಡ್ಡ ವ್ಯಕ್ತಿಯೇನು ಅಲ್ಲ ! ತಾವೇ ಇಳಿದು ಅತ್ತಿತ್ತ ನೋಡಿ ಸೀರೆಯ ನೆರಿಗೆಗಳನ್ನು ಸ್ವಲ್ಪ ಎತ್ತಿಡಿದು ಮೇಲಕ್ಕೆ ಹೋದರು.

ಒಮ್ಮೆ ತಿರುಗಿದರು. ಹರಿಯುತ್ತಿರು ಹೊಳೆ, ಮರಳು, ಅಲ್ಲಲ್ಲಿ ಜೋಡಿಸಿ ದಂತೆ ಬಿದ್ದಿರುವ ಕಲ್ಲು ಬಂಡೆಗಳು ವಿವಿಧ ಗಾತ್ರದಲ್ಲಿದ್ದವು. ಅದರ ಸೌಂದರ್ಯ ಸೊಬಗನ್ನ ಆಹ್ಲಾದಿಸುವ ಮನಸ್ಥಿತಿಯಲ್ಲ.

ಎರಡು ಕೈಗಳನ್ನೂರಿ ಎದ್ದು ಕೂತಿದ್ದ ಸಾಗರ್ ತಾಯಿಯನ್ನೇ ನೋಡಿದ ಕೂಡಲೇ ಎದ್ದು ನಿಂತ. ಅವ್ಯಕ್ತವಾದ, ಅರ್ಥವಾಗದ ಆಂದೋಳನ ಅವನೆದೆಯಲ್ಲಿ. ಆಕೆ ಮಡಿಲಲ್ಲಿ ಕೆಲವು ಕ್ಷಣಗಳಾದರೂ ತಲೆ ಇಟ್ಟು ಹೊರಳಾಡಿ ಅಳಬೇಕೆನಿಸಿತು ಆ ಕ್ಷಣದಲ್ಲಿ.

"ಅಂತು ಅಪ್ಪ, ಮಗ ಸೇರಿ ದೊಡ್ಡ ಪ್ಲಾನ್ ಮಾಡಿದ್ರಿ" ಎಂದರು ಮೃಣಾಲಿನಿ.

ಹಟ, ಛಲದ ಮುಂದೆ ಇಲ್ಲಿ ತಾಯ್ತನ ಸೋಲೋಪ್ಪಿಕೊಂಡಂತೆ ಕಂಡಿತು.

ಬಲವಂತವಾಗಿ ಉಗುಳು ನುಂಗಿದ ಸಾಗರ್ ಕಟುವಾದ.

"ಎಕ್ಸೈಟ್ ಆಗೋ ಅಗತ್ಯವಿಲ್ಲ. ಕೂತ್ಕೊಂಡ್ ಮಾತಾಡಿ" ಅವನ ದನಿಯಲ್ಲಿ ವ್ಯಂಗ್ಯವಿತ್ತು. "ನಿಮ್ಮ ಜೊತೆ ವಾದ ಮಾಡೋಕೆ ಸೀತಾರಾಮ್ ಬರೋಲ್ಲ. ವಾದ, ಪ್ರತಿವಾದಗಳು ನಮ್ಮಿಬ್ಬರ ನಡ್ವೇ ಮಾತ್ರ."

ಮೊದಲು ಕೂತ ಮೃಣಾಲಿನಿ ಒಮ್ಮೆಲೆ ಎಲ್ಲೆಡೆ ದೃಷ್ಟಿ ಹರಿಸಿ "ನೀವು ಈ ಮನೇನ ಬಾಡಿಗೆಗೆ ಹಿಡಿದ್ರಾ?" ಬಹುಶಃ ಇವನ ಜೊತೆಗೆ ಸೀತಾರಾಮ್‌ನ ಕೂಡ ಸೇರಿಸಿದರು.

"ಈ ಮನೆ ಬಾಡಿಗೆಗೆ ಹಿಡಿದಿರೋದು ನಿಜ. ಆ ದಿನ ನನ್ನೊತೆ ಅಪ್ಪಯ್ಯ ಶಾಸ್ತ್ರಿಗಳ ಮನೆಗೆ ಬಂದವ್ರು ಬಿಳಿಗಿರಿಯವ್ರು" ಅತ್ಯಂತ ಶಾಂತವಾಗಿ ನುಡಿದ.

ಸದಾ ಆಫೀಸ್, ಮೀಟಿಂಗ್, ಸೆಮಿನಾರ್ ಅಕೌಂಟ್ಸ್ ಮಧ್ಯೆ ಇರುವ ಮೃಣಾಲಿನಿ ತನಗಾಗಿ ಇಲ್ಲಿಯವರೆಗೂ ಹುಡುಕಿಕೊಂಡು ಬಂದಿದ್ದಾರಲ್ಲ, ಎನ್ನುವ ಅಲ್ಪ ಸ್ವಲ್ಪ ಅಭಿಮಾನ, ಕಾಳಜಿ ಅವನಿಗಿತ್ತು.

"ನಾನು ತಿಳಿದಿದ್ದಕ್ಕಿಂತ ಸೀತಾರಾಮ್ ಹೆಚ್ಚು ಬುದ್ಧಿವಂತ್ರು. ಇಲ್ಲಿನ ಕೆಲವರನ್ನ ಕೂಡ ಬಳಿಸಿಕೊಂಡಿದ್ದಾರ? ಓಕೇ...ಓಕೇ....ನೀನು ನನ್ನೊತೆ ಹೊರಡು. ಜಗತ್ತಿನಲ್ಲಿ ಕೆಟ್ಟ ತಂದೆಯರು ಇರ್ಬಹ್ದು. ಮಕ್ಳು ಭವಿಷ್ಯನ ತಮ್ಮ ಸ್ವಾರ್ಥಕ್ಕೆ ಉಪಯೋಗಿಸ್ಕೋಬಹ್ದು. ಆದರೆ ಯಾವ ತಾಯಿನು ಕೆಟ್ಟವಳಲ್ಲ" ಆವೇಶದಿಂದ ಹೇಳಿದರು ಮೃಣಾಲಿನಿ.

ಸಾಗರ್ ನಕ್ಕುಬಿಟ್ಟ. 'The status of women indicates the character of country' ಈ ವಾಕ್ಯವನ್ನ ಓದಿದ್ದ. ಆದರೆ ಎಲ್ಲೀಂತ ಮಾತ್ರ ನೆನಪು ಇರಲಿಲ್ಲ.

"ನಾನು ಕನ್‌ಪ್ಯೂಷನ್‌ನಲ್ಲಿದ್ದೀನಿ. ಅನಗತ್ಯವಾಗಿ ಡ್ಯಾಡಿನ ಇಲ್ಲಿಗೆ ಎಳ್ದು ತರ್ಬೇಡಿ. ಜಗತ್ತುನಲ್ಲಿರೋ ಎಲ್ಲಾ ದೇವರ ಮೇಲೆ ಆಣೆ. ಇದರಲ್ಲಿ ಅವ್ರ ಪಾತ್ರ ಇಲ್ಲ." ಖಚಿತ ಪಡಿಸಲು ಗಟ್ಟಿಯಾಗಿಯೇ ಹೇಳಿದ.

"ನೀನು ಸೀತಾರಾಮ್ ಪರನೇ. ಐ ಹೇಟ್ ಹಿಮ್" ದುಮುಗುಟ್ಟಿದರು ಮೃಣಾಲಿನಿ.

ಸಾಗರ್ ತಲೆಯೊತ್ತಿಕೊಂಡು ಆರಾಮಾಗಿ ಕೆಳಗೆ ಕೂತ. "ಓಕೇ...ಓಕೆ.. ಅದ್ರಿಂದ ನಮ್ಗೇನು ನಷ್ಟ ? ಹಣ ಇದೆ, ಅಂತಸ್ತು ಇದೆ. ತುಂಬ ಬುದ್ಧಿವಂತೆ

ಅನ್ನೋ ಅಹಂಕಾರ ಇದೆ. ಈ ಜುಜುಬಿ ಮಗ್ನ ಕಟ್ಟಿಕೊಂಡ್...ನಿಮಗೇನು?" ನೇರವಾಗಿಯೇ ದಾಳಿಗೆ ಇಳಿದ.

"ನನ್ಜೊತೆ ಸುಮ್ನೆ ಹೊರಡು" ಎಂದವರು "ನೀನು ಮೆಜಾರಿಟಿಗೆ ಬಂದಿದ್ದೀ. ನಿನ್ನನ್ನೇನು ಸೀತಾರಾಮ್ ಕಟ್ಟಿ ಹಾಕೋಕ್ಕಾಗೋಲ್ಲ. ಒಮ್ಮೆ ನನ್ಜೊತೆ ಬಂದ್ಮೇಲೆ ನೀನು ತಿರ್ಗಿ ಕೂಡ ನೋಡ್ಬಾರ್ದು" ಒಂದು ಕಂಡೀಷನ್ ಹಾಕಿದರು.

ಸಾಗರ್ ಕೈ ಸಿಗರೇಟು, ಪ್ಯಾಕ್‌ನ ತಡವಿತು. ಯಾವುದೋ ಸಂಸ್ಕಾರ ಅವನನ್ನು ಹಿಂದಕ್ಕೆಳೆಯಿತು.

"ಯಾರ್ನ ತಿರ್ಗಿ ನೋಡ್ಬಾರ್ದು ? ಓಹೋ.... ನಿಮ್ಮ ಎನಿಮೀ ಸೀತಾರಾಮ್‌ನಾ? ಅವು ನನ್ನ ತಂದೇನೆ ಸಮಾಜದಲ್ಲಿ ರೆಕೆಗ್ನೈಸ್ ಆಗಿದ್ದಾರೆ. ನನ್ನ ಶಾಲಾ, ಕಾಲೇಜುನಲ್ಲಿ Son of Sitharam ಎಂದೇ ನಮೂದಾಗಿರೋದು. ನನ್ನ ಇನ್‌ಷಿಯಲ್ ಏನು ಗೊತ್ತ 'S' ಇದೆಲ್ಲ ನಿಮ್ಗೆ ಗೊತ್ತಿರೋದೇ" ಎಂದ ಸರಳವಾಗಿ.

ಮೃಣಾಲಿನಿ ಬೆವರೊರೆಸಿಕೊಂಡರು. Male dominent Society ಹೆಣ್ಣಿಗೆ ಅನ್ಯಾಯ ಮಾಡಿದೆ. ಆಕಾಶದೆತ್ತರದಲ್ಲಿ ನಿಂತು ಗಹಗಹಿಸುವ ಹೆಣ್ಣನ್ನ ಅರ್ಥಕ್ಕೆ ತಂದು ನಿಲ್ಲಿಸಿ ಅಂತರ್‌ಪಿಶಾಚಿಯನ್ನಾಗಿ ಮಾಡಿದ ತನ್ನ ಮಾತುಗಳಿಂದ ಸಾಗರ್.

"ಸುಮ್ನೆ ನನ್ಜೊತೆ ಬಾ" ಎಂದರು ಆಕೆ.

ಗಂಟಲು ತೇವಾಗಿತ್ತು. ಕಣ್ಣಂಚಿನಲ್ಲಿ ಕಂಬನಿಯ ಬಿಂದುಗಳು ಇದ್ದವು. ಅವು ಕೆನ್ನೆಯ ಮೇಲೆ ಇಳಿದಿದ್ದರೇ, ಕತಗೆ ಇನ್ನೊಂದು ತಿರುವು ಸಿಕ್ಕುತ್ತಿತ್ತೇನೋ! ಅದನ್ನ ತಡೆದು ಅಲ್ಲೇ ನಿಲ್ಲಿಸುವ ಛಾತಿ ಇದ್ದ ಗಟ್ಟಿ ಹೆಣ್ಣು ಆಕೆ.

"ಬರೋಲ್ಲಾಂದ್ರೆ....." ಎನ್ನುವ ವೇಳೆಗೆ ಡ್ರೈವರ್ ಕಲ್ಲೇಶಿಯನ್ನ ರೆಟ್ಟೆ ಒಡಿದು ಎಳೆದು ತಂದು ನಿಲ್ಲಿಸಿದ "ನೋಡಿ ಮೇಡಮ್, ಭಡವಾ ಸಿಕ್ದ. ಕಲ್ಲೊಡೆದು...ಓಡ್ತಾನೆ" ಎರಡು ಏಟು ಬಿಟ್ಟ ಕೂಡಲೇ ಸಾಗರ್ ಎದ್ದು ಬಂದು ಡ್ರೈವರ್‌ನ ಪಕ್ಕಕ್ಕೆ ತಳ್ಳಿ ಕಲ್ಲೇಶಿಯನ್ನ ತನ್ನೆಡೆ ಎಳೆದುಕೊಂಡ.

ಅವನು ಅಳುತ್ತಲೇ ಎಲ್ಲಾ ಉಸುರಿ ತನ್ನ ತಪ್ಪೊಪ್ಪಿಕೊಂಡ. "ಅಣ್ಣಾ, ನನ್ನ ಚೆನ್ನಾಗಿ ಹೊಡಿದಿದ್ದಾನೆ" ಎಂದ ಕೂಡಲೇ ಡ್ರೈವರ್ ಕತ್ತು ಪಟ್ಟಿ ಉಸಿರು ಗಟ್ಟುವಂತೆ ಭದ್ರವಾಗಿ ಹಿಡಿದ. "ಯೂ ಸ್ಕೌಂಡ್ರಲ್, ಯಾಕೋ ಹೊಡೆದೇ! ವಿಷ್ಯ ತಿಳಿದ್ರೆ ಊರಿನ ಜನ ನಿನ್ನ ಹೊಡ್ದು ಚಿತ್ರಾನ್ನ ಮಾಡ್ಬಿಡ್ತಾರೆ."

ಅವನು ಎರಡು ಕೈ ಜೋಡಿಸಿ ಕಣ್ಣಲ್ಲಿ ನೀರಾಕಿಕೊಂಡಾಗ ಸಾಗರ್‌ನ ಕೈ ಸಡಿಲವಾಯಿತು.

"ಸಾಗರ್, ಇದೇನಿದು ? ಇಂಥ ಅಯೋಗ್ಯತನನ ನೀನು ಎನ್‌ಕರೇಜ್ ಮಾಡ್ತೀಯಾ? ಆ ಕಾರು ನಮ್ದು. ಅದ್ನ ನಾವೆಷ್ಟು ಜೋಪಾನ ಮಾಡ್ತೀವೀಂತ ಗೊತ್ತು. ನಂಗೆ ತಲೆ ಕೆಟ್ಟಂತಾಗಿದೆ." ಆಕೆ ಮರುಗಿದರು.

"ಅದ್ಕೇ, ನೀವೇ ಕಾರಣ ! ಅಷ್ಟು ರಾತ್ರಿಯಲ್ಲಿ ರೆಸ್ಟೋರೆಂಟ್‌ಗೆ ಬಂದಾಗ ಸಿಕ್ಕಿದ್ದೇನು? ನಿನ್ನ ಕಾರು ರಿಪೇರಿ ಮಾಡ್ಸಬಹ್ದು. ಒಂದು ಮಾರುತಿ ಹೋದರೇ...ಇನ್ನೊಂದು ಮಾರುತಿ ಬರುತ್ತೆ. ಅದು ಮ್ಯಾನ್ ಮೇಡ್ ಇದು ಗಾಡ್ ಮೇಡ್. ಇನ್ನೊಬ್ಬ ಕಲ್ಲೇಶಿನಂತು ಸೃಷ್ಟಿಸೋಕೆ ಯಾವ ವಿಜ್ಞಾನಿಯಿಂದ್ಲೂ ಸಾಧ್ಯವಿಲ್ಲ" ಮುಲಾಜಿಲ್ಲದೆ ದಬಾಯಿಸಿದ.

ಈ ರಾಮಾಯಣ ತನಗೆ ಬೇಡವೆಂದು ಡ್ರೈವರ್ ಹೋಗಿ ಕಾರಿನಲ್ಲಿ ಕೂತ. ಇಳಿಯಲೇ ಬಾರದೆಂದು ಮನಸ್ಸಿನಲ್ಲಿಯೇ ಶಪಥ ಮಾಡಿದ. ತಾಯಿ, ಮಕ್ಕಳ ಮಧ್ಯೆ ಹೊಡೆದಾಟ, ಬಡಿದಾಟ ಜಗಳಗಳನ್ನು ನೋಡಿದ್ದ. ಇದು ಮಾತ್ರ ತೀರಾ ವಿಚಿತ್ರವಾದ ಕೇಸು. ಮೂರು ಜನ ಮೂರು ಕಡೆ. ಇಬ್ಬರು ಒಂದು ಕಡೆ ಇದ್ದಿದ್ದರೇ ಜಯ ಅವರ ಪಾಲಾಗುತ್ತಿತ್ತೇನೋ ! ಇಲ್ಲಿ ಒಬ್ಬೊಬ್ಬರದು ಒಂದೊಂದು ದಿಕ್ಕು.

"ಏನು ನಿನ್ನ ಉದ್ದೇಶ ? ಎದುರು ವಾದಿಸೋದು ಪ್ರಬುದ್ಧತೆ ಅಂತ ತಿಳ್ದುಕೊಂಡಿದ್ದೀಯಾ ? ಈ ಟ್ರೈನಿಂಗ್ ಬಹಳ ದಿನ ಉಪಯೋಗಕ್ಕೆ ಬರೋಲ್ಲ. ಸುಮ್ನೆ ನನ್ಜೊತೆ ನಡೀ. ಇಲ್ಲ, ನಿಂಗೆ ನಿನ್ನ ಡ್ಯಾಡಿಯ ಪರ್ಮಿಷನ್ ಬೇಕಾ?" ಕೊನೆಯ ವಾಕ್ಯ ಚುಚ್ಚಿದಂತಿತ್ತು.

ಬೇರೆಯವರು ಈ ತರಹ ಮಾತಾಡಿದ್ದರೇ ಅವನು ಕೊಲೆಗಾರನಾಗಿ ಬಿಡುತ್ತಿದ್ದ. ಆದರೆ 'ಮಾತೃದೇವೋಭವ' ಎನ್ನುವ ತಾಯಿ ರೂಪ.

"ಅಂತು ನಿಮ್ಗೇ ಅರ್ಥವಾಗೋಲ್ಲ ! ನಾನು ಬರೋಲ್ಲ." ಕಡ್ಡಿ ಮುರಿದಂತೆ ಹೇಳಿದ. ಆಕೆಯ ಕಣ್ಣಂಚು ಒದ್ದೆ ಆಯಿತು. "ನಿನ್ನ ಹೆತ್ತಿದ್ದಕ್ಕೆ ಸಾರ್ಥಕ. ಗೋ ಟು ಹೆಲ್" ಹೊರಟೇ ಬಿಟ್ಟರು.

ಮೃಣಾಲಿನಿ ಬಂದಿರುವುದು ತಿರುಮಲಾಂಬ, ಬಿಳಿಗಿರಿಗೆ ಮುಟ್ಟಿತ್ತು. ತಾಯಿ ಮಕ್ಕಳಿಗೆ ಒಪ್ಪತ್ತು ಊಟ ಹಾಕಿ ಸಂತೋಷದಿಂದ ಬೀಳ್ಕೊಡಬೇಕೆಂದು ಬಾಗಿಲಲ್ಲಿಯೇ ಕಾದು ನಿಂತಿದ್ದರು.

ಮುಖ ಕಂಡ ಕೂಡಲೇ ತಾವಾಗಿಯೇ ಕಾರಿನ ಬಳಿ ಬಂದರು. "ಎಲ್ಲಿ ಸಾಗರ್?" ಊಟ ಮಾಡ್ಕೊಂಡ್ ಮಧ್ಯಾಹ್ನದ ಮೇಲೆ ಹೋಗಿ. ದಾರಿಯಲ್ಲೇ ಶ್ರೀವಳ್ಳಿಯಮ್ಮನ ದೇವಸ್ಥಾನ ಇದೆ. ಈ ಹೊಳೆ ಶ್ರೀಮುಖಿ ನದಿಗೆ ಸೇರೋ

ಪವಿತ್ರ ಸ್ಥಳ. ಹೋಗಿ ಪೂಜೆ ಸಲ್ಲಿಸಿಕೊಂಡ್ಹೋಗಿ" ತಿರುಮಲಾಂಬ ಎಲ್ಲೂ ವಿರಾಮವಿಡದೇ ಒಂದೇ ಸಮ ಹೇಳಿ ಮುಗಿಸಿದರು.

ತಕ್ಷಣ ಅಪ್ಪಯ್ಯ ಶಾಸ್ತ್ರಿಗಳ ನೆನಪಾದುದ್ದರಿಂದ ಸ್ವಲ್ಪ ಮೃದುವಾದರು ಮೃಣಾಲಿನಿ "ನಾನು ಬರೀ ಹೌಸ್ ವೈಫ್ ಅಲ್ಲ. ಜಾಬ್‌ನಲ್ಲಿರೋ ಲೇಡಿ. ಎಷ್ಟೋ ಜವಾಬ್ದಾರಿಗಳು ಇದೆ. ಆದ್ದರಿಂದ ನನ್ನ ಸಮಯ ತೀರಾ ಬೆಲೆಯುಳ್ಳದ್ದು. ಬರ್ತೀನಿ" ಕಾರು ಹತ್ತಿಯೇ ಬಿಟ್ಟರು.

"ಸ್ವಲ್ಪ ನಿಂತ್ಕೊಳ್ಳಿ" ಬಿಳಿಗಿರಿ ಹೇಳಿದರು.

ಕಾರು ಮುಂದಕ್ಕೆ ಚಲಿಸಲಿಲ್ಲ. ವಿಂಡ್‌ನ ಬಳಿ ಬಗ್ಗಿದ ಬಿಳಿಗಿರಿಯವರು "ಸ್ವಲ್ಪ ಇಳ್ದು ಬನ್ನಿ. ಎರಡೇ ಎರ್ಡು ಮಾತು ಹೇಳೋದು ಇದೆ. ನಿಮ್ಗೆ ಇಷ್ಟವೆನಿಸಿದ್ದರೇ ಕೇಳ್ಬಹ್ದು, ಇಲ್ಲದಿದ್ರೆ...ಬಿಡ್ಬಹ್ದು. ನಮ್ಮ ಕರ್ತವ್ಯ ನಾವು ಮಾಡೋಕೆ ಅವಕಾಶ ಕೊಡಿ" ಎಂದರು. ಅವರ ದನಿ ಬಿಗಿಯಾಗಿತ್ತು.

ಏನು ಅನ್ನಿಸಿತೋ ಮೃಣಾಲಿನಿಗೆ. ಕಾರಿನಿಂದ ಇಳಿದು ಅವರ ಜೊತೆಯಲ್ಲಿ ಹೋದರು. ಅವರು ಏನು ಹೇಳಬಹುದೆಂದು ಸ್ವಲ್ಪ ತಲೆ ಕೆಡಿಸಿಕೊಂಡಿದ್ದರೇ, ತಾನು ಯಾವ ನಿರ್ಣಯ ತೆಗೆದುಕೊಳ್ಳಬಹುದೆಂಬ ತರ್ಕ ಮೂಡುತ್ತಿತ್ತು. ಆ ಕೆಲಸ ಮಾಡಲಿಲ್ಲ.

ತಿರುಮಲಾಂಬ ಒಂದು ಲೋಟ ತಂದು ಕೊಟ್ಟರು.

"ತಗೊಳ್ಳಿ, ಹಸುವಿನ ಹಾಲು. ಮನೆಯ ಮುಂದೆ ಬಂದು ಕರ್ದು ಕೊಡ್ತಾರೆ. ಚೆನ್ನಾಗಿ ಕಾಯಿಸಿದ್ದೀನಿ. ಯಾವ್ದೇ ದೋಷವಿಲ್ಲ. ಒಂದಿಷ್ಟು ಕುಡೀರಿ" ಬಲವಂತ ಮಾಡಿಕೊಟ್ಟರು.

ಸರೋಜಮ್ಮನಿಗಿಂತ ಬೇರೆಯ ರೀತಿಯ ವ್ಯಕ್ತಿತ್ವ ತಿರುಮಲಾಂಬ ಅವರದು. ಆವೇಗಕ್ಕಿಂತ, ಅವರಲ್ಲಿ ಆಲೋಚನೆ ಇತ್ತು. ಒಳ್ಳೆಯ ರೀತಿಯಲ್ಲಿ ಚಿಂತಿಸಬಲ್ಲವರಾಗಿದ್ದರು.

ಅಂತು ಮೃಣಾಲಿನಿ ಹಾಲಿನ ಲೋಟ ತುಟಿಗೆ ಸೋಕಿಸಿದರು. ಹಸುವಿನ ಗಟ್ಟಿಯಾದ ಹಾಲಿಗೆ ಹದವರಿತ ಸಕ್ಕರೆ ಮಾತ್ರ ಬೆರೆಸಿದ್ದರಿಂದ ತುಂಬ ರುಚಿಯಾಗಿಯೇ ಇತ್ತು.

ಇಲ್ಲಿನ ಪಚ್ಚೆ, ಕೆಂಪು, ಕಲ್ಲುಗಳು ಸಿಗುವ ರೂಮರ್‌ನಿಂದ ಆದ ಅನಾಹುತಗಳನ್ನು ಸ್ವಲ್ಪ ವಿವರವಾಗಿಯೇ ಹೇಳಿದ ಬಿಳಿಗಿರಿಯವರು "ದಯವಿಟ್ಟು ನೀವು ಸಾಗರ್‌ನ ಕರ್ಕೊಂಡ್ಹೋಗಿ. ರಾತ್ರಿ - ಹಗಲು ಅನ್ನದೇ ಹೊಳೆಯ ಸಮೀಪ ಬಂಡೆಗಳ ನಡ್ವೇ ಓಡಾಡ್ತಾನೆ. ಅನಾಹುತವಾಗೋಕೆ ಮುನ್ನ

ಕರ್ಕೊಂಡ್ಹೋಗಿ” ವಿನಂತಿಸಿಕೊಂಡರು. ಯಾವುದೇ ಸರ್ಟಿಫಿಕೇಟ್ ಆಸೆಯಿಂದ ಮಾಡಿದಲ್ಲ, ಈ ರೆಕಮಂಡೇಷನ್.

“ಅವ್ನೇ ಬರ್ಬಹುದ್ದು” ಬಿಗುಮಾನದಿಂದ ನುಡಿದಿದ್ದು ಮೃಣಾಲಿನಿ.

ಗಂಡ, ಹೆಂಡತಿ ಮುಖ ಮುಖ ನೋಡಿಕೊಂಡರು “ಸಾಗರ್, ಈಗ ನಿಮ್ಜೊತೆ ಬರೋಲ್ವಾ ? ಯಾಕೆ...ಬರೋಲ್ಲ ? ಎರಡು ದಿನದ ಹಿಂದಿನ ರಾತ್ರಿ ಹೊರಟಿದ್ದ. ಕತ್ತಲೆಯಲ್ಲಿ ಬಸ್ಸು ಬರ್ಲಿಲ್ಲ, ಆ ಕಲ್ಲೇಶಿ ಕಾಲು ಉಳುಕಿಸಿ ಕೊಂಡಿದ್ದರಿಂದ, ಅವನನ್ನ ಎತ್ಕೊಂಡ್ಬಂದ. ಈ ಸ್ಥಳ ಬೇಸರವಾಗಿದೆ. ಇಲ್ಲಂತು ಇರೋಲ್ಲ. ಬೇರೆ ಎಲ್ಲಾದ್ರೂ ಹೋಗ್ತಾನೋ, ಏನೋ ! ತುಂಬ ಬುದ್ಧಿವಂತ ಹುಡ್ಗಾಂಥ ಕೇಳಿದ್ವಿ. ಈಗ ಇಂಥವ್ರ ಅಗತ್ಯ ಸಮಾಜಕ್ಕೂ ದೇಶಕ್ಕೂ ಇದೆ. ತಾವು ಕಣ್ಣೀರು ಸುರಿಸಿಯಾದ್ರೂ.....ಕರ್ಕೊಂಡ್ಹೋಗಿ” ಪ್ರಯತ್ನ ಪಟ್ಟರು ಬಿಳಿಗಿರಿ. ಶಿಕ್ಷಕ ವೃತ್ತಿಯಲ್ಲಿ ಮೂವತ್ತೈದು ವರ್ಷ ಕಳೆದ ಮನುಷ್ಯನಿಗೆ ಭವಿಷ್ಯದ ಜನಾಂಗದ ವಿಷಯದಲ್ಲಿ ಅತ್ಯಂತ ಕಳಕಳಿ.

ಮೃಣಾಲಿನಿ ಮೌನವಹಿಸಿದರು. ಅವರಿಗೆ ಮಗನ ಸ್ವಭಾವ ಗೊತ್ತು. ಅವನ ಅವಿಧೇಯತೆಯ ಅನುಭವಿಸಿದವರೇ. ಅದಕ್ಕೆ ಕಾರಣ ಹುಡುಕುವ ಜಾಣತನ ಮಾತ್ರ ಮಾಡಿರಲಿಲ್ಲ.

“ಈಗ ಬರೋಲ್ಲಾಂತಾನೆ !” ಮುಂದಿನ ಮಾತು ಬರದಂತೆ ತಡೆದರು ಮೃಣಾಲಿನಿ. ‘ಇದಕ್ಕೆ ಕಾರಣ ಸೀತಾರಾಮ್. ತನ್ನನ್ನು ಅವಮಾನಿಸಲೆಂದೇ ಮಗನನ್ನ ಪ್ರೇರೇಪಿಸಿದ್ದಾನೆ’ ಎನ್ನುವ ಭೂತನರ್ತನ ತಡೆಯಲಾರದೆ ಹೋಗಿದ್ದೇ ದುರಾದೃಷ್ಟ.

ಈ ತರಹ ಬಿಡಿ ಬಿಡಿಯಾಗಿ ಸೀತಾರಾಮ್, ಮೃಣಾಲಿನಿ ಬಂದಿದ್ದು ಬಿಳಿಗಿರಿ ದಂಪತಿಗಳಿಗೆ ಸರಿಯೆನಿಸಲಿಲ್ಲ.

“ನಿಮ್ಮ ಯಜಮಾನರನ್ನು ಜೊತೆಯಲ್ಲಿ ಕರ್ಕಂಡ್ ಬರ್ಬೇಕಿತ್ತು. ನಿಮ್ಮ ಕಣ್ಣೀರು, ಅವ್ರ ಜೋರುಗೆ ಮೆತ್ತಗಾಗಿ ಬಿಡ್ತಾ ಇದ್ದ” ತಿರುಮಲಾಂಬ ವಿವೇಕದಿಂದ ಆಡಿದ ಬುದ್ಧಿ ಮಾತು.

ಗತ ಜೀವನದ ಪುರಾಣ ಒಂದರಲು ಸಾಧ್ಯವೇ ಮೃಣಾಲಿನಿ. ಯಾವುದೋ ತುಡಿತ, ಭಯ ಒಂದೇ ಒಂದು ಮಾತು ಹೇಳಿಸಿತು.

“ನೀವೇ, ಅವ್ನಿಗೆ ಹೇಳಿ. ನಾನು ಬೇಕಾದ್ರೆ ಸ್ವಲ್ಪ ಹೊತ್ತು ಕಾಯ್ತೀನಿ.”

ಬಿಳಿಗಿರಿ, ತಿರುಮಲಾಂಬ ಒಟ್ಟಿಗೆ ಹೊರಟರು.

"ಎಲ್ಲೋ, ಸಾಗರ್ ಜಗಳ ಆಡ್ಕೊಂಡ್ ಮನೆ ಬಿಟ್ಟು ಬಂದಿರಬೇಕು. ಈಗಿನ ಕಾಲದ ಹುಡುಗರು ಹೆತ್ತವ್ರ ಮಾತು ಎಲ್ಲಿ ಕೇಳ್ತಾರೆ" ಅನುಭವದ ಮಾತು ತಿರುಮಲಾಂಬದು.

ಬಿಳಿಗಿರಿಗೆ ಆ ಮಾತಿನ ಬಗ್ಗೆ ತಕರಾರು ಇರಲಿಲ್ಲ.

"ಆಯ್ತು, ಇಬ್ರೂ ಒಟ್ಟಿಗೆ ಅಲ್ವಾ, ಬಂದು ಕರ್ಕೊಂಡ್ಹೋಗೋದು ! ಅಂದು ಆ ಮನುಷ್ಯ ಬಂದಿದ್ದ. ಈಗ ಈಕೆ ಬಂದಿದ್ದಾರೆ. ಇದೆಲ್ಲ... ಏನು? ಇಬ್ರಿಗೂ ಮಗ ತಾನೇ ? ಸಂತಾನದ ಸುಖ, ದುಃಖ ಎರಡರಲ್ಲೂ ಇಬ್ಬರದು ಸಮಪಾಲು ! ಒಂಬತ್ತು ತಿಂಗ್ಳು ಹೊತ್ತು ಹೆತ್ತವಳಿಗೆ ಸ್ವಲ್ಪ ಜಾಸ್ತಿನೇ ಇರುತ್ತೆ. ಆದರೆ ಇಂಥ ವ್ಯವಹಾರ ನಂಗೆ ಹಿಡಿಸ್ಲಿಲ್ಲ" ಬಿಳಿಗಿರಿಯವರು ವಿಶ್ಲೇಷಿಸಿದರು.

ಮೆಟ್ಟಿಲು ಹತ್ತುವ ವೇಳೆಗೆ ಸಿಕ್ಕ ಕಲ್ಲೇಶಿ ಅತ್ತು ಹೈರಾಣವಾಗಿದ್ದ, ಒಂದು ಕಡೆಯ ಕೆನ್ನೆಯ ಮೇಲೆ ಮೂರು ಬೆರಳು ಮೂಡಿತ್ತು. ಇನ್ನ ಅವನ ಅಳು ಪೂರ್ತಿ ಕಮ್ಮಿಯಾಗಿರಲಿಲ್ಲ.

"ಏನೋ, ಇದು !" ಆತಂಕದಿಂದ ಕೇಳುವ ವೇಳೆಗೆ ಅವನ ಬಿಕ್ಕುವಿಕೆ ಜೋರಾಯಿತು. ಬೆನ್ನಟ್ಟಿಕೊಂಡು ಹೋದ ಡ್ರೈವರ್‌ನಿಂದ ತಪ್ಪಿಸಿಕೊಳ್ಳಲು ಎರಡು ಸಲ ಬಿದ್ದಿದ್ದೆ. ಅವನು ಷರಟು ಹಿಡಿದು ಎಳೆದಾಡಿದ್ದರಿಂದ ಎದೆಯಿಂದ ಹೊಟ್ಟೆಯವರೆಗೂ ಹರಿದಿತ್ತು. ಒಡೆದ ಮಂಡಿ, ರಕ್ತವನ್ನು ಒಸರುತ್ತಿತ್ತು. ತನ್ನ ಕರ್ಚಿಪನ್ನೇ ಬಿಗಿದಿದ್ದ ಸಾಗರ್.

ಹೊರಟ ವಿಷಯ ಮರೆತು ಇವನನ್ನು ವಿಚಾರಿಸುವ ವೇಳೆಗೆ ಯಾರೋ ನೋಡಿದವರು ಗೌರಿಗೆ ಸುದ್ದಿ ಮುಟ್ಟಿಸಿರಬೇಕು. ಅವಳ ಆಕ್ರಂದನ ಕೇಳಿ ಮತ್ತಷ್ಟು ಜನ ಕಾರಿನ ಬಳಿ ಜಮಾಯಿಸಿದ್ದರಿಂದ ಡ್ರೈವರ್ ದಿಕ್ಕು ತೋಚದೆ ಕಾರು ಸ್ಟಾರ್ಟ್ ಮಾಡಿಕೊಂಡು ಹೊರಟಿದ್ದು ದೊಡ್ಡ ಗೊಂದಲವಾಗಿ ಮಾರ್ಪಟ್ಟಿತು.

* * *

ಹಿಂದಿನ ರಾತ್ರಿ ಬಸ್ಸು ಬರದೇ ಕಾಲು ಉಳುಕಿದ ಕಲ್ಲೇಶಿಯನ್ನ ಭುಜದ ಮೇಲೆ ಹಾಕಿಕೊಂಡು ಬಂದ ಸಾಗರ್, ತಕ್ಷಣವೇ ಬಿಳಿಗಿರಿಯವರನ್ನ ಎಬ್ಬಿಸಿಕೊಂಡು ಬಂದು ಅಮೃತಾಂಜನ, ಆಯೋಡೆಕ್ಸ್ ಅಂಥದೆಲ್ಲ ತಿಕ್ಕಿ ಇಡೀ ರಾತ್ರಿ ನಿದ್ರಿಸದೆ ಅವನನ್ನು ನೋಡಿಕೊಂಡ.

ಮತ್ತೆ ಬ್ಯಾಗ್‌ನಲ್ಲಿದ್ದ ಬಟ್ಟೆಗಳನ್ನ ಕಿತ್ತು ಹಾಕಿದ. ಮತ್ತೆ ಹೋಗಿ ಹೊಳೆಯ

ದಂಡೆಯಲ್ಲಿ ಉರುಳಿಕೊಂಡ, ಬಂಡೆ ಹತ್ತಿ ಕೂತ. ಉಳಿದ ಸಮಯವನ್ನ ಶುಶ್ರೂಷೆಗಾಗಿ ಮೀಸಲಿಟ್ಟ.

ಗೌರಿಯ ರೊಟ್ಟಿ ಪಲ್ಯದ ಜೊತೆ ತಿರುಮಲಾಂಬ ಪುಳಿಯೊಗರೆ, ಮೊಸರನ್ನ ಕಳಿಸಿಕೊಟ್ಟಿದ್ದರು. ದಕ್ಕನೆ ಅವನ ಮಿದುಳು ಹೊಸದೊಂದು ಚಿಂತನೆಯನ್ನು ಹಚ್ಚಿಕೊಂಡಿತು. ಬಂದಾಗಿನಿಂದ ಇಲ್ಲಿಯವರೆಗಿನ ಘಟನೆಗಳಲ್ಲಿ ಚಲನಚಿತ್ರ ರೀಲುಗಳಂತೆ ಅವನ ಮುಂದೆ ಬಿಚ್ಚಿಕೊಂಡವು.

ರಾತ್ರಿಯೆಲ್ಲ ನಿದ್ರಿಸಲಾಗಲಿಲ್ಲ. ಕುಡಿಯದೇ ಇರಲಾರನೆನಿಸಿದಾಗ, ಎದ್ದು ಕುಂದಣದ ಬಸ್ಸು ಏರುವ ಮುನ್ನ ಉಗ್ರಾಣದ ಬೀಗ ತೆಗೆದು ಹುಡುಕಾಡಿದ. ಹಳೆಯ ಟ್ರಂಕ್‌ನ ಒಳಭಾಗದಲ್ಲಿ ಒಂದು ಬೈಂಡ್ ನೋಟುನ ಎಕ್ಸೈಸ್ ಪುಸ್ತಕವಿತ್ತು. ಅದರ ಮೇಲಿನ ರಂಗೋಲಿ ಅವನನ್ನು ಸೆಳೆಯದಿದ್ದರೇ ಎಸೆದು ಬಿಡುತ್ತಿದ್ದನೇನೋ. ಅದನ್ನ ಬರೆದವಳು ಶ್ರೀವಳ್ಳಿಯೇ. ವಾರೆಗಣ್ಣಿಂದ ನೋಡಿ ಒಳಗೊಳಗೆ ನಕ್ಕಿದ್ದ ಕಲ್ಲೇಶಿ. ಆಸಕ್ತಿಯಿಂದ ಎತ್ತಿ ಕೊಂಡವನು ಮಲಗಿದ್ದ ಕಲ್ಲೇಶಿಯ ಎಚ್ಚರಿಸದೇ ಹೊಳೆಯ ದಂಡೆಗೆ ಹೋದವನು ಬಿಡಿಸಿದ. ಅರ್ಧಕ್ಕಿಂತ ಹೆಚ್ಚು ಹಾಳೆಗಳನ್ನ ತುಂಬಿಕೊಂಡಿದ್ದು ದುಂಡು ದುಂಡಾದ ಕನ್ನಡಕ ಅಕ್ಷರ ಮಾಲೆ. ಪ್ರತಿ ಹಾಳೆ ಪಕ್ಕದ ಪುಟದಲ್ಲಿ ಒಂದೊಂದು ರಂಗೋಲಿ ಇರುತ್ತಿತ್ತು. ರಂಗೋಲಿಯಷ್ಟೆ ಚೆಂದವಾಗಿತ್ತು, ಇನ್ನೊಂದು ಹಾಳೆಯ ಅಕ್ಷರಗಳು. 'ಎನಿಥಿಂಗ್ ಇಂಟರೆಸ್ಟಿಂಗ್?' ಮೊದಲ ಸಲ ಅವನ ಮನ ಪ್ರಶ್ನಿಸಿತು. 'ಯೆಸ್' ಎಂದ.

ಪ್ರತಿಯೊಂದು ಅವಳ ದಿನಚರಿಯ ಒಂದು ಭಾಗವಾಗಿದ್ದರೇ, ಇನ್ನೊಂದು ಅವಳ ಅಂತರಂಗದ ತುಮುಲ, ಅವನಿಗೆ, ನೋವು ದುಮ್ಮಾನಗಳು ಇದ್ದವು.

ಬೆಳಗಿನ ಜಾವದ ನಾಲ್ಕುವರೆಗೆ ಇನ್ನ ಕತ್ತಲ್ಲಿದ್ದಂತೆ ಷುರುವಾದರೆ ಮುಗಿಯುವುದು ರಾತ್ರಿ ಹನ್ನೊಂದಕ್ಕೆ ಇಲ್ಲಿದ್ದಾಗ ಬರೆದಿದ್ದು. ಆಗ ಇನ್ನ ಉಪ್ಪಿನ ಕಾಯಿ ಕೈಂಕರ್ಯವಿರಲಿಲ್ಲ. ಈಗ ಮೊದಲಿನ ಒತ್ತಡದ ಮೂರರಷ್ಟು ಒತ್ತಡ ಅನುಭವಿಸುತ್ತಿದ್ದಳು ಶ್ರೀವಳ್ಳಿ.

ಪುಟಗಳನ್ನ ಓದುತ್ತ ತಿರುವುತ್ತಿದ್ದವನಿಗೆ ಶ್ರೀವಳ್ಳಿ ದುರಂತ ಕತೆಯ ನಾಯಕಿಯಂತೆ ಕಂಡಳು. ಅವಳ ಹಾಡು, ಮಾತನ್ನು ಸದಾ ಟೀಕಿಸುವ ಸರೋಜಮ್ಮ ಎಷ್ಟೋ ಸಲ 'ನಿನ್ನ ನಾಲಿಗೆ ಸೇದಿ ಹೋಗ, ಮೂರು ಹೊತ್ತು ಬಡಬಡಿಸುತ್ತ ಇರ್ತೀಯಾ' ಇಂಥ ವಾಗ್ಬಾಣಗಳಿಂದ ಅವಳನ್ನು ನೋಯಿಸುತ್ತಿದ್ದಳು.

ಕೆಲವೊಮ್ಮೆ ಇವಳ ಸಹಾಯಕ್ಕೆ ಬಂದ ಅಪ್ಪಯ್ಯ ಶಾಸ್ತ್ರಿಗಳು ಮೂಲೆಯಲ್ಲಿ ಕಸವಾಗುವ ಪರಿಸ್ಥಿತಿಯನ್ನ ತಂದುಕೊಂಡಿದ್ದು ಸುಳ್ಳಲ್ಲ.

ಓದಿ ಮುಗಿಸಿದಾಗ ಅವನ ಕಣ್ಣಲ್ಲಿ ಕೂಡ ನೀರಿಳಿಯಿತು. ಸಹಾನುಭೂತಿಯಿಂದ ಒದ್ದಾಡಿದವನು, ಕುಂದಣದ ಬಸ್ಸು ಹತ್ತಿ ಅವರ ಮನೆ ತಲುಪಿದಾಗ ಹನ್ನೊಂದಕ್ಕೆ ಹತ್ತು ನಿಮಿಷವಿತ್ತು. ಬಹುಶಃ ಸರೋಜಮ್ಮ ಸಿಕ್ಕಿದರೇ ಕೊಚ್ಚಿ ಬಿಡುತ್ತಿದ್ದನೇನೋ, ಅಷ್ಟು ರೋಷದಿಂದ ಕಂಗೆಟ್ಟಿದ್ದ.

ಆಗ ತಾನೇ ಮನೆಯ ಮುಂದೆ ರಿಕ್ಷಾದಿಂದ ಇಳಿಯುತ್ತಿದ್ದ ಅಪ್ಪಯ್ಯ ಶಾಸ್ತ್ರಿಗಳು ಇವನ ಮುಖ ನೋಡಿ ನಗೆ ಅರಳಿಸಿದರು ಬಲವಂತದಿಂದ.

"ಬಾಪ್ಪ...ಸಾಗರ್...ಬಾಪ್ಪ" ಕೂಗಿದರು.

ಹೊಟ್ಟೆ ನೋವಿನಿಂದ ನಿಶ್ಶಕ್ತಗೊಂಡಿದ್ದ ಅವರು ನಿಲ್ಲಲಾರದೆ ಜಗುಲಿಯ ಮೇಲೆ ಹೋಗಿ ಕೂತರು, ಮುಲುಗುಟ್ಟುತ್ತ.

"ಎಲ್ಲಿ, ನಿಮ್ಮ ಧರ್ಮಪತ್ನಿ?" ಹುಬ್ಬೇರಿಸಿ ಕೇಳಿದ ಅವರ ಮುಂದೆ ನಿಂತು. ಮುಂಬಾಗಿಲಿನಿಂದ ಒಳಗಿನವರೆಗೂ ನೋಟ ಹರಿಸಿದ ಅಪ್ಪಯ್ಯ ಶಾಸ್ತ್ರಿಗಳು "ಕೂತ್ಕೋ ಬಾ...ಏನು ವಿಷ್ಯ ?" ಎಂದರು ಕ್ಷೀಣ ದನಿಯಲ್ಲಿ.

"ನಾನು ಕೂತುಕೊಳ್ಳೋಕಲ್ಲ ಬಂದಿರೋದು !" ಅವನ ಕಂಠದಲ್ಲಿ ಕಠಿಣತೆ ವಿಜೃಂಬಿಸಿತು.

ಅಪ್ಪಯ್ಯ ಶಾಸ್ತ್ರಿಗಳು ಬೆಚ್ಚಿ ಬಿದ್ದರು. ಏನೋ ಅನಾಹುತವಾಗಲಿದೆ ಯೆಂದು, ಅವರ ಆರನೆ ಇಂದ್ರಿಯ ಒತ್ತಿ ಹೇಳಿತು. ಸಾಗರ್ ತ್ರಿಪುರಸುರ ಸಂಹಾರಕ್ಕೆ ಹೋದ ರುದ್ರತಾಂಡವನಂತೆ ಕಂಡ.

ಮೆಲ್ಲಗೆ ಮೇಲಕ್ಕೆದ್ದವರು ಅವನ ಕೈ ಹಿಡಿದು ಬಲವಂತದಿಂದ ಕೂಡಿಸಿದರು. ಅವರ ಹೊಟ್ಟೆಯಲ್ಲಿ ಸಲಾಕಿ ಹಾಕಿ ತಿರುವಿದಂಥ ನೋವು.

"ಈಗ್ಹೇಳು, ನನ್ನ ಧರ್ಮಪತ್ನಿಯಿಂದ ಏನಾಗ್ಬೇಕು? ಅವ್ಳು ನನ್ನ ಧರ್ಮಪತ್ನಿಯಲ್ಲ, ಕರ್ಮಕ್ಕೆ ಅಂಟಿದೋಳು" ನರಳಿದರು.

ಷರಟಿನ ಒಳ ಭಾಗದಲ್ಲಿ ಇಟ್ಟುಕೊಂಡಿದ್ದ ನೋಟು ಬುಕ್‌ನ ಅವರ ಮುಂದೆ ಹಾಕಿದ "ಅವ್ಳು ಕರ್ಮದೋಳಲ್ಲ, ರಾಕ್ಷಸಿ. ಒಂದೇ ಏಟಿಗೆ ಕೊಂದು ಬಿಡ್ತೀನಿ" ಗುಟುರು ಹಾಕಿದ.

ಬಗ್ಗಿ ನೋಟು ಪುಸ್ತಕ ಎತ್ತಿಕೊಂಡು ಮೊದಲ ಪುಟ ಓದಿ ಕೊಂಡವರು "ಅಯ್ಯೋ ಇಷ್ಟೇನಾ ! ಅವ್ಳು ಒಳ್ಳೆ ಹುಡ್ಗೀ, ಸಹನಾ ಶೀಲೆ. ಇದ್ಕಿಂತ ಹೆಚ್ಚಿನ ದಾರುಣವಾಗಿ ದಿನಗಳ್ನ ಕಳೀತಾ ಇದ್ದಾಳೆ. ಅದ್ಕೇ ನಾಲ್ಕು ಪಟ್ಟು ನರ್ಕ ಹಿಂಸೆ

ಅನುಭವಿಸ್ತಾ ಇದ್ದೀನಿ. ನನ್ನ ಮಗ್ಳಿಗೆ ಒಳ್ಳೆಯದಾಗೋದಾದರೆ, ಸರೋಜನ ನಾನೇ ಕೊಂದು ಬಿಡ್ತೀನಿ. ಆಮೇಲೆ ಮತ್ತಷ್ಟು ದುಃಖಿ ಆಗ್ತಾಳೆ ನನ್ಮಗ್ಳು" ಅಳತೊಡಗಿದರು.

ಆಮೇಲೆ ಅವರು ಸುಧಾರಿಸಿಕೊಂಡು "ನಂಗೆ ವಿವಾಹವಾಗಿದ್ದು ಗೊತ್ತು. ವಿವಾಹವಾದ ದಿನ ಗೊತ್ತು. ಆದರೆ ವಿವಾಹ ಯಾಕೆ ಆದೇಂಥ ಮಾತ್ರ ಗೊತ್ತಿಲ್ಲ" ಮತ್ತಷ್ಟು ಕಣ್ಣೀರು ಸುರಿಸಿದರು.

'ಶ್ರೀವಳ್ಳಿ ಮತ್ತಷ್ಟು ದುಃಖಿ ಆಗ್ತಾಳೆ' ಆ ವಾಕ್ಯ ಅವನ ಮೇಲೆ ಬಹಳ ಪರಿಣಾಮ ಬೀರಿತು. ಅವಳು ದುಃಖಿ ಆಗಬಾರದು. ಸಾಗರ್ ಮೇಲೆದ್ದ. ನಿರ್ಧಾರಗಳು, ನಿರ್ಣಯಗಳು ಪದೇ ಪದೇ ಬದಲಾಗಲು ಕಾರಣವೇನು?

ಬಹಳ ಪ್ರಯಾಸದಿಂದಲೇ ಸಾಗರ್‌ನ ನಿಲ್ಲಿಸಿಕೊಂಡ ಅಪ್ಪಯ್ಯ ಶಾಸ್ತ್ರಿಗಳು "ವಳ್ಳಿ, ನೀರು ತಗೊಂಡ್ಬಾರಮ್ಮ" ಜಗುಲಿಯ ಮೇಲೆ ಕೂತೇ ಕೂಗಿದರು "ಬಂದ ಜ್ವರಕ್ಕೆ ಮಾತು ನಿಂತು ಹೋಯ್ತು ಅಷ್ಟೇ. ಅದೇ ಕಾರಣ ಅಲ್ಲಾಂತ ನನ್ನ ಅಭಿಪ್ರಾಯ. ಅದ್ನ ಧೈರ್ಯವಾಗಿ ಹೇಳ್ಲಾರೆ. ನನ್ನ ಇಷ್ಟು ಸಹನೆಗೂ ಶ್ರೀವಳ್ಳಿ ಮೃದು ಮತ್ತು ಒಳ್ಳೆಯತನವೇ ಕಾರಣ" ಎಂದು ಕಣ್ಣೊರೆಸಿಕೊಂಡು ನಿಟ್ಟುಸಿರು ದಬ್ಬಿದರು ಶಾಸ್ತ್ರಿಗಳು.

"ಬರೀ ಈ ನಿಟ್ಟುಸಿರು, ಕಣ್ಣೀರಿನಿಂದ ಏನು ಪ್ರಯೋಜನ?" ಅಸಹನೆಯಿಂದ ನುಡಿದ. ಸರೋಜಮ್ಮನಿಗಿಂತ ಶಾಸ್ತ್ರಿಗಳಿಗೆ ನಾಲ್ಕು ತದುಕಿ ಬಿಡಬೇಕೆನಿಸಿತು. ಆ ವಯಸ್ಸೇ ಆವೇಶದಿಂದ ಕೂಡಿದ್ದು.

ಅಷ್ಟರಲ್ಲಿ ನೀರು ಹಿಡಿದು ಬಂದ ಶ್ರೀವಳ್ಳಿ ಕಣ್ಣರಳಿಸಿದಳು. ಕೋಟಿ ನಕ್ಷತ್ರಗಳ ಬೆಳಕು ತೇಲಿದಂತಾಯಿತು. 'ಯಾವಾಗ್ಬಂದ್ರಿ? ಚೆನ್ನಾಗಿದ್ದೀರಾ?' ಕೇಳಿದಳು ಕೈ, ಬಾಯಿ ಸನ್ನೆಯಿಂದಲೇ.

ಅವನ ತಲೆ ತಗ್ಗಿತು ಅಷ್ಟೆ.

ತಂದೆಗೆ ಮಾತ್ರ, ನೀರು ಕೊಟ್ಟ ಅವಳು ಅವನ ಕೈ ತಟ್ಟಿ 'ಒಳಗೆ ಬಂದು ತಿಂಡಿ ತಿನ್ನಿ' ಎಂದವಳು, ಅವನ ಮೌನ ಸಹಿಸದೆ ಕೈ ಹಿಡಿದೇ ಕರೆದೊಯ್ದಳು ಮುಗ್ಧವಾಗಿ.

ಕೂಡಿಸಿ ಹೋದವಳು ಒಂದು ತಟ್ಟೆಯ ತುಂಬ ಕರಿದ ತಿಂಡಿಗಳನ್ನ ತಂದಿತ್ತಳು. 'ಬೇಡವೆಂದು' ತಲೆಯಾಡಿಸಿದ. 'ತುಂಬ ರುಚಿ' ಎಂದು ಅಲ್ಲೇ ಕೂತಳು.

ತಟ್ಟೆಯಿಂದ ನೋಟವೆತ್ತಿ ಅವಳೆಡೆ ಹರಿಸಿದ. ಬೆಳದಿಂಗಳಿನಂಥ ಹುಡುಗಿ

ಧೂಳಿನಿಂದ ಆವೃತ್ತಳಾಗಿದ್ದು ಕಂಡು ತುಂಬ ನೊಂದ. ಅವಳು ತೊಟ್ಟ ಲಂಗ ಅಂಚು ಕೂಡ ಕಿತ್ತುಕೊಂಡು ಹೋಗಿತ್ತು. ಆದರೂ ಆ ಕುಂದಣದ ಗೊಂಬೆ ಕುಂದಿರಲಿಲ್ಲ.

ಒಂದಿಷ್ಟು ತಿಂದು ತಟ್ಟೆಯನ್ನು ಕೆಳಗಿಟ್ಟಾಗ ಪಾವು ಲೋಟದಲ್ಲಿ ಹಾಲು ತಂದಿತ್ತು ಕೊಳಲು ಊದುತ್ತ ನಿಂತ ಕೃಷ್ಣ ಫೋಟೋ ತೋರಿಸಿ, 'ಹಸುವಿನ ಹಾಲೆಂದು' ತಿಳಿಸಲು ಸ್ವಲ್ಪ ಪ್ರಯಾಸವೆ ಪಟ್ಟಳು.

'ಇದೇನಿದು...' ಎಂದು ಮುಖ ಒಂದು ತರಹ ಮಾಡಿದಾಗ ಅವನ ಕೈ ಹಿಡಿದು ಒಳಗೆ ಕರೆದೊಯ್ದು ಸಾಲಾಗಿಟ್ಟ ಬಕೆಟ್‌ಗಳನ್ನು ತೋರಿಸಿದಾಗ ಬೆಚ್ಚಿ ಬಿದ್ದ. ಉಪ್ಪು ಬೆರೆತ ನಿಂಬೆ ಮೆಣಸಿನಕಾಯಿ, ನೆಲ್ಲಿಕಾಯಿಗಳನ್ನ ಸಮವಾಗಿ ಬೆರಸಿದ 'Mixed Pickles' ಅದಕ್ಕೆ ಮೆಣಸಿನ ಪುಡಿಯ ಮಸಾಲೆಯನ್ನ ಬೆರೆಸಬೇಕಷ್ಟೆ. ಮೇಲೊಂದು ಇಂಗು, ಸಾಸುವೆ ವಗ್ಗರಿಸಿದ ಎಣ್ಣೆ ಹಾಕಿದರೆ ತಾಜಾ ಉಪ್ಪಿನ ಕಾಯಿ ರೆಡಿಯಾದಂತೆ.

ಎಲ್ಲಾ ಅವನಿಗೆ ಅರ್ಥವಾಗುವಂತೆ ತಿಳಿಸಿ, ಮತ್ತೆ ದೇವರ ಮನೆಯ ಬಳಿಗೆ ಕರೆದೊಯ್ದಳು. ವೇಣುವನ್ನ ಹಿಡಿದ ಮುದ್ದಾದ ಕೃಷ್ಣನ ಕಂಚಿನ ಪ್ರತಿಮೆಯ ಮುಂದೆ ದೀಪಗಳು ಉರಿಯುತ್ತಿದ್ದವು. ಕಣ್ಮುಚ್ಚಿ ಕೈ ಮುಗಿದು ತನಗೆ ತುಂಬ ಭಕ್ತಿಯಿಂದ ತೋರ್ಪಡಿಸಿದ ಕನ್ಯೆಯನ್ನ ಯಾಕೆ ಸಲಹಲಿಲ್ಲ ಎಂದು ಪ್ರಶ್ನಿಸಬೇಕೆನಿಸಿತು. ಆತ ಕೂಡ ಯಾವುದಾದರೂ ಸಿಕ್ಕುನಲ್ಲಿ ಸಿಕ್ಕಿ ಹಾಕಿಕೊಂಡು ಈ ಭಕ್ತಳನ್ನ ಮರೆತು ಬಿಟ್ಟನೇನೋ !

ಮಾತು ಬರದ ಹುಡುಗಿ ತೋರಿದ ಆತ್ಮೀಯತೆಗೆ ದಂಗಾದ. ಅವನು ಹೊರಟಾಗ ಒಂದಿಷ್ಟು ತಿಂಡಿಯನ್ನು ಗೌರಿಗೆ ಕೊಡುವಂತೆ ತಂದಿತ್ತಾಗ, 'ಆಗೋಲ್ಲ' ಎನ್ನುವಂತೆ ತಲೆಯಾಡಿಸಿದಾಗ, ಕೈ ಹಿಡಿದು ಅದರಲ್ಲಿಟ್ಟು ಮುಖವನ್ನ ಒಂದು ತರಹ ಮಾಡಿದಳು. ಅವಳ ಕಣ್ಣುಗಳಲ್ಲಿ ನಕ್ಷತ್ರಗಳ ಪ್ರಖರತೆ ಇತ್ತು.

ತಮ್ಮ ಹೊಟ್ಟೆ ನೋವಿನಲ್ಲು ಕೂಡ ಅಪ್ಪಯ್ಯ ಶಾಸ್ತ್ರಿಗಳು ಅಷ್ಟು ದೂರ ಅವನೊಂದಿಗೆ ಬಂದರು. ಮರೆಯಾಗುವವರೆಗೂ ಬಾಗಿಲಲ್ಲೇ ನಿಂತಿದ್ದ ಹುಡುಗಿ ಅವನನ್ನ ಕಂಗೆಡಿಸಿದಳು. 'ಅವಳಿಗೆಂದು ಮುಕ್ತಿ ?'

"ಈ ಸರೋಜಳ ಹಿಡಿತದಿಂದ ಅವ್ವ ಪಾರಾಗಬೇಕಾದ್ರೆ ಶ್ರೀವಳ್ಳಿಯ ಕುತ್ತಿಗೆಗೆ ಮಾಂಗಲ್ಯ ಬೀಳಬೇಕು" ಅಪ್ಪಯ್ಯ ಶಾಸ್ತ್ರಿಗಳು ಜೊತೆಗೆ ಇನ್ನೊಂದು ಮಾತನ್ನ ಕೂಡ ಹೇಳಿದರು. "ಅವ್ವ ಚಿಕ್ಕಮ್ಮನಿಗೆ ಶ್ರೀವಳ್ಳಿ ತುಂಬ ವಿಧೇಯಳು. ಆಕೆ ಒಂದು ಗೆರೆ ಹಾಕಿದ್ರೂ ದಾಟೋಲ್ಲ. ನಾನು ಸರೋಜಗೆ ಗೊತ್ತಿಲ್ಲದಂತೆ

ಒಂದು ಸಂಬಂಧ ಕುದುರಿಸಿದ್ದೆ. ಅವ್ರು ಬೇಡಾಂದ್ರು, ಇವ್ರು ತಲೆಯಾಡಿಸಿ ಬಿಟ್ಲು. ಇಂಥ ಸ್ಥಿತಿ. ನಾನೇನು ಮಾಡ್ಲಿ ?"

ಅವನಿಗೆ ಎಷ್ಟು ಅರ್ಥವಾಯಿತೋ ಬಿಟ್ಟಿತೋ ! ಮೌನವಹಿಸಿದ. ಅದು ಆ ಸಮಯದಲ್ಲಿ ಬಹಳ ಸೂಕ್ತವಾಗಿ ಕಂಡಿತು.

ಬಸ್ಸು ಹತ್ತಿದವನು ಯಾರೋ ಇಳಿದುಕೊಂಡಾಗ ತಾನು ಅವರೊಂದಿಗೆ ಇಳಿದ ಸಾಗರ್, ಒಂದಷ್ಟು ದೂರ ಹೋಗಿ ಒಂದು ಮರದ ಕೆಳಗ ಕೂತುಬಿಟ್ಟ. ವಿಕೃತವೆನಿಸಿತು ಎಲ್ಲಾ.

ಎಷ್ಟೇ ನೆನಪಿಸಿಕೊಂಡರು ಅವನಪ್ಪ, ಅಮ್ಮ ಒಮ್ಮೆ ಕೂಡ ಸಂತೋಷ ವಾಗಿದ್ದನ್ನ ನೋಡಿರಲಿಲ್ಲ. ಸಲಗಗಳಂತೆ ಮಾತಿನ ಮೂಲಕ ಗುದ್ದಾಡುತ್ತಿದ್ದರು. ಈ ಕ್ಷೋಭೆ ತಡೆಯಲಾರದೆ ಜೇಬಿನಲ್ಲಿದ್ದ ಬಾಟಲುನ ಪೂರ್ತಿ ಖಾಲಿ ಮಾಡಿದ.

ಆ ಸಮಯದಲ್ಲಿಯೇ ಮೃಣಾಲಿನಿಯನ್ನೊತ್ತ ಕಾರು ಶ್ರೀವಳ್ಳಿ ಪುರಕ್ಕೆ ಹೋಗಿತ್ತು. ಗಾಳಿಯಾದರೂ ಆ ತಾಯಿಗೆ ಪಿಸುಮಾತಿನಲ್ಲಾದರೂ ಮಗನ ಇರುವಿಕೆ ಬಗ್ಗೆ ಉಸುರಲಾರದೆ ಹೋಯಿತೇ.

ದ್ರವದ ಮತ್ತು ಒಂದಿಷ್ಟು ಕಡಿಮೆಯಾಗುವ ವೇಳೆಗೆ ಕತ್ತಲೆ ತನ್ನ ಹಸ್ತಗಳನ್ನ ಪೂರ್ತಿ ಚಾಚಿ ಬೆಳಕನ್ನ ಪೂರ್ತಿ ನುಂಗಿಹಾಕಿತ್ತು. ಖಾಲಿಯಾಗಿ ಬಂದ ಬಸ್ಸನ್ನ ಹತ್ತಿಕೊಂಡು ಬಂದು ಇಳಿದವನು ಅರ್ಧ ರಾತ್ರಿಯವರೆಗೂ ಹೊಳೆಯ ದಂಡೆಯಲ್ಲಿ ಬಿದ್ದುಕೊಂಡಿದ್ದ. ಅಪ್ಪಯ್ಯಶಾಸ್ತ್ರಿಗಳು, ಬಿಳಿಗಿರಿ ಇನ್ನಿಬ್ಬರ ಜೊತೆ ಟಾರ್ಚುಗಳನ್ನ ಹಿಡಿದುಕೊಂಡು ಬಂದು ಪ್ರಯಾಸದಿಂದ ಮನೆಯನ್ನ ಸೇರಿಸಿ ಹಿಂದಿರುಗಿದಾಗ, ರಾತ್ರಿ ಎರಡಾಗಿತ್ತು.

ಸದ್ದಿಲ್ಲದೆ ಒಂದು ಕಡೆ ಕೂತ ಗಂಡನನ್ನ ನೋಡಿ ದಿಗಿಲುಗೊಂಡರು ತಿರುಮಲಾಂಬ.

"ಏನಾಯ್ತು, ಸಿಕ್ಕಿದ್ನಾ ಸಾಗರ್ ?"

"ದೇವರ ದಯೆ ಅಷ್ಟೆ. ಪೂರ್ತಿ ಕುಡಿದಿದ್ದಾನೆ. ಇದೇನು ಅಭ್ಯಾಸನಾ? ಇಲ್ಲಾ, ಮನದ ಕ್ಷೋಭೆ, ಸಂಕಟ ಮರೆಯಲು ಕುಡೀತಾನಾ ? ಯಾವುದಾದ್ರೂ ಹುಡ್ಗೀನಾ ಪ್ರೀತಿಸಿ, ಹಿರಿಯರ ನಿರಾಕರಣೆಯಿಂದ ಮನೆ ಬಿಟ್ಟು ಬಂದಿದ್ದಾನಾ?" ಅರ್ಥವಾಗದವರಂತೆ ನುಡಿದರು.

"ಅವನೇನು ಬಾಯಿ ಬಿಟ್ಟು ಹೇಳೋಲ್ಲ. ಒಂದ್ಸಲ ಕಲ್ಲೇಶಿಗೆ ಅಂದನಂತೆ ಅವ್ನು ಮೊದಲ ಬಾಟಲೆತ್ತಿದಾಗ ಹನ್ನೆರಡರ ವಯಸ್ಸಂತೆ" ತಿರುಮಲಾಂಬ

ಒಂದು ಭಯಂಕರ ಸತ್ಯವನ್ನು ಗಂಡನ ಮುಂದೆ ಬಿಚ್ಚಿಟ್ಟರು.

ಇದು ಪ್ರೇಮದ ವಿಷಯವಲ್ಲವೆಂದು ಅವರಿಗೆ ನಿಖರವಾಯಿತು. ಅವರು ಅಂದುಕೊಂಡಂತೆ ಅವನ ಬೆಳವಣಿಗೆಯಲ್ಲೇ ಏನೋ ಲೋಪವಿದೆ.

"ಅವನಮ್ಮ ಬಂದಿರೋದು ತಿಳಿಸಿದ್ರಾ ?" ಹೆಂಡತಿಯ ಪ್ರಶ್ನೆಗೆ ಇಲ್ಲವೆಂದು ತಲೆಯಾಡಿಸಿದರು "ಅವ್ನ ತಿಳ್ಕೊಳ್ಳೋ ಸ್ಥಿತಿಯಲ್ಲಿ ಇರ್ಲಿಲ್ಲ. ಮಗನಿಗಾಗಿ ಆಕೆ ಇಲ್ಲಿ ಉಳ್ಕೋಬೇಕಿತ್ತು. ಹೆತ್ತ ಮಗನಿಗಾಗಿ ಒಂದಿಷ್ಟು ಅನುಸರಿಸದಿದ್ದರೇ ಹೇಗೆ?" ಬಿಳಿಗಿರಿಯವರು ಸತ್ಯವನ್ನೆ ನುಡಿದರು.

ಇಡೀ ರಾತ್ರಿ ನಿದ್ರಿಸದೆ ಗಂಡ, ಹೆಂಡತಿ ಅವರ ಕುಟುಂಬದ ಬಗ್ಗೆ ಮಾತಾಡಿದರು.

"ನಾವು ಶ್ರೀವಳ್ಳಿಯಮ್ಮನಿಗೆ ಪೂಜೆ ಸಲ್ಲಿಸೋಕೆ, ಹೋಗಿದಲ್ಲಿ ಆ ದಂಡಿನಲ್ಲಿದ್ದ ಒಬ್ಬ ಯುವಕ ಹೋಗಿ ವಿಷ್ಯನ ಮುಟ್ಸಿದ್ದಾನೆ. ಅವ್ನ ತಂದೆ...ಸಾಗರ್‌ನ ತಂದೆಯ ಫ್ಯಾಕ್ಟರಿಯಲ್ಲಿ ಅಕೌಂಟೆಂಟಾಗಿ ಕೆಲ್ಸ ಮಾಡ್ತಾನಂತೆ. ಅಂದೇ ಒಂದಿಷ್ಟು ತಿಳೀತು. ನಮ್ಗೇ ಅವ್ನ ಬಗ್ಗೆ ತಿಳಿದಿರೋದು ಸಾಗರ್‌ಗೆ ಇಷ್ಟವಿಲ್ಲಾಂತ ಸುಮ್ಮನಿದ್ದೆ."

ಬಹಳ ಸಂಕಟದಿಂದ ಒದ್ದಾಡಿದರು ತಿರುಮಲಾಂಬ. ಮೃಣಾಲಿನಿ ಕೂಡ ನಿದ್ರಿಸಿರಲಾರರು. ಏಕೈಕ ಸಂತಾನ, ತೀರಾ ವಿದ್ಯಾವಂತ ವಾತಾವರಣ, ಸಾಕಷ್ಟು ಹಣ ಕಾಸು.

"ಹೋಗ್ಲಿ ಬಿಡಿ, ಕ್ಷೇಮವಾಗಿ ಅವ್ನು ಅಪ್ಪ, ಅಮ್ಮನ ಸೇರ್‌ಕೊಂಡರೆ ಸಾಕು. ನಮ್ಮ ಶೀನಿ ಎಂದಾದ್ರೂ ಬರ್ತಾನೆ ಅಂತೀರಾ? ಇವರಾದ್ರೂ ಪುಣ್ಯವಂತ್ರು. ಮಗ ಇರೋ ಜಾಗ ತಿಳೀತು. ನಮ್ಗೇ ಅದ್ನ ತಿಳಿಸೋರು ಯಾರಿದ್ದಾರೆ?" ಇಂದು ತಿರುಮಲಾಂಬ ದನಿಯಲ್ಲಿ ಬರೀ ನಿರಾಶೆಯಲ್ಲ, ಹತಾಶೆ ಇತ್ತು.

ಬಿಳಿಗಿರಿಯವರ ಎದೆ ಭಾರವಾಯಿತು. ಹೆಂಡತಿಯ ಹತ್ತಿರಕ್ಕೆ ಸರಿದು ಆಕೆಯ ತಲೆ ಸವರಿದ್ದೇ ತಡ ಗಂಡನ ಎದೆಯಲ್ಲಿ ತಲೆ ಇಟ್ಟು ಭೋರೆಂದು ಅಳಲು ಷುರು ಮಾಡಿದರು.

"ಅಳ್ಬೇಡ, ಒಂದಲ್ಲ ಒಂದು ದಿನ ಬರ್ತಾನೆ ಅನ್ನೋ ನಂಬ್ಕೆ ನಂಗಿದೆ. ನಿರಾಶೆ ಒಳ್ಳೇದಲ್ಲ. ಈಗ ಅಂಥ ಒಂಟಿತನ ನಮ್ಮನ್ನೇನು ಕಾಡ್ತಾ ಇಲ್ಲ. ಸಾಗರ್ ಬಂದ್ಮೇಲೆ ಕಲ್ಲೇಶಿ - ಗೌರಿ ಮೂರ್ಹೊತ್ತು ಇಲ್ಲೇ ಇರ್ತಾರೆ. ನಮ್ಗೂ ಎಷ್ಟೋ ಸಹಾಯ, ಅವರಿಬ್ರನ್ನ ನಾವು ನಮ್ಮಲ್ಲೇ ಯಾಕೆ ಇರಿಸ್ಕೋ ಬಾರ್ದು.

ಹೊಸ ಜವಾಬ್ದಾರಿ ಇನ್ನಷ್ಟು ನಮ್ಮ ಆಯಸ್ಸು ಬೆಳ್ಸೋದರ ಜೊತೆಗೆ, ಬದ್ಕಿನಲ್ಲಿ ಉತ್ಸಾಹ ಮೂಡುತ್ತೆ. ಸಾಗರ್ ನಮ್ಗಿಂತ ತೀರಾ ಚಿಕ್ಕೋನು, ಅವಿಧೇಯತೆ ಇರ್ಬೋದು, ಕುಡಿಬಹ್ದು, ಮನೆ ಬಿಟ್ಟು ಬಂದಿರ್ಬಹ್ದು. ಅವ್ನಿಗೆ ಹೃದಯವಿದೆ. ಬಹಳ ವಿವೇಕಿ." ಸಾಗರ್ ಬಗ್ಗೆ ಮೆಚ್ಚಿಗೆಯಾಡಿದರು.

ಅಂತು ಇಂತು ಗಂಡ ಹೆಂಡತಿ ಬೆಳಗಿನವರೆಗೂ ಮಾತಾಡಿ ಗೌರಿ, ಕಲ್ಲೇಶಿಯನ್ನ ತಮ್ಮೊಂದಿಗೆ ಇರಿಸಿಕೊಳ್ಳಲು ತೀರ್ಮಾನಿಸಿದರು. ಸಾಗರ್‌ನ ಅವನಮ್ಮ ಕರೆದೊಯ್ಯಲಿ ಎನ್ನುವ ಆಸೆ ಮರುದಿನ ಫಲಿಸಲಿಲ್ಲ.

ಕುಂದಣ ತಲುಪಿದ ನಂತರವೇ ಕಾರು ನಿಂತಿದ್ದು. ಡ್ರೈವರ್ ಪೂರ್ತಿ ಬೆವತು ಬಿಟ್ಟಿದ್ದ. ದಾರಿಯಲ್ಲಿ ಎರಡು ಸಲ ' Stop it stop it' ಎಂದು ಮೃಣಾಲಿನಿ ಅಂದಿದ್ದು ಅವನಿಗೆ ಕೇಳಿಸಿರಲಿಲ್ಲ.

"ಭೂತ ಏನಾದ್ರೂ ಬಂದು ನಿನ್ನಲ್ಲಿ ಸೇರ್ಕೊಂಡಿತ್ತಾ?" ಆಕೆ ಭುಸುಗುಟ್ಟಿದರು. ಅವನು ಮುಖದ ಬೆವರನ್ನೊರೆಸಿಕೊಂಡು "ಆಕಾಲ ಮರಣಕ್ಕೆ ತುತ್ತಾದವ್ರು ದೆವ್ವನೋ, ಭೂತನೋ ಆಗ್ತಾರಂತೆ. ನನ್ನ ಸ್ಥಿತಿ ಕೂಡ ಅದೇ ಆಗ್ತಾ ಇತ್ತು" ಕಾರಿನಿಂದ ಇಳಿದು ಗಾಳಿಯಲ್ಲಿ ಹೋಗಿ ನಿಂತು ಬಿಟ್ಟ. ಅವನ ಇಡೀ ಮೈ ಬೆವರಿನಿಂದ ತೊಯ್ದು ಹೋಗಿತ್ತು.

ಅಂಗಡಿಗೆ ಹೊರಟ ಸರೋಜಮ್ಮ ಡ್ರೈವರ್‌ನ ನೋಡಿ ಅತ್ತ ಬಂದರು. "ಮನೆ ಖಾಲಿ ಮಾಡಿದ್ರಾ?" ಈಕೆಯ ಪ್ರಶ್ನೆಗೆ ಪೆಚ್ಚು ಮುಖ ಹಾಕಿದ.

"ಯಾಕಯ್ಯ, ಏನಾಗಿದೆ...ನಿಂಗೆ? ಶ್ರೀವಳ್ಳಿ ಪುರಕ್ಕೆ ಹೋಗಿದ್ಯಾ? ಎಲ್ಲಿ ನಿನ್ನ ಯಜಮಾನಿ? ಸಾಗರ್ ಹೊರಟು ಹೋಗ್ತಾನೇಂತ ಕೇಳ್ದೆ. ತಕ್ಷಣಕ್ಕೆ ಅಡ್ವಾನ್ಸ್ ವಾಪಸ್ಸು ಸಿಗೋಲ್ಲ. ಅಡ್ರಸ್ ಕೊಟ್ಹೋದ್ರೆ ಕಳ್ಸಿ ಕೊಡ್ತೀನಿ."

ಅವನು ಕಾರಿನತ್ತ ಕೈ ತೋರಿಸಿದ.

"ನೀನೇ ಹೇಳ್ಬಿಡು ! ಲಕ್ಷಣವಾಗಿ ತಾನು ಇಳ್ದು ಬಂದಿದ್ರೆ ದೊಡ್ಡಸ್ಥಿಕೆ ಕಡ್ಮೆಯಾಗಿ ಹೋಗ್ತಾ ಇತ್ತಾ? ಇದ್ದ ಕಡೆ ಇಟ್ಕಳ್ಳಿ...ಜಂಬ. ಬೇರೆ ಕಡೆ ಬಂದಾಗ ಒಂದಿಷ್ಟು ತಗ್ಗಿ ಬಗ್ಗಿ ಇರೋಕೆ, ಆಯಮ್ಮನಿಗೆ ಹೇಳು" ಎಂದ ಆಕೆ ಕಾರುನಲ್ಲಿ ಕೂತ ಮೃಣಾಲಿನಿಯತ್ತ ನೋಟ ಕೂಡ ಹರಿಸದೆ ತಮ್ಮ ಪಾಡಿಗೆ ತಾವು ಹೋದರು.

ಜೀವನದಲ್ಲಿ ಮೊದಲ ಸಲ ಇಷ್ಟೊಂದು ಅವಮಾನಿತಳಾಗಿದ್ದಳು, ಡ್ರೈವರ್ ಮುಂದೆ. ಇದಕ್ಕೆಲ್ಲ ಕಾರಣರಾದ ತಂದೆ, ಮಗನ ಮೇಲೆ ಭುಸು ಗುಟ್ಟಿದರು ಒಳಗೊಳಗೆ.

"ನಡೀ...ಹೋಗೋಣ..." ಎಂದರು ಸ್ವಲ್ಪ ಜೋರಾಗಿಯೇ. ಅವರಲ್ಲಿನ

'ದಮ್' ಕಡಿಮೆಯಾಗಿದೆಯೆನಿಸಿತು ಡ್ರೈವರ್‌ಗೆ. ತಕ್ಷಣ ಹತ್ತಿ ಕೂತು "ಎಲ್ಲಿಗೆ.....ಮೇಡಮ್ ?" ಎಂದನು.

ಮತ್ತೆ ಶ್ರೀವಳ್ಳಿಪುರಕ್ಕೆ ಹೋಗಬೇಕೆನಿಸಲಿಲ್ಲ.

"ಪೊಲೀಸ್ ಸಪೋರ್ಟು ತಗಂಡ್....ಹೋಗ್ಬಹುದ್ದು" ಡ್ರೈವರ್ ಒಂದು ಸಲಹೆ ಕೊಟ್ಟ. ಪರೋಕ್ಷವಾಗಿ ಪೊಲೀಸರಿಲ್ಲದೆ ತಾನು ಹೋಗಲಾರನೆಂದು ಹೇಳಿದಂತಾಯಿತು.

ಇಂಥ ನಿಸ್ಸಾಯಕತೆ ಎಂದು ಅನುಭವಿಸಿರಲಿಲ್ಲ ಮೃಣಾಲಿನಿ. ಯಾರ ಎದೆಯ ಮೇಲಾದರೂ ತಲೆ ಇಟ್ಟು ಅಳಬೇಕೆನಿಸಿತು. ಅದಕ್ಕೆಂದು ಸೀತಾರಾಮ್ ಲಾಯಕ್ಕಾಗಿರಲಿಲ್ಲ. ತನ್ನ ಪೂರ್ತಿ ವ್ಯಕ್ತಿತ್ವವನ್ನೆ ಸಣ್ಣ ಕ್ರಿಮಿಯನ್ನ ಕಾಲಿನಿಂದ ಒಸಕಿದಂತೆ ಒಸಕಿಬಿಟ್ಟ ಎನ್ನುವ ವಿಚಾರವನ್ನ ಮಿದುಳಿನಲ್ಲಿ ಹೊಕ್ಕ ಕೂಡಲೇ ಗಟ್ಟಿಯಾಗಿ ಬಿಟ್ಟರು ಮೃಣಾಲಿನಿ.

ಕಾರು ಬೆಂಗಳೂರು ಹಾದಿ ಹಿಡಿಯಿತು.

* * *

ಹರಿದ ಷರಟು, ಕೆನ್ನೆಯ ಮೇಲೆ ಮೂಡಿದ ಬೆರಳಿನ ಗುರುತುಗಳನ್ನ ಕಂಡ ಜನವಂತು "ಯಾಪಾಟಿ, ಈ ಜನ ಇವ್ರು ! ಇಲ್ಲಿಗ್ಬಂದು...ಕಲ್ಲೇಶಿಯ ಮೇಲೆ ಕೈ ಎತ್ತೋದಂದ್ರೇನು? ಕಾರೆಲ್ಲ ಪುಡಿ ಪುಡಿ ಮಾಡ್ಬಿಡ್ಬೇಕಿತ್ತು" ಒಬ್ಬರ ಆಕ್ರೋಶಕ್ಕೆ ಮತ್ತೊಬ್ಬರು "ಡ್ರೈವರ್‌ನ ಕೆಳ್ಗೆ ಎಳ್ದು ಕಟ್ಟಿಹಾಕಿ ಬಿಡ್ಬೇಕಿತ್ತು" ಇನ್ನೊಬ್ಬರ ಬಡಬಡಿಕೆ. ಅಂತು ಕಲ್ಲೇಶಿಗೆ ಜನರ ಸಹಾನುಭೂತಿಯ ಜೊತೆ ಪೂತಿ ಸಪೋರ್ಟು.

"ಹೆಂಗೂ ಈ ಮನುಷ್ಯ ಇದ್ದಾನಲ್ಲ, ಅವ್ನ್ಗೇ ಕೇಳಿ ಬಿಡೋಣ...ನಡೀರಿ" ಇನ್ನೊಬ್ಬರ ಜೋರು. ಅವರನ್ನೆಲ್ಲ ಸಮಾಧಾನಮಾಡಿ ಕಳಿಸಿದ್ದು ಬಿಳಿಗಿರಿಯೇ.

ಕಾರು ಹಿಂದಕ್ಕೆ ಬರಬಹುದೆಂದು ಅರ್ಧ ಗಂಟೆ ಕಾದು, ಹಿಂದಿರುಗಿ ಮನೆಗೆ ಬಂದ ದಂಪತಿಗಳು ಒಂದೆಡೆ ಕೂತರು.

"ಜನರ ಕೂಗಾಟಕ್ಕೆ ಬೆದರಿ ಕಾರು ತಗಂಡ್ ಹೋದ್ನಾ ಡ್ರೈವರ್?" ತಿರುಮಲಾಂಬ ಅಂದಾಗ ಬೇಸರದಿಂದ ಬಿಳಿಗಿರಿ "ಹಣವಿದ್ದವ್ರ ಲೆಕ್ಕಾಚಾರಗಳೇ ಬೇರೆ ಆಗಿರುತ್ತೇನೋ, ಮಗ ಇಲ್ಲಿದ್ದಾನಲ್ಲ, ಮತ್ತೆ ಬರ್ತಾರೆ ಬಿಡು."

ಕಲ್ಲೇಶಿ ಮೂಲೆಯಲ್ಲಿ ಕೂತು ಇನ್ನ ಅಳುತ್ತಿದ್ದ. ಡ್ರೈವರ್ ಕೈಯೊಳಗಿನ ಹೊಡೆತಗಳು, ಹಣ್ಣುಗಾಯಿ ಮಾಡಿತ್ತು ಅವನ ಶರೀರವನ್ನ. ರಾತ್ರಿ ಸೈಕಲ್‌ನಿಂದ ಬೇರೆ ಬಿದ್ದಿದ್ದು.

ತಿರುಮಲಾಂಬ ಮುಲಾಮು ಹಿಡಿದು ಬಂದು ಅವನ ಬಳಿ ಕೂತು ಮಂಡಿ, ತರಚಿದ ಕೈಗಳಿಗೆಲ್ಲ ಹಚ್ಚಿದರು. ಈಗ ಅವರ ಮನ ವಿಶಾಲವಾಗಿತ್ತು. ಅಲ್ಲಿ ಪ್ರಖರವಾದ ತಾಯ್ತನದ ಬೆಳಕು. ಆ ಬೆಳಕು ಜಗತ್ತನ್ನೇ ಮತ್ತಷ್ಟು ಸುಂದರವಾಗಿರಿಸಿತ್ತು. ನೋಡುವ ದೃಷ್ಟಿಯನ್ನೇ ಬದಲಾಯಿಸಿತ್ತು.

"ಒಂದಿಷ್ಟು ಕೈ ತೊಳ್ಕೊಂಡ್ಬಾ" ಅವನನ್ನ ಕಳಿಸಿದರು.

ಅಷ್ಟರಲ್ಲಿ ಬಂದ ಗೌರಿ ಕೂಡ ಅಲ್ಲೇ ಕೂತಳು ಸಪ್ಪಗೆ. ಕಲ್ಲೇಶಿಗೆ ಹೊಡೆದವರು ಮೃಣಾಲಿನಿ ಕಾರಿನ ಡ್ರೈವರ್. ಅಂದರೆ ಸಾಗರ್‌ನ ಸಂಬಂಧಿಸಿದವರು - ತಮ್ಮನಿಗೆ ಬಿದ್ದ ಪೆಟ್ಟುಗಳನ್ನ ಈ ಕಾರಣದಿಂದ ಕ್ಷಮಿಸಿ ಬಿಡಬಲ್ಲ ಒಳ್ಳೆಯ ಮನಸ್ಸಿತ್ತು.

"ಗೌರಿ, ಸಾಗರ್‌ಗೆ ಒಂದಿಷ್ಟು ಏನಾದ್ರೂ ಕೊಟ್ಬಾ. ನೆನ್ನೆ ಇಡೀ ದಿನ ಅವನ್ನ ನೋಡಿಲ್ಲ. ಏನು ತಿಂದನೋ, ಇಲ್ವೋ" ಎಂದರು. ಗೌರಿಯ ಬಗ್ಗೆ ಅವನಿಗೆ ಅಪಾರವಾದ ಮರುಕ. ಅದರಿಂದ ಬೈಯಲಾರನೆಂಬ ನಂಬಿಕೆ.

ಬಹಳ ಸಂತೋಷದಿಂದ ಮೇಲೆದ್ದಳು.

"ಕೊಟ್ಬರ್ತೀನಿ...." ಕಷ್ಟಪಟ್ಟು ಒಂದೇ ಸಲ ಹೇಳಿ ಬಿಕ್ಕಿದಾಗ ತಿರುಮಲಾಂಬ ಮುಖದಲ್ಲಿ ಅಚ್ಚರಿ "ಇನ್ನೊಂದ್ಸಲ....ಹೇಳು" ಆಕೆ ಅವಳ ನಿಜವಾದ ಹಿತೈಷಿ. ಮೂಕಳಂತಿರುವ ಬದಲು ಅಷ್ಟಿಷ್ಟು ಮಾತಾಡುವುದು ಒಳ್ಳೆಯದಾಗಿ ಕಂಡಿತ್ತು. ಈ ಸಲ ಅವಳ ಕಣ್ಣಲ್ಲಿ ನೀರು ತುಂಬಿಕೊಂಡಿತು "ಕೋ...." ಅಷ್ಟಕ್ಕೆ ನಿಂತಿತು ಅವಳ ದನಿ.

"ಪರ್ವಾಗಿಲ್ಲ ಬಿಡು. ಅಂತು ಮಾತಾಡೋಕೆ ಪ್ರಯತ್ನ ಮಾಡು" ಉತ್ಸಾಹ ತುಂಬಿ ಎದ್ದು ಹೋದರು.

ಅಂತು ತಿರುಮಲಾಂಬ ತುಂಬಿಕೊಟ್ಟ ಬಟ್ಟಲುಗಳನ್ನ ಒಯ್ದಾಗ, ಸಾಗರ್ ನೆಲದ ಮೇಲೆ ಅಂಗಾತನಾಗಿ ಮಲಗಿದ. ಆಜಾನುಬಾಹು ದೇಹ. ಬೆಳೆದ ಗಡ್ಡ, ಮೀಸೆಗಳು ಕೂಡ ಅವನ ಮುಖವನ್ನ ಕುರೂಪಗೊಳಿಸಿರಲಿಲ್ಲ.

"ಊ...ಟ...ತಂ...ದಿ...ದ್ದೀನಿ" ಕೊನೆಯ ಎರಡು ಅಕ್ಷರಗಳನ್ನ ಒಟ್ಟಿಗೆ ಗೌರಿ ಹೇಳಿದಾಗ ಎದ್ದು ಕೂತ. ಅವನಿಗೆ ನಿಜವಾಗಿಯೂ ಸಂತೋಷವಾಗಿತ್ತು. "ಗುಡ್, ಕಲ್ಲೇಶಿ ಎಲ್ಲಿ ?"

ತೊದಲಿದರೂ ಅಭಿನಯಿಸದೆ ಹೇಳಿದಾಗ ಅವಳನ್ನೆತ್ತಿ ಮೂರು ಸುತ್ತು ತಿರುಗಿಸಿ ಇಳಿಸಿದ. ನಿಶೆಯೆಲ್ಲ ಇಳಿದಂತಾಯಿತು.

"ಆಮೇಲೆ ಮಾಡ್ತೀನಿ. ನೀನ್ಹೋಗಿ ಕಲ್ಲೇಶಿನ ಕಳ್ಸು."

ತನ್ನ ಬ್ಯಾಗು ಎತ್ತಿಕೊಂಡು ಕೆಳಗೆ ಬಂದವನು ಹೊಳೆಗೆ ಹೋದ. ಮೃಣಾಲಿನಿ ಬಂದು ಹೋಗಿ ಅವನ ಮೇಲೆ ದಟ್ಟವಾದ ಪರಿಣಾಮವೇನು ಮೂಡಿಸಿರಲಿಲ್ಲ.

ಸಾಲಾಗಿ ತುಂಬಿಕೊಂಡು ಕೂತ ಉಪ್ಪಿನಕಾಯಿ ಬಕೆಟ್‌ಗಳ ಸಾಲಿನಲ್ಲಿ ಮೂಕಳಾಗಿ ನಿಂತ ಶ್ರೀವಳ್ಳಿ ಮಾತ್ರ ಕಾಣಿಸುತ್ತಿದ್ದಳು. ಆ ಮುಗ್ಧ ಹುಡುಗಿಯ ಬದುಕಿನ ಚಿತ್ರ ಬದಲಾಗಬೇಕು. ಹೇಗೆ ?

ಒಂದು ಗಂಟೆ ಈಜಾಡಿ ಬಟ್ಟೆ ತೊಟ್ಟು ಬಂದಿದ್ದು ಬಿಳಿಗಿರಿಯವರ ಮನೆಗೆ. ಆಕೆಗೆ ಆಶ್ಚರ್ಯವೇ ? ಹಾಗೆಲ್ಲ ಬರುವ ಪೈಕಿಯಲ್ಲ ಸಾಗರ್ ಎಂದು ಆಕೆಗೆ ಗೊತ್ತು.

ಬಿಳಿಗಿರಿಯವರ ಬಳಿ ಕೂತರು.

"ಅಷ್ಟೆಲ್ಲ ಶ್ರೀವಳ್ಳಿಗೆ ಕಷ್ಟ ಕೊಡೋ ಸರೋಜಮ್ಮನ ಮೇಲೆ ಯಾಕೆ ಪೊಲೀಸ್‌ಗೆ ಕಂಪ್ಲೇಂಟ್ ಕೊಡ್ಬಾರ್ದು?" ಎಂದ ಉದ್ವಿಗ್ನತೆಯಿಂದ.

ಪ್ರಯೋಜನವಿಲ್ಲವೆನ್ನುವಂತೆ ಬಿಳಿಗಿರಿ ತಲೆಯಾಡಿಸಿದರು.

"ಕಷ್ಟ ಅಂದರೇನು? ಕೆಲ್ಸ ಮಾಡ್ತಾಳೆ, ಅದು ಸ್ವಲ್ಪ ಹೆಚ್ಚಿರ್ಬಹ್ದು. ಅದು ಕುಟುಂಬದ ಸಮಸ್ಯೆಗಳ ವ್ಯಾಪ್ತಿಯೊಳಕ್ಕೆ ಬರುತ್ತೆ. ಅಲ್ಲಿ ಸಾಕ್ಷಿ ನುಡಿಯೋರು ಯಾರು? ಶ್ರೀವಳ್ಳಿ ಕೂಡ ಒಪ್ಪೋಲ್ಲ. ಬೇಕಾದ್ರೆ ಪ್ರಾಣ ಬಿಡ್ತಾಳೆ ವಿನಃ ಆ ಹುಡ್ಗಿ ಚಿಕ್ಕಮ್ಮನ ವಿರುದ್ಧ ಹೋಗೋಲ್ಲ" ಎಂದರು.

ಸಾಗರ್‌ನ ತಲೆ ಬಿಸಿ ಆಯ್ತು. ಸರೋಜಮ್ಮನ ಕೊಚ್ಚಿ ಹಾಕಿದರೇ ಶ್ರೀವಳ್ಳಿ ಆತ್ಮಹತ್ಯೆ ಮಾಡಿಕೋತಾಳೆ. ವಿರುದ್ಧ ಹೋಗದ ಹೆಣ್ಣು - ಪಟ ಪಟ ಕಪಾಳಕ್ಕೆ ಬಾರಿಸಿಬಿಡಬೇಕೆನಿಸಿತು ಶ್ರೀವಳ್ಳಿಗೆ.

"ಕುತ್ತಿಗೆಗೆ ತಾಳಿ ಬಿದ್ದರೇ, ಸರೋಜಮ್ಮನಿಂದ ಬಿಡುಗಡೆ" ಇಂಥ ಮಾತೊಂದು ಆಡಿದರು. ಆದರೆ ಬೆಕ್ಕಿಗೆ ಗಂಟೆ ಕಟ್ಟಬೇಕು. ಆದರೆ ಯಾರು ಕಟ್ಟಬೇಕು ?

ಅವನ ತಲೆಯಲ್ಲೆಲ್ಲ ತುಂಬಿಕೊಂಡಿದ್ದು ಅದೇ ವಿಷಯ ಹುಚ್ಚುಚ್ಚು ಯೋಚನೆಗಳು.

"ಇಲ್ಲೇ ಊಟ ಮಾಡು ಸಾಗರ್. ಹೇಗೂ, ಗೌರಿ ತಗೊಂಡ್ಹೋಗಿರೋ ಊಟ ಕಲ್ಲೇಶಿ ತಿಂತಾನೆ, ಬಿಡು" ತಿರುಮಲಾಂಬ ಬಲವಂತ ಮಾಡಿ ಎಬ್ಬಿಸಿದರು.

ಆಮೇಲೆ ಹೆಚ್ಚು ಮಾತಾಡದೇ ಊಟ ಮುಗಿಸಿದ. ಮಧ್ಯೆ ಮೃಣಾಲಿನಿಯವರ ವಿಷಯ ಬರಲಿಲ್ಲ. ಅವನ ಆಕೆಯ ಭೇಟಿಯಾದಾಗಲೆಲ್ಲ ಸೀತಾರಾಮ್‌ನ ನಿಂದಿಸುವುದು ವಾಡಿಕೆ. ಅದು ಅವನಿಗೆ ಇಷ್ಟವಿಲ್ಲ. ಸೀತಾರಾಮ್ ಕೂಡ ಈ ವಿಷಯದಲ್ಲಿ ಹಿಂದೆ ಬೀಳುತ್ತಿರಲಿಲ್ಲ. ಶ್ರದ್ಧೆ ಇಲ್ಲದ ಪಗಡೆಯಾಟದಲ್ಲಿ ಎಸೆದಾಡುವ ಚದುರಂಗದ ಕಾಯಿ ಇವನು.

* * *

ಶ್ರೀವಳ್ಳಿಪುರದಲ್ಲಿ ಸ್ವಲ್ಪ ಹೆಸರು ಮಾಡಿರುವ ನಾರಾಯಣ ಐತಾಳರ ಮಗಳ ಮದುವೆಯ ನಿಶ್ಚಿತಾರ್ಥಕ್ಕೆ ಬೆಳಿಗ್ಗೆಯೇ ಅಪ್ಪಯ್ಯ ಶಾಸ್ತ್ರಿ ಕುಟುಂಬ ಬಂದಿದ್ದು ನೇರವಾಗಿ ಅವರಲ್ಲಿಗೆ ಹೋಯಿತು. ಇಂದು ಶ್ರೀವಳ್ಳಿಯನ್ನ ಕರೆತಂದಿದ್ದು ಆಕಸ್ಮಿಕ. ಅಷ್ಟೇ ಆಶ್ಚರ್ಯ ಕೂಡ. ಅದಕ್ಕಿಂತ ಒಂದು ಯೋಗ ಅನ್ನಬೇಕು.

ಸೀತಾರಾಮ್, ಮೃಣಾಲಿನಿ ಬಿಡಿ ಬಿಡಿಯಾಗಿ ಬೇರೆ ಯಾರನ್ನೋ ಕಳುಹಿಸಿ ಮಗನ ಯೋಗಕ್ಷೇಮ ವಿಚಾರಿಸಿಕೊಂಡಿದ್ದರು. ಹಿಂದಿನ ದಿನ ಅಂತು ಮಗ ಕ್ಷೇಮವಾಗಿದ್ದಾನೆ, ಇಂದೋ ನಾಳೆಯೋ ಹೊರಟು ಬರುತ್ತಾನೆಂಬ ಸಮಾಧಾನ.

ಹತ್ತಾರು ಮನೆಗಳ ಜನ ಅಲ್ಲಿ ತುಂಬಿಕೊಂಡಿದ್ದರಿಂದ ಅಪ್ಪಯ್ಯ ಶಾಸ್ತ್ರಿಗಳೇ ಪುರೋಹಿತರಾಗಿ ಆಗಮಿಸಿದ್ದರು. ವೇದ, ಉಪನಿಷತ್ತು, ಮಂತ್ರ ಎಲ್ಲಾ ಓದಿಕೊಂಡಿದ್ದವರು. ಪುರೋಹಿತ್ಯವನ್ನು ಕಸುಬಾಗಿ ಮಾಡಿಕೊಳ್ಳದಿದ್ದರೂ, ಗೊತ್ತಿದ್ದ ಜನ ಕರೆದಾಗ ಒಲ್ಲೆಯೆನ್ನುತ್ತಿರಲಿಲ್ಲ.

ಸರೋಜಮ್ಮ ಇಂಥ ಸಮಾರಂಭದಲ್ಲಿ ದೊಡ್ಡ ಕಲಾಪತ್ತಿನ ಸೀರೆಯುಟ್ಟು, ತಲೆಯ ತುಂಬ ಹೂ ಮುಡಿದು, ಮೈ ತುಂಬ ಒಡವೆಗಳನ್ನ ಇಟ್ಟುಕೊಂಡು ಬಂದು ಪ್ರದರ್ಶನದ ಗೊಂಬೆಯಂತೆ ಕೂಡುತ್ತಿದ್ದರು. ಇಂದು ಕೂಡ ಅದೇ ಸಿಂಗಾರದಲ್ಲಿ ಬಂದು ಕೂತಿದ್ದರೇ ಶ್ರೀವಳ್ಳಿ ನಾಲ್ಕಾರು ಹುಡುಗಿಯರೊಂದಿಗೆ ಬಂದು ಕೂತಿದ್ದಳು. ಸಾದಾ ಸೀರೆ.

ತಾಂಬೂಲಗಳು ಬದಲಾಯಿಸಿಕೊಳ್ಳುವ ಗಳಿಗೆಗೆ ಬಂದ ಸಾಗರ್ ಒಂದು ರೀತಿಯ ಮಂಪರಿನಲ್ಲಿದ್ದ. ಅವನ ಕಣ್ಣುಗಳು ಶ್ರೀವಳ್ಳಿಗಾಗಿ ಹುಡುಕಾಡಿ ಒಂದು ಕಡೆ ಕೇಂದ್ರಿಕರಿಸಿತು. ನಿಧಾನವಾಗಿ ಅವನ ಕೈ ಜೇಬಿನೊಳಕ್ಕೆ ಹೋಗಿ ಹೊರ ಬಂತು.

ಐದು ನಿಮಿಷದಲ್ಲಿ ಏನೋ ನಡೆದು ಹೋಯಿತು. ಸಾಗರ್, ಶ್ರೀವಳ್ಳಿಯ ಕುತ್ತಿಗೆಗೆ ತಾಳಿ ಕಟ್ಟಿ ತನ್ನ ಪಾಡಿಗೆ ತಾನು ಹೊರಟಾಗ ಜನ ಸ್ಥಂಭಿಭೂತರಾದರು. ಯಾರ ಬಾಯಿಂದಲೂ ಮಾತುಗಳು ಹೊರಡಲಿಲ್ಲ.

"ಇದೇನಿದು ? ಅವ್ನ ಹಿಡಕೊಂಡ್ಬಂದು ಚಚ್ಚಿರಿ. ಎಲ್ಲಾ ನೋಡ್ಕೊಂಡೇ ಕೂತಿದ್ದೀರಲ್ಲ" ಸರೋಜಮ್ಮನ ಆರ್ಭಟಕ್ಕೆ ಹೆಚ್ಚು ಸ್ಪಂದನವೇನು ಸಿಗಲಿಲ್ಲ. ಆಕೆಯ ಸ್ವಭಾವ ಬಲ್ಲವರು ಇನ್ನಷ್ಟು ಮೌನಿಗಳಾದರು.

"ಇದೇನಿದು...." ಕೆಲವು ಮಹಿಳೆಯರು ಎದ್ದು ಬಂದು ಶ್ರೀವಳ್ಳಿ ಕುತ್ತಿಗೆಯಲ್ಲಿನ ಮಾಂಗಲ್ಯವನ್ನ ನೋಡಿದರು "ಏನಾಗಿದೆ, ಅವ್ಳಿಗೆ ? ಕುಡಿದ ಮತ್ತಾ" ಉದ್ಗಾರವೆತ್ತಿದರು.

ಅಪ್ಪಯ್ಯ ಶಾಸ್ತ್ರಿಗಳಿಗೆ ಷಾಕಾದರೂ, ಒಂದು ರೀತಿಯ ಸಂತೋಷವೇ. ಸಾಗರ್ ಅವಳನ್ನ ಸರೋಜಮ್ಮನ ಬಂಧನದಿಂದ ಬಿಡುಗಡೆ ಮಾಡಿದ್ದ. ಅಪರೂಪಕ್ಕೆ ಶ್ರೀವಳ್ಳಿ ತಾಯಿಯ ಮನೆಯ ಕಡೆಯ ನೆಂಟರು ಕರೆದುಕೊಂಡು ಹೋಗಬೇಕೆಂದರೂ ಸರೋಜಮ್ಮಳದು ವಿರೋಧವೇ.

"ಮೊದ್ಲು ಈ ಕಾರ್ಯಕ್ರಮ ಮುಗ್ದು ಹೋಗ್ಲಿ. ಆಮೇಲೆ ಮಾತಾಡೋಣ" ನಾರಾಯಣ ಐತಾಳರ ಸೂಚನೆ. ಅಪ್ಪಯ್ಯ ಶಾಸ್ತ್ರಿಗಳು ಶಾಂತವಾಗಿಯೇ ನಿಶ್ಚಿತಾರ್ಥ ಮುಗಿಸಿಕೊಟ್ಟು ಏಳುವ ವೇಳೆಗೆ ಸರೋಜಮ್ಮನ ಹೆಂಗಳೆಯರ ಗುಂಪುಕಟ್ಟಿಕೊಂಡು ಆರ್ಭಟಿಸುತ್ತಿದ್ದರು.

"ಅವ್ನ ಕೈ ಕಾಲು ಮುರಿಸ್ತೀನಿ" ಆಕೆಯ ಗರ್ಜನೆಗೆ ಪ್ರತಿಕ್ರಯಿಸಿದವರು ಬಿಳಿಗಿರಿ "ಅದು ಸಾಧ್ಯನಾ, ತಾಯಿ? ಸಾಗರ್ ಏನು ನಿಮ್ಮ ಮಗ್ಳನ ಎತ್ಕೊಂಡ್ ಹೋಗಿಲ್ಲ. ಇಲ್ಲ, ಮತ್ತೇನಾದ್ರೂ ತಪ್ಪು ಮಾಡಿಲ್ಲ. ಸ್ವಲ್ಪ ಅವ್ನ ಮೇಲೆ ಕೈ ಎತ್ತಿದ್ರೂ...ಪರಿಣಾಮ ನೆಟ್ಟಗಾಗೋಲ್ಲ. ಅವ್ನ ಅಪ್ಪ ಎಲ್ಲರನ್ನ ಕರ್ಕೊಂಡ್ಹೋಗಿ ಕಂಬಿಗಳ ಹಿಂದಕ್ಕೆ ತಳ್ಳಿ ಬಿಡ್ತಾನೆ. ಸುಮ್ನೆ ಯಾಕೆ ಪಂಚಾಯ್ತಿ ಮಾಡೋಕೆ ಹೋಗ್ತೀರಾ? ಹೇಗೂ ಮೂಗ ಹುಡ್ಗೀ, ಅವ್ಳ ಕಟ್ಟಿಕೊಳ್ಳೋಕೆ ಯಾರು ಇರ್ಲಿಲ್ಲ. ನಿಮ್ಗೆ ವಿವಾಹ ಮಾಡೋ ಮನಸ್ಸು ಇರ್ಲಿಲ್ಲ. ಈ ಶಾಸ್ತ್ರ ಮುಗ್ದು ಹೋಯಿತಲ್ಲ. ಇಷ್ಟವಿದ್ದರೇ ಅವ್ಳ ಕುತ್ತಿಗೆಯಲ್ಲಿರುವ ತಾಳಿ ಇಟ್ಕಳ್ಳಿ, ಇಲ್ಲ ತೆಗ್ಸಿ ಹಾಕಿ ಕರ್ಕೊಂಡ್ಹೋಗಿ" ಒಂದು ಗಂಭೀರವಾದ ನ್ಯಾಯ ಸಮ್ಮತ ತೀರ್ಮಾನ ಕೊಟ್ಟರು.

ಮೊದ ಮೊದಲು ಸಾಗರ್‌ನ ಕಂಡರೇ ಹೆದರಿಕೊಂಡು ಅನುಮಾನದ ದೃಷ್ಟಿಯಿಂದ ನೋಡುತ್ತಿದ್ದ ಜನ ಮಳೆ, ಹೊಳೆ ಪ್ರವಾಹದ ನಂತರ ಅದನ್ನು ಬದಲಾಯಿಸಿಕೊಂಡಿದ್ದರು, ಅವನೊಬ್ಬ ಮಾನವೀಯತೆಯುಳ್ಳ ವ್ಯಕ್ತಿಯೆಂಬ ಸರ್ಟಿಫಿಕೇಟ್‌ನ ಏಕಾಭಿಪ್ರಾಯದಿಂದ ಕೊಟ್ಟಿದ್ದರು.

"ಹಾಗೇ ಮಾಡಿ ! ಇಂಥ ಒಳ್ಳೆಯ ಸಮಯದಲ್ಲಿ ಗಲಾಟೆ ಯಾಕೆ?"

ನಾರಾಯಣ ಐತಾಳರು ಬಿಳಿಗಿರಿಯ ತೀರ್ಮಾನಕ್ಕೆ ಬೆಂಬಲ ಸೂಚಿಸಿದ್ದರು.

ಸರೋಜಮ್ಮನ ಪಕ್ಷವಹಿಸಿದವರು ಬೆರಳೆಣಿಕೆಯ ಜನ. ಅವರದೆಲ್ಲ ಮಾತಿನ ಬೆಂಬಲವೇ ಹೊರತು ಸಾಗರ್‌ನ ಹೊಡೆಯಲು ಮುಂದಾಗುವಂಥ ಜನವಲ್ಲ.

ಎಲ್ಲಾ ತಮ್ಮ ತಮ್ಮ ಪಾಡಿಗೆ ಊಟಗಳಿಗೆ ಎದ್ದು ಹೋದರು. ಮಳೆ ಬರುವ ಸೂಚನೆ ಇದ್ದುದ್ದರಿಂದ. ಎಲ್ಲರಿಗೂ ಅವರವರದೇ ಧಾವಂತ.

ಸುಮ್ಮನೆ ಕೂತಿದ್ದ ಮಗಳ ಬಳಿಗೆ ಬಂದ ಅಪ್ಪಯ್ಯ ಶಾಸ್ತ್ರಿಗಳು ತಮ್ಮ ಕೈಯಲ್ಲಿದ್ದ ಅಕ್ಷತೆಯನ್ನ ಅವಳ ತಲೆಯ ಮೇಲೆ ಹಾಕಿ ಆಶೀರ್ವದಿಸಿದರು ಮನಃಪೂರ್ವಕವಾಗಿ. ಸಾಗರ್ ಅಂಥ ಧೈರ್ಯವಂತ, ಹೃದಯವಂತ ಯುವಕನೇ ಬೇಕಿತ್ತು ಅವಳನ್ನು ಪಾರುಮಾಡಲು.

"ಈಗೇನು ಮಾಡೋದು?" ಬಂದ ಸರೋಜಮ್ಮ "ನಂಗೆ ಈ ಊರಿನ ಜನರ ರೀತಿ, ನೀತಿಗಳೇ ಹಿಡಿಸೋಲ್ಲ. ಒಬ್ಬರಾದ್ರೂ ನಮ್ಮ ಪರ ನಿಂತರಾ? ಎಲ್ಲೋ ಬೀದಿಯಲ್ಲಿ ಬಿದ್ದಿರೋರು ಬಂದು ತಾಳಿ ಕಟ್ಟಿದ ಕೂಡ್ಲೇ ವಿವಾಹ ಅನ್ನಿಸಿಕೊಳ್ಳುತ್ತ? ಕಿತ್ತು ಬಿಸಾಕಿ ಕರ್ಕೊಂಡ್ಹೋಗ್ತೀನಿ" ಆಕೆಯ ಮೇಲೆ ಬಿಳಿಗಿರಿ ಮಾತುಗಳು ಪರಿಣಾಮ ಬೀರಿದ್ದರಿಂದ ಆ ನಿಶ್ಚಯಕ್ಕೆ ಬಂದು ಬಿಟ್ಟಿದ್ದರು.

ಗೊಂಬೆಯಂತೆ ನಿಂತಿದ್ದ ಶ್ರೀವಳ್ಳಿಯ ಬಳಿಗೆ ಧಾವಿಸುವ ವೇಳೆಗೆ ಹಿಂದೆ ಹಿಂದಕ್ಕೆ ಜರುಗಿದ ಶ್ರೀವಳ್ಳಿ ಓಡ ತೊಡಗಿದಳು. ಆತ್ಮಹತ್ಯೆಯ ಪ್ರಯತ್ನವೆಂದು ಮನದಟ್ಟಾಗುತ್ತಲೇ 'ಶ್ರೀವಳ್ಳಿ ನಿಂತ್ಕೋ' ಕೂಗಾಟ ಷುರುವಾದ ಕೂಡಲೇ ಊಟಕ್ಕೆ ಕೂತಿದ್ದವರೆಲ್ಲ ಎಲೆಗಳನ್ನು ಬಿಟ್ಟು ಮೇಲೆದ್ದು ಬಂದರು.

ಆದರೆ ಶ್ರೀವಳ್ಳಿ ಓಡುವುದನ್ನು ನಿಲ್ಲಿಸಿದ್ದು ಹೊಳೆಯ ದಂಡೆಯ ಬಳಿ. ಅಲ್ಲಿ ಮಂಕಾಗಿ ಏನು ನಡೆಯಲೇ ಇಲ್ಲವೆನ್ನುವಂತೆ ಕೂತಿದ್ದ ಸಾಗರ್‌ನ ನೋಟ ಎತ್ತಲೋ ಇತ್ತು.

ಶ್ರೀವಳ್ಳಿ ಅವನ ಬಳಿ ಹೋಗಿ ಕುಸಿದಳು.

ನಿಧಾನವಾಗಿ ಅವಳತ್ತ ನೋಟ ಎತ್ತಿದ ಸಾಗರ್ "ವಳ್ಳಿ, ನಿಂಗೆ ಸರೋಜಮ್ಮನಿಂದ ಬಿಡುಗಡೆಯಾಗಿದೆ. ಯೂ ಆರ್ ಫ್ರಿ. ಸ್ವತಂತ್ರದ ಸವಿ ಅನುಭವಿಸು" ನಿರ್ಭೀತಿಯಿಂದ ನುಡಿದ. ಅಪ್ಪಯ್ಯ ಶಾಸ್ತ್ರಿಗಳು, ಬಿಳಿಗಿರಿಯವರು ಆಡಿದ ಮಾತುಗಳು ಅವನಲ್ಲಿ ನಿಂತು ಕಾರ್ಯೋನ್ಮುಖ ನನ್ನಾಗಿಸಿತ್ತು.

ಎರಡು ಕೈಗಳಲ್ಲು ಮುಖ ಮುಚ್ಚಿದ ಶ್ರೀವಳ್ಳಿ ಬಿಕ್ಕಿದಳು. ಅವನಿಗೇನು ಅರ್ಥವಾಗಲಿಲ್ಲ.

"ಎಂಥ ಅಕಾರ್ಯ ಮಾಡ್ಬಿಟ್ಟೆ !" ಸರೋಜಮ್ಮನ ದನಿ.

ಎದ್ದು ನಿಂತು, ಕೈಗಳಿಗೆ ಅಂಟಿಕೊಂಡಿದ್ದ ಮರಳನ್ನು ಕೊಡವಿಕೊಂಡು ಆಕೆಯತ್ತ ಬಂದ. ಹಿಂಡು ಜನ ಇದ್ದರು. ಆದರೆ ಅವನಿಗೆ ಭಯವಿಲ್ಲ.

"ಈಗ ಹೇಳಿ" ಎಂದ ತೀರಾ ಸನ್ನಿಹದಲ್ಲಿ ಬಂದು ನಿಂತು.

ಆಕೆಯೇ ಹಿಂದಕ್ಕೆ ಸರಿದರು. ಬಿಳಿಗಿರಿ, ಅಪ್ಪಯ್ಯಶಾಸ್ತ್ರಿಗಳು ತಟಸ್ಥರಾಗಿ ನಿಂತಿದ್ದರು. ನಡೆದು ಹೋದ ಘಟನೆ ಆಕಸ್ಮಿಕವೆನಿಸಿದರೂ ಅವರಿಗೆ ಸಂತೋಷವೇ ಆಯಿತು.

ಸ್ವಲ್ಪ ಧೈರ್ಯತಂದುಕೊಂಡರು ಸರೋಜಮ್ಮ.

"ಏನು, ನೀನು ಮಾಡಿದ್ದು?" ಕನಲಿದರು.

"ಏನು...ವಾಟ್...ವಾಟ್...ಅದೇನು ಹೇಳಿ" ಹುಬ್ಬೆತ್ತಿ ಕೇಳಿದ ಆಕೆಯನ್ನೆ. ಗಂಡನತ್ತ ತಿರುಗಿದ ಸರೋಜಮ್ಮ "ಗೊಂಬೆಯಂತೆ ನಿಂತಿದ್ದೀರಲ್ಲ. ನಂಗಾದ್ರೂ ಅವ್ಳು ಮಲ ಮಗ್ಳು. ನಿಮ್ಗೆ ಸ್ವಂತ ಮಗ್ಳು. ಇಷ್ಟೆಲ್ಲ ನಡ್ದು ಹೋಗಿದ್ರೂ ಬಾಯಿ ಮುಚ್ಕೊಂಡ್...ನಿಂತಿದ್ದೀರಲ್ಲ" ದಬಾಯಿಸಿದರು.

"ತಾಯಿ ಧರ್ಮಪತ್ನಿ....ಉಪ್ಪಿನಕಾಯಿ ಲೇಡಿ ಅವ್ರನ್ನ ಸುಮ್ನೇ ಇರ್‍ಸಿ ಸಾಕಷ್ಟು ಕಾಲವೇ ಆಯ್ತು. ಈಗ ಬಾಯಿ ತೆರೀ ಅಂದ ಕೂಡ್ಲೇ ತೆರಿಯೋಕೆ ಅವ್ರೇನು ಯಂತ್ರನಾ? ಅದೇನು ಮಾತಾಡ್ಬೇಕೋ...ಅದ್ನೆಲ್ಲ ನೀನೇ ಆಡು. ಈಗ ಏನಾಗಿದೆ?" ಬಾಯಿ ಜೋರು ಮಾಡಿದ ಸಾಗರ್.

ಆಕೆ ಅವಮಾನದಿಂದ ಕುದ್ದು ಹೋದಳು. ಮೃಣಾಲಿನಿಯಾಗಿದ್ದರೇ ಮರ್ಯಾದೆಯನ್ನು ಕಾಪಾಡಿಕೊಳ್ಳಲು ಜಾಗ ಖಾಲಿ ಮಾಡುತ್ತಿದ್ದಳೇನೋ, ಈ ಸರೋಜಮ್ಮ ಆ ಪೈಕಿಯಲ್ಲ.

"ಯಾರ್‍ನ ಕೇಳಿ, ನಮ್ಮ ವಳ್ಳಿಗೆ ತಾಳಿ ಕಟ್ಟಿದೆ ?"

ಆಕೆಯ ಅಬ್ಬರಕ್ಕೆ ಸಾಗರ್ ಜಗ್ಗಲಿಲ್ಲ. ಕಿಸಿಕಿಸಿ ಎನ್ನುತ್ತಿದ್ದ ಕಲ್ಲೇಶಿ ಒಳಗೊಳಗೆ ಖುಷಿ ತೆಗೆದುಕೊಳ್ಳುತ್ತಿದ್ದ.

"ಯಾರ್‍ನ ಕೇಳ್ಬೇಕಿತ್ತು?" ಅಷ್ಟೇ ಬಿರುಸಾಗಿತ್ತು ಅವನ ಪ್ರಶ್ನೆ.

"ನಾವೆಲ್ಲ ಸತ್ತಿರಲಿಲ್ಲ. ನಿನ್ನ ಕೈಗೆ ಬೇಡಿಗಳ್ನ ಹಾಕ್ಸಿ ಜೈಲಿಗೆ ತಳ್ಳಿಸ್ತೀನಿ. ಎದ್ದು ಬಾರೇ ವಳ್ಳಿ" ಅವಳ ರಟ್ಟೆ ಹಿಡಿದುಕೊಂಡಳು ಆಕೆ. ಅವಳು ಒಂದಿಂಚು ಕೂಡ ಜರುಗಲಿಲ್ಲ. "ನಡೀ, ಇಂಥ ಹುಚ್ಚರು, ಕುಡುಕರು ಕಟ್ಟೋ ತಾಳಿಗೆ ಎಲ್ಲಿ ಬೆಲೆ ಇದೆ? ಕಿತ್ತು ಬಿಸುಟು ಮೈಲಿಗೆ ಸ್ನಾನ ಮಾಡ್ಕೋ" ಅವಳನ್ನ ಎಳೆದಳು.

ಬಿಳಿಗಿರಿಯವರು ಮುಂದಕ್ಕೆ ಬಂದವರೆ "ಸರೋಜಮ್ಮ ಅವ್ಳ ರೆಟ್ಟೆ ಬಿಡಿ. ಸಾಗರ್ ಏನು ಅವಳ್ನ ಕಟ್ಟಿ ಹಾಕಿಲ್ಲ. ಮಾತಿನ ಮೂಲಕವೇ ಕರ್ಕಂಡ್ ಹೋಗ್ಬಹುದ್ದು. ಒರಟು ವರ್ತನೆ ಬೇಡ" ಎಂದರು. ಆದರೂ ಆಕೆ ಶ್ರೀವಳ್ಳಿಯ ರೆಟ್ಟೆ ಬಿಡಲಿಲ್ಲ.

ಯಾರದರೂ ತನ್ನ ಸಪೋರ್ಟಿಗೆ ನಿಲ್ಲುತ್ತಾರೇನೋ ಎಂದು ಸುತ್ತಲೂ ನೋಟ ಹರಿಸಿದರು. ಅಂಥ ಭರವಸೆಯೇನು ಸಿಕ್ಕಲಿಲ್ಲ. 'ಇಡೀ ಶ್ರೀವಳ್ಳಿ ಪುರವೇ ಹಾಳಾಗಲಿ' ಎಂದು ಮನದಲ್ಲಿ ಶಾಪವಿತ್ತರು. ಆದರೆ ಶಾಪ ಕೈ ಕೂಡದು. ಆಕೆಯ ಮನಸ್ಸಿಗೆ ಅಂಥ ಫವರ್ ಇರಲಿಲ್ಲ.

ಕೈಯನ್ನ ಸಡಲಿಸಿದರು. ಅಷ್ಟೊಂದು ವಿಧೇಯಳಾಗಿದ್ದ ಶ್ರೀವಳ್ಳಿ ಕೂಡ ತನ್ನ ಮಾತನ್ನು ಕೇಳಲಾರಳೆನಿಸಿದಾಗ ಆಕೆಯ ಭಯಂಕರವಾದ ಆತ್ಮವಿಶ್ವಾಸಕ್ಕೆ ಹೊಡೆತ ಬಿತ್ತು. ಎಂಥ ರಭಸವಿದ್ದರೂ ಒಂದು ಸಣ್ಣ ತಡೆ ಸಿಕ್ಕರೂ, ಅದರ ವೇಗ ಎಷ್ಟು ನಿಯಂತ್ರಣಕ್ಕೆ ಬರುತ್ತದೆಯೆಂದರೆ ಕುಸಿದೆ ಬಿಡುತ್ತದೆ ಪೂರ್ತಿಯಾಗಿ.

"ಈಗೇನು ಮಾಡೋದು? ತಾಳಿ ಕಟ್ಟಿದ ಮಾತ್ರಕ್ಕೆ ಚಿನ್ನದಂಥ ಹುಡ್ಗೀನಾ...ಇಂಥ ಲ..." ಪದವನ್ನ ಪೂರ್ತಿ ಮಾಡಲಾರದೆ ಹೋದರು ಅಪ್ಪಯ್ಯಶಾಸ್ತ್ರಿಗಳ ಧರ್ಮಪತ್ನಿ ಸರೋಜಮ್ಮ.

ಮಧ್ಯೆ ಬಾಯಿ ಹಾಕಿದ್ದು ಐತಾಳರು "ದಿನ, ಗಳಿಗೆ ಎಲ್ಲಾ ಚೆನ್ನಾಗಿತ್ತು. ಹತ್ತು ಹಿರಿಯರು ಇದ್ದಾಗಲೇ ಸಾಗರ್ ಮಾಂಗಲ್ಯ ಕಟ್ಟೋ ಧೈರ್ಯ ಮಾಡಿದ್ದು. ಇದ್ನ ವಿವಾಹ ಅಂತ್ಲೇ ತೀರ್ಮಾನ ಮಾಡ್ಬೇಕಾಗುತ್ತೆ" ಎಂದು ಸುತ್ತಲೂ ನೋಡಿದರು.

ಪ್ರವಾಹ ಊರಿನೊಳಕ್ಕೆ ನುಗ್ಗದಿದ್ದರೇ, ಆ ಸಮಯದಲ್ಲಿ ಜೀವನ ಹಂಗು ತೊರೆದು ಸಾಗರ್ ಸಹಾಯ ಮಾಡದಿದ್ದರೇ ಕೆಲವರಾದರೂ ವಿರೋಧಿಸುತ್ತಿದ್ದರು. ಅದರ ಜೊತೆಗೆ ಸರೋಜಮ್ಮ ಅಂದರೆ ಅಷ್ಟಕಷ್ಟೆ. ಕೆಟ್ಟ ಹೆಣ್ಣಿನ ಕೈಯಿಂದ ಶ್ರೀವಳ್ಳಿಗೆ ಬಿಡುಗಡೆಯಾಗಿದ್ದು ಎಲ್ಲರಿಗೂ ಸಂತೋಷವೇ.

ಬಹಳ ಸುಲಭವಾಗಿ ಅರ್ಥವಾಯಿತು ಸರೋಜಮ್ಮನಿಗೆ. ಶ್ರೀವಳ್ಳಿಗೆ ಮದುವೆ ಮಾಡಬಾರದೆಂಬ ಉದ್ದೇಶವೇನು ಇರಲಿಲ್ಲ. ತೀರಾ ವಿದ್ಯೆ ಇಲ್ಲದ, ಮೆದು ಮನಸ್ಸಿನ ತೀರಾ ಬಡವನೊಬ್ಬನ ಕೈಯಲ್ಲಿ ತಾಳಿ ಕಟ್ಟಿಸಿ ಮನೆಯಲ್ಲೇ ಇಬ್ಬರನ್ನ ಉಳಿಸಿಕೊಳ್ಳುವ ಉದ್ದೇಶವಿತ್ತು.

"ಇರ್ಬಹುದ್ದು, ಇದು ನಂಗೆ ಒಪ್ಗೇ ಇಲ್ಲ. ಸಭ್ಯರೂಂತ ಅನ್ನಿಸ್ಕೊಂಡ ಜನಗಳು

ಸೇರಿ ಅವ್ನ ಕುತ್ತಿಗೆ ಕೊಯ್ದಿರಿ" ನೇರವಾಗಿ ಆಕೆ ಆರೋಪಿಸಿದ್ದು ಬಿಳಿಗಿರಿ ದಂಪತಿಗಳನ್ನ.

ಬಿಳಿಗಿರಿಯವರು ಸ್ವಲ್ಪ ಮುಂದಕ್ಕೆ ಬಂದರು. "ತಾಯಿ ಸರೋಜಮ್ಮ ಇಂಥ ಆರೋಪ ಮಾಡ್ಬೇಡ. ನಾವು ಅಂಥ ಕನಸ್ಸನ್ನ ಕೂಡ ಕಂಡಿಲ್ಲ. ನಿಮ್ಮ ಮಗ್ಳು....ಅಳಿಯ ! ನಿಮ್ಗೆ ಹೇಗೆ ಅನ್ನಿಸುತ್ತೋ ಹಾಗೆ ತೀರ್ಮಾನ ಮಾಡ್ಕೊಳ್ಳಿ ಬರ್ತೀವಿ ಶಾಸ್ತ್ರಿಗಳೇ" ಹೊರಟೇ ಬಿಟ್ಟರು. ಮುಕ್ಕಾಲಷ್ಟು ಜನ ಅವರನ್ನ ಹಿಂಬಾಲಿಸಿದರು. ಉಳಿದ ನಾಲ್ಕು ಜನ ಸರೋಜಮ್ಮನಿಗೆ ಫವರ್ ಆದವರೇ.

"ಶ್ರೀವಳ್ಳಿನ ಕರ್ಕೋ....ಮಿಕ್ಕಿದ್ದು ಆಮೇಲೆ ತೀರ್ಮಾನ ಮಾಡೋಣ" ಒಬ್ಬರು ಮುಂದೆ ಬಂದು ಸಲಹೆ ಇತ್ತರು. ಕೆಲವರು ಅದನ್ನು ಅನುಮೋದಿಸಿದ್ದು ಕಣ್ಣಲ್ಲಿ.

"ಕರೀರಿ, ಮಗ್ಳುನ" ಗಂಡನಿಗೆ ಒಪ್ಪಿಸಿದರು ಸರೋಜಮ್ಮ ಆ ಕೆಲಸವನ್ನ. "ಬರ್ತೀಯಾ...ಶ್ರೀವಳ್ಳಿ...ಮಳೆ ಬರೋಹಂಗಿದೆ" ತಂದೆಯನ್ನ ನೋಡಿದಳು ಕಣ್ತುಂಬಿ. ಅವರು ಮತ್ತೆ ಮಾತೇ ಆಡಲಿಲ್ಲ.

ಸರೋಜಮ್ಮ ಕೋಪದಿಂದ ಕೆರಳಿ ದಂಗಾದರು.

"ನಿಮ್ಮ ದನಿ ಸತ್ತು ಹೋಗಿದ್ಯಾ? ನಡೀಯೇ ಶ್ರೀವಳ್ಳಿ....ಮಿಕ್ಕಿದೆಲ್ಲ ಆಮೇಲೆ ತೀರ್ಮಾನ ಮಾಡೋದು" ಎರಡು ಹೆಜ್ಜೆ ಅವಳತ್ತ ಸರಿದಾಗ ನಾಲ್ಕು ಹೆಜ್ಜೆ ಹಿಂದಕ್ಕೆ ಹೋದವಳು ಸಾಗರ್‌ನ ಹಿಂದೆ ಹೋಗಿ ನಿಂತಳು. ಅವಳ ನಿರಾಕರಣೆ ಸ್ಪಷ್ಟವಾಯಿತು.

"ಅಮ್ಮ....ಅಮ್ಮ...ಇಷ್ಟು ದಿನ ಮಳ್ಳಿಯಂಗೇ ಇದ್ದು. ಅವ್ನು ಇದ್ನ ಕೂಡ ಆಟ ಅಂದ್ಕೊಂಡ್ ತಾಳಿ ಕಟ್ಟಿದ್ದಾನೆ. ಅವ್ನಿಗೆ ನೆಲೆ ಇಲ್ಲ, ನಿನ್ನ ಎಲ್ಲಿಗೆ ಕಟ್ಟಿಕೊಂಡು ಹೋಗ್ತಾನೆ. ಅನ್ಯಾಯವಾಗಿ ಇರೋ ಒಂದು ಆಸರೆನು ತಪ್ಪಿ ಬೀದಿಗೆ ಬೀಳ್ತೀಯಾ" ಹೆದರಿಕೆಯೊಡ್ಡಿದರು.

ಸಾಗರ್ ಒಂದು ಮಾತು ಕೂಡ ಆಡದೇ ತಣ್ಣಗೇ ಕೇಳುತ್ತ ಕೂತಿದ್ದ. ಹೇಗೂ ತಾಳಿ ಕಟ್ಟಿದ್ದರಿಂದ ಶ್ರೀವಳ್ಳಿಯ ಬಿಡುಗಡೆಯಾಗಿದೆ. ಮತ್ತೇನು' ಎನ್ನುವ ಮಂಪರು ಅವನದು.

ಶ್ರೀವಳ್ಳಿ ಇತ್ತ ಸರಿಯಲೇ ಇಲ್ಲ.

"ಬಾರೇ, ನಿಂಗೆ ಮಾತು ಮಾತ್ರ ಬರೋಲ್ಲ ಅಂದ್ಕೊಂಡೆ. ಈಗ ಕಿವಿ ಕೂಡ ಕೇಳಿಸ್ತಾ ಇಲ್ಲ ಅನ್ನೋದು ಗೊತ್ತಾಯ್ತು. ಬಾ.... ಬೇಗ" ಜೋರು

ಮಾಡಿದ ಆಕೆ ಅವಳ ಕೈ ಹಿಡಿಯಲು ಬಂದಾಗ ಅತ್ತ ತಿರುಗಿದ ಸಾಗರ್ "ನಂದು ಒಂದು ಪ್ರಶ್ನೆ. ಈಗ ಅಪ್ಪಯ್ಯ ಶಾಸ್ತ್ರಿಗಳು ಇನ್ನೊಂದ್ಮದ್ವೆ ಆದ್ರೂಂತ ಇಟ್ಕೊಳ್ಳಿ. ಬರೋ ಮೂರನೇ ಹೆಣ್ಣು ಕೂಡ ಧರ್ಮಪತ್ನಿನಾ? ಏನು ಹಾಗಂದರೆ? ಕಟ್ಟಿಕೊಂಡ ಪ್ರಾಣೀನಾ ಹದ್ದು ಬಸ್ತಿನಲ್ಲಿ ಇಟ್ಟು ಕೊಳ್ಳೋದಾ" ಎಂದ. ಅವನ ದನಿಯಲ್ಲಿ ಅಳುಕು ಎಂಬುದೇ ಇರಲಿಲ್ಲ.

ಬಹಳ ದಿನಗಳ ಮೇಲೆ ಶಾಸ್ತ್ರಿಗಳಿಗೆ ಒಂದು ರೀತಿಯ ಸಮಾಧಾನ. ಸರೋಜಮ್ಮನಂಥ ಹೆಣ್ಣಿಗೆ ಒಂದು ಪೆಟ್ಟು ಕೊಟ್ಟಿದ್ದ ಸಾಗರ್. ಆ ಛಾತಿನೆ ಭಲೇ ಎಂದುಕೊಂಡ.

"ಏನೇನೋ ಮಾತಾಡ್ಬೇಡ ! ಪೋಲೀಸ್‌ಗೆ ಕಂಪ್ಲೇಂಟ್ ಕೊಟ್ಟು ಅವ್ರನ್ನ ಕರ್ಕಂಡ್ ಬರ್ತೀನಿ. ಬಾರೇ...ನೀನು" ಮತ್ತೆ ಶ್ರೀವಳ್ಳಿಯ ಕೈ ಹಿಡಿಯಲು ಹೋದಾಗ "ಮಿಸಸ್ ಉಪ್ಪಿನ ಕಾಯಿ ಶಾಸ್ತ್ರಿ. ತಾಳಿ ಕಟ್ಟಿದ ಕೂಡ್ಲೇ, ನಿನ್ನ ಪಂಜರದಿಂದ ಅವ್ಳಿಗೆ ಬಿಡುಗಡೆ ಆಗಿದೆ. ಒಂದು ಹೆಜ್ಜೆ ಮುಂದಕ್ಕೆ ಬಂದರೂ, ಅನಾಮತ್ತಾಗಿ ಹೊಳೆಗೆ ಎತ್ತಿ ಎಸ್ದು ಬಿಡ್ತೀನಿ. ಶ್ರೀಮುಖಿ ನದಿ ನಿನ್ನ ಸ್ವಾಗತಕ್ಕೆ ರೆಡಿಯಾಗಿರ್ತಾಳೆ" ಎಂದ ಕೆಕ್ಕರಿಸಿಕೊಂಡು ನೋಡುತ್ತ.

ಅಪ್ಪಯ್ಯ ಶಾಸ್ತ್ರಿಗಳು ಹೊದ್ದ ಶಾಲನ್ನ ಸರಿ ಮಾಡಿಕೊಂಡು "ಕಾಸು ಖರ್ಚಿಲ್ದೇ ಶ್ರೀವಳ್ಳಿ ಮದ್ವೆ ನಡ್ದು ಹೋಯ್ತು. ವಿವಾಹಗಳು ಸ್ವರ್ಗದಲ್ಲಿ ನಡೆದಿರುತ್ತೆ ಅಂತಾರೆ. ಹೋಗ್ಲಿ ಬಿಡಿ. ಬಾ ಸರೋಜ" ರಾಜಿಯಾದರು.

ಅವನ ಮೇಲ್ನುಖದ ಧೋರಣೆ ಹೇಗಾದರೂ ಅಂತರಂಗಿಕವಾಗಿ ಸಾಗರ್‌ನಲ್ಲಿ ಮಾನವತೆಯ ಮೊಂಬತ್ತಿ ಉರಿಯುತ್ತಿತ್ತು. ಅದರ ಹಸನಾದ ಬೆಳಕಿನಲ್ಲಿ ಶ್ರೀವಳ್ಳಿ ಸುಖಿಯೆನ್ನುವ ಇರಾದೆ ಅವರದು.

ಇಷ್ಟಕ್ಕೆಲ್ಲ ರಾಜಿಯಾಗುವ ಹೆಂಗಸಲ್ಲ ಸರೋಜಮ್ಮ. "ಈ ಮಾತುಗಳೆಲ್ಲ ಬೇಡ. ಪೋಲೀಸ್ ಕಂಪ್ಲೇಂಟ್ ಕೊಟ್ಟು ಇವ್ನ ಕೈಗೆ ಬೇಡಿ ತೊಡಿಸ್ದೇ ಬಿಡೋಲ್ಲ" ಅಂದುಕೊಂಡೇ ಹೋಗುತ್ತಿದ್ದರು.

ಆಕೆಯ ಮಾತುಗಳ ಬಗ್ಗೆ ಗಮನ ಕೊಡಲಿಲ್ಲ ಸಾಗರ್.

ಕೂತ ಸಾಗರ್‌ಗೆ ಅನತಿ ದೂರದಲ್ಲಿ ನಿಂತು ಸಾಕಾದ ಶ್ರೀವಳ್ಳಿ ಕೂತು ಹೊಳೆಯ ಕಡೆ ನೋಡತೊಡಗಿದನ್ನ ಗಮನಿಸಿದ. ನಡೆದು ಹೋದ ಯಾವುದನ್ನು ಅವನು ಸೀರಿಯಸ್ಸಾಗಿ ತೆಗೆದುಕೊಳ್ಳಲಿಲ್ಲ.

"ಮಾಂಗಲ್ಯ ನಿನ್ನ ಕುತ್ತಿಗೆಗೆ ಬಿದ್ದರೇ ಸರೋಜಮ್ಮನಿಂದ ಬಿಡುಗಡೆ

ಅಂದ್ರು...ನಿನ್ತಂದೆ. ಅದ್ನೇ ಬಿಳಿಗಿರಿ, ಅಮ್ಮ ಹೇಳಿದ್ರು. ಹೇಗೂ ನಿನ್ನ ಕುತ್ತಿಗೆಗೆ ತಾಳಿ ಬಿತ್ತಲ್ಲ. ನೀನು ಎಲ್ಲಿಗೆ ಹೋಗ್ತಿ?" ಕೇಳಿದ ತಣ್ಣಗೆ.

ರಾವಣನನ್ನ ಕೊಂದು ಸೀತೆಯನ್ನ ಅವನ ಸೆರೆಯಿಂದ ಬಿಡಿಸಿದ ರಾಮ 'ಎಲ್ಲಾದರೂ ಹೋಗು' ಎನ್ನುವ ಪರವಾನಿಗೆ ನೀಡಿದಂತಿತ್ತು.

ತಲೆ ಬಗ್ಗಿಸಿಕೊಂಡು ಮರಳಿನಲ್ಲಿ 'ಸಾಗರ್' ಎಂದು ಬರೆಯುತ್ತಿದ್ದ ಶ್ರೀವಳ್ಳಿ ತಟ್ಟನೆ ತಲೆಯೆತ್ತಿ "ಎಲ್ಲೂ ಹೋಗೋಲ್ಲ. ನಿಮ್ಜೊತೆ ಇರ್ತೀನಿ" ಅಂದುಬಿಟ್ಟಳು.

ಆಶ್ಚರ್ಯದಿಂದ ಅವಳತ್ತ ತಿರುಗಿದ ಮತ್ತು ನಕ್ಕುಬಿಟ್ಟ.

"ಎಲ್ಲಿಗೆ ಬರ್ತೀಯಾ, ನನ್ಜೊತೆ? ಈ ಸಾಗರ್ ಬದ್ಕಿಗೆ ಒಂದು ಗುರಿ ಅನ್ನೋದೇ ಇಲ್ಲ. ನಿಂಗೆ ಮಾತು ಬರುತ್ತೆ, ಆಡೋಲ್ಲಾಂತ ನಂಗೆ ಒಮ್ಮೆ ಅನ್ನಿಸಿತ್ತು. ಯಾಕೆ ಹಾಗೇ ಅನ್ನಿಸ್ತುಂತ ನಂಗೆ ಇಂದಿನ್ವರ್ಗೂ ಗೊತ್ತಿಲ್ಲ. ನಿನ್ನ ದನಿ ಚೆನ್ನಾಗಿದೆ" ಶಭಾಷ್‌ಗಿರಿ ಕೊಟ್ಟ.

ಮತ್ತೆ ಎದ್ದ ಸಾಗರ್ "ವಳ್ಳಿ, ನೀನು ಬೇರೆ ಎಲ್ಲಾದ್ರೂ.... ಎಂದವನು ನಿಲ್ಲಿಸಿದ." 'ಎಲ್ಲಿಗೆ ಹೋಗಬೇಕು ?'

ಬ್ಯಾಗು ಹಿಡಿದುಕೊಂಡು ಓಡಿ ಬಂದ ಕಲ್ಲೇಶಿ "ಅಣ್ಣ, ನೀವು ಬೇಗ ಶ್ರೀವಳ್ಳಿ ಅಕ್ಕನ್ನ ಕರ್ಕೊಂಡ್ ಹೋಗ್ಬಿಡಿ. ಗೂಂಡಾಗಳ್ನ ಸಪೋರ್ಟ್ಗೆ ಕರ್ಕೊಂಡ್ ಬರೋಕೆ ಹೋಗಿದ್ದಾಳೆ ಉಪ್ಪಿನ ಕಾಯಿ ಸರೋಜಮ್ಮ. ಪ್ಲೀಸ್... ಅಣ್ಣ...ಪ್ಲೀಸ್...." ಬೇಡಿಕೊಂಡ.

ಸಾಗರ್ ಜೋರಾಗಿ ನಕ್ಕ. ಶ್ರೀವಳ್ಳಿಯನ್ನ ಎಲ್ಲಿಗೆ ಕರೆದುಕೊಂಡು ಹೋಗುವುದು ?

"ಆರಾಮಾಗಿ ನೀನು ಮನೆಗೆ ಕರ್ಕಂಡ್ ಹೋಗು. ಗೌರಿ, ಶ್ರೀವಳ್ಳಿ ಒಬ್ಬರಿಗೊಬ್ರು ಸಹಾಯಕರಾಗಿ ಇರ್ತಾರೆ" ಧಾರಾಳವಾಗಿ ಹೇಳಿದಂತಿತ್ತು.

ಕಲ್ಲೇಶಿ ಬಿಟ್ಟ ಕಣ್ಣುಗಳಿಂದ ನಿಂತು ಬಿಟ್ಟ.

"ಇದೆಲ್ಲಾದ್ರೂ...ಉಂಟಾ? ನೀವು ತಾಳಿ ಕಟ್ಟಿದ್ದರಿಂದ ನೀವೇ ಕರ್ಕಂಡ್ ಹೋಗ್ಬೇಕು" ಹೇಳಿದ.

ಕೆಲವು ವಿಷಯಗಳಲ್ಲಿ ತನಗಿಂತ ಹೆಚ್ಚು ತಿಳಿದಿದ್ದಾನೆಂದುಕೊಂಡ. ಹೊಸದೊಂದು ಸಮಸ್ಯೆ, ಅಂದರೆ ಸಮಸ್ಯೆಗಳೇ ಇಲ್ಲವೆಂದು ಕೊಂಡಿದ್ದ ಅವನ ಮುಂದಿನ ಈ ಸಮಸ್ಯೆ ಬೃಹದಾಕಾರವಾಗಿ ಬೆಳೆದಂತೆ ಕಂಡಿತು.

ಶ್ರೀವಳ್ಳಿಯ ಕಡೆ ತಿರುಗಿದ "ಮೈ ಗಾಡ್, ನಾನು ಆರಾಮಾಗಿ ಈ ಹೊಳೆಗೆ

ಬಿದ್ದು ಶ್ರೀಮುಖಿ ನದಿಯಲ್ಲಿ ತೇಲೋಕೆ ಇಷ್ಟ ಪಡ್ತೀನಿ. ನೀನು ರೆಡಿನಾ ?"

ಇಂದು ಮುಂದು ಯೋಚಿಸದೇ 'ರೆಡಿ' ಎಂದು ತಲೆಯಾಡಿಸಿದಾಗ ಸಾಗರ್ ಜೋರಾಗಿ ನಕ್ಕುಬಿಟ್ಟ. "ದಿಸ್ ಈಸ್ ಗ್ರೇಟ್ ಲವ್, ಅಲ್ಲ. ನೀನೊಂದು ಪೆದ್ದು. ಬಾ...." ಎಂದವನೇ ಅವಳ ಕೈ ಹಿಡಿದುಕೊಂಡು ತನ್ನ ಬ್ಯಾಗ್‌ನ ಹೆಗಲಿಗೇರಿಸಿಕೊಂಡು ಹೊರಟುಬಿಟ್ಟ.

ಅವರಿಬ್ಬರು ಕಣ್ಮರೆಯಾಗುವವರೆಗೂ ನಿಂತು ನೋಡಿದ ಕಲ್ಲೇಶಿ ಮಾತ್ರ ಸಾಕ್ಷಿ. ಆಮೇಲೆ ಅವರುಗಳನ್ನ ನೋಡಿದವರಿಲ್ಲ.

ಹತ್ತು ವರ್ಷಗಳ ನಂತರ ಪೇಪರಿನಲ್ಲಿ ಒಂದು ಪ್ರಕಟಣೆ ಬಂತು "ಸಾಗರ್, ಶ್ರೀವಳ್ಳಿ ನೀವಿಬ್ಬರೂ ಎಲ್ಲಿದ್ದರೂ ಹಿಂದಿರುಗಿ ಬನ್ನಿ" ನಿಮಗಾಗಿ ಕಾಯುತ್ತಿದ್ದೇವೆ. ಎನ್ನುವುದರ ಕೆಳಗೆ, ಇಬ್ಬರ ಸಹಿ ಇತ್ತು. ಅವರುಗಳು ಯಾರು ಗೊತ್ತೆ ? ಶ್ರೀ ಸೀತಾರಾಮ್ ಮತ್ತು ಶ್ರೀಮತಿ ಮೃಣಾಲಿನಿ ಸೀತಾರಾಮ್.

* * * * *

# ನಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳು

ಕಾದಂಬರಿಗಳು — (ಸಾಮಾಜಿಕ, ಐತಿಹಾಸಿಕ, ಪೌರಾಣಿಕ)

ಸಣ್ಣ ಕಥೆಗಳು

ಕವನ ಸಂಗ್ರಹಗಳು

ನಾಟಕಗಳು

ಆಧ್ಯಾತ್ಮಿಕ ಮತ್ತು ಪೌರಾಣಿಕ ಗ್ರಂಥಗಳು

ವಿಶ್ವವಿದ್ಯಾಲಯದ ಪ್ರಕಟಣೆಗಳು

ಸಂಗೀತ ಪುಸ್ತಕಗಳು

ಕಿರು ಸಾಹಿತ್ಯ

ಪ್ರಬಂಧ ಹಾಗೂ ಪ್ರೌಢಗ್ರಂಥಗಳು

ಜ್ಯೋತಿಷ್ಯ ಶಾಸ್ತ್ರಗ್ರಂಥಗಳು

ವೈಜ್ಞಾನಿಕ ಪುಸ್ತಕಗಳು

ಹಾಗೂ ಇತರ ಪುಸ್ತಕಗಳಿಗಾಗಿ ಒಮ್ಮೆ ಭೇಟಿಕೊಡಿ

ಅಥವಾ

ಪುಸ್ತಕಗಳ ಪಟ್ಟಿಗಾಗಿ ಇಂದೇ ಬರೆಯಿರಿ

**ಗೀತಾ ಏಜನ್ಸೀಸ್**

[illegible]